# ಸಮತೆಯೆಡೆಗೆ ನಮ್ಮ ನಡಿಗೆ

(ನೆನಪಿನ ಹೊತ್ತಗೆ - 2017)

ಸಂಪಾದನೆ

ವಾಣಿ ಪೆರಿಯೋಡಿ

ಪ್ರಕಟಣೆ

**ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ**

**Samateyedege Namma Nadige**
(Memoirs of 2017)
Edited by **Vani Periyodi**
co-operation: **Jyoti Hitnal, Pavithra Jyotigudde, Sunitha K.**

Published by

Karnataka Rajya Mahila Dourjanya Virodhi Okkoota.

copy right: Okkoota

Pages: 124 + XXIV
Price: Rs 100
First Edition: 2018
Copies: 500, Size: 1/8 Demmy
Used Paper: 70 gsm book print
Jacket : Shwetha Jyotigudde
Printed at : Janahoraata Printers, 2nd Cross,
Nehru Road, Shivamogga Ph : 08182-273753

**ಸಮತೆಯೆಡೆಗೆ ನಮ್ಮ ನಡಿಗೆ**

**(ನೆನಪಿನ ಹೊತ್ತಗೆ 2017)**

**ಸಂಪಾದನೆ :** ವಾಣಿ ಪೆರಿಯೋಡಿ

**ಸಹಕಾರ :** ಜ್ಯೋತಿ ಹಿಟ್ನಾಳ, ಪವಿತ್ರ ಜ್ಯೋತಿಗುಡ್ಡೆ, ಸುನಿತಾ ಕೆ.

**ಪ್ರಕಟಣೆ :** ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ

**ಹಕ್ಕುಗಳು :** ಒಕ್ಕೂಟದ್ದು

**ಬೆಲೆ :** 100ರೂ

**ಪುಟ ಸಂಖ್ಯೆ :** 124 + XXIV

**ಮೊದಲ ಮುದ್ರಣ :** 2018

**ಪ್ರತಿ :** 500, **ಸೈಜ್:** 1/8 ಡೆಮಿ

**ಬಳಸಿದ ಕಾಗದ :** 70 ಜಿಎಸ್‌ಎಂ ಬುಕ್‌ಪ್ರಿಂಟ್

**ಮುಖಪುಟ ಚಿತ್ರ : ಶ್ವೇತ ಜ್ಯೋತಿಗುಡ್ಡೆ**

**ವಿನ್ಯಾಸ ಮತ್ತು ಮುದ್ರಣ : ಜನಹೋರಾಟ ಪ್ರಿಂಟರ್ಸ್,**
**2ನೇ ತಿರುವು, ನೆಹರು ರಸ್ತೆ, ಶಿವಮೊಗ್ಗ**
**ದೂ : 08182 - 273753**

*ಉಸಿರ ತುಂಬ ಜೋಗುಳ ಸೂಸಿ*

*ತಾಯ್ತನಕೆ ಹೊಸ ವ್ಯಾಖ್ಯೆ ಬರೆದ ಗೌರಿ ಅಕ್ಕನಿಗೆ*

## ಹೆಜ್ಜೆ ಗುರುತು

### ಭಾಗ 1


★ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ – 2017 ಕರಪತ್ರ # 4

★ ಪ್ರೀತಿ ರಾಜಕಾರಣವ ಅರಸುತ್ತಾ – ವಾಣಿ ಪೆರಿಯೋಡಿ # 11

★ ಕಾರ್ಯಕ್ರಮ ವಿವರಗಳು # 23

★ ಸಂದರ್ಶನಗಳು: ರಂಜನಾ ಪಾಡಿ

1. 'ಸ್ತ್ರೀವಾದವೆಂದರೆ..' ಸಂ: ಎಚ್. ಎಸ್. ಅನುಪಮಾ # 25

2. ಸಾಯದೇ ಬದುಕುಳಿದವರು ಸಂ: ಎನ್. ಗಾಯತ್ರಿ # 29

★ ಮಹಿಳೆಯ ಇತಿಹಾಸವೆಂದರೆ ಮಹಿಳಾ ಹೋರಾಟದ ಇತಿಹಾಸ – ರಂಜನಾ ಪಾಡಿ
ಅನು: ದು. ಸರಸ್ವತಿ # 35

★ ಗೋಗು ಶ್ಯಾಮಲ ಪರಿಚಯ # 45

★ ಹೋರಾಟದಿಂದ ಸಾಧಿಸಿಕೊಂಡ ಹಕ್ಕುಗಳನ್ನು ನಾವು ಕಾಪಾಡಿಕೊಳ್ಳಬೇಕಾಗಿದೆ –
ಗೋಗು ಶ್ಯಾಮಲ ಅನು: ಕೆ. ವಿ. ನೇತ್ರಾವತಿ # 46

★ ಭಯವಿರದ ಸ್ವಾತಂತ್ರ್ಯ ಪ್ರತಿಪಾದಿಸುವ ಕವಿತಾ ಕೃಷ್ಣನ್ – ಎಚ್. ಎಸ್. ಅನುಪಮಾ # 49

★ ನಾವು ಪ್ರೀತಿಯ ಸಂಘರ್ಷ ನಡೆಸುತ್ತೇವೆ – ಕವಿತಾ ಕೃಷ್ಣನ್ ಅನು: ಮಲ್ಲಿಗೆ ಸಿರಿಮನೆ # 53

**ಕವನಗಳು** # 56

★ ಎದ್ದು ಬನ್ನಿರಿ – ಕವನ – ಶಾಂತಾ ಹಿರೇಮಠ

★ ವಿರೋಧವಿದೆ – ಶೀಲಾ ಹಾಲ್ಕುರಿಕೆ

★ ಅಕ್ಕ ನಾನು ಹುಡುಕುತ್ತಿದ್ದೇನೆ.. – ಅರುಣಾ ನರೇಂದ್ರ

★ ಒಡೆಯಲಾಗದ ಒಗಟು – ವಿಜಯಲಕ್ಷ್ಮಿ ಕೊಟಗಿ

★ ಹೆಣ್ಣು – ಸರೋಜಾ ಬಾಕಳೆ

★ ಮಹಿಳೆಯ ಮುನ್ನಡಿಗೆ – ಕೋಮಲಾ ಕುದುರಿಮೋತಿ

★ ಬಂದು ಸೇರುವ ಬಂಧಗಳು – ಮಹಾಲಕ್ಷ್ಮಿ ಈ.ಕೆ

★ ಬೆಂಕಿಯಲ್ಲ ಬೆಳಕು – ರಮೇಶ್ ಗಬ್ಬೂರು

★ ನಾವು... ಈ ನೆಲದ ಹೆಣ್ಣುಗಳು – ಹುಲಿಕುಂಟೆ ಮೂರ್ತಿ


### ಭಾಗ 2

### ನಾನು ಕಂಡಂತೆ ಕೊಪ್ಪಳ ಸಮಾವೇಶ


★ ಬಿಳಿ ಉಡುಪಿನಲ್ಲಿ ಶಾಂತಿಗಾಗಿ ನಾವು : ಕೊಪ್ಪಳದ ಅನುಭವ – ಜ್ಯೋತಿ ಹಿಟ್ನಾಳ್ # 68

★ ನಮ್ಮದು ಪ್ರೀತಿಯ ರಾಜಕಾರಣ, ನಮ್ಮದು ಕರಳುಬಳ್ಳಿಯ ಸಂಬಂಧ # 70
– ವಿಜಯಲಕ್ಷ್ಮಿ ಕೊಟಗಿ

★ ಕೈಗೆ ಕೈ ಜೋಡಿಸೋಣ ಬನ್ನಿ – ಸಂತೋಷ್ ಎಚ್. ಎಂ., ಕೆ.ವಿಎಸ್ # 73
★ ಕೊಪ್ಪಳ ಮಹಿಳಾ ಜಾಗೃತಿ ಸಮಾವೇಶದ ಸಂದೇಶ – ವಿಠ್ಠಪ್ಪ ಗೋರಂಟ್ಲಿ # 75
★ ಆದರೆ ಒಂದು ಮರ, ಹೋದರೆ ಒಂದು ಬೀಜ – ಆನಂದ ಹಳ್ಳಿಗುಡಿ # 78
★ ಅಕ್ಷರಗಳಲ್ಲಿ ನಿಲುಕದು– ಸರೋಜಾ ಬಾಕಳೆ # 79
★ ಕೊಪ್ಪಳ ಸಮಾವೇಶ ಲೋಕಾಂತಗೊಂಡುದು ಹೀಗೆ...– ಗುಲಾಬಿ ಬಿಳಿಮಲೆ # 80
★ ಒಂದಲ್ಲ ಒಂದು ದಿನ – ಸಿರಾಜ್ ಬಿಸರಳ್ಳಿ # 82
★ ಸಮತೆಯೆಡೆಗೆ ನಮ್ಮ ನಡಿಗೆ – ಕೊಪ್ಪಳದ ಮಹಿಳಾ ದಿನಾಚರಣೆಗೆ # 86
ಕೈ ಜೋಡಿಸೋಣ ಬನ್ನಿ – ನಸ್ರೀನ್ ಮಿಠಾಯಿ
★ ಕರವಸ್ತ್ರ ಮಾರಿ ಹಣ ಸಂಗ್ರಹಿಸುವುದು ಸ್ವಾಭಿಮಾನದ ನಡೆ ಎನಿಸಿತು # 88
– ಚಿದು, ದೊಡ್ಡಬಳ್ಳಾಪುರ
★ ಪ್ರೀತಿಯ ರಾಜಕಾರಣದ ಸಂದೇಶ ಬೀರಿದ ಮಹಿಳಾ ದಿನ – ಎನ್. ಗಾಯತ್ರಿ # 89

## ಭಾಗ 3

## ಗೌರಿ ಸ್ಮರಣೆ

★ ನಾನೂ ಗೌರಿ – ಗೌರಿ ಎಂಬ ಚೇತನ # 93
★ ತಾಯ್ತನಕ್ಕೆ ಹೊಸ ವ್ಯಾಖ್ಯೆ – ಗೌರಿ – ದು ಸರಸ್ವತಿ # 95
★ ''ನಾನು ನಿಮ್ಮಪ್ಪ'' – ಬಿ. ಚಂದ್ರೇ ಗೌಡ # 101
★ ಗೌರಿ ಲಂಕೇಶ್ ವ್ಯಕ್ತಿತ್ವದ ಭಿನ್ನ ಆಯಾಮಗಳು – ಹುಲಿಕುಂಟೆ ಮೂರ್ತಿ # 104
★ **ಕವನಗಳು:** # 109

ಗೌರಿಯರು – ಡಾ. ಕೆ. ಷರೀಫಾ
ಸಾವಿರಾರು ಗೌರಿ – ಸಾವಿತ್ರಿ ಮಜುಂದಾರ್
ವಿ.ವಿ.ಐ.ಪಿ – ಸರೋಜಾ ಬಾಕಳೆ
ತನ್ನದಲ್ಲದ ತಪ್ಪಿನಿಂದ – ಪುಷ್ಪಲತಾ ಏಳುಬಾವಿ
ಸಾಕಿನ್ನು ಸಾಕು – ವಿಜಯಲಕ್ಷ್ಮಿ ಕೊಟಗಿ
ಕಿಚ್ಚಿನ ಹಾಡು – ಶ್ರೀನಿವಾಸ ಚಿತ್ರಗಾರ
ಕೊರಳಿನ ದನಿ – ಶಾಂತಾದೇವಿ ಹಿರೇಮಠ
ಗೌರಿ.. ಗೌರಿ.. – ಅಂಜನಾ ದೇವಿ ಎಚ್.

**ಕಳ್ಳು ಬಳ್ಳಿ ಸಂಬಂಧ ಬೆಳೆಸುವ ದಾರಿಯಲ್ಲಿ ಯುವಜನರ ಶಿಬಿರಗಳು** # 118
**ಚಿತ್ರ ಸಂಪುಟ** # 124



# ಭಾಗ 1
# ಕೊಪ್ಪಳ ಮಹಿಳಾ ದಿನಾಚರಣೆ

# ಕರಪತ್ರ

ಸಮತೆಯೆಡೆಗೆ ನಮ್ಮ ನಡಿಗೆ

**ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ**

**ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ 8, 9 ಮಾರ್ಚ್ 2017, ಕೊಪ್ಪಳ**

**ವಿಚಾರ ಸಂಕಿರಣ, ಹಕ್ಕೊತ್ತಾಯ ಜಾಥಾ ಹಾಗೂ ಬೃಹತ್ ಸಾರ್ವಜನಿಕ ಸಮಾವೇಶ**

**'ನಮ್ಮ ಮಗಳು ಜಗದ ಬೆಳಕು**

**ನಮ್ಮ ದೇಹ ನಮ್ಮ ಹಕ್ಕು'**

**ಸಹೃದಯರೇ,**

ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಮಾನತೆ, ಸಾಮಾಜಿಕ ನ್ಯಾಯ, ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳಲ್ಲಿ ನಂಬಿಕೆ ಇಟ್ಟು ಕೆಲಸ ಮಾಡುತ್ತಿರುವ ಮಹಿಳಾ ಹಾಗೂ ಸಮಾನ ಮನಸ್ಕ ಸಂಘಟನೆಗಳು ಒಗ್ಗೂಡಿ 2012ರಲ್ಲಿ ಹುಟ್ಟುಹಾಕಿದ ''ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ''ವು ಹಿಂಸೆ, ಅಸಮಾನತೆ ಮುಕ್ತ ಆರೋಗ್ಯಕರ ಸಮಸಮಾಜವನ್ನು ಕಟ್ಟುವ ಆಶಯವನ್ನು ಹೊಂದಿದೆ. ಒಕ್ಕೂಟವು ಕಳೆದ ನಾಲ್ಕು ವರುಷಗಳಿಂದ ಸಾವಿರಾರು ಮಹಿಳೆಯರನ್ನು ಸಂಘಟಿಸಿ, ಮಾರ್ಚ್ 8ರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಹಿಳಾ ಚೈತನ್ಯದ ದಿನವಾಗಿ ರಾಜ್ಯಮಟ್ಟದಲ್ಲಿ ಆಚರಿಸುತ್ತಾ ಬಂದಿದೆ. ಮಂಗಳೂರಿನಲ್ಲಿ 2013ರಲ್ಲಿ, ಮೈಸೂರಿನಲ್ಲಿ 2014ರಲ್ಲಿ, ಬೆಂಗಳೂರಿನಲ್ಲಿ 2015ರಲ್ಲಿ, ವಿಜಯಪುರದಲ್ಲಿ 2016ರಲ್ಲಿ ಯಶಸ್ವಿಯಾಗಿ ಆಚರಿಸಿದ ಮಹಿಳಾ ದಿನಾಚರಣೆಗಳು ಮಹಿಳಾ ಚಳವಳಿಯ ಮೈಲಿಗಲ್ಲಾಗಿವೆ.

ಅನಾದಿ ಕಾಲದಿಂದಲೂ ನಡೆಯುತ್ತಲೇ ಬಂದಿರುವ ಮಹಿಳೆಯರ ಮೇಲಿನ ಹಿಂಸೆ ಅನ್ಯಾಯ, ಅಸಮಾನತೆಗಳಿಗೆ ಯಾವ ಗಡಿ, ದೇಶ, ಜಾತಿ, ಧರ್ಮ, ಸಂಸ್ಕೃತಿಗಳೂ ಹೊರತಲ್ಲ. ಅವು ಪ್ರಾಚೀನ ಯುಗವೋ, ಡಿಜಿಟಲ್ ಯುಗವೋ ಎಂಬ ಬೇಧವೂ ಇಲ್ಲದ ಸಾರ್ವಕಾಲಿಕ ಕಹಿ ವಾಸ್ತವವಾಗಿವೆ. ಹಾಗೆಯೇ ಪ್ರತಿಯೊಂದು ಕಾಲಘಟ್ಟದಲ್ಲೂ ಹಿಂಸೆ, ಅನ್ಯಾಯ ಮತ್ತು ಅಸಮಾನತೆಗಳ ವಿರುದ್ಧ ಆತ್ಮವಿಶ್ವಾಸದಿಂದ ಪ್ರತಿರೋಧ ಒಡ್ಡುತ್ತಲೇ ಬಂದಿರುವ ಮಹಿಳೆಯರ ಬದುಕು ಮತ್ತು ಹೋರಾಟ ನಮ್ಮ ಚೈತನ್ಯವಾಗಬೇಕಿದೆ.

ಜಿಲ್ಲಾ ಪುನರ್ವಿಂಗಡಣೆಯ ಭಾಗವಾಗಿ 1997ನೇ ಇಸವಿಯಲ್ಲಿ ಸೃಷ್ಟಿಯಾದ ಕೊಪ್ಪಳ ಜಿಲ್ಲೆ, ದುಡಿಯುವ ವರ್ಗದ, ತಳವರ್ಗದ ಹೋರಾಟಗಳಿಗೆ, ಬಂಡಾಯ ಸಾಹಿತ್ಯ ಚಳುವಳಿಗೆ, ಮಹಿಳೆಯರ ಮೇಲಿನ ಅತ್ಯಾಚಾರ ವಿರೋಧಿ ಹೋರಾಟಗಳಿಗೆ ನೆಲೆಯಾಗಿದೆ. ಬಾಲ್ಯವಿವಾಹ, ತಾಯಿ ಮರಣ,

ಶಿಶು ಮರಣ, ರಕ್ತಹೀನತೆ, ದೇವದಾಸಿ ಪದ್ಧತಿ, ಲೈಂಗಿಕ ದೌರ್ಜನ್ಯ, ವರದಕ್ಷಿಣೆ, ಅಪೌಷ್ಟಿಕತೆ, ಬಯಲು ಶೌಚ ಪದ್ಧತಿ, ಗುಳೆ, ಬಾಲ ದುಡಿಮೆ, ಮದ್ಯಪಾನದಂತಹ ಸಾಮಾಜಿಕ ಸಮಸ್ಯೆಗಳು ಅಲ್ಲಿನ್ನೂ ಜೀವಂತವಾಗಿವೆ. ಈ ಎಲ್ಲ ಸಮಸ್ಯೆಗಳಿಂದಾಗಿ ಅತ್ಯಂತ ಹೆಚ್ಚು ಬಾಧಿತಳು ಹೆಣ್ಣೇ ಆಗಿದ್ದಾಳೆ. ಅಸಮಾನತೆ, ಅನ್ಯಾಯದ ವಿರುದ್ಧ ಹೋರಾಟಗಳೂ ಜೀವಂತವಾಗಿರುವ ಕೊಪ್ಪಳದ ನೆಲದಲ್ಲಿ ಈ ಬಾರಿಯ ಮಹಿಳಾ ದಿನಾಚರಣೆ ನಡೆಯಲಿದೆ. ಅಲ್ಲಿನ ಪ್ರಗತಿಪರ, ಜನಪರ ಸಂಘಟನೆಗಳೆಲ್ಲವೂ ಸಮಾವೇಶವನ್ನು ಯಶಸ್ವಿಗೊಳಿಸಲು ಕೈ ಜೋಡಿಸಿವೆ. ಪ್ರತಿ ಸಾರಿಯಂತೆ ಈ ಸಲವು ಸ್ಥಳೀಯ ಸಮಸ್ಯೆಗಳನ್ನು ಕುರಿತ ವಿಚಾರ ಸಂಕಿರಣ, ಹಕ್ಕೊತ್ತಾಯ ಜಾಥಾ ಹಾಗೂ ಸಾರ್ವಜನಿಕ ಸಭೆಗಳನ್ನು ನಡೆಸಲು ತೀರ್ಮಾನಿಸಲಾಗಿದೆ.

**ಕೈಗೆ ಕೈ ಜೋಡಿಸೋಣ..**

ಲಾಭಕೋರ ಮಾರುಕಟ್ಟೆ ಆರ್ಥಿಕತೆಯು ಹಲವು ಬಿಕ್ಕಟ್ಟುಗಳನ್ನು ತಂದೊಡ್ಡಿರುವ ಸಂಕಷ್ಟದ ಕಾಲವಿದು. ಪೌರಕಾರ್ಮಿಕರು, ಅಂಗನವಾಡಿ ಕಾರ್ಯಕರ್ತೆಯರು, ಗಾರ್ಮೆಂಟ್ಸ್ ಕಾರ್ಮಿಕರು, ಮನೆಗೆಲಸದವರು, ಕಟ್ಟಡ ಕಾರ್ಮಿಕರು, ಬೀದಿಬದಿ ವ್ಯಾಪಾರಿಗಳು, ಕೃಷಿ ಕಾರ್ಮಿಕರು ಹಾಗೂ ಇನ್ನಿತರ ಅಸಂಘಟಿತ ವಲಯದಲ್ಲಿ ದುಡಿಯುವವರ ಸಂಖ್ಯೆ ಶೇ. 92.3ರಷ್ಟಿದೆ. ದೇಶದ ಆಂತರಿಕ ಉತ್ಪನ್ನಕ್ಕೆ ಅವರು ನೀಡುತ್ತಿರುವ ಕೊಡುಗೆ ಶೇ. 60ರಷ್ಟು. ಮೂಲಸೌಕರ್ಯಗಳು, ಸೌಲಭ್ಯಗಳು, ಆಯಾ ಕಾಲದ ಅಗತ್ಯಕ್ಕೆ ತಕ್ಕಂತೆ ಬದುಕುವ ವೇತನವೂ ಇಲ್ಲದೆ ಅತಿಯಾದ ದುಡಿತಕ್ಕೆ ಒಳಗಾಗಿರುವ ಇವರು, ಉದ್ಯೋಗ ಭದ್ರತೆಯೂ ಇಲ್ಲದೆ ಸದಾ ಆತಂಕದಲ್ಲೇ ಬದುಕುತ್ತಾರೆ. ಉದ್ಯೋಗ ಸ್ಥಳದಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ, ಶಾಲೆಗಳಲ್ಲಿ ಲೈಂಗಿಕ ದೌರ್ಜನ್ಯ ತಡೆಗೆ, ಅತ್ಯಾಚಾರ ತಡೆಗೆ ಅತಿ ಕಠಿಣ ಕಾನೂನುಗಳನ್ನು ತಂದರೂ ಮಹಿಳೆಯರ ಹಾಗೂ ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ ಅವ್ಯಾಹತವಾಗಿ ನಡೆಯುತ್ತಿದೆ. 40% ಅತ್ಯಾಚಾರಗಳು ಶೌಚಕ್ಕೆಂದು ಮನೆಯಿಂದ ಹೊರಹೋದಾಗಲೇ ಸಂಭವಿಸುತ್ತಿವೆ. ಮಹಿಳೆಯರು, ದಲಿತರು ಮತ್ತು ಆದಿವಾಸಿಗಳ ಕಲ್ಯಾಣಕ್ಕೆಂದು ಮೀಸಲಿಡುವ ಸಹಾಯಧನವನ್ನು ಸೂಕ್ತವಾಗಿ ಬಳಸದೆ ಹಿಂತಿರುಗಿಸಲಾಗುತ್ತಿದೆ. ಆರೋಗ್ಯ, ಉದ್ಯೋಗ ಮತ್ತು ಶಿಕ್ಷಣಕ್ಕೆ ಬಜೆಟ್‌ನಲ್ಲಿ ಮೀಸಲಿಡುವ ಹಣ ಕಡಿತಗೊಳ್ಳುತ್ತಿದೆ. ದುಡಿಯುವ ಜನರಿಗೆ ಸ್ವಲ್ಪವಾದರೂ ಸಹಾಯಕವಾಗಿದ್ದ ಉದ್ಯೋಗ ಖಾತ್ರಿ ಯೋಜನೆಗಳನ್ನು ನಿಲ್ಲಿಸಲಾಗುತ್ತಿದೆ. ಹೈಟೆಕ್ ಯುಗದಲ್ಲಿ ಪೌರಕಾರ್ಮಿಕರು ಬರಿಗೈಲಿ ಕಸ–ಮಲ ಬಾಚುತ್ತ ಅಮಾನವೀಯ ಅಸ್ಪೃಶ್ಯತೆಯಲ್ಲಿ ಬದುಕುತ್ತಿದ್ದಾರೆ. ನೇಕಾರರು–ಕೃಷಿ ಕೂಲಿ ಕಾರ್ಮಿಕರು ಹತಾಶ ಸ್ಥಿತಿಗೆ ತಳ್ಳಲ್ಪಟ್ಟಿದ್ದಾರೆ. ಅಭಿವೃದ್ಧಿಯ, ಯೋಜನೆಗಳ ನೆಪದಲ್ಲಿ ಆದಿವಾಸಿಗಳನ್ನು, ರೈತರನ್ನು, ವಂಚಿತ ಸಮುದಾಯಗಳನ್ನು ಎತ್ತಂಗಡಿ ಮಾಡಲಾಗುತ್ತಿದೆ. ಕೋಟ್ಯಾಧಿಶರ ಕಾರ್ಪೋರೇಟ್, ಬಹುರಾಷ್ಟ್ರೀಯ ಕಂಪನಿಗಳು ಮಾತ್ರ ಹೆಚ್ಚೆಚ್ಚು ರಿಯಾಯ್ತಿ, ಸಬ್ಸಿಡಿ ಪಡೆದುಕೊಂಡು ಜಗತ್ತಿನ ಅತ್ಯಂತ ಶ್ರೀಮಂತರ ಪಟ್ಟಿಗೆ ಸೇರ್ಪಡೆಯಾಗುತ್ತಿವೆ.

ಸರ್ವಜನರ ಹಿತಕ್ಕಾಗಿ ಸದ್ವಿನಿಯೋಗವಾಗಬೇಕಾದ ಅಧಿಕಾರ ರಾಜಕೀಯವು ನೋಟು ಅಪಮೌಲ್ಯೀಕರಣದಂತಹ ಕ್ರಮಗಳ ಮೂಲಕ ಉಳ್ಳವರ ಹಿತಾಸಕ್ತಿಯನ್ನು ಕಾಪಾಡುತ್ತಿದೆ. ಅಧಿಕಾರ ರಾಜಕಾರಣದಲ್ಲಿ ತೊಡಗಿರುವ ಪಕ್ಷ/ಸಿದ್ಧಾಂತಗಳು ಮಹಿಳಾ ವಿಷಯಕ್ಕೆ ಮಾತಿನಲ್ಲಷ್ಟೇ ಮನ್ನಣೆ ನೀಡಿ ರಾಜಕೀಯ ಪ್ರಾತಿನಿಧ್ಯ ಒದಗಿಸಬೇಕಾದ ಸಂದರ್ಭದಲ್ಲಿ ಎಲ್ಲ ಸ್ತರದ ಮಹಿಳೆಯರಿಗೂ ತೊಡರುಗಾಲು ಹಾಕುತ್ತಿವೆ. ಲಾಭ ದೋಚಲು ಉದಾರವಾದ ಆರ್ಥಿಕತೆಯೊಂದಿಗೆ ಧರ್ಮ–

ಜಾತಿವ್ಯವಸ್ಥೆಯೂ ಕೈಜೋಡಿಸಿರುವುದರ ಪರಿಣಾಮವಾಗಿ ಮಹಿಳೆಯರ ಮೇಲಿನ ಹಿಂಸೆಯ ಸ್ವರೂಪಗಳು ಹೆಚ್ಚೆಚ್ಚು ಸಂಕೀರ್ಣಗೊಳ್ಳುತ್ತಿರುವುದಷ್ಟೇ ಅಲ್ಲ, ಮಾಮೂಲಿ ವಿಷಯವಾಗಿರುವುದು ಆತಂಕಕಾರೀ ಬೆಳವಣಿಗೆಯಾಗಿದೆ. ಅನೈತಿಕ ಪೊಲೀಸ್‌ಗಿರಿ, ಮರ್ಯಾದಾಹೀನ ಹತ್ಯೆ, ಜಾತಿ ಪಂಚಾಯ್ತಿಗಳ ಮೂಲಕ ಮಹಿಳೆ ಧರ್ಮ/ಕೋಮು/ಜಾತಿ ವೈಷಮ್ಯದ ದಾಳವಾಗಿ ಬಳಕೆಯಾಗುತ್ತಿದ್ದಾಳೆ. ಲಿಂಗತ್ವ ಮತ್ತು ಲೈಂಗಿಕತೆ ಕುರಿತು ವೈಜ್ಞಾನಿಕ ಮನೋಭಾವ ಬೆಳೆಸುವ ಆರೋಗ್ಯಕರ ಶಿಕ್ಷಣದ ಕೊರತೆ, ಹೆಣ್ಣುಮಕ್ಕಳನ್ನು ಸಹಜೀವಿಯಾಗಿ ನೋಡದೆ ಸರಕಿನಂತೆ ನೋಡುವ ಪಿತೃಸಂಸ್ಕೃತಿ ಮತ್ತು ಮಾರುಕಟ್ಟೆ ಆರ್ಥಿಕತೆಗಳು ಮಹಿಳಾ ತಾರತಮ್ಯ ಮತ್ತು ದೌರ್ಜನ್ಯಗಳಿಗೆ ಕಾರಣವಾಗಿವೆ.

ಹೀಗೆ ಲಾಭಕೋರ ಆರ್ಥಿಕತೆ, ಜಾತೀಯತೆ, ಪುರುಷ ಪ್ರಧಾನತೆ, ಮತಾಂಧತೆಗಳು ಒಂದಾಗಿ ರೂಪಿಸುತ್ತಿರುವ ದ್ವೇಷ ರಾಜಕಾರಣವು ಹುಟ್ಟುಹಾಕುತ್ತಿರುವ ಹಿಂಸೆಯನ್ನು ಎದುರಿಸಲು ಮಹಿಳೆಯರು ಮತ್ತು ಸಮಸಮಾಜವನ್ನು ಕಟ್ಟಲು ಬದ್ಧರಾಗಿರುವವರೆಲ್ಲರೂ ಸಂಘಟಿತರಾಗುವ ತುರ್ತು ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ. ಇದು ಒಕ್ಕೂಟದ ಪ್ರಮುಖ ಆಶಯವೂ ಆಗಿದೆ. ಎಂದೇ 'ನಮ್ಮ ನಡಿಗೆ ಸಮತೆಯೆಡೆಗೆ' ಎನ್ನುವುದು ನಮ್ಮ ಗುರಿಯಾಗಿದೆ.

**ತಡೆಗಟ್ಟೋಣ**

ಹೆಣ್ಣಿಗೆ ಆಯ್ಕೆ ಅವಕಾಶ ಹಾಗೂ ಸಬಲೀಕರಣವನ್ನು ನಿರಾಕರಿಸುವ ಬಾಲ್ಯವಿವಾಹ; ಹೆಣ್ಣು ಭೂಮಿಗೆ ಬರುವುದನ್ನೇ ತಡೆಗಟ್ಟುವ ಸ್ತ್ರೀ ಭ್ರೂಣ ಹತ್ಯೆ; ಮಹಿಳೆಯ ಅಸುರಕ್ಷಿತ ಬದುಕಿನ ಸೂಚಿಗಳಾದ ಲೈಂಗಿಕ ದೌರ್ಜನ್ಯ-ತಾಯಿ ಮರಣ-ಶಿಶು ಮರಣ-ವಧು ದಹನ-ಮುಟ್ಟಿನ ಮೌಢ್ಯ-ಮದ್ಯಪಾನ, ಮಹಿಳೆಯ ದೇಹವನ್ನು ಬಳಕೆಯ ಸರಕಾಗಿಸುವ ಮೂಲಕ ಅವಳ ದೇಹದ ಮೇಲಿರಬೇಕಾದ ಅವಳ ಹಕ್ಕನ್ನೇ ಕಸಿದುಕೊಂಡ ದೇವದಾಸಿ ಪದ್ಧತಿ ಮತ್ತು ಮಾನವ ಸಾಗಣೆಯು ಈ ಜಿಲ್ಲೆಯ ಜ್ವಲಂತ ಸಮಸ್ಯೆಗಳಾಗಿವೆ. ಹಾಗಾಗಿ ಈ ವಿಷಯಗಳು ಈ ಸಲದ ವಿಚಾರ ಸಂಕಿರಣದ ಪ್ರಮುಖ ವಿಷಯಗಳಾಗಿವೆ. ಅಲ್ಲದೆ ಜನರನ್ನು ಸಮಾವೇಶಕ್ಕಾಗಿ ಸಂಘಟಿಸುವ ಸಲುವಾಗಿ ಸ್ಥಳೀಯ ಯುವ ಸಾಂಸ್ಕೃತಿಕ ತಂಡವು ಹಾಡು, ಕಿರುನಾಟಕ ಮತ್ತು ಮೇಲಿನ ವಿಷಯಗಳ ಕುರಿತ ಕಿರು ಪುಸ್ತಿಕೆಯನ್ನು ಹಂಚುವ ಮೂಲಕ ಜಾಗೃತಿ ಮೂಡಿಸುವ ಕೆಲಸವನ್ನು ಮಾಡುತ್ತಿದೆ.

ಜಗದ ಬೆಳಕಿಗೆ ಕಣ್ಬಿಡುವ ಮುನ್ನವೇ ಭ್ರೂಣದಲ್ಲಿಯೇ ಹೆಣ್ಣುಮಗುವನ್ನು ಹೊಸಕಿ ಹಾಕುವ ಮೂಲಕ ತಾಯ ಗರ್ಭವನ್ನೂ ಹೆಣ್ಣುಮಗುವಿಗೆ ಕ್ಷೇಮವಾಗಿಲ್ಲದಂತೆ ಮಾಡಲಾಗಿದೆ. ಹೆಣ್ಣು ಭ್ರೂಣಗಳು ಜೀವ ತಲೆದು ಜಗತ್ತನ್ನು ಕಾಣುವುದಷ್ಟೇ ಅಲ್ಲದೆ ಜಗತ್ತಿಗೆ ಬೆಳಕನ್ನೂ ನೀಡಬಲ್ಲಳು. ಬಾಲ್ಯವಿವಾಹ (ಅಂತಾರಾಷ್ಟ್ರೀಯ ಮಹಿಳಾ ಸಂಶೋಧನಾ ಸಂಸ್ಥೆಯ ಪ್ರಕಾರ 18 ವರ್ಷದೊಳಗೆ ಹೆಣ್ಣುಮಕ್ಕಳು ಮದುವೆಯಾಗುವ ವಿಶ್ವದ ಮೊದಲ 20 ರಾಷ್ಟ್ರಗಳ ಪೈಕಿ ಭಾರತ 11ನೇ ಸ್ಥಾನದಲ್ಲಿದೆ. ಕೊಪ್ಪಳದಲ್ಲಿ ನಡೆಯುವ 51.4% ವಿವಾಹಗಳು ಬಾಲ್ಯ ವಿವಾಹಗಳಾಗಿವೆ), ಲೈಂಗಿಕ ದೌರ್ಜನ್ಯ, ಲೈಂಗಿಕ ವೃತ್ತಿಗಿಳಿಯಲು ಪರವಾನಗಿಯಾಗಿರುವ ದೇವದಾಸಿ ಪದ್ಧತಿ, ಕೌಟುಂಬಿಕ ದೌರ್ಜನ್ಯ, ಅಪೌಷ್ಟಿಕತೆ, ತಾಯಿ ಮರಣ (ಪ್ರತಿವರ್ಷ ಭಾರತದಲ್ಲಿ 45,000 ತಾಯಂದಿರು ಹೆರಿಗೆ ಸಮಯದಲ್ಲಿ ಪ್ರಾಣ ಕಳೆದುಕೊಳ್ಳುತ್ತಿದ್ದು ಕೊಪ್ಪಳದಲ್ಲಿಯೂ ತಾಯಿ ಮರಣಗಳು ಸಂಭವಿಸುತ್ತಲೇ ಇವೆ) ಇವೆಲ್ಲವು ಹೆಣ್ಣಿಗೆ ತನ್ನ ದೇಹದ ಮೇಲಿರಬೇಕಾದ ಸ್ವಾಯತ್ತತೆಯನ್ನೇ ಕಸಿದುಕೊಂಡಿವೆ. ಹೆಣ್ಣಷ್ಟೇ ಅಲ್ಲ ಪ್ರತಿಯೊಬ್ಬ

ಮಾನವ ಜೀವಿಗೂ ತನ್ನ ದೇಹದ ಮೇಲೆ ಹೊಂದಿರಬೇಕಾದ ಹಕ್ಕು ಮೂಲಭೂತ ಮಾನವ ಹಕ್ಕಾಗಿದೆ. ಜ್ಞಾನೋದಯದ ಸಾಧನವೇ ಆಗಿರುವ ದೇಹದ ಮೇಲೆ ಸ್ವಾಯತ್ತತೆಯನ್ನು ಹೊಂದಿರಬೇಕೆಂಬುದು ನಮ್ಮ ಆಶಯವಾಗಿದೆ. ಅಂತೆಯೇ **'ನಮ್ಮ ಮಗಳು ಜಗದ ಬೆಳಕು' 'ನಮ್ಮ ದೇಹ ನಮ್ಮ ಹಕ್ಕು'** ಈ ಸಲದ ನಮ್ಮ ಘೋಷವಾಕ್ಯಗಳಾಗಿವೆ.

ಒಟ್ಟಾರೆಯಾಗಿ ಹೇಳುವುದಾದರೆ ಅನ್ಯಾಯ, ಅಸಮಾನತೆಯನ್ನು ಹುಟ್ಟುಹಾಕುವ ಜೀವ ವಿರೋಧಿ ದ್ವೇಷ ರಾಜಕಾರಣವನ್ನು ಮಣಿಸಲು ಸಾಧ್ಯವಾಗುವುದು ಜೀವಪರವಾದ ಪ್ರೀತಿಯ ರಾಜಕಾರಣದಿಂದ ಮಾತ್ರ ಎನ್ನುವುದು ನಮ್ಮ ನಂಬಿಕೆ. ಹೆಣ್ಣು ಭ್ರೂಣಹತ್ಯೆ ವಿರೋಧಿಸಿ ಲಕ್ಷಾಂತರ ಹೆಣ್ಣುಗಳು ಜೀವತಳೆಯುವುದನ್ನು ಸ್ವಾಗತಿಸಲು; ಹೆಣ್ಣು ಮಕ್ಕಳನ್ನು ಬಾಲ್ಯವಿವಾಹ– ತಾಯಿಮರಣ– ವರದಕ್ಷಿಣೆ– ಕೌಟುಂಬಿಕ ಹಿಂಸೆಗಳಿಂದ ಕಾಪಾಡಲು; ಮಹಿಳೆಯರ ಮೇಲಿನ ಅತ್ಯಾಚಾರ, ಹಿಂಸೆ, ದೌರ್ಜನ್ಯಗಳು ಅಳಿಯದೆ ಸ್ವಸ್ಥ ಸಮಾಜ ಸಾಧ್ಯವಿಲ್ಲವೆಂಬ ಅರಿವು ಮೂಡಿಸಲು; ಸಹಜೀವಿಯಾಗಿ ಸಮಾನತೆ–ಸಹಬಾಳ್ವೆಯ ಬದುಕನ್ನು ಕಟ್ಟಲು ಈ ನೆಲದ ಮಹಿಳೆಯರು ಕೈಗೆ ಕೈ ಜೋಡಿಸಿ ಸಮಾನ ಮನಸ್ಕ ಸಂಗಾತಿಗಳೊಂದಿಗೆ ಹೊರಟಿದ್ದಾರೆ. ಕೊಪ್ಪಳದಲ್ಲಿ ಮಾರ್ಚ್ 8, 9ರಂದು ಸಮಾವೇಶಗೊಳ್ಳಲಿದ್ದಾರೆ.

**ಮಹಿಳಾ ದಿನಾಚರಣೆಯ ಕಾರ್ಯಕ್ರಮಗಳ ವಿವರ**

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕೇವಲ ಎರಡು ದಿನದ ಸಮಾವೇಶಕ್ಕಷ್ಟೆ ಸೀಮಿತಗೊಂಡಿಲ್ಲ. ಅದು ಅರಿವು ಮೂಡಿಸುವ, ಸಂಘಟನಾತ್ಮಕವಾಗಿ ಬೆಳೆಯುವ, ಜಾಗೃತಗೊಂಡು ಸಬಲಗೊಳ್ಳುವ ಒಂದು ನಿರಂತರ ಪ್ರಕ್ರಿಯೆಯಾಗಿದೆ. ಅದರ ಅಂಗವಾಗಿ,

★ ಕೊಪ್ಪಳದ ಸುತ್ತಮುತ್ತ ಶಾಲಾಕಾಲೇಜುಗಳಲ್ಲಿ ಜಾಗೃತಿ, ಕರಪತ್ರ ಹಂಚಿಕೆ ಹಾಗೂ ನಿಧಿ ಸಂಗ್ರಹ ಕಾರ್ಯಕ್ರಮ. ಕಲಾ ತಂಡಗಳಿಂದ ಕಾಲೇಜುಗಳಲ್ಲಿ, ಸಂಘ ಸಂಸ್ಥೆಗಳಲ್ಲಿ ಅರಿವು ಮೂಡಿಸುವ ಕೆಲಸ. ಫೆಬ್ರುವರಿಯಲ್ಲಿ ರಕ್ತಹೀನತೆ ಕುರಿತು ರಕ್ತತಪಾಸಣೆ–ವೈದ್ಯಕೀಯ ಪರೀಕ್ಷೆ– ಉಚಿತ ವೈದ್ಯಕೀಯ ಸಲಹೆ. ಗೋಡೆಬರಹ, ಪತ್ರಿಕೆ–ನಿಯತಕಾಲಿಕಗಳಲ್ಲಿ ಬರವಣಿಗೆ ಮಾಡುವ ಮೂಲಕ ಜನಜಾಗೃತಿ. ಫೆಬ್ರುವರಿ 8, 2017ರಿಂದ ಮಾರ್ಚ್ 8ರ ತನಕ **ಪ್ರತಿ ಬುಧವಾರ** (ಫೆಬ್ರವರಿ 8, 15, 22 ಮತ್ತು ಮಾರ್ಚ್ 1) ಜಿಲ್ಲೆಯ ತಾಲೂಕುಗಳಲ್ಲಿ 'ಬಿಳಿಯುಡುಪಿನಲ್ಲಿ ನಾವು' ಮೌನಜಾಗೃತಿ ಕಾರ್ಯಕ್ರಮ. ಮಾರ್ಚ್ ಮೊದಲ ವಾರದಲ್ಲಿ ಕೊಪ್ಪಳದ ನಾಲ್ಕೂ ಕಡೆಗಳಿಂದ ದೇವದಾಸಿ ಪದ್ಧತಿ, ಬಾಲ್ಯವಿವಾಹ, ಬಯಲು ಶೌಚಾಲಯ ಮತ್ತು ವಲಸೆ, ಬಾಲಕಾರ್ಮಿಕ ಪದ್ಧತಿ ವಿರೋಧಿಸಿ ಪ್ರತಿದಿನ ಒಂದೊಂದು ಜಾಗೃತಿ ಜಾಥಾ ಕೊಪ್ಪಳಕ್ಕೆ ಬರಲಿವೆ.

★ ಮಾರ್ಚ್ 8ರಂದು ಪುಸ್ತಕ ಬಿಡುಗಡೆ, 'ಮಹಿಳೆ ಮತ್ತು ಪ್ರಜನನ ಹಕ್ಕುಗಳು' ಕುರಿತು ವಿಚಾರ ಸಂಕಿರಣ ಮತ್ತು ಸಂವಾದ. **ಬಾನು ಮುಷ್ತಾಕ್,** ಒರಿಸ್ಸಾದ ಬರಹಗಾರ್ತಿ–ಹೋರಾಟಗಾರ್ತಿ **ರಂಜನಾ ಪಾಡಿ** ಅದರಲ್ಲಿ ಭಾಗವಹಿಸುತ್ತಾರೆ. ಸಂಪನ್ಮೂಲ ವ್ಯಕ್ತಿಗಳಾಗಿ ಮೀನಾಕ್ಷಿ ಬಾಳಿ ಕಲಬುರಗಿ , ನಂದಿನಿ ಬೆಂಗಳೂರು, ಸುಚಿತ್ರಾ ಯುನಿಸೆಫ್ ಬೆಂಗಳೂರು ನಮ್ಮೊಡನಿರುತ್ತಾರೆ. ಅಂದು ಸಾಯಂಕಾಲ ಕೊಪ್ಪಳದ ಅಶೋಕ ಸರ್ಕಲಿನಲ್ಲಿ 'ಬಿಳಿಯುಡುಪಿನಲ್ಲಿ ನಾವು' ಮೌನ ಜಾಗೃತಿ ಕಾರ್ಯಕ್ರಮ.

★ ಮಾರ್ಚ್ 9 ರಂದು ಕೊಪ್ಪಳದ ಪ್ರಮುಖ ಬೀದಿಗಳಲ್ಲಿ 'ಹಕ್ಕೊತ್ತಾಯ ಜಾಥಾ' ನಡೆಯಲಿದೆ. ಜಾಥಾ ಕೊನೆಗೆ ಪಬ್ಲಿಕ್ ಗ್ರೌಂಡ್‌ನಲ್ಲಿ ಸಮಾವೇಶಗೊಳ್ಳಲಿದೆ. ಕರ್ನಾಟಕದ ಮಹಿಳಾ

ಹೋರಾಟಗಾರ್ತಿಯರು, ಸಾಹಿತಿಗಳು ಮತ್ತು ಮಹಿಳಾಪರ ಮನಸುಗಳು ಕೊಪ್ಪಳಕ್ಕೆ ಬರಲಿದ್ದಾರೆ. ದೆಹಲಿಯ ಹೋರಾಟಗಾರ್ತಿ **ಕವಿತಾ ಕೃಷ್ಣನ್** ಹಾಗೂ ಖ್ಯಾತ ತೆಲುಗು ಲೇಖಕಿ **ಗೋಗು ಶ್ಯಾಮಲ** ರ‍್ಯಾಲಿಯಲ್ಲಿ ಪಾಲ್ಗೊಳ್ಳಲಿದ್ದಾರೆ. ನಂತರ ಬಹಿರಂಗ ಸಾರ್ವಜನಿಕ ಸಭೆ ನಡೆಯಲಿದೆ.

**ನಮ್ಮ ಹಕ್ಕೊತ್ತಾಯಗಳು :**

★ ಜಾತಿ, ವರ್ಗ, ಮತ, ಧರ್ಮ, ಜನಾಂಗ, ಯುದ್ಧ, ಸಿದ್ಧಾಂತ, ಭಾಷೆಗಳ ಹೆಸರಿನಲ್ಲಿ ನಡೆಯುವ ಭೀಕರ ಹಿಂಸೆ, ಅತ್ಯಾಚಾರಗಳು ನಿಲ್ಲಬೇಕು.

★ ಹೆಣ್ಣು ಭ್ರೂಣಹತ್ಯೆ, ಬಾಲ್ಯ ವಿವಾಹ, ಆಸಿಡ್ ದಾಳಿ, ಮಹಿಳೆ ಮತ್ತು ಮಕ್ಕಳ ಮಾರಾಟ, ಅತ್ಯಾಚಾರ ಕೊನೆಯಾಗಬೇಕು.

★ ಆರೋಗ್ಯಕರ ಲೈಂಗಿಕ ಶಿಕ್ಷಣದ ಜೊತೆಗೆ ಸಾರ್ವಜನಿಕ ಸ್ಥಳ/ಸಂಸ್ಥೆಗಳಲ್ಲಿ, ವಿವಾಹ ಮತ್ತು ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಯರನ್ನು ಸಹಜೀವಿಯಾಗಿ, ಸಮಾನವಾಗಿ ಕಾಣುವಂತಹ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು. ಅಂತಹ ಪಠ್ಯಕ್ರಮ ಶಿಕ್ಷಣದಲ್ಲಿ ಜಾರಿಯಾಗಬೇಕು. ಸಮವಸ್ತ್ರ ವಸ್ತ್ರಸಂಹಿತೆಗಳನ್ನು ಕೇವಲ ಹೆಣ್ಣುಮಕ್ಕಳಿಗಷ್ಟೇ ಹೇರದೇ ಸ್ತ್ರೀಪುರುಷರೆನ್ನದೆ ಎಲ್ಲರಿಗು ಒಂದೇ ಇರುವಂತೆ ಕಾನೂನು ರೂಪಿಸಬೇಕು.

★ ಸರ್ಕಾರ ರಚನೆಯಲ್ಲಿ ಮತ್ತು ರಾಜಕೀಯರಂಗವೂ ಸೇರಿದಂತೆ ಎಲ್ಲ ರಂಗಗಳಲ್ಲಿ ಸಾಮಾಜಿಕ ನ್ಯಾಯವನ್ನು ಆಧರಿಸಿದ ಮೀಸಲಾತಿಯನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು. ರಾಜಕೀಯ ಪಕ್ಷಗಳಲ್ಲಿ ಮತ್ತು ಸಂಘ, ಸಂಸ್ಥೆ, ಸಂಘಟನೆಗಳಲ್ಲಿ ಮಹಿಳಾ ನಾಯಕತ್ವವನ್ನು ಬೆಳೆಸಬೇಕು.

★ ಉದ್ಯೋಗ ಪ್ರತಿ ಪ್ರಜೆಯ ಹಕ್ಕು. ಸಾಮರ್ಥ್ಯಕ್ಕೆ ತಕ್ಕ ಉದ್ಯೋಗ ಮತ್ತು ಬದುಕುವ ವೇತನ ಮಹಿಳೆಯರಿಗೆ ದೊರೆಯಬೇಕು. ಗಾರ್ಮೆಂಟ್ಸ್ ನೌಕರರು, ಅಂಗನವಾಡಿ-ಬಿಸಿಯೂಟ-ಆಶಾ ಕಾರ್ಯಕರ್ತೆಯರು, ಮನೆಗೆಲಸದವರು, ಕಟ್ಟಡ ಕಾರ್ಮಿಕರು ಹಾಗೂ ಇನ್ನಿತರ ಅಸಂಘಟಿತ ವಲಯದ ದುಡಿಮೆಗಾರರಿಗೆ ಬದುಕುವ ವೇತನ, ಆರೋಗ್ಯಕರ ಕೆಲಸದ ವಾತಾವರಣ ಸಿಗಲೇಬೇಕು. ಪೌರಕಾರ್ಮಿಕರಿಗೆ ಬದುಕುವ ವೇತನ, ಉತ್ತಮ ಕೆಲಸದ ವಾತಾವರಣ, ಸುರಕ್ಷಾ ಸೌಲಭ್ಯಗಳು ಸಿಗಲೇಬೇಕು. ಒಳಚರಂಡಿ ವ್ಯವಸ್ಥೆಯನ್ನು ಸಂಪೂರ್ಣ ಯಾಂತ್ರೀಕೃತಗೊಳಿಸಬೇಕು. ಅಸ್ಪೃಶ್ಯತೆ ಕೊನೆಯಾಗಬೇಕು.

★ ವಲಸೆಯ ಮುಖ್ಯ ಕಾರಣ ನಿರುದ್ಯೋಗ. ಉದ್ಯೋಗಾವಕಾಶಗಳು ಗ್ರಾಮೀಣ ಹಾಗೂ ಸಣ್ಣ ಪಟ್ಟಣ ಪ್ರದೇಶಗಳಲ್ಲೂ ರೂಪುಗೊಳ್ಳುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕು.

★ ದೇವದಾಸಿ ಪದ್ಧತಿ ಕೊನೆಗೊಳ್ಳಬೇಕು. ಅವರಿಗೆ ಉತ್ತಮ ಆರೋಗ್ಯ ಸೇವೆ, ಶಿಕ್ಷಣ ಮತ್ತು ಉದ್ಯೋಗ ದೊರಕಿಸಿಕೊಡಬೇಕು. ಮಹಿಳೆ ಮತ್ತು ಮಕ್ಕಳ ಸಾಗಾಣಿಕೆ ತಡೆಗೆ ಗಂಭೀರ ಪ್ರಯತ್ನಗಳಾಗಬೇಕು.

★ ಲಿಂಗತ್ವ ಅಲ್ಪಸಂಖ್ಯಾತರ, ಲೈಂಗಿಕ ಕಾರ್ಯಕರ್ತರ ಮಾನವ ಹಕ್ಕುಗಳ ಉಲ್ಲಂಘನೆ ನಿಲ್ಲಬೇಕು.

★ ಮುಟ್ಟಿನ ಹೆಸರಿನಲ್ಲಿ ಮಹಿಳೆಯರ ಹೊರಗಿಡುವಿಕೆ, ಶೋಷಣೆ ನಿಲ್ಲಬೇಕು.

★ 1984ರಲ್ಲಿ ಆದೇಶವಾಗಿರುವ ಶೇ.33 ಜೆಂಡರ್ ಬಜೆಟ್ ಕಡ್ಡಾಯವಾಗಿ ಜಾರಿಗೊಳ್ಳಬೇಕು. ಯೋಜನಾ ಹಣಗಳ ಬಳಕೆಗೆ ಕಾವಲು ಸಮಿತಿ ರಚಿಸಬೇಕು.

★ ಕೃಷಿಭೂಮಿಯನ್ನು ರೈತರಿಂದ, ಆದಿವಾಸಿಗಳಿಂದ ಬಲವಂತವಾಗಿ ಕಸಿದುಕೊಂಡು ಅವರ ಬದುಕನ್ನು ದಿಕ್ಕಾಪಾಲಾಗಿಸುವ ಅಭಿವೃದ್ಧಿ ಯೋಜನೆಗಳು, ಸುಗ್ರೀವಾಜ್ಞೆಗಳು ಸಾಮಾಜಿಕ ಮರುಪರಿಶೀಲನೆಗೊಳಗಾಗಬೇಕು. ಆದಿವಾಸಿ ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ಅಮಾನವೀಯ ದೌರ್ಜನ್ಯ ಕೊನೆಯಾಗಬೇಕು.

★ ಶಿಕ್ಷಣ, ಆರೋಗ್ಯ ಹಾಗೂ ಇನ್ನಿತರ ಸಾರ್ವಜನಿಕ ಕ್ಷೇತ್ರಗಳ ಖಾಸಗೀಕರಣ ನಿಲ್ಲಬೇಕು. ಸರ್ಕಾರ/ ಸಾರ್ವಜನಿಕರ ಸಹಭಾಗಿತ್ವ ಮತ್ತು ಸಹಕಾರಿ ತತ್ವಗಳ ಸ್ವಾಮ್ಯತೆ ಜಾರಿಯಾಗಬೇಕು

★ ಬಯಲು ಶೌಚ ವ್ಯವಸ್ಥೆ ಕೊನೆಗೊಳಿಸಲು ಅರಿವು ಮೂಡಿಸುವ, ಮನವರಿಕೆ ಮಾಡುವ ಕೆಲಸಗಳು ಇನ್ನಷ್ಟು ತೀವ್ರವಾಗಿ ನಡೆಯಬೇಕು. ಶೌಚಾಲಯ ಮತ್ತು ಒಳಚರಂಡಿ ನಿರ್ಮಾಣ, ನೀರು ಪೂರೈಕೆಗಳನ್ನು ಸಮರ್ಪಕವಾಗಿ ಕಾಲಮಿತಿಯೊಳಗೆ ನಡೆಸುವಂತೆ ಕ್ರಿಯಾಯೋಜನೆಗಳನ್ನು ರೂಪಿಸಬೇಕು.

**ಸಹಭಾಗಿ ಸಂಘಟನೆಗಳು/ಸಂಸ್ಥೆಗಳು** ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ–ಮಂಗಳೂರು, ಮಾನಸ ಬಳಗ–ಬೆಂಗಳೂರು, ವಿಮೋಚನ ಮಹಿಳಾ ಹಕ್ಕುಗಳ ವೇದಿಕೆ ಬೆಂಗಳೂರು, ವಿಮೆನ್ಸ್ ವಾಯ್ಸ್ ಬೆಂಗಳೂರು, ಮೈಸೂರು ಜಿಲ್ಲಾ ಮಹಿಳಾ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟ, ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎ.ಐ.ಎಂ.ಎಸ್.ಎಸ್.), ಪಿ.ಯು.ಸಿ.ಎಲ್. ಕರ್ನಾಟಕ, ಮಹಿಳಾ ಮುನ್ನಡೆ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಕರ್ನಾಟಕ ಪ್ರಾಂತ್ಯ ರೈತ ಸಂಘ, ಸ್ಪಂದನ–ಮಂಡ್ಯ, ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ಗಾರ್ಮೆಂಟ್ಸ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಬೆಂಗಳೂರು, ಸಾಧನಾ ಮಹಿಳಾ ಗುಂಪು–ಬೆಂಗಳೂರು, ವಿಮೋಚನ ಸಂಘ–ಅಥಣಿ, ಕರ್ನಾಟಕ ಲೇಖಕಿಯರ ಸಂಘ, ಉತ್ತರ ಕರ್ನಾಟಕ ಲೇಖಕಿಯರ ಸಂಘ ಹುಬ್ಬಳ್ಳಿ–ಧಾರವಾಡ; ಕರ್ನಾಟಕ ರಾಜ್ಯ ದಲಿತ ಮಹಿಳಾ ಒಕ್ಕೂಟ, ಆಲ್ ಇಂಡಿಯಾ ಪ್ರೋಗ್ರೆಸಿವ್ ವಿಮೆನ್ಸ್ ಅಸೋಸಿಯೇಷನ್, ಕರ್ನಾಟಕ ದಲಿತ ಮಹಿಳಾ ವೇದಿಕೆ, ಅತ್ಯಾಚಾರ ವಿರೋಧಿ ಪ್ರಚಾರಾಂದೋಲನ, ದಲಿತ ಬಹುಜನ ಚಳವಳಿ, ನ್ಯಾಷನಲ್ ಫೆಡರೇಷನ್ ಫಾರ್ ವಿಮೆನ್, ಭಾರತೀಯ ಮಹಿಳಾ ಒಕ್ಕೂಟ, ಅಭಿಮತ ಮಂಗಳೂರು, ಮಾನಿನಿ, ಗಾರ್ಮೆಂಟ್ಸ್ ಲೇಬರ್ ಯೂನಿಯನ್, ಮುನ್ನಡೆ ಸಾಮಾಜಿಕ ಸಂಘಟನೆ, ಸ್ತ್ರೀ ಜಾಗೃತಿ ಸಮಿತಿ, ಚರಕ ಮಹಿಳಾ ವಿವಿದೋದ್ದೇಶ ಸಂಘ–ಹೆಗ್ಗೋಡು, ಸಖಿ ಸಂಸ್ಥೆ– ಹೊಸಪೇಟೆ, ಎಸ್‌ಎಫ್‌ಐ, ಡಿವೈಎಫ್‌ಐ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, (ಅಂಬೇಡ್ಕರ್ ವಾದ), ಕರ್ನಾಟಕ ಲೈಂಗಿಕ ಅಲ್ಪಸಂಖ್ಯಾತರ ವೇದಿಕೆ, ಕರ್ನಾಟಕ ಲೈಂಗಿಕ ಕಾರ್ಮಿಕರ ಯೂನಿಯನ್, ಸಂಗಮ ಬೆಂಗಳೂರು, ಪರ್ಯಾಯ ಕಾನೂನು ವೇದಿಕೆ (ಎಎಲ್‌ಎಫ್), ಅನೇಕ ಬೆಂಗಳೂರು, ಜೀವಾ ಬೆಂಗಳೂರು, ಒಂದೆಡೆ ಬೆಂಗಳೂರು, ಸ್ವರಾಜ್ ನೆಟ್‌ವರ್ಕ್, ಯೂತ್ ಎಂಪವರ್ಡ್ ಇನ್ ಆಕ್ಷನ್ ಫಾರ್ ಹ್ಯುಮ್ಯಾನಿಟಿ, ರೇಡಿಯೋ ಆಕ್ಟೀವ್ ಬೆಂಗಳೂರು, ಪ್ರಜಾ ರಾಜ್ಯ ವೇದಿಕೆ, ಸಂಚಯ ನೆಲೆ, ವಿಸ್ತಾರ್, ಜನಸಹಯೋಗ, ಸಾಧನಾ ಮಹಿಳಾ ಸಂಘ, ತರಿಕಿಟ ಕಲಾಕಮ್ಮಟ, ಸಂವಾದ, ಭಾರತೀಯ ಜ್ಞಾನ–ವಿಜ್ಞಾನ ಸಮಿತಿ, ಸ್ಲಂಜನಾಂದೋಲನ ಸಮಿತಿ, ಪೌರಕಾರ್ಮಿಕರ ಸಂಘಟನೆ, ಪಯಣ, ಸಮಾಜವಾದಿ ಜನಪರಿಷದ್, ಕರ್ನಾಟಕ ಜನಶಕ್ತಿ, ಕರ್ನಾಟಕ ಕೋಮುಸೌಹಾರ್ದ ವೇದಿಕೆ, ಫೋರಂ ಫಾರ್ ವರ್ಕರ್ಸ್ ರೈಟ್ಸ್, ದೇವದಾಸಿ ಮಹಿಳೆಯರ ಸಂಘಟನೆ ಬೆಳಗಾವಿ, ಸಂಚಯ ನೆಲೆ ಆನೇಕಲ್, ಭೂಮ್ತಾಯಿ ಬಳಗ ದೊಡ್ಡಬಳ್ಳಾಪುರ, ಕವಲಕ್ಕಿ ಮಹಿಳಾ ಸಂಘಟನೆ, ಸಬಲ ವಿಜಯಪುರ, ಉಜ್ವಲ ಸಂಸ್ಥೆ ವಿಜಯಪುರ, ಫೆಡಿನಾ, ದಲಿತ ಜನಸೇನೆ ಮಹಿಳಾ ಒಕ್ಕೂಟ, ಎಪಿಡಿ ಸಂಸ್ಥೆ, ಅನೌಪಚಾರಿಕ ಶಿಕ್ಷಣ ಸಂಸ್ಥೆ, ಏಯ್ಡ್ಸ್ ಜಾಗೃತಿ

ಮಹಿಳಾ ಸಂಸ್ಥೆ, ಮಹಿಳಾ ಸಮಖ್ಯಾ, ಚೈತನ್ಯ ಮಹಿಳಾ ಕೋಆಪರೇಟಿವ್ ಬ್ಯಾಂಕ್ ಲಿ. ವಿಜಯಪುರ, ಪ್ರಿಯದರ್ಶಿನಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ, ಕರ್ನಾಟಕ ಅಂಗವಿಕಲರ ಐಕ್ಯತಾ ವೇದಿಕೆ, ನವಸ್ಫೂರ್ತಿ ಸಂಸ್ಥೆ, ವಿಜಯಪುರ.

**ಕೊಪ್ಪಳ :**

ಮಹಿಳಾ ಮುನ್ನಡೆ, ಕರ್ನಾಟಕ ವಿದ್ಯಾರ್ಥಿ ಸಂಘಟನೆ, ಪಿ.ಯು.ಸಿ.ಎಲ್, ಎ.ಐ.ಟಿ.ಯು.ಸಿ, ಸಿಐಟಿಯು, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರ, ಅಕ್ಕಮಹಾದೇವಿ ಮಹಿಳಾ ಸಂಘ, ಕದಳೀ ಮಹಿಳಾ ವೇದಿಕೆ, ಮಹಿಳಾ ಲೋಕ ಪತ್ರಿಕೆ, ರೋಟರಿ ಇನ್ನರ್ ವ್ಹೀಲ್ ಕ್ಲಬ್, ಜಿಲ್ಲಾ ತಾಯ್ತನ ರಕ್ಷಣಾ ವೇದಿಕೆ, ಅಂಗಳ – ಸಮತೆಯ ಬದುಕಿಗಾಗಿ, ಎ.ಐ.ಡಿ.ವೈ.ಓ., ಸರ್ವೋದಯ ಸಮಗ್ರ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಶಕ್ತಿ ಗ್ರಾಮೀಣಭಿವೃದ್ಧಿ ಸಂಘ, ಸ್ನೇಹಾ ಕೂಡ್ಲಿಗೆ, ಸ್ನೇಹಾ ಮಹಿಳಾ ಸಂಘ, ನೆಹರೂ ಯುವ ಕೇಂದ್ರ, ಶಿಕ್ಷಕ ಕಲಾ ಬಳಗ, ಸೇವಾ – ಕೌಟಂಬಿಕ ಸಲಹಾ ಕೇಂದ್ರ, ಭೀಮರಾವ್ ಎನ್.ಜಿ.ಓ, ಸಮೂಹ – ಸಾಮರ್ಥ್ಯ, ಸಂಭ್ರಮ ಸಾಂಸ್ಕೃತಿಕ ಯುವತಿಯರ ಕೇಂದ್ರ, ಕರ್ನಾಟಕ ರೈತ ಸಂಘ, ಜಾಹ್ನವಿ ಗ್ರಾಮೀಣ ಅಭಿವೃದ್ಧಿ ಸಂಘ, ಗೌರಿ ಶಂಕರ ಶಿಕ್ಷಣ ಹಾಗೂ ಗ್ರಾಮೀಣ ಅಭಿವೃದ್ಧಿ ಸೇವಾ ಸಂಸ್ಥೆ, ವಂದೇ ಮಾತರಂ ಸೇವಾ ಸಂಸ್ಥೆ, ಯುನಿಸೆಫ್ ಕೊಪ್ಪಳ ಘಟಕ, ಕೆಎಚ್‌ಪಿಟಿ, ಅಭಿನವಶ್ರೀ ಸಿದ್ದೇಶ್ವರ ಕ್ಷೇಮಾಭಿವೃದ್ಧಿ ಸಂಘ, ಕೊಪ್ಪಳ ಕೊಪ್ಪಳ ಜಿಲ್ಲಾ ಅಥ್ಲೆಟಿಕ್ಸ್ ಅಸೋಸಿಯೇಷನ್, ಕೊಪ್ಪಳ ಬಾರ್ ಕೌನ್ಸಿಲ್, ಮುಸ್ಲಿಂ ಚಿಂತಕರ ಚಾವಡಿ, ಸಖೀ ಟ್ರಸ್ಟ್ ಹೊಸಪೇಟೆ, ಕರ್ನಾಟಕ ದಲಿತ ಮಹಿಳಾ ವೇದಿಕೆ, ದಲಿತ ಬಹುಜನ ಚಳವಳಿ – ಗದಗ, ದಲಿತ ಕಲಾ ಮಂಡಳಿ ಗದಗ, ಜಾಗೃತಿ – ಧಾರವಾಡ, ಅಂಗನವಾಡಿ–ಆಶಾ–ಬಿಸಿಯೂಟ ಕಾರ್ಯಕರ್ತೆಯರ ಸಂಘ, ನೇಕಾರ ಮಹಿಳೆಯರ ಸಂಘಟನೆ, ಗಂಟಿಚೋರ ಕ್ಷೇಮಾಭಿವೃದ್ಧಿ ಸಂಘ ಗದಗ, ಶಿಕ್ಷಕರ ಸಂಘ, ಲಡಾಯಿ ಪ್ರಕಾಶನ ಗದಗ, ಕವಿ ಪ್ರಕಾಶನ–ಕವಲಕ್ಕಿ, ಭಾರತೀಯ ವೈದ್ಯಕೀಯ ಸಂಘ, ವಕೀಲರ ಸಂಘ, ಭಾರತೀಯ ಮುಸ್ಲಿಂ ಮಹಿಳಾ ಆಂದೋಲನ್ – ಕರ್ನಾಟಕ, ಪ್ರಗತಿಪರ ಪೌರಕಾರ್ಮಿಕರ ಸಂಘ, ಪ್ರಗತಿಪರ ಬೀದಿ ವ್ಯಾಪಾರಿಗಳ ಸಂಘ, ಪ್ರಗತಿಪರ ಹೋಟೆಲ್ ಕಾರ್ಮಿಕರ ಸಂಘ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಕೊಪ್ಪಳ ಮೀಡಿಯಾ ಕ್ಲಬ್, ದಲಿತ ಸಂಘರ್ಷ ಸಮಿತಿ ಭೀಮವಾದ, ಭೀಮ ಬಸವ ವಿಕಾಸ ಬಳಗ, ಲಯನ್ಸ್ ಕ್ಲಬ್ ಕೊಪ್ಪಳ, ರೋಟರಿ ಕ್ಲಬ್, ವಿನೂತನ ಶಿಕ್ಷಣ ಸೇವಾ ಸಂಸ್ಥೆ, ಕೊಪ್ಪಳ ಜಿಲ್ಲಾ ಖಾಸಗಿ ಅನುದಾನರಹಿತ ಶಾಲೆಗಳ ಒಕ್ಕೂಟ, ಹೈದ್ರಾಬಾದ್ ಕರ್ನಾಟಕ ಹೋರಾಟ ಯುವ ಸಮಿತಿ, ಶರಣ ಸಾಹಿತ್ಯ ಪರಿಷತ್, ಕರ್ನಾಟಕ ಸಾಹಿತ್ಯ ಪರಿಷತ್, ಮೈಸೂರು ಹಜ್ರತ್ ಮತ್ತು ಟಿಪ್ಪು ಸುಲ್ತಾನ ಸಂಘಟನೆ, ಜಿಲ್ಲಾ ಸರಕಾರಿ ನೌಕರರ ಸಂಘ, ರಕ್ತ ದಾನಿಗಳ ವೇದಿಕೆ, ನ್ಯಾಷನಲ್ ಫೆಡರೇಷನ್ ಆಫ್ ಇಂಡಿಯನ್ ವಿಮೆನ್, ಎ.ಐ.ಸಿ.ಸಿ.ಟಿ.ಯು, ಎ.ಐ.ಎಸ್.ಎ., ಎಸ್.ಎಫ್.ಐ., ಅಖಿಲ ಭಾರತ ಕೃಷಿ, ಗ್ರಾಮೀಣ ಕಾರ್ಮಿಕ ಸಂಘ, ಮಹಿಳಾ ವೃತ್ತಿ ಶಿಕ್ಷಣ ಮತ್ತು ಅಭಿವೃದ್ಧಿ ಸಂಘ – ಭಾಗ್ಯನಗರ, ಮಹಿಳಾ ಸಾಂತ್ವನ ಸಹಾಯವಾಣಿ ಯಲಬುರ್ಗ, ವೀರೂ ಯಲಬುರ್ಗಾ, ಕಟ್ಟಡ ಕಾರ್ಮಿಕರ ಸಂಘ–ಬೆಳಗಾವಿ, ಬೀಡಿ ಕಾರ್ಮಿಕರ ಯೂನಿಯನ್ ದಾವಣಗೆರೆ, ಶ್ರಮಶಕ್ತಿ ಕಟ್ಟಡ ಕಾರ್ಮಿಕರ ಸಂಘ ದಾವಣಗೆರೆ, ಮುಸ್ಲಿಂ ಮಹಿಳಾ ಒಕ್ಕೂಟ ದಾವಣಗೆರೆ, ಸೇವಾ, ಯುನಿಸೆಫ್, ನವಜೀವನ ಮಹಿಳಾ ಒಕ್ಕೂಟ ರಾಯಚೂರು, ಎಂಎಎಸ್‌ಎಸ್ ಘಟಪ್ರಭಾ ಹಾಗೂ ಸಮಾನ ಮನಸ್ಕ ಸಂಗಾತಿಗಳು..

**ಮಹಿಳೆಯರೇ, ಮಹಿಳಾ ಪರ ಮನಸುಗಳೇ, ಬನ್ನಿ**

**ಕೊಪ್ಪಳದಲ್ಲಿ ಮಾರ್ಚ್ 8, 9ರಂದು ಸೇರೋಣ..**

**ಎಲ್ಲ ಒಂದಾಗಿ ಸಮತೆಯ ನಾಡ ಕಟ್ಟೋಣ.. ..**

# ಪ್ರೀತಿ ರಾಜಕಾರಣವ ಅರಸುತ್ತಾ

– ವಾಣಿ ಪೆರಿಯೋಡಿ

''ಈ ನೆಲದ ಹಾದಿ ಬೀದಿಗಳ ತುಂಬ ಸೇರುತಾರೆ..'' ಎಂಬ ಮಾತು ಸಾಕಾರವಾದಂತೆ ಈ ನೆಲದ ಹೆಣ್ಣುಗಳು ಕೊಪ್ಪಳದ ಹಾದಿ ಬೀದಿಗಳಲ್ಲಿ ಮೆರವಣಿಗೆ ಸಾಗಿದ್ದರು.. ಕಣ್ಣು ಸಾಗುವಷ್ಟು ದೂರ ಸಂಗಾತಿಗಳು ಸಾಲಲ್ಲಿ ನಡೆಯುವುದು ಕಂಡಿತ್ತು. ಬಿರು ಬಿಸಿಲಲ್ಲೂ ಘೋಷಣೆಗಳು, ಹಾಡುಗಳು ಕೇಳಿಬಂದವು. ''ಆಜಾದೀ, ಆಜಾದೀ, ಬೆಹೆನೇ ಮಾಂಗೇ ಆಜಾದೀ, ಮನುವಾದ್ ಸೆ ಆಜಾದೀ, ಹಂ ಲೇಕೆ ರಹೇಂಗೇ ಆಜಾದೀ, ಆಜಾದೀ ಆಜಾದೀ..'' ಅನುಪಮಾ, ದಾರಿ ಉದ್ದಕ್ಕೂ ಅಲ್ಲಿ ಇಲ್ಲಿ ನಿಂತು ಆಜಾದಿ ಘೋಷಣೆ ಕೂಗಿದರೆ ಚಿಕ್ಕವರು ದೊಡ್ಡವರು ಅನ್ನದೆ, ಎಲ್ಲಾ ಬಿಗುಮಾನಗಳಿಂದ ಆಜಾದಿ ಪಡೆದು ಕುಣಿದಿದ್ದೇ ಕುಣಿದಿದ್ದು..

ಮಂಗಳೂರಿನಲ್ಲಿ ''ಇನ್ನು ಸಾಕು'' ಎಂದು ದಿಟ್ಟ ದನಿಯಲ್ಲಿ ಹೇಳುತ್ತಾ ಶುರುವಾದ ಸಮಾನಮನಸ್ಕ ಸೋದರಿ ಸೋದರರ ಮೆರವಣಿಗೆ ಮೈಸೂರು, ಬೆಂಗಳೂರು, ಬಿಜಾಪುರ ದಾಟಿ ಐದನೆಯ ವರುಷಕ್ಕೆ ಕೊಪ್ಪಳಕ್ಕೆ ಹೆಜ್ಜೆಯಿಟ್ಟಿತ್ತು. ಮೊದಮೊದಲಿಗೆ ವರುಷಕ್ಕೆ ಒಂದರಂತೆ ಇದ್ದ ಪ್ರಕ್ರಿಯೆ ನಡೆಯುತ್ತಾ ನಡೆಯುತ್ತಾ ವಿಸ್ತಾರವಾಗುತ್ತಾ ಬಂತು. ಸಹಚರಿಗಳು ಜೊತೆಸೇರಿ ಆತ್ಮಾವಲೋಕನ ಮಾಡುತ್ತಾ ಮುಂದುವರಿಯತೊಡಗಿತು. ಅದಕ್ಕಾಗಿ ಒಂದೊಂದು ಜಿಲ್ಲೆಯಲ್ಲೂ ಹೊಸತೊಂದು ಹೆಜ್ಜೆ ಸೇರಿಕೊಂಡು ಹೆಚ್ಚುಹೆಚ್ಚು ಅರ್ಥಪೂರ್ಣ ಆಗತೊಡಗಿತು. ಇದರಲ್ಲಿ ಹತ್ತಿರದಿಂದ ಒಳಗೊಂಡವರಿಗೆಲ್ಲಾ ಈ ಮೆರವಣಿಗೆ ಒಂದು ಆಪ್ತವಾದ ರೀತಿಯಲ್ಲಿ ಶಕ್ತಿಕೊಟ್ಟಿದೆ ಅಂದರೆ ತಪ್ಪಾಗಲಾರದು.

ವರುಷಕ್ಕೊಮ್ಮೆ ಜಾತ್ರೆ ಮಾಡಿ ಏನು ಸಾಧಿಸುತ್ತೀರಾ, ಇನ್ನೂ ಸ್ವಲ್ಪ ಫೋಕಸ್ ಬೇಕು ಅಂತ ಒಡನಾಡಿಗಳು ಕಾಳಜಿಯಿಂದಲೇ ಟೀಕೆ ಮಾಡಿದ್ದಾರೆ. ನಿಜಕ್ಕೂ ಇದಕ್ಕೆ ಖಚಿತ ಉತ್ತರ ಗೊತ್ತಿಲ್ಲ. ಒಂದಷ್ಟು ಜನ ಸೇರಿ ಮತ್ತೊಂದಷ್ಟು ಜನರೊಂದಿಗೆ ಪ್ರೀತಿ ರಾಜಕಾರಣದ ಹೆಸರಿನಲ್ಲಿ ಒಡನಾಡುತ್ತಾ ಮುಂದುರಿಯುತ್ತಿದ್ದೇವೆ ಅನ್ನೋದಷ್ಟೇ ಸದ್ಯಕ್ಕೆ ಹೇಳಬಹುದಾಗಿರುವುದು. ಎರಡು ದಿನಗಳ ಸಮಾವೇಶದ ಹಿಂದೆ ಇರುವ ನಿರಂತರವಾದ ಪರಿಶ್ರಮವೂ ಒಂದಷ್ಟು ಸಂದೇಶಗಳನ್ನು ಪಸರಿಸುತ್ತದೆ ಎಂಬುದು ನಮ್ಮ ನಂಬಿಕೆ. ಸಮಾವೇಶ ನಡೆಯುವ ರೀತಿಯ ಸೊಗಸು ಒಂದಾದರೆ ಅದರ ತಯಾರಿಯ ಸೊಗಸು ಇನ್ನೊಂದು ರೀತಿಯದು. ನಮ್ಮ ನಿಲುವುಗಳನ್ನು ಗಟ್ಟಿಯಾಗಿ ನೆಲೆಗೊಳಿಸುತ್ತಾ, ಎಲ್ಲರನ್ನೂ ಒಳಗೊಳ್ಳುತ್ತಾ ನಡೆಸುವ ಈ ಪ್ರಕ್ರಿಯೆಯೇ ನಮ್ಮಲ್ಲಿ ಅನೇಕರನ್ನು ಬೆಳೆಸಿದೆ. ಹೆಣ್ತನವನ್ನು ಅರ್ಥಮಾಡಿಕೊಳ್ಳುವ, ಪ್ರೀತಿ ರಾಜಕಾರಣವನ್ನು ನೆಲಕ್ಕಿಳಿಸುವ ಪಾಠ ಕಲಿಸುತ್ತಿದೆ.

ಇವು ಯಾವುವೂ ಸಮರ್ಥನೆಗಳಲ್ಲ, ಸಹಜವಾಗಿ ಬೆಳೆಯುತ್ತಾ ನಡೆವ ದಾರಿಯ ದಿಕ್ಕು ಸ್ಪಷ್ಟ ಪಡಿಸಿಕೊಳ್ಳುವ ಅವಲೋಕನ ನಿರಂತರವಾಗಿ ಆಗಲೇಬೇಕಾಗಿದೆ. ಪ್ರೀತಿ ರಾಜಕಾರಣ ಅಂತ ಗೆಳತಿ

ಸರಸ್ವತಿಯ ಬಾಯಲ್ಲಿ ಕೇಳುವಾಗ ಅದ್ಭುತ ಅನಿಸಿತ್ತು. ಕೇಳುವುದಕ್ಕೆ ಸೊಗಸಾಗಿದೆ, ಅದ್ಭುತವಾಗಿದೆ ಆದರೆ ಅದನ್ನು ಹೇಳಿಕೊಳ್ಳುವ ಆಂತರಿಕ ತಾಕತ್ತು ನಮ್ಮಲ್ಲಿ ಇದೆಯೇ ಅಂತಾನೂ ಅನಿಸಿತ್ತು. ಏನೇ ಇರಲಿ, ನಮ್ಮ ನಿರಂತರ ಮೆರವಣಿಗೆಯ ದಿಕ್ಕು, ಆಶಯ, ಕನಸು ಇದೇ ಅಂತ ನಮ್ಮೆಲ್ಲರಿಗೂ ಅನಿಸಿತ್ತು. ಇನ್ನೊಂದು ಪ್ರಶ್ನೆ, ಹಾಗಂದರೇನು ಅಂದರೆ ವಿವರಿಸುವ ಬಗೆ ಹೇಗೆ? ಸರಳವಾಗಿ ಕಂಡುಬರುವುದು ಹೀಗೆ: ರಾಜಕಾರಣ ಅಂದರೆ ಅಧಿಕಾರದ ವಿಚಾರ, ನಿರ್ಧಾರ ತೆಗೆದುಕೊಳ್ಳುವ ಅಧಿಕಾರ, ಒಬ್ಬರಿಗಾಗಿ ಅಲ್ಲ ಅನೇಕರಿಗಾಗಿ ನಿರ್ಧಾರ ತೆಗೆದುಕೊಳ್ಳುವ ವಿಚಾರ. ಈ ಅಧಿಕಾರದ ಜೊತೆಗೆ ಸಮೃದ್ಧವಾದ ಪ್ರೀತಿ ಬೆರೆತುಕೊಂಡರೆ ಲೋಕಹಿತದ ಕನಸು ಕಾಣಬಹುದಲ್ಲವೇ? ನೆಲ್ಸನ್ ಮಂಡೇಲಾಗೆ ಕ್ಷಮಿಸಲು ಸಾಧ್ಯವಾಗಿದ್ದು, ಒಳಗೊಳ್ಳಲು ಸಾಧ್ಯವಾಗಿದ್ದು ಇದರಿಂದಲೇ ಅಲ್ಲವೇ? ಬುದ್ಧನಿಗೆ ಅಂಗುಲಿಮಾಲ, ಆಮ್ರಪಾಲಿಯನ್ನು ತುಂಬು ಸಹಾನುಭೂತಿಯಿಂದ ಅಪ್ಪಿಕೊಳ್ಳಲು ಸಾಧ್ಯವಾಗಿದ್ದು ಇದರಿಂದಲೇ ತಾನೇ? ಬಾಬಾ ಸಾಹೇಬರಿಗೆ ಹಿಂದೂ ಕೋಡ್ ಬಿಲ್ ಬರೆವಾಗ ಮಹಿಳೆಯರ ಬವಣೆ ಅರ್ಥವಾಗಿದ್ದು ಇದರಿಂದಲೇ ತಾನೇ? ಅಷ್ಟೆತ್ತರಕೆ ಎಲ್ಲರೂ ಬೆಳೆಯುತ್ತೇವೋ ಇಲ್ಲವೋ ಬೇರೆ ಮಾತು.. ಕೊಚ್ಚಿರಿ ಕೊಲ್ಲಿರಿ ಅನ್ನುವ ದ್ವೇಷ ಬೆಳೆಸದೆ, ಅವರು ಹಾಗೆ ಅವರು ಹೀಗೆ ಎಂದು ಗಡಿಗಳನ್ನು ಬೆಳೆಸದೇ ಪರಸ್ಪರ ಬಾಂಧವ್ಯ ಬೆಳೆಸುವ ದಾರಿಯಲ್ಲಿ ಸಾಗುವುದಕ್ಕೂ ಇದು ನಮಗೆ ಮಾರ್ಗದರ್ಶಿ ಅಂದರೆ ತಪ್ಪಾಗಲಾರದು.

ಒಟ್ಟಾರೆ ಹೇಳುವುದಾದರೆ ಪ್ರೀತಿ ರಾಜಕಾರಣ ಅಂದರೆ ಅರಿವಿನ ದಾರಿಯಲ್ಲಿ ನಡೆಯುವುದು. ಯಾರನ್ನೋ ವಿರೋಧಿಸುವ, ಯಾರಿಗೋ ಪ್ರತಿಕ್ರಿಯಿಸುವ ಪ್ರಯತ್ನ ಅಲ್ಲ, ನಮ್ಮ ಒಳಗಿನ ವೈರುಧ್ಯಗಳನ್ನೂ ಗಮನಿಸುತ್ತಾ, ಸಮಾನತೆಯ ಅರಸುತ್ತಾ ನಡೆಯುವುದು.

**ಕೊಪ್ಪಳದಲ್ಲಿ ಮೊದಲ ಹೆಜ್ಜೆಗಳು:**

2016ರ ಮಾರ್ಚ್ ತಿಂಗಳಲ್ಲಿ ಬಿಜಾಪುರದಲ್ಲಿ ವಾರ್ಷಿಕ ಮಹಿಳಾ ಸಮಾವೇಶ ನಡೆದಾಗ ಹೋರಾಟಗಾರ್ತಿ ಮೇಧಾ ಪಾಟ್ಕರ್ ಕೈಯಿಂದ ಮುಂದಿನ ಸಮಾವೇಶ ಮಾಡುವವರು ಸಸಿ ತೆಗೆದುಕೊಳ್ಳಬೇಕಾಗಿತ್ತು. ಕೊಪ್ಪಳದ ನಮ್ಮ ಸ್ನೇಹಿತೆ ಜ್ಯೋತಿ ಹಿಟ್ನಾಳ್ ಸಸಿಯನ್ನು ಪ್ರೀತಿಯಿಂದ ಅಪ್ಪಿಕೊಂಡಳು. ನಮ್ಮ ಆಶಯಗಳನ್ನು ಇನ್ನೊಂದು ನೆಲದಲ್ಲಿ ಬೇರೂರಿಸುವ, ಬೆಳೆಸುವ, ಜೀವ ತುಂಬುವ ಸಂಕೇತವಾಗಿ ಈ ಸಸಿಯಿತ್ತು. ಒಂದು ರೀತಿಯಲ್ಲಿ ಅಂದಿನಿಂದಲೇ ನಮ್ಮ ತಯಾರಿ ಶುರುವಾಗಿತ್ತು ಅನ್ನಬಹುದು. ಬರಲಿರುವ ವರುಷದ ಸಮಾವೇಶ ಕುರಿತ ಯೋಚನೆಗಳು, ಕನಸುಗಳು ಹರಿದಾಡಲು ಶುರುವಾದವು. ಅಂದಿನಿಂದಲೇ ಪರಿಚಿತರ ಕಿವಿಯಲ್ಲಿ ಕೊಪ್ಪಳಕ್ಕೆ ಬರುವಂತೆ ಪಿಸುಗುಟ್ಟಲು ತೊಡಗಿದೆವು. ಕೊಪ್ಪಳದಲ್ಲಿ ಸ್ಥಳೀಯ ತಂಡ ಕಟ್ಟಬೇಕಾಗಿತ್ತು. ಅದು ನಮ್ಮ ಮೊತ್ತ ಮೊದಲ ಅಗತ್ಯವಾಗಿತ್ತು.

**ಸಿದ್ಧತಾ ಸಭೆಗಳು :**

ಜ್ಯೋತಿಗೆ ಮತ್ತು ನನಗೆ ವಿಪರೀತ ದೊಡ್ಡ ಜವಾಬ್ದಾರಿ ತೆಗೆದುಕೊಂಡ ಅರಿವು ಇತ್ತು. ಅದಕ್ಕಾಗಿ ಕೆಲಸ ಬೇಗ ಶುರುಮಾಡಬೇಕು ಅನ್ನುವ ತುಡಿತ ಇತ್ತು. ಕೊಪ್ಪಳದಲ್ಲಿ ನಮಗೆ ಪರಿಚಯ ಇರುವವರನ್ನು ಸೇರಿಸಿ ವಿಷಯ ಹಂಚಿಕೊಳ್ಳಬೇಕು ಅನಿಸಿತ್ತು. ಅಂತೆಯೇ ನಮ್ಮ ಮೊದಲ ಸಭೆ ನಡೆದಿದ್ದು ಉತ್ಸಾಹೀ ಯುವ ಸಂಗಾತಿ ಆನಂದ ಹಳ್ಳಿಗುಡಿ ಕೆಲಸ ಮಾಡುವ ಉನ್ನತಿ ಶಿಕ್ಷಣ ಕೇಂದ್ರದಲ್ಲಿ. (ಅಕ್ಟೋಬರ್ 2016) ಜಿಲ್ಲಾ ತಾಯ್ತನ ರಕ್ಷಣಾ ವೇದಿಕೆ, ಜನನಿ ಸುರಕ್ಷಾ ಯೋಜನೆ, ಉನ್ನತಿ ಶಿಕ್ಷಣ ಕೇಂದ್ರ, ಮತ್ತು

ಅಂಗಳದ ಸದಸ್ಯರು ಜೊತೆಸೇರಿದೆವು. ಅಲ್ಲಿಂದಲೇ ಕನಸುಗಳನ್ನು ನೇಯಲು ಶುರುಮಾಡಿದ್ದೆವು. ವ್ಯಕ್ತಿಗತ ಮಾತುಕತೆಗಳು, ರಾಜ್ಯಮಟ್ಟದ ಸಭೆಗಳು, ಚಿಕ್ಕ ತಂಡಗಳ ಸಭೆಗಳು ನಿರಂತರವಾಗಿ ನಡೆದವು.

ಜೀವಪರ, ಮಹಿಳಾಪರ, ಸಮಾನತೆಯ ಆಶಯ ಹೊಂದಿರುವ ಎಲ್ಲರನ್ನೂ ಒಳಗೊಳ್ಳುವ ನಿಲುವು ಒಕ್ಕೂಟದ್ದು. ಎಂದೇ ತಯಾರಿಯ ಮೊದಲ ಹಂತ ಕೊಪ್ಪಳದಲ್ಲಿದ್ದ ಸಮಾನ ಮನಸ್ಕರ, ವಿವಿಧ ಗುಂಪು-ಸಂಘ-ಸಂಸ್ಥೆ-ಸಂಘಟನೆಗಳ ಜನರ ಪರಿಚಯ ಮಾಡಿಕೊಳ್ಳುವುದು. ವಿವಿಧ ಹೋರಾಟಗಳ, ಸಂಘಟನೆಗಳ, ವ್ಯಕ್ತಿಗಳ ಹೆಸರು, ದೂರವಾಣಿ ಸಂಖ್ಯೆಗಳನ್ನು ಕಲೆ ಹಾಕಿದೆವು. ಎಲ್ಲೇ ಹೋದರೂ, ಯಾರನ್ನು ಕಂಡರೂ, ದೂರವಾಣಿ ಸಂಖ್ಯೆಗಳನ್ನು ಗುರುತಿಸಿಕೊಳ್ಳುವುದೇ ಕೆಲಸವಾಯಿತು. ಅಲ್ಲಿಂದ ಶುರುವಾದದ್ದು ನಿರಂತರ ಭೇಟಿಗಳು. ಒಬ್ಬರಿಂದ ಒಬ್ಬರ ಪರಿಚಯ ಆಗುತ್ತಾ ಹೋಯಿತು. ಹಿರಿಯರು ಕಿರಿಯರು ಸೇರಿಕೊಂಡರು. ಕೊಪ್ಪಳದ ಸಂಬಂಧಗಳು ವಿಸ್ತಾರವಾಗುತ್ತಾ ಹೋದವು. ಜನಸಂಘಟನೆ, ಎನ್.ಜಿ.ಒ., ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿ, ಪತ್ರಿಕಾ ವಲಯದ ಸ್ನೇಹಬಳಗ, ಇಲಾಖೆ-ಸಂಸ್ಥೆಗಳ ಸ್ನೇಹಿತರು – ಹೀಗೆ ಎಲ್ಲಾ ಹಿನ್ನೆಲೆಯ ಜನರ ಪರಿಚಯವಾಯಿತು. ನಿರಂತರವಾಗಿ ಸಿದ್ಧತಾ ಸಭೆಗಳನ್ನು ಮಾಡಿದೆವು.

ಕೊಪ್ಪಳದ ಒಂದು ವಿಶೇಷತೆ ಪುರುಷರ ಧಾರಾಳವಾದ ಭಾಗವಹಿಸುವಿಕೆ. ಬುಡಮಟ್ಟದ ಕೆಲಸಗಳಿಂದ ಪುರುಷ ಸಂಗಾತಿಗಳು ನಮಗೆ ಹೆಗಲಿಗೆ ಹೆಗಲು ಕೊಟ್ಟು ದುಡಿದರು, ನಮ್ಮ ಜೊತೆಗಿದ್ದರು. ಎಲ್ಲ ಸಭೆಗಳಿಗೆ ರಾಜ್ಯಾದ್ಯಂತ ಒಕ್ಕೂಟದ ಸದಸ್ಯರು ಮತ್ತು ಸ್ಥಳೀಯರು ಪ್ರೀತಿ ಅಭಿಮಾನದಿಂದ ಒಟ್ಟು ಸೇರಿದ್ದರು. ಪರಸ್ಪರ ಮಾತುಕತೆ ಆಡುತ್ತಾ ಪರಸ್ಪರ ಅರಿತುಕೊಂಡೆವು. ಅನೇಕ ಹೊಸ ವಿಚಾರಗಳು ಈ ಮಾತುಕತೆಗಳಿಂದಲೇ ಹುಟ್ಟಿಕೊಂಡಿವೆ.

**ರಾಜ್ಯಮಟ್ಟದ ಸಭೆಗಳು :**

ಈ ಅವಧಿಯಲ್ಲಿ 6 ಬಾರಿ ರಾಜ್ಯ ಮಟ್ಟದ ಸಭೆಗಳು ನಡೆದವು. ಅನುಪಮಾ, ಸರಸ್ವತಿ, ಒಬ್ಬರಲ್ಲದಿದ್ದರೆ ಒಬ್ಬರು ನಿರಂತರವಾಗಿ ಜೊತೆಗೆ ಇದ್ದರು. ಗೌರಿ, ಮಲ್ಲಿಗೆ, ಅಖಿಲಾ, ರತಿ ರಾವ್, ಮಲ್ಲಮ್ಮ ಯಾಳ್ವಾರ್, ಗೀತಾ ಅತರ್ಗಾ, ಸುಕನ್ಯಾ ಹಾವನೂರ ನಡುನಡುವೆ ಸೇರಿಕೊಂಡರು. ಗದಗದ ಷರೀಫ್, ರಮೇಶ ಕೂಳೂರು, ರೇಣುಕಾ ಪೂಜಾರ್, ಬಸವರಾಜ್ ಸೂಳಿಬಾವಿ ತಪ್ಪದೆ ಸಭೆಗೆ ಬರುತ್ತಿದ್ದುದಲ್ಲದೆ ಕರಪತ್ರ, ಪುಸ್ತಕ ಮಾರಾಟ, ನಿಧಿ ಸಂಗ್ರಹಗಳಲ್ಲಿ ಸಹಕರಿಸಿದರು. ಸಭೆಗಳು ಬಹಳ ಲವಲವಿಕೆಯಿಂದ ನಡೆಯುತ್ತಿದ್ದವು. ಆದ ಕೆಲಸಗಳು, ಆಗಬೇಕಾಗಿರುವ ಕೆಲಸಗಳ ಚರ್ಚೆ ನಡೆಯುತ್ತಿತ್ತು. ಭಾವನಾತ್ಮಕವಾಗಿ ಬಹಳ ಬೆಂಬಲ ಸಿಗುತ್ತಿತ್ತು. ತುಂಬಾ ಮಂದಿ ಜೊತೆಗಿರುವ ಹಾಗೆ ಆಗುತ್ತಿತ್ತು. ಇದು ಖಂಡಿತವಾಗಿಯೂ ನಮ್ಮಲ್ಲಿ ಭರವಸೆ ತುಂಬಿತು. ವಿಚಾರಗಳ ಹಂಚಿಕೆಗೆ, ಕಾರ್ಯಕ್ರಮಗಳ ಬಗ್ಗೆ ತಿಳಿಸುವುದಕ್ಕೆ ಇದು ಒಂದು ಗಟ್ಟಿ ವೇದಿಕೆ ಆಯಿತು. ನಮ್ಮ ಒಕ್ಕೂಟದ ಕೆಲಸ ಕಾರ್ಯ ನಿರ್ವಹಿಸುವುದಕ್ಕೆ ತಮ್ಮ ಕಛೇರಿಯನ್ನು ಬಳಸುವುದಕ್ಕೆ ಸರ್ವೋದಯ ಸಂಸ್ಥೆಯವರು ಸಿದ್ಧರಾದರು. ಬಳಿಕ ಊರೊಳಗೇ ಇರುವ ರಾಜಾಬಕ್ಷಿಯವರು ನಡೆಸುವ ಸೇವಾ ಸಂಸ್ಥೆಯ ಕಛೇರಿಯನ್ನು ಒಕ್ಕೂಟದ ಕೆಲಸ ಕಾರ್ಯಕ್ಕೆ ಬಳಸಲಾಯಿತು.

ಮೊದಮೊದಲಿಗೆ ಬಂದವರಲ್ಲಿ ಹೆಚ್ಚಿನ ಮಂದಿ ಜೊತೆಗೆ ಉಳಿದುಕೊಂಡರು, ಒಂದಷ್ಟು ಮಂದಿ ಯಾಕೋ ಕಳಚಿಕೊಂಡರು.. ಏನೇ ಇರಲಿ ಪ್ರಜಾತಾಂತ್ರಿಕವಾದ ಪ್ರಕ್ರಿಯೆಯನ್ನು ಮುಂದುವರಿಸಿ ಕೊಂಡು ಹೋಗುವಲ್ಲಿ ಈ ಸಭೆಗಳೇ ಬಹಳ ನೆರವಾದವು. ಸಭೆಯ ನಡಾವಳಿಗಳನ್ನು ವಿವರವಾಗಿ

ದಾಖಲಿಸುತ್ತಿದ್ದೆವು.

**ನಮ್ಮ ಘೋಷವಾಕ್ಯ:**

ಪ್ರತಿ ವರುಷವೂ ಆಯಾ ಪ್ರದೇಶದಲ್ಲಿನ ಜ್ವಲಂತ ವಿಷಯಗಳನ್ನು ಆಧರಿಸಿ ಘೋಷವಾಕ್ಯ ಒಂದನ್ನು ರೂಪಿಸಿಕೊಳ್ಳುತ್ತಿದ್ದೆವು. ಮೊದಲ ಸಿದ್ಧತಾ ಸಭೆಯಿಂದಲೇ ಈ ಕುರಿತು ಮಾತುಕತೆಗಳೂ ನಡೆದವು. ಸಾಮಾಜಿಕ ಜಾಲತಾಣಗಳಲ್ಲೂ ವಿಚಾರಗಳು ಹರಿದಾಡಿದವು. ಒಕ್ಕೂಟಕ್ಕೆ ಒಂದು ಖಾಯಂ ಘೋಷವಾಕ್ಯವಾಗಿ ''ಸಮತೆಯೆಡೆಗೆ ನಮ್ಮ ನಡಿಗೆ'' ಯನ್ನು ಗುರುತಿಸಿಕೊಂಡೆವು.

ಕೊಪ್ಪಳದ ಪ್ರಮುಖ ಸಮಸ್ಯೆಗಳಾದ ತಾಯಿ ಮರಣ, ರಕ್ತಹೀನತೆ, ಬಾಲ್ಯವಿವಾಹ, ಲೈಂಗಿಕ ದೌರ್ಜನ್ಯ, ದೇವದಾಸಿ ಪದ್ಧತಿಗಳ ಹಿನ್ನೆಲೆಯಲ್ಲಿ ''ನಮ್ಮ ಮಗಳು ಜಗದ ಬೆಳಕು, ನಮ್ಮ ದೇಹ ನಮ್ಮ ಹಕ್ಕು'' ಎಂಬುದು ಕೊಪ್ಪಳದ ಸಮಾವೇಶಕ್ಕೆ ಘೋಷವಾಕ್ಯವಾಯಿತು. ಚಿಕ್ಕ ಪುಟ್ಟ ಭಿನ್ನಾಭಿಪ್ರಾಯಗಳ ನಡುವೆ ಇವನ್ನೇ ಅಂತಿಮಗೊಳಿಸಲಾಯಿತು. ಹೆಣ್ಣನ್ನು ಬರೇ ಮಗಳು ಎಂಬ ಅಸ್ಮಿತೆಯೊಂದಿಗೆ ಗುರುತಿಸಬೇಕೇ ಎಂಬ ಪ್ರಶ್ನೆ ಬಂದಿತ್ತು. ''ನಮ್ಮ ದೇಹ ನಮ್ಮ ಹಕ್ಕು'' ಅಂದರೆ ತಪ್ಪು ಅರ್ಥ ಬರಬಹುದೇ? ದೇಹವನ್ನು ಹೇಗೆ ಬೇಕಾದರು ಬಳಸಬಹುದು ಎಂಬ ಸ್ವೇಚ್ಛಾಚಾರಿಕೆಯ ಅನಿಸಿಕೆ ಬರಬಹುದೇ? ಕೊಪ್ಪಳದಂತಹ ಜಾಗಕ್ಕೆ ಇದು ಸರಿಹೊಂದಬಹುದೇ? ಎಂಬ ಅನುಮಾನಗಳು ಕೇಳಿಬಂದವು. ಆದರೆ ಇವೆಲ್ಲಾ ಸರಳ ಸತ್ಯಗಳು. ಯಾರೂ ಯಾರ ದೇಹದ ಮೇಲೆ ದೌರ್ಜನ್ಯ ಎಸಗುವಂತಿಲ್ಲ, ಗಂಡಾಗಲೀ ಹೆಣ್ಣಾಗಲೀ ಇದು ಸತ್ಯ. ಲೈಂಗಿಕ ಕಿರುಕುಳ ಆಗಿರಲಿ, ಬಾಲಕಾರ್ಮಿಕ ಪದ್ಧತಿ ಇರಲಿ, ದೇವದಾಸಿ ಪದ್ಧತಿ ಇರಲಿ – ದೇಹದ ಮೇಲೆ ದೌರ್ಜನ್ಯ ನಡೆಯುವುದು ತಪ್ಪು. ಅದನ್ನು ತೀವ್ರವಾಗಿ ಪ್ರತಿಭಟಿಸಲು ಈ ಮಾತು ಬಹಳ ಮುಖ್ಯ ಅನಿಸಿತು.

ಈ ಘೋಷವಾಕ್ಯದೊಂದಿಗೆ ನಡೆಸಿದ ಪಯಣದಲ್ಲಿ ಇದರ ಅರ್ಥಗಳು ಪ್ರತಿಬಿಂಬಿತವಾಗ ತೊಡಗಿದವು. ವಿಚಾರ ಸಂಕಿರಣದ ದಿನ ಶೋಭಾ ಗಸ್ತಿಯವರು ಇದಕ್ಕೆ ಒಂದು ಹೊಸ ಆಯಾಮವನ್ನೇ ಕೊಟ್ಟರು. ''ಘೋಷವಾಕ್ಯಗಳ ಕ್ರಮ ಬದಲಾಗಬೇಕು. ಮೊದಲಿಗೆ ನಮ್ಮ ದೇಹ ನಮ್ಮ ಹಕ್ಕಾದರೆ ಮಾತ್ರ ನಮ್ಮ ಮಗಳು ಜಗದ ಬೆಳಕಾಗಲು ಸಾಧ್ಯ. ಹಾಗಾದಾಗಲೇ ನಾವು ಖಚಿತವಾಗಿ ಸಮತೆಯೆಡೆಗೆ ನಡೆಯಲು ಸಾಧ್ಯ.'' ಎಂದರು.

**ಮಾಹಿತಿ ಪತ್ರಗಳು:**

ನಮ್ಮ ಸಿದ್ಧತಾ ಸಭೆಗಳಲ್ಲಿ ಏನೇನೋ ಹೊಸ ಸಾಧ್ಯತೆಗಳು ತೆರೆದುಕೊಳ್ಳುತ್ತಿದ್ದವು. ಈ ಸಾರಿ ಕೊಪ್ಪಳದ ಪ್ರಮುಖ ಸಮಸ್ಯೆಗಳನ್ನು ಚರ್ಚೆ ಮಾಡಿದ ಮೇಲೆ ಈ ವಿಚಾರಗಳ ಬಗ್ಗೆ ಒಂದು ಸಣ್ಣ ಬರಹಗಳನ್ನು ಮಾಡಿದರೆ ಹೇಗೆ ಎಂಬ ಯೋಚನೆ ಬಂದಿತ್ತು. ಅರಿವು ಮೂಡಿಸುವಲ್ಲಿ ಮತ್ತು ಸಣ್ಣ ದೇಣಿಗೆ ಸಂಗ್ರಹಿಸುವಲ್ಲಿ ಇವು ನೆರವಾಗಬಹುದೆನಿಸಿತು. ಕೂಡಲೇ ಅನುಪಮಾ, ತಾಯಿ ಮರಣ, ರಕ್ತಹೀನತೆ, ಬಾಲ್ಯ ವಿವಾಹ, ಮುಟ್ಟಿನ ಕುರಿತ ಮೂಢ ನಂಬಿಕೆಗಳು, ಸ್ತ್ರೀ ಭ್ರೂಣ ಹತ್ಯೆ, ದೇವದಾಸಿ ಪದ್ಧತಿ ಬಗ್ಗೆ ಬರೆದುಕೊಟ್ಟರು. ಮದ್ಯಪಾನ ಆಂದೋಲನದ ವಿಚಾರ ಸೇರಿಸಿಕೊಳ್ಳುವ ಅಭಿಪ್ರಾಯ ಬಂದಿದ್ದರಿಂದ ಆ ವಿಷಯದಲ್ಲಿ ಕೆಲಸ ಮಾಡುತ್ತಿರುವ ಗೆಳತಿ ಶಾರದಾ ಗೋಪಾಲ್ ಆ ಬಗ್ಗೆ ಬರೆದುಕೊಟ್ಟರು. ಮಂಗಳೂರಿನ ಗೆಳತಿ ಬಿಂದಿ ಅದಕ್ಕೆ ಒಂದಷ್ಟು ಚಿತ್ರಗಳನ್ನು ಸೇರಿಸಿ ವಿನ್ಯಾಸ ಮಾಡಿಕೊಟ್ಟರು. ಹೀಗೇ 8 ವಿಚಾರಗಳ ಕುರಿತಂತೆ ಮಾಹಿತಿ ಪತ್ರಗಳು ತಯಾರಾದವು. ಶಾರದಾ ಅವರು ತಮ್ಮ ಜಾಗೃತಿ ಸಂಸ್ಥೆ ಪರವಾಗಿಯೇ ಮೊದಲ ಮಾಹಿತಿಪತ್ರಗಳನ್ನು ಧಾರವಾಡದಲ್ಲಿಯೇ ಅಚ್ಚುಹಾಕಿಸಿ ಕಳುಹಿಸಿ ಕೊಟ್ಟರು.

ಒಂದು ಪ್ರತಿಯನ್ನು ರೂ 5.ರಂತೆ ಹಂಚಬಹುದೆಂದು ತೀರ್ಮಾನಿಸಿದೆವು.

ಮುಂದಿನ ಸಭೆಯಲ್ಲಿ ಇದನ್ನು ಸಣ್ಣ ಪುಸ್ತಿಕೆ ರೂಪದಲ್ಲಿ ತರಬಹುದು ಎಂಬ ಅಭಿಪ್ರಾಯ ಬಂತು. ತಕ್ಷಣ ಒಂದೇ ದಿನದಲ್ಲಿ ಪ್ರಾಯೋಜಕರನ್ನು ಗುರುತಿಸಿದೆವು. (ಸ್ನೇಹಾ ಕೂಡ್ಲಿಗೆ, ಸಖೀ ಹೊಸಪೇಟೆ, ಅಂಗಳ ಕೊಪ್ಪಳ, ನಿರ್ಮಲಾ ಬಳ್ಳುಳ್ಳಿ ಕೊಪ್ಪಳದವರು ತಲಾ ರೂ 5,000 ಸಹಾಯಧನ ನೀಡಿದರು) ಬೆಂಗಳೂರಿನ ಇಳಾ ಮುದ್ರಣದವರು ತಡಮಾಡದೆ 10,000 ಪ್ರತಿಗಳನ್ನು ಅಚ್ಚುಹಾಕಿ ಕೊಟ್ಟರು. ಪುಸ್ತಿಕೆಯನ್ನು ರೂ.10 ರಂತೆ ಮಾರುವುದೆಂದು ತೀರ್ಮಾನಿಸಿದೆವು. ಇದರ ಬಳಿಕ ಅದೆಷ್ಟು ಚೆನ್ನಾಗಿ ಆಯಿತೆಂದರೆ ನಮ್ಮ ಕೈಯಲ್ಲಿ ಉಳಿದಿರುವುದು ಕೆಲವೇ ಪ್ರತಿಗಳು.

**ಕೈಗೆ ಕೈ ಜೋಡಿಸೋಣ, ಪ್ರಚಾರ ಕಾರ್ಯಗಳು :**

**ಕೈಗೆ ಕೈ ಜೋಡಿಸೋಣ** ಎಂಬ ಹೆಸರಿನಲ್ಲಿ, ಕೊಪ್ಪಳದ ಕರ್ನಾಟಕ ವಿದ್ಯಾರ್ಥಿ ಸಂಘ (ಕೆ.ವಿ.ಎಸ್) ಹಾಗೂ ಅಂಗಳ ಸಂಸ್ಥೆಯ ಯುವ ಜನರು ಪ್ರಚಾರದ ಜವಾಬ್ದಾರಿ ತೆಗೆದುಕೊಂಡರು. ಇವರಿಗೆ ಎರಡು ದಿವಸಗಳ ತರಬೇತಿ (ಜನವರಿ 7, 8 –2017 ರಂದು) ನೀಡಲಾಯಿತು. ತರಬೇತಿಯಲ್ಲಿ ಸರ್ವೋದಯ ಸಂಸ್ಥೆಯ ಸದಸ್ಯರು, ಜಿಲ್ಲಾ ತಾಯ್ತನ ರಕ್ಷಣಾ ವೇದಿಕೆಯ ಪ್ರತಿನಿಧಿಗಳು, ಹಾಗೂ ಸಮೂಹ ಸಂಸ್ಥೆಯ ವಿಕಲ ಚೇತನ ಮಕ್ಕಳು ಭಾಗವಹಿಸಿದರು. ಮುಖ್ಯವಾಗಿ ಲಿಂಗತ್ವ ಸಂವೇದನೆಯನ್ನು ಸ್ಪಷ್ಟ ಪಡಿಸುವಂತಹ ಕೆಲವು ಚಟುವಟಿಕೆಗಳನ್ನು, ಚರ್ಚೆಗಳನ್ನು ಮಾಡಿದೆವು. ಯುವಕರಿಗೆ ತಮ್ಮದೇ ಹುಟ್ಟಿಗೆ ಕಾರಣವಾದ ಮುಟ್ಟಿನ ಬಗ್ಗೆ ಅರಿವು ಇರಲಿಲ್ಲ. ಅವರು ಬಹಳ ಕುತೂಹಲ ಮತ್ತು ಅಷ್ಟೇ ಗೌರವದಿಂದ ಇದರ ಬಗ್ಗೆ ಕೇಳಿ ತಿಳಿದುಕೊಂಡರು. ಈ ಪ್ರಕ್ರಿಯೆ ಯುವಕ ಯುವತಿಯರಿಗೆ ಇಬ್ಬರಿಗೂ ಒಂದು ಹೊಸ ಅನುಭವ ಕೊಟ್ಟಿತು. ಯುವಕರಿಗೆ ಹೊಸ ಅರಿವು ಸಿಕ್ಕರೆ, ಯುವತಿಯರಿಗೆ ತಮ್ಮ ಅತ್ಯಂತ ಆಪ್ತ ಅನುಭವವನ್ನು ಸಾರ್ವಜನಿಕವಾಗಿ ಮಾತಾಡುವುದೇ ಒಂದು ವಿಶೇಷ ಅನುಭವ ಕೊಟ್ಟಿತು.

ಪ್ರಚಾರ ಕಾರ್ಯದಲ್ಲಿ ಬಳಸಬಹುದಾದ ವಿವಿಧ ಸಾಮಗ್ರಿಗಳನ್ನು ಒಟ್ಟು ಹಾಕಿ ಅಭ್ಯಾಸ ಮಾಡಿದೆವು. ಹಾಡುಗಳು, ಕತೆಗಳು, ಸ್ತಬ್ಧ ಚಿತ್ರಗಳು, ಇತ್ಯಾದಿ. ನಾವು ತಯಾರಿಸಿದ ಮಾಹಿತಿ ಪತ್ರಗಳನ್ನು ಸಣ್ಣ ಗುಂಪುಗಳಲ್ಲಿ ಓದಿ ಕ್ವಿಜ್ ಮಾಡಲು ಪ್ರಶ್ನೆಗಳನ್ನು ತಯಾರಿಸಲಾಯಿತು. ಈ ಪ್ರಕ್ರಿಯೆಯಲ್ಲಿ ಯುವ ಮನಸ್ಸುಗಳು ಆರೋಗ್ಯಕರವಾಗಿ ಅರಳುವುದು ಕಂಡುಬಂತು. ಅದು ನಮ್ಮ ಮತ್ತು ಯುವತಂಡದ ಚಿಂತನೆಗಳನ್ನು ಪರಸ್ಪರ ಹರಿತಗೊಳಿಸಿತು. ತರುಣರು ಸಂಕೋಚ ಬಿಟ್ಟು ಮುಟ್ಟಿನ ಕುರಿತ ಹಾಡುಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಅತ್ಯಂತ ಸಹಜವಾಗಿ ಹಾಡಿದ್ದು ಕೂಡಾ ಬದಲಾವಣೆಯ ಒಂದು ಸಂಕೇತ ಎನಿಸಿತು.

**ಸ್ತಬ್ಧ ಚಿತ್ರ :**

ಯುವತಿಯೊಬ್ಬಳು ನಡೆದುಕೊಂಡು ಬರುತ್ತಿರುವುದು, ಅವಳ ಹಿಂದಿನಿಂದ ಇಬ್ಬರು ಪುಂಡ ಹುಡುಗರು ಬಂದು ಗೇಲಿ ಮಾಡುತ್ತಾ ಆಕೆಯ ದುಪಟ್ಟಾ ಎಳೆದು ನಿಲ್ಲುವುದು, ಗುಂಪಿನ ಒಬ್ಬ ವ್ಯಕ್ತಿ ಮುಂದೆ ಬಂದು ಅವರ ಕಡೆ ದಿಟ್ಟಿಸಿ ನೋಡಿ ಕೈ ಚಾಚುವುದು, ಇನ್ನೊಬ್ಬ ಸದಸ್ಯರು ದಿಟ್ಟ ಹೆಜ್ಜೆಗಳಲ್ಲಿ ಮುಂದೆ ಬಂದು ಕೈ ಹಿಡಿದು ಮತ್ತೊಂದು ಕೈ ಚಾಚುವುದು, ಮೂರು ನಾಲ್ಕು ಜನ ಬಂದು ಇದೇ ರೀತಿ ಕೈಗೆ ಕೈ ಜೋಡಿಸುವುದು, ಹಾಗೇ ಮುಂದೆ ಹೆಜ್ಜೆ ಇಡುತ್ತಾ ಕಿರುಕುಳ ಕೊಡಲು ಬಂದವರನ್ನು ದಬ್ಬಿ ಗಟ್ಟಿಯಾಗಿ ನಿಂತು ಯುವತಿಗೆ ಬೆಂಬಲ ನೀಡುವಂತೆ ಪಕ್ಕ ನಿಲ್ಲುವುದು, ಕೊನೆಯಲ್ಲಿ ನಿಂತವರು– ''ಹೆಣ್ಣು ಮಕ್ಕಳ ಮೇಲೆ ನಡೆಯುವ ಅತ್ಯಾಚಾರ ದೌರ್ಜನ್ಯಗಳನ್ನು ತಡೆಯಲು ನಾವು ಹೊರಟಿದ್ದೇವೆ,

ನೀವು ನಮ್ಮೊಂದಿಗೆ ಬರುವಿರಾದರೆ ಕೈ ಮುಂದಕ್ಕೆ ಚಾಚಿ'' ಅಂತ ಕರೆ ನೀಡುವುದು. ಹಾಗೆ ಕರೆ ನೀಡಿದಾಗಲೆಲ್ಲ ಪ್ರೇಕ್ಷಕರೆಲ್ಲರೂ ಕೈ ಚಾಚಿ ಮುಂದೆ ಬಂದಿದ್ದಾರೆ.

ಮೆರವಣಿಗೆ ಹೊರಡುತ್ತೇವೆ, ಲಿಂಗ ತಾರತಮ್ಯದ ಹಾಡು, ಮುಟ್ಟಿನ ಕುರಿತಾದ ಹಾಡು, ಕಾಲ ಈಗ ಬಂದೇಬಂದಿತೋ ಹಾಡು, ದುರ್ಗಾ, ನೀಲಿ ರಿಬ್ಬನ್ ನಾಟಕಗಳನ್ನು ನಮ್ಮ ತಂಡದವರು ಬಹಳ ವ್ಯಾಪಕವಾಗಿ ಬಳಸಿದರು. ಈ ಯುವ ಜನರ ಗುಂಪು ಕಾಲೇಜುಗಳಿಗೆ, ಹಳ್ಳಿಯ ಓಣಿಗಳಿಗೆ ಸಂಚರಿಸಿ ಹಾಡು, ನಾಟಕ, ಕಥೆಗಳ ಮೂಲಕ ಪ್ರಚಾರ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು.

ನಡುನಡುವೆ ಗೋಡೆ ಬರಹಗಳ ಕೆಲಸವೂ ಒಂದಷ್ಟು ಮಟ್ಟಿಗೆ ನಡೆಯಿತು. ಯುವ ಕಲಾವಿದೆ ಟಬು ಹೊಸಪೇಟೆ, ಇತರ ಸ್ನೇಹಿತೆಯರೊಂದಿಗೆ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಲೋಗೋ ಮತ್ತು ಘೋಷವಾಕ್ಯಗಳನ್ನು ಗೋಡೆಗಳ ಮೇಲೆ ಮೂಡಿಸಿದಳು. ಹೆಣ್ಣುಮಕ್ಕಳೆ ಬೆಳ್ಳಂಬೆಳಗ್ಗೆ ಕೊಪ್ಪಳದ ಗೋಡೆಗಳ ಮೇಲೆ ಚಿತ್ರ- ಬರಹ ಬರೆಯುವ ದೃಶ್ಯ ಹಲವರಿಗೆ ಹೊಸತಾಗಿ, ಕುತೂಹಲಕರವಾಗಿ ಕಂಡಿತು.

ಈ ತಂಡಗಳನ್ನು ಕಾರ್ಯಪ್ರವೃತ್ತರನ್ನಾಗಿ ಮಾಡುವಲ್ಲಿ ಜ್ಯೋತಿ ಹಿಟ್ನಾಳ್, ಮುತ್ತುರಾಜ್ ಮತ್ತು ಸಂತೋಷ್ ಹೆಚ್ಚಿನ ಜವಾಬ್ದಾರಿ ತೆಗೆದುಕೊಂಡರು. ಭಾಗಿಯಾದ ಎಲ್ಲರಿಗೂ ಈ ಪ್ರಕ್ರಿಯೆ ಒಂದು ಹೊಸ ಚೇತನವನ್ನು ಮೂಡಿಸಿತ್ತು.

ಸಾಮಾಜಿಕ ಜಾಲತಾಣ, ''ಸಮತೆಯೆಡೆಗೆ ನಮ್ಮ ನಡಿಗೆ'' ಎಂಬ ಹೆಸರಿನಲ್ಲಿ ಬಹಳ ಲವಲವಿಕೆಯಿಂದ ಸಾಗಿತು. ಗುಲಾಬಿ ಬಿಳಿಮಲೆ ತಂಡದವರು ಇದನ್ನು ನಡೆಸಿಕೊಟ್ಟರು. ಸಿರಾಜ್ ಬಿಸರಳ್ಳಿ ಅವರ ಜೊತೆಗೆ ಪಾಂಡು ನಮ್ಮ ಎಲ್ಲಾ ಹೋಗುಗಳನ್ನು ವೀಡಿಯೋ ಮೂಲಕ ಹಿಡಿದಿಟ್ಟು ಹೆಚ್ಚಿನ ಪ್ರಚಾರ ನೀಡಿದರು. ಸ್ಥಳೀಯ ಮುದ್ರಣ ಮಾಧ್ಯಮದವರ ಸಹಕಾರ ಸಿಕ್ಕಿತ್ತು. ಮಂಗಳೂರಿನ ಡೀಡ್ಸ್ ಸಂಸ್ಥೆ ತಮ್ಮ ಸಂವೇದಿ ಪತ್ರಿಕೆಯನ್ನು ಮಹಿಳಾ ದಿನಾಚರಣೆಗಾಗಿಯೇ ಮೀಸಲಿಟ್ಟು, ಪ್ರಕಟಿಸಿ ನಿಧಿ ಸಂಗ್ರಹಕ್ಕಾಗಿಯೂ ಅದನ್ನು ಬಳಸಲು ನೀಡಿದರು. ಅಂತೆಯೇ ಮೈಸೂರಿನ ಬಾರುಕೋಲು, ಅಗ್ನಿ ಪತ್ರಿಕೆಗಳು ಸಕಾಲಿಕವಾಗಿ ಪ್ರಚಾರ ನೀಡಿದರು.

**ಹಾಡುಗಳ ರಚನೆ:**

ನಮ್ಮ ಆಶಯ, ಘೋಷವಾಕ್ಯಗಳಿಗೆ ಪೂರಕವಾದ ಹಾಡುಗಳು ತಯಾರಾದವು. ಗಂಗಾವತಿಯ ಸ್ನೇಹಿತರಾದ ರಮೇಶ ಗಬ್ಬೂರವರು ''ಹೆಣ್ಣೆಂದರೆ ದೀಪವೋ, ಬೆಂಕಿಯಲ್ಲ ಬೆಳಕೋ'' ಎಂಬ ಹಾಡು ಬರೆದು ವಿಚಾರ ಸಂಕಿರಣದಂದು ಬಸವಕೀರ್ತಿ ಮತ್ತು ತಂಡದೊಂದಿಗೆ ಹಾಡಿದರು. ಹುಲಿಕುಂಟೆ ಮೂರ್ತಿ ''ನಾವು ಈ ನೆಲದ ಹೆಣ್ಣುಗಳು'' ಹಾಡು ರಚಿಸಿದರು. ಇಂತಹ ಪ್ರಕ್ರಿಯೆಯಲ್ಲಿ ಹೇಗೆ ಬೇರೆಬೇರೆ ಚೇತನಗಳು ಜೊತೆಸೇರಿ ಆಶಯವನ್ನು ದಿಕ್ಕು ದಿಕ್ಕಿಗೆ ಒಯ್ಯುತ್ತವೆ ಅನಿಸಿತ್ತು.

ಮೌನಜಾಗೃತಿ, ಬಿಳಿ ಉಡುಪಿನಲ್ಲಿ ನಾವು:

ಈ ಹಿಂದಿನ ನಾಲ್ಕು ವರುಷ ''ಕಪ್ಪು ಉಡುಪಿನಲ್ಲಿ ನಾವು'' ಎಂಬ ಮೌನಪ್ರತಿಭಟನಾ ಕಾರ್ಯಕ್ರಮವನ್ನು ಮಹಿಳಾ ದಿನಾಚರಣೆಯ ಹಿಂದಿನ ದಿನ ಸಂಜೆ ಹೊತ್ತಲ್ಲಿ ಮಾಡಿದ್ದೆವು. ಈ ವರುಷ ಮಾತ್ರ ಮೌನಜಾಗೃತಿ 'ಬಿಳಿಉಡುಪಿನಲ್ಲಿನಾವು' ಎಂಬ ಹೆಸರಿನಲ್ಲಿ ಮೌನ ಪ್ರತಿಭಟನೆ ಮಾಡಿದೆವು. ಅಲ್ಲದೆ ಈ ಸಾರಿ ಮಾರ್ಚ್ 8ರ ಮಹಿಳಾ ದಿನಾಚರಣೆಗೆ ಪೂರ್ವಭಾವಿಯಾಗಿ ಅದಕ್ಕೆ ಮೊದಲಿನ ನಾಲ್ಕು ಬುಧವಾರಗಳಲ್ಲಿ ಕೊಪ್ಪಳದ ಮುಖ್ಯ ಪ್ರದೇಶಗಳಲ್ಲಿ ಈ ಕಾರ್ಯಕ್ರಮ ನಡೆಯಿತು. ಕುಷ್ಟಗಿ

(8.02.2017), ಯಲಬುರ್ಗಾ (15.02.2017), ಕಾರಟಗಿ (22.02.2017), ಗಂಗಾವತಿ (01.03.2017) ಯಲ್ಲಿ ಮೌನಜಾಗೃತಿ ಕಾರ್ಯಕ್ರಮ ನಡೆಯಿತು. ಜೊತೆಗೆ ಸರಸ್ವತಿ ಪಾಟೀಲ್ ಅವರ ಉತ್ಸಾಹದಲ್ಲಿ ಸಿಂಧನೂರಿನಲ್ಲೂ (03.03.2017) ಕೊಪ್ಪಳದ ಸಮಾವೇಶಕ್ಕೆ ಬೆಂಬಲವಾಗಿ ಮೌನಜಾಗೃತಿ ನಡೆಯಿತು.

ಪ್ರತಿಯೊಂದು ಜಾಗಕ್ಕೆ ಜ್ಯೋತಿ ಒಕ್ಕೂಟದ ಇತರ ಕೆಲವು ಒಡನಾಡಿಗಳೊಂದಿಗೆ (ಆಶಾ, ಸಂಪತ್ ಕುಮಾರಿ, ನಸ್ರೀನ್ ಮಿಠಾಯಿ, ಸಲೀಮಾ) ಒಂದೆರಡು ದಿನಗಳಿಗೆ ಮುಂಚಿತವಾಗಿ ಹೋಗುತ್ತಿದ್ದರು. ಮುಖ್ಯವಾಗಿ ಸಹಕರಿಸಬಹುದಾದ ವ್ಯಕ್ತಿಗಳನ್ನು ಭೇಟಿಯಾಗುತ್ತಿದ್ದರು. ಪತ್ರಿಕಾ ಗೋಷ್ಠಿಯೊಂದು ನಡೆವಂತೆ ನೋಡಿಕೊಳ್ಳುತ್ತಿದ್ದರು. ಪೊಲೀಸ್ ಅನುಮತಿ ಪಡೆದುಕೊಳ್ಳುತ್ತಿದ್ದರು. ನಗರದ ಕಾಲೇಜು, ಹಾಸ್ಟೆಲ್ಲುಗಳಲ್ಲಿ ಈ ಕುರಿತು ಪ್ರಚಾರ ಕಾರ್ಯ ನಡೆಸುತ್ತಿದ್ದರು. ಮೋಂಬತ್ತಿಗೆ ಮತ್ತು ಅದನ್ನು ಹಿಡಿಯಲು ಬೇಕಾದ ಕಾಗದದ ಕಪ್‌ಗೆ ಪ್ರಾಯೋಜಕರನ್ನು ಗುರುತಿಸಿಕೊಳ್ಳುತ್ತಿದ್ದರು. ಈ ರೀತಿಯ ತಯಾರಿಯಿಂದಾಗಿ ಮೌನ ಜಾಗೃತಿ ಕಾರ್ಯಕ್ರಮಗಳು ಅದ್ಭುತವಾಗಿ ನಡೆದವು.

ನಿಗದಿತ ಜಾಗ ಒಂದರಲ್ಲಿ ನಿಂತು ಹಾಡು, ಒಂದೆರಡು ಮಾತು, ಮತ್ತು ಕ್ಯಾಂಡಲ್ ಬೆಳಕಿನೊಂದಿಗೆ ಮೌನ ಆಚರಣೆ ನಡೆಸುವುದೆಂಬ ಯೋಜನೆ ಇತ್ತು. ತಾಲೂಕು ಪ್ರದೇಶಗಳಿಗೆ ಹೋದಾಗ ಒಂದು ಕಡೆ ಸೇರಿ ಸಣ್ಣ ಮೆರವಣಿಗೆ ಹೋಗಿ ಕಾರ್ಯಕ್ರಮ ಮಾಡುವುದು ಸೇರಿಕೊಂಡಿತು. ಅಂತೆಯೇ ಸಂಜೆ ಐದರ ಹೊತ್ತಿಗೆ ಒಂದೆಡೆ ಸೇರುತ್ತಿದ್ದೆವು. ಬರುವವರನ್ನು ಬರಮಾಡಿಕೊಳ್ಳುತ್ತಿದ್ದೆವು. ಹಾಸ್ಟೆಲಿಂದ ಮಕ್ಕಳು ಬರುವಾಗ ಸದ್ದುಗದ್ದಲ ಮಾಡಿ ಸಂಭ್ರಮಿಸುತ್ತಿದ್ದೆವು. ಅಲ್ಲೇ ಒಂದೆರಡು ಹಾಡು ಹಾಡಿ, ಹಾಡಿಸಿ, ಕಾರ್ಯಕ್ರಮದ ಆಶಯ ಸ್ವರೂಪ ವಿವರಿಸಿ, ಕೈಯಲ್ಲಿ ಬಿಳಿ ಬಾವುಟ, ಪ್ಲಕಾರ್ಡುಗಳನ್ನು ಹಿಡಿದುಕೊಂಡು ಮೆರವಣಿಗೆ ಹೊರಟು ನಿಗದಿತ ಪ್ರದೇಶ ಸೇರಿಕೊಳ್ಳುತ್ತಿದ್ದೆವು. ಅಲ್ಲಿ ಮತ್ತೆ ಗಣ್ಯರಿಂದ ಎರಡು ಮಾತು ಆಡಿಸಿ, ಹಾಡು ಹೇಳುವ ಹೊತ್ತಿಗೆ ಕತ್ತಲು ಆವರಿಸುತ್ತಿತ್ತು. ಎಲ್ಲರೂ ಕೈಯಲ್ಲಿ ಉರಿವ ಮೋಂಬತ್ತಿ ಹಿಡಿದು ಮೌನವಾಗಿ ನಿಲ್ಲುತ್ತಿದ್ದೆವು. ಕೊನೆಗೆ ಹಾಡು ಧನ್ಯವಾದಗಳೊಂದಿಗೆ ಕಾರ್ಯಕ್ರಮ ಮುಗಿಸುತ್ತಿದ್ದೆವು.

ನಗರದ ಎಲ್ಲಾ ಸದ್ದುಗದ್ದಲಗಳ ನಡುವೆ, ಒಂದು ಗುಂಪಾಗಿ ಒಂದಿಷ್ಟು ಹೊತ್ತು ಬೆಳಗುವ ದೀಪ ಹಿಡಿದು ಮೌನವಾಗಿ ನಿಲ್ಲುವುದು ಒಂದು ವಿಶೇಷ ಅನುಭೂತಿ ನೀಡುತ್ತಿತ್ತು, ವಿಶೇಷ ಸಂದೇಶ ಸಾರುತ್ತಿತ್ತು. ಬಂದಿರುವ ಎಲ್ಲರಿಗೂ ಕಾರ್ಯಕ್ರಮದ ಆಶಯದ ಅರಿವುವಾಗುತ್ತಿತ್ತು. ಒಟ್ಟಾರೆಯಾಗಿ ಈ ಕಾರ್ಯಕ್ರಮ ಸೊಗಸಾಗಿ ನಡೆದಿತ್ತು. ಈ ಕಾರ್ಯಕ್ರಮಗಳು ಪತ್ರಿಕೆಗಳಲ್ಲಿ ಕ.ರಾ.ಮ.ದೌ.ವಿ.ಒಕ್ಕೂಟಕ್ಕೆ ಹಾಗೂ ಮಾರ್ಚ್ 8, 9 ರಂದು ನಡೆಯಲಿರುವ ಸಮಾವೇಶಕ್ಕೆ ವ್ಯಾಪಕ ಪ್ರಚಾರ ಸಿಗುವಲ್ಲಿ ಸಹಕರಿಸಿತ್ತು. ಸಂಬಂಧಗಳನ್ನು ಕಟ್ಟಿಕೊಳ್ಳುವಲ್ಲಿ ಸಹಕರಿಸಿತ್ತು. ಕೊನೆಯ ಕಾರ್ಯಕ್ರಮ ಮಾರ್ಚ್ 8 ರಂದು ಕೊಪ್ಪಳದ ಅಶೋಕ ವೃತ್ತದಲ್ಲಿ ಮನತಟ್ಟುವ ರೀತಿಯಲ್ಲಿ ನಡೆದಿತ್ತು. ಓಡಾಡುವ ಮಂದಿ, ವಾಹನದಲ್ಲಿ ಹೋಗುವ ಮಂದಿಯೂ ಮೌನಬೆಳಕಿನ ಪ್ರಭಾವಕ್ಕೆ ಒಳಗಾಗಿ ಕ್ಷಣಕಾಲ ನಿಂತು ನಡೆಯುತ್ತಿದ್ದರು.

ಜನಸಮುದಾಯದ ಜೊತೆ ಮೌನವಾಗಿ ನಿಲ್ಲುವುದು ಒಂದು ವಿಶೇಷ ಅನುಭವ. ಅಷ್ಟೊಂದು ಸದ್ದುಗದ್ದಲಗಳ ನಡುವೆ ಮೌನದ ಶಕ್ತಿ ಅನಾವರಣಗೊಳ್ಳುತ್ತಿತ್ತು. ಆದರೆ ಮೌನವಾಗಿ ಸ್ವಲ್ಪ ಕಾಲ ನಿಲ್ಲುವುದು ಸುಲಭದ ಕೆಲಸವಾಗಿರಲಿಲ್ಲ. ಮೌನವನ್ನು ಇನ್ನೇನು ಜೀವದ ಒಳಗೆ ಇಳಿಸಿಕೊಳ್ಳಬೇಕೆನಿಸುವ ಹೊತ್ತಿಗೆ ಕುಸುಕುಸುಗಳು ಶುರುವಾಗಿಬಿಡುತ್ತಿದ್ದವು. ಮೌನವನ್ನು ಆಳವಾಗಿ

ಅನುಭವಿಸಿದವರಿಗೆ ಹೊಸ ಸಂಚಲನ ಮೂಡಿಸುವ ಹಾಗೆ ಇತ್ತು. ವ್ಯಕ್ತಿಗಳ ಒಳಗೆ ಸಾಮೂಹಿಕವಾಗಿ ಒಂದು ಬಾಂಧವ್ಯದ ಅನುಭೂತಿ ಸಿಕ್ಕಿದ ಹಾಗೆ ಅನಿಸಿತ್ತು.

**ನಿಧಿ ಸಂಗ್ರಹ:**

ಸಮಾವೇಶ ನಡೆದ ಜಿಲ್ಲೆಗಳಿಂದ ಒಂದಷ್ಟು ದೇಣಿಗೆ ಮೊದಲಿಗೇ ಬಂತು. ಅದೇ ಹೊತ್ತಿಗೆ ಅನುಪಮಾ ಅವರು ಅವರಿಗೆ ಸಿಕ್ಕ ಪ್ರಶಸ್ತಿ ಮೊತ್ತ ರೂ. 50,000ವನ್ನು ನೀಡಿದರು.

ಹಣವನ್ನು ಯಾರಿಂದ ಪಡೆಯಬೇಕು, ಎಷ್ಟು ಪಡೆಯಬಹುದು, ಯಾರ ಬಳಿ ಹೋಗಲೇಬಾರದು ಎಂಬ ಬಗೆಗೆ ಮತ್ತೆಮತ್ತೆ ಚರ್ಚಿಸುತ್ತ ಸಮಾನ ಮನಸ್ಕರಿಂದ ಹಣ ಸಂಗ್ರಹ ಕಾರ್ಯ ಮಾಡಿದೆವು. ನಡುನಡುವೆ ಉಂಟಾದ ಕಸಿವಿಸಿ, ಗೊಂದಲಗಳ ದಾಟುತ್ತ, ಮತ್ತೆಮತ್ತೆ ನಮ್ಮಲ್ಲೆ ಚರ್ಚಿಸಿಕೊಳ್ಳುತ್ತ ಕೊಪ್ಪಳ ಜಿಲ್ಲೆಯ ಉದ್ದಗಲಕ್ಕೆ ನಮ್ಮನ್ನು ಉದ್ದಕ್ಕೂ ಬೆಂಬಲಿಸಿದ ಹಿರಿಯರಾದ ವಿಠ್ಠಪ್ಪ ಗೋರಂಟ್ಲಿ, ಭಾರದ್ವಾಜ್ ಸ್ನೇಹಿತರಾದ ರಾಜಾಬಕ್ಷಿ, ಸಿರಾಜ್ ಅವರೊಂದಿಗೆ ತಿರುಗಾಡಿದೆವು. ಕಾರಟಗಿಯ ಪಂಪಾರೆಡ್ಡಿ ಹಾಗೂ ಅವರ ಸ್ನೇಹಿತರ ತಂಡ ಎರಡೂ ದಿನಕ್ಕೆ ಬೇಕಾದ ಅಕ್ಕಿ ಒದಗಿಸಿದರು.

ಈ ಕಾರ್ಯಕ್ರಮಕ್ಕೆ ಕರವಸ್ತ್ರ, ಮಾಹಿತಿ ಪತ್ರಗಳು ಕಿರು ನಿಧಿಸಂಗ್ರಹಕ್ಕೆ ನೆರವಾದವು. ಕೊಪ್ಪಳದ ಸರ್ವೋದಯ ಸಂಸ್ಥೆ, ಬೆಂಗಳೂರಿನ ಗಾರ್ಮೆಂಟ್ಸ್ ಯೂನಿಯನ್ನಿನ ಹೆಣ್ಣುಮಕ್ಕಳು, ಹೊಸಪೇಟೆ, ಬಿಜಾಪುರದ ಗೆಳತಿಯರು ಕರವಸ್ತ್ರ ಹೊಲಿದುಕೊಟ್ಟರು. ತಲಾ ರೂ.20 ರಂತೆ ಇದನ್ನು ಮಾರುವ ಕೆಲಸ ನಡೆಯಿತು. ಯುವ ಸ್ನೇಹಿತ ಚಿದು ದೊಡ್ಡಬಳ್ಳಾಪುರದಲ್ಲಿ ಪುಸ್ತಕ, ಕರವಸ್ತ್ರ ಮಾರಿಕೊಟ್ಟರು. ಕೊಪ್ಪಳದ ಹೆಚ್ಚಿನ ಸಂಗಾತಿಗಳೂ ಇದಕ್ಕೆ ಸಹಕರಿಸಿದರು. ಇದು ಹಣ ಸಂಗ್ರಹದ ಜೊತೆಗೆ ಜನರ ಒಡನಾಟಕ್ಕೂ ಸಹಕಾರಿಯಾಯಿತು. ಹಂಪಿ ವಿಶ್ವವಿದ್ಯಾಲಯದ ಸ್ನೇಹಿತರು ತಮ್ಮ ದೇಣಿಗೆ ನೀಡಿದರು. ಬಿಜಾಪುರ ಅಕ್ಕಮಹಾದೇವಿ ವಿಶ್ವವಿದ್ಯಾನಿಲಯದಿಂದ ವಿಚಾರ ಸಂಕಿರಣಕ್ಕೆ ಧನಸಹಾಯ ಸಿಕ್ಕಿತು. ಹಾದಿಬೀದಿ ತರಕಾರಿ ಮಾರುಕಟ್ಟೆಗಳಲ್ಲಿ ಹಾಡು ಹೇಳಿ, ನಾಟಕ ಮಾಡಿ ಒಂದೇ ದಿನದಲ್ಲಿ ಸುಮಾರು 17,000 ರೂ ಹಣ ಸಂಗ್ರಹಿಸಲಾಯಿತು. ಹಿರೇಸಿಂದೋಗಿಗೆ ಬಹಳ ಪ್ರೀತಿಯಿಂದ ಹೋಗಿ ಅವರು ನೀಡಿದ ರೂ.72ನ್ನು ಗೌರವದಿಂದ ಸ್ವೀಕರಿಸಿದೆವು. ಸ್ನೇಹಿತರಾದ ಮಂಜುನಾಥ ಅದ್ದೆ ಬೆಂಗಳೂರಿನ ಬಳಗದಿಂದ ಸುಮಾರು ಒಂದು ಲಕ್ಷ ರೂ. ಸಂಗ್ರಹಿಸಿಕೊಟ್ಟರು.

ಕೆಲವಾರು ಸಂಸ್ಥೆಗಳು ಜೊತೆಸೇರಿದವು. ಒಕ್ಕೂಟದ ಸಹಭಾಗಿಗಳು ಹಣ ನೀಡಿ ಸಹಕರಿಸಿದರು. ಒಂದಿಷ್ಟು ಮಂದಿ ವಸ್ತು ರೂಪದಲ್ಲಿ ಸಹಕಾರ ನೀಡಿದರೆ ಮತ್ತೊಂದಷ್ಟು ಮಂದಿ ತಮ್ಮ ಸಮಯವನ್ನು, ಶ್ರಮವನ್ನು ದೇಣಿಗೆಯಾಗಿ ನೀಡಿದರು. ಒಂದು ದೊಡ್ಡ ಸಮಾವೇಶದ ಹಿಂದೆ ನೂರಾರು ಸಾವಿರಾರು ಮನಸ್ಸುಗಳು ತಮ್ಮದೇ ರೀತಿಯಲ್ಲಿ ದುಡಿದವು. ಹೆಸರು ಹೇಳಿ ಮುಗಿಯದು. ಬಿಟ್ಟುಹೋದರೆ ಕ್ಷಮೆ ಇರಲಿ.

ಈ ನಡುವೆ ಮನಸು ತುಂಬಿಬಂದ ಒಂದು ಸಣ್ಣ ಅನುಭವ ಹೇಳಲೇಬೇಕು.

ಸಮಾವೇಶಕ್ಕೆ ಐದಾರು ಸಾವಿರ ಜನರಿಗೆ ಅಡುಗೆ ಆಗಬೇಕು. ಅದನ್ನು 'ಬಿಸಿಯೂಟ'ದವರಿಗೆ ಒಪ್ಪಿಸಲು ಮುಂದಾದಾಗ ಆ ಹೆಣ್ಮಕ್ಕಳು ಒಂದು ದಿನವಾದರೂ ಅಡುಗೆ ಕೆಲಸದ ಭಾರವಿಲ್ಲದೆ ಜಾಥಾದಲ್ಲಿ ಸೇರಿಕೊಳ್ಳಲಿ ಎಂಬ ಮಾತು ಬಂತು. ಕೊನೆಗೆ ಹೋಟೆಲ್ ಕಾರ್ಮಿಕ ಸಂಘದ ಸೋದರರ ಬಳಿ ಮಾತನಾಡಲು ಹೋದೆವು. ಏನನ್ನು ತಯಾರಿಸಬೇಕು, ಎಷ್ಟು ಸಾಮಾನು ಬೇಕು ಎಂಬ ಮಾತುಗಳಾದ ನಂತರ ಅಡುಗೆ ತಯಾರಿ ಖರ್ಚು ಎಷ್ಟು ಆಗುತ್ತದೆ ಎಂದು ಕೇಳಿದೆವು. ಅದಕ್ಕೆ ಅವರು

ಸುತರಾಂ ಒಪ್ಪಲಿಲ್ಲ. ಹೋಟೆಲ್ ಕಾರ್ಮಿಕರ ಬಳಿ ಪುಕ್ಕಟೆ ಕೆಲಸ ಮಾಡಿಸಿಕೊಳ್ಳಲು ನಮ್ಮ ಮನಸ್ಸು ಒಪ್ಪುತ್ತಿಲ್ಲ. ಆ ಸೋದರರು ದೃಢವಾಗಿ ಹೇಳಿದ್ದು ಇಷ್ಟು: ''ಅಕ್ಕಾ, ಹತ್ತು ರೂಪಾಯ್ ತಗೊಂಡರೂ ಒಂದೇ. ನೂರು ರೂಪಾಯ್ ತಗೊಂಡರೂ ಒಂದೇ. ಅದು ರೊಕ್ಕಾ ತಗೊಂಡು ಮಾಡಿದ ಹಾಗೇ ಆಗುತ್ತದೆ. ನೀವೇನೋ ಒಳ್ಳೆಯ ಕೆಲಸ ಮಾಡುತ್ತಿದ್ದೀರಿ. ನಾವು ಬೇರೇನೂ ಕೊಡುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ ಈ ಕೆಲಸವಾದರೂ ಮಾಡಿಕೊಡುತ್ತೇವೆ'' ಎಂದು ತುಂಬು ಅಭಿಮಾನ ಮತ್ತು ಪ್ರೀತಿಯಿಂದ ಹೇಳಿದರು.

ಗಂಗಾವತಿಯಲ್ಲಿ ಧರಣಿಗೆ ಕುಳಿತ ಪೌರಕಾರ್ಮಿಕ ಯುವಕರ ನಾಯಕ, ''ನಾವು ಏನು ಮಾಡಬೇಕು ಹೇಳಿ'' ಅಂತ ಕಾಳಜಿಯಿಂದ ಕೇಳಿದರು. ಇವರಿಗೆ ಆರು ತಿಂಗಳಿಂದ ಸಂಬಳ ಆಗಿರಲಿಲ್ಲ, ಈಗೆರಡು ತಿಂಗಳಿಂದ ಸಿಗುತ್ತಿದೆ ಎಂದು ತಿಳಿದಾಗ ಮನಸ್ಸು ವಿನಮ್ರವಾಗಿ ತಲೆಬಾಗಿತ್ತು.

ಈ ಸಮಾವೇಶ ಎಷ್ಟೊಂದು ಹೃದಯಗಳ ''ಪ್ರೀತಿಯ ಸಮಾವೇಶ'' ಎಂದು ಅನಿಸಿತು..

**ವಿಚಾರ ಸಂಕಿರಣ, ಸಮಾವೇಶ:**

ಅಚಲವಾಗಿ ನಮ್ಮೊಂದಿಗೆ ನಿಂತು ಸಹಕರಿಸಿದ ಕಾಮ್ರೇಡ್ ವಿಠ್ಠಪ್ಪ ಗೋರಂಟ್ಲಿ ಹಾಗೂ ಕಾಮ್ರೇಡ್ ಭಾರದ್ವಾಜ್ ಅವರು ವಿಚಾರ ಸಂಕಿರಣದಲ್ಲಿ ಹಾಗೂ ಸಮಾವೇಶದಲ್ಲಿ ಸರ್ವರನ್ನು ಬರಮಾಡಿಕೊಂಡರು. ಪ್ರಜನನ ಹಕ್ಕುಗಳನ್ನು ಮೂಲ ಆಶಯವಾಗಿ ಇಟ್ಟುಕೊಂಡು ವಿಚಾರ ಸಂಕಿರಣ ನಡೆದಿತ್ತು. ಬಿಜಾಪುರ ಸಮಾವೇಶದ ಪುಸ್ತಕ ''ಜೊತೆಗೂಡಿ ನಡೆಯೋಣ'' ವನ್ನು ಒಕ್ಕೂಟದ ಸದಸ್ಯೆ ಕೋಲಾರದ ಕೆ.ವಿ ನೇತ್ರಾವತಿ ಬಿಡುಗಡೆ ಮಾಡಿ ಅದರ ಕುರಿತು ಮಾತನಾಡಿದರು. ಹಿರಿಯರಾದ ಶಾಂತಾದೇವಿ ಹಿರೇಮಠ್ ಅವರ ಅಧ್ಯಕ್ಷತೆಯಲ್ಲಿ ಶಕುಂತಲಾ ಮಾಲೀ ಪಾಟೀಲ, ಸಾವಿತ್ರಿ ಮುಜುಂದಾರ ಅವರ ಉಪಸ್ಥಿತಿಯಲ್ಲಿ ಉದ್ಘಾಟನೆ ನಡೆಯಿತು. ರಂಜನಾ ಪಾಡಿಯವರು ದಿಕ್ಸೂಚಿ ಮಾತುಗಳನ್ನು ಆಡಿದರು.

ಮಾ. 9 ರ ಬೆಳಗ್ಗೆ ಬೃಹತ್ ಜಾಥಾದ ಉದ್ಘಾಟನೆ ಗೋಗು ಶ್ಯಾಮಲಾ ನಡೆಸಿಕೊಟ್ಟರು. ಬರುವ ವರುಷ ಶಿವಮೊಗ್ಗದಲ್ಲಿ ಮಹಿಳಾ ದಿನಾಚರಣೆ ಆಚರಿಸುವುದೆಂದು ನಿರ್ಧರಿಸಿ ಆ ಜಿಲ್ಲೆಯಿಂದ ಬಂದ ಸಂಗಾತಿಗಳು ಸಸಿ ತೆಗೆದುಕೊಂಡರು. ಕೊಪ್ಪಳದ ಪ್ರಮುಖ ಬೀದಿಗಳಲ್ಲಿ ಆ ಬಿರುಬಿಸಿಲಿನಲ್ಲಿ ಪ್ರವಾಹದಂತೆ ಮೆರವಣಿಗೆ ಸಾಗಿತು. ಒಟ್ಟಾರೆ ಹಲವು ತಿಂಗಳುಗಳ ಪರಿಶ್ರಮದ ಪರಿಣಾಮವಾಗಿ ನಿರೀಕ್ಷೆಗೆ ಮೀರಿ ಐದು ಸಾವಿರಕ್ಕೂ ಮಿಗಿಲಾಗಿ ಜನ ಸೇರಿದ್ದರು. ದಾರಿಯುದ್ದಕ್ಕೂ ಹಾಡು, ಘೋಷಣೆ, ತಮಟೆ, ನೀರು ಹಂಚಿಕೆಗಳು ನಡೆದವು. ಬಹಿರಂಗ ಸಮಾವೇಶ ನಡೆಯುವ ಮೈದಾನಕ್ಕೆ ಬಂದಕೂಡಲೇ ಎಲ್ಲರಿಗು ಊಟ ವಿತರಿಸಿ ಸಮಾವೇಶ ಶುರುವಾಯಿತು. ಕಿನ್ನಾಳದ ಗೊಂಬೆಗಳ ಮೇಲೆ ಹಿರಿಯ ಕಲಾವಿದೆ ಚಿತ್ರ ಬಿಡಿಸಲು ಶುರುಮಾಡುವ ಮೂಲಕ ಬಹಿರಂಗ ಸಮಾವೇಶ ಉದ್ಘಾಟನೆಗೊಂಡಿತು. ಕವಿತಾ ಕೃಷ್ಣನ್ ಪ್ರೀತಿಯ ಸಂಘರ್ಷ ನಡೆಸುವುದಾಗಿ ಸಾರಿದರು. ಕೊಪ್ಪಳದ ಅನೇಕ ಸಂಗಾತಿಗಳು ವೇದಿಕೆ ಮೇಲೆ, ಕಾರ್ಯಕ್ರಮಕ್ಕೆ ಮೆರುಗು ಕೊಟ್ಟರು. ಅಖಿಲಾ ವಿದ್ಯಾಸಂದ್ರ ಹಕ್ಕೊತ್ತಾಯಗಳನ್ನು ಓದಿದರು, ಮಹಿಳಾ ಆಯೋಗದ ಸದಸ್ಯರಾದ ಮಾಲತಿ ನಾಯಕ್ ಅವರಿಗೆ ಹಸ್ತಾಂತರಿಸಲಾಯಿತು.

**ನೆನೆಯಲೇಬೇಕಾದ ಘಳಿಗೆಗಳು:**

★ ಸಮಾವೇಶದ ಆಗುಹೋಗುಗಳಲ್ಲಿ ನಮಗೆ ನಿರಂತರ ಜೊತೆಗಿದ್ದು ಸಹಕರಿಸಿದ ರಿಕ್ಷಾಚಾಲಕರು

ರವಿ, ಕಳಕಪ್ಪ, ಅರೀಫ್, ನಾಗರಾಜ, ಗೌಸ್.. ಅವರೆಲ್ಲ ಅದೆಷ್ಟು ಸಂಭ್ರಮಪಟ್ಟರೆಂದರೆ, ಮುಂದಿನ ವರುಷ ಶಿವಮೊಗ್ಗಕ್ಕೆ ಬರಬೇಕು ಅಂತ ಇಷ್ಟ ಪಟ್ಟರು. ಅವರಿಗೆ ತುಂಬಾ ಮನಸ್ಸಿಗೆ ತಟ್ಟಿದ್ದು ಬಿಳಿಉಡುಗೆಯಲ್ಲಿ ದೀಪ ಹಿಡಿದು ನಿಂತಿದ್ದು, ಸಾವಿರಾರು ಹೆಣ್ಣುಮಕ್ಕಳು ರ್‍ಯಾಲಿ ಮಾಡಿದ್ದು.. ಇವೆಲ್ಲ ಚಿತ್ರಣ ಮನಸ್ಸಿನಲ್ಲಿ ಹಾಗೇ ಉಳಿದಿದೆ ಅನ್ನುತ್ತಾರೆ ರವಿ.

★ ಕೊನೆಯ ಹೊತ್ತಿನಲ್ಲಿ ಲೆಕ್ಕಪತ್ರಗಳನ್ನು ಅಚ್ಚುಕಟ್ಟಾಗಿ ಮಾಡಿಕೊಟ್ಟವರು ಜಿಲ್ಲಾ ತಾಯ್ತನ ರಕ್ಷಣಾ ವೇದಿಕೆಯ ಮಂಜುನಾಥ್ ಮತ್ತು ಸಹಕರಿಸಿದವರು ಸಂಪತ್ ಕುಮಾರಿ.

★ ವಿಠ್ಠಪ್ಪ ಸರ್ ''ಏ, ಏಸು ಮಂದಿನಾದ್ರೂ ಬರಲಿ ಬಿಡ್ರಿ, ನಾವ್ ನೋಡಿಕೊತೇವೆ'' ಅಂದಿದ್ದರು. ಕೊನೆಕೊನೆಯ ಹೊತ್ತಲ್ಲಿ ''ನಿದ್ದಿ ಹತ್ತಂಗಿಲ್ರಿ, ಎದೀಮೇಲೆ ಬಂದ ಹಂಗೆ ಆಗುತ್ತೆ'' ಅಂತ ನಮ್ಮ ಜೊತೆಗೆ ಆತಂಕವನ್ನೂ ಹಂಚಿಕೊಂಡರು. ರ್‍ಯಾಲಿ ದಿನ ಬೆಳ್ಳಂಬೆಳಗ್ಗೆ ಛತ್ರದ ಹತ್ತಿರ ಬಂದು, ಕಟ್ಟಿಗಿ ಸಾಲಲ್ಲ ಅಂತ ತಿಳಿದು ಅದಕ್ಕೆ ಅಡ್ಡಾಡಿ ವ್ಯವಸ್ಥೆ ಮಾಡಿದ್ದರು.

★ ಕಾಮ್ರೇಡ್ ಭಾರದ್ವಾಜ್ ಅವರನ್ನ ಹೆಚ್ಚಾಗಿ ಭೇಟಿ ಮಾಡುತ್ತಿದ್ದುದೇ ಧರಣಿ ನಡೆಸುವ ಟೆಂಟಿನಲ್ಲಿ. ಅದಮ್ಯ ಭರವಸೆಯಿಂದ ನಿರಂತರ ಹೋರಾಡುವ ಆ ಜೀವದೊಂದಿಗೆ ಕೆಲಕಾಲ ಕಳೆಯಲು ಸಿಕ್ಕಿದ್ದೇ ದೊಡ್ಡ ಪ್ರೇರಣೆ. ನಮ್ಮ ಜೊತೆ ನಿಧಿ ಸಂಗ್ರಹಕ್ಕೆ ಅಡ್ಡಾಡಿದರು. ಲಾರಿಯಲ್ಲಿ ಪೌರಕಾರ್ಮಿಕ ಮಹಿಳೆಯರನ್ನು ಜಾಥಾಗೆ ಕರೆತಂದರು. ''ಇನ್ನೇನು ಬೇಕು'' ಅಂತ ಕೇಳುತ್ತಲೇ ಇದ್ದರು.

★ ರಾಜಾಬಕ್ಷಿ ಮತ್ತು ಸಿರಾಜ್ ಎಂಬ ಗೆಳೆಯರ ಜೋಡಿ, ಮೊದಲಿನಿಂದ ಕೊನೆಯವರೆಗೆ ಜೊತೆಗೆ ಯಾವುದೇ ಕೆಲಸಕ್ಕೆ ಬದ್ಧರಾಗಿ ನಿಂತಿದ್ದರು. ಎಲ್ಲಿ ಜನ ಸೇರಿದರೂ ಅಲ್ಲಿಗೆ ನಮ್ಮಲ್ಲಿ ಒಬ್ಬರನ್ನ ಕರೆದುಕೊಂಡು ಹೋಗಿ ನಮ್ಮ ಉದ್ದೇಶ ಆಶಯಗಳ ಬಗ್ಗೆ ಮಾತಾಡಿಸುತ್ತಿದ್ದರು. ಆ ಇಬ್ಬರ ತಾಯ್ತನದ ಸಹಾಯ, ಸಕಾಲದ ಬೇಷರತ್ ಸಹಾಯ ಮರೆಯುವಂತೆಯೇ ಇಲ್ಲ. ಕ್ರಮೇಣ ಕೊಪ್ಪಳದ ಅನೇಕ ಸಂಗಾತಿಗಳು - ಅಂಗನವಾಡಿ ಯೂನಿಯನ್ನಿನ ಮುಮ್ತಾಜ್, ಬಸವರಾಜ್ ಶೀಲವಂತರ್, ಕೋಮಲಾ ಕುದುರೆಮೋತಿ, ಸರೋಜಾ ಬಾಕಳೆ, ಸಲೀಮಾ, ಸಂಧ್ಯಾ ಮಾದಿಗನೂರು, ಹೇಮಾ ಬಳ್ಳಾರಿ, ವಿಜಯಲಕ್ಷ್ಮಿ ಕೊಟಗಿ, ಅರುಣಾ ನರೇಂದ್ರ, ಸರಸ್ವತಿ ಪಾಟೀಲ್, ಜಯಂತಿ, ಉಮೇಶ್, ಸಂಪತ್, ಶಿವಲೀಲಾ, ಅಶ್ವಿನಿ ಮತ್ತು ಅಜೀಮಾ, ಶಂಕರ್, ಉಷಾ ಪಿ.ಎ., ಶೀಲಾ ಹಾಲ್ಕುರಿಕೆ, ಆನಂದ ಹಳ್ಳಿಗುಡಿ ತಂಡ, ಉಮಾ, - (ಹೆಸರು ಹೇಳಿ ಮುಗಿಯದು) ಕೈಜೋಡಿಸತೊಡಗಿದರು. ಕೆ.ಎಚ್.ಪಿ.ಟಿ ಸಂಸ್ಥೆಯ ಮೂಲಕ ದೊಡ್ಡ ಸಂಖ್ಯೆಯಲ್ಲಿ ಕಿಶೋರಿಯರು ಭಾಗವಹಿಸುವಂತಾಯಿತು.

★ ಸ್ವಂತ ಊರು ಬಿಟ್ಟು ಜಂಗಮರ ಹಾಗೆ ತಿರುಗುವಾಗ ಯಾರ್‍ಯಾರೋ ನಮ್ಮನ್ನು ನೋಡಿ ಕೊಳ್ಳುತ್ತಿರುತ್ತಾರೆ, ಹೊಟ್ಟೆಗೆ ಹಾಕಿ ಸಲಹುತ್ತಾರೆ, ನಮ್ಮವರಾಗಿ ಬಿಡುತ್ತಾರೆ. ಈ ರೀತಿ ನಮಗೆ ಊಟ ಹಾಕಿ ಹೊಟ್ಟೆ ತಣಿಸಿದವರು ಅದೆಷ್ಟು ಮಂದಿಯೋ, ಒಂದೊಂದು ಊಟದ ರುಚಿಯನ್ನೂ ನಾನು ಮರೆತಿಲ್ಲ. ರಿಕ್ಷಾ ಚಾಲಕರಾದ ರವಿ, ''ಮೇಡಂ, ಈವತ್ತು ನಮ್ಮನೇಲಿ ಹೋಳಿಗೆ ಊಟ ಇದೆ, ಬನ್ರಿ..'', ಆರೀಫ್ ''ನಮ್ಮ ಮನೆ ಬಿರಿಯಾನಿ ರುಚಿ ನೋಡ್ರೀ'' ಅಂತ ಕರೆಯುತ್ತಿದ್ದರು. ರಮೇಶ್ ಗಬ್ಬೂರ್ ಮನೆಯಲ್ಲಿ ಮೀನಾಕ್ಷಿಯವರ ಘಮಘಮಿಸುವ ಚಟ್ನಿಗಳ ಚಪ್ಪರಿಸುವ ಅವಕಾಶ. ಕೋಮಲಾ ಕುದುರೆಮೋತಿ, ವಿಜಯಲಕ್ಷ್ಮಿ, ವಿಠ್ಠಪ್ಪ ಸರ್, ಅರುಣಾ ನರೇಂದ್ರ, ಮುಮ್ತಾಜ್ ಬೇಗಂ.. ಎಲ್ಲಿ ಕರೆದರೆ ಅಲ್ಲಿ ಹಾಜರ್.. ಹಳೆಯ ಗೆಳತಿಯರಾದ ಉಷಾ ಹಾಗೂ ಸಂಪತ್ ಮನೆ ಬೇಕಾದಾಗ ತೆರೆದಿರುತ್ತಿತ್ತು. ಒಂದು ದಿನ ನಮ್ಮ 'ಕೈಗೆ ಕೈ ಜೋಡಿಸೋಣ' ಕಲಾ ತಂಡಕ್ಕೆ ಒಂದು ಸಂಜೆ ಒಳ್ಳೆ ಕೋಳಿ ಊಟ

ಕೊಡಿಸಬೇಕು ಅನಿಸಿತ್ತು. ಸ್ವಲ್ಪ ತಡವಾಗಿತ್ತು. ಆದರೂ ಸಿಕ್ಕಿತು. ರಾಜಾಬಕ್ಷಿ ತಾವೇ ತಂದು, ''ರುಚಿ ನೋಡಿ ಹೇಳಿ, ನಮ್ಮ ಅಮ್ಮ ಮಾಡಿದ್ದು'' ಅಂತ ಹೆಮ್ಮೆಯಿಂದ ಹೇಳಿದ್ದೂ ಮರೆವಂತಿಲ್ಲ, ಚಪ್ಪರಿಸಿ ಉಂಡ ಅನುಭವವನ್ನೂ ಮರೆಯುವಂತಿಲ್ಲ.

★ ತುಂಬಾ ನೆಮ್ಮದಿಯ ವಿಷಯ ಎಂದರೆ ಒಂದೇ ಒಂದು ದಿನ ನಮ್ಮ ನಡುವೆ ಹೆಸರಿನ ವಿಚಾರಕ್ಕಾಗಲೀ ತಪ್ಪುನೆಪ್ಪಿನ ವಿಚಾರಕ್ಕಾಗಲೀ 'ನಾನು ನೀನು' ಅಂತ ಬರಲೇ ಇಲ್ಲ, ಯಾರು ಚಂದ ಮಾಡಿದರೂ ಅದು ಎಲ್ಲರ ಪಾಲು, ಯಾರು ತಪ್ಪು ಮಾಡಿದರೂ ಅದು ಎಲ್ಲರ ತಪ್ಪು, ಒಬ್ಬರನ್ನೊಬ್ಬರು ಆಡಿಕೊಂಡಿದ್ದಿಲ್ಲ.. ಬೆಟ್ಟು ಮಾಡಿದ್ದಿಲ್ಲ.. ಇಷ್ಟು ದೊಡ್ಡ ಕೆಲಸಗಳು ಆಗುವಾಗ ಅದೆಷ್ಟೋ ತಪ್ಪುಗಳು ನಡೆಯುತ್ತವೆ, ಅವನ್ನು ಪ್ರಬುದ್ಧವಾಗಿ ಸರಿಪಡಿಸಿಕೊಳ್ಳಬೇಕು. ಉದಾಹರಣೆಗೆ ಅತ್ಯಂತ ಆಪ್ತ ನೆಲೆಯಲ್ಲಿ ಕೆಲಸ ಮಾಡುತ್ತಿದ್ದ ಒಂದು ಸಂಸ್ಥೆಯ ಹೆಸರು ಕಣ್ತಪ್ಪಿನಿಂದ ಕರಪತ್ರದಲ್ಲಿ ಬಿಟ್ಟು ಹೋಗಿತ್ತು. ಅದನ್ನು ಅವರು ಮುಕ್ತವಾಗಿ ಹೇಳಿಕೊಂಡರು. ನಾವೂ ಕಣ್ತಪ್ಪಿನಿಂದ ಎಂದು ವಿಷಾದ ಸೂಚಿಸಿದೆವು. ಆದರೆ ಈ ಕಾರಣಕ್ಕಾಗಿ ಅವರು ಕೆಲಸದಿಂದ ಹಿಂದೆಗೆಯಲಿಲ್ಲ, ಮುನಿಸು ಮಾಡಿಕೊಂಡು ಕೂರಲಿಲ್ಲ. ಕೊನೆವರೆಗೂ ಪ್ರೀತಿಯಿಂದ ತೊಡಗಿಸಿಕೊಂಡರು. ಬಹುಶಃ 'ಹೊಟ್ಟೆಗೆ ಹಾಕಿಕೊಳ್ಳುವ' ಇಂಥ ಮನಃಸ್ಥಿತಿಯ ಸಂಗಾತಿಗಳೇ ಸಂಘಟನೆಯ ದೊಡ್ಡ ಶಕ್ತಿ.

ಸರಸ್ವತಿ ಬಹಳ ಅಭಿಮಾನದಿಂದ ''ನಮ್ಮದು ಕತ್ತೆಗಳ ಸಮಿತಿ, ಸಮಾನತೆಯ ನೆಲೆಯಲ್ಲಿ ಪ್ರೀತಿಯಿಂದ ಕೆಲಸ ಮಾಡುವ ಯಾರೇ ಆಗಲಿ ಸೇರಿಕೊಳ್ಳಬಹುದು'' ಅಂತ ಹೇಳುತ್ತಿರುತ್ತಾಳೆ. ಅದು ನಿಜ. ಕೆಲಸ ಮಾಡಿದ ಎಲ್ಲರಿಗೂ ತುಂಬು ತೃಪ್ತಿ, ಖುಶಿ ಸಿಕ್ಕದ್ದೇ ಇದರ ಸಾಧನೆ. ವಿವಿಧ ಹಿನ್ನೆಲೆಯ ಮಂದಿ ಸೇರಿದ್ದು, ''ಒಳಗೊಳ್ಳುವಿಕೆ'' ಸಾಧ್ಯವಾಗಿದ್ದು ಒಂದು ಸಾಧನೆ. ಎಲ್ಲಾ ತರಹದ ಮಂದಿಯನ್ನು ಒಂದೇ ಸೂರಿನಡಿಯಲ್ಲಿ ನೋಡಲು ಸಿಗುವುದು ಕಡಿಮೆ ಅಂತ ಸಂಗಾತಿ ಒಬ್ಬರು ಹೇಳಿಕೊಂಡರು. ಕೊಪ್ಪಳದಲ್ಲಿ ನಮ್ಮ ಒಕ್ಕೂಟದ ಬಳಗ ಉದ್ದಅಗಲಕ್ಕೆ ಬೆಳೆಯಲು ಸಾಧ್ಯವಾಗಿದ್ದು ಒಂದು ಸಾಧನೆ. ಈಗ ಕೊಪ್ಪಳಕ್ಕೆ ಹೋಗುವುದೆಂದರೆ ತವರು ಮನೆಗೆ ಹೋಗುವ ಹಾಗಿರುವ ಒಂದು ಅನುಭವ, ಸಂಭ್ರಮ. ನನ್ನ ಮಟ್ಟಿಗಂತೂ ಈ ಒಟ್ಟಾರೆ ಕೆಲಸದ ಒಂದೊಂದು ಕ್ಷಣವೂ ತಪಸ್ಸಿನ ಹಾಗೆ ಅನಿಸಿತ್ತು, ಜನರ ಪ್ರೀತಿ ವಿಶ್ವಾಸಗಳಿಗೆ ತಲೆಬಾಗುವ ಹಾಗೆ ಮಾಡಿತ್ತು. ಸಂಭ್ರಮದ ಪರಾಕಾಷ್ಠೆ ಅಂದರೆ ಬೀದಿಯಲ್ಲಿ ಆಜಾದಿ ಕೂಗಿನೊಂದಿಗೆ ಎಲ್ಲಾ ಮರೆತು ಎಲ್ಲವನ್ನೂ ಮೀರಿ ಹೆಜ್ಜೆ ಹಾಕಿದ್ದು, ತೀರಾ ಏಕತಾನತೆಯ ಕೆಲಸ ಅಂದರೆ ರಶೀದಿ ಬರೆದು ಹರಿಯುವುದು, ಲೆಕ್ಕಪತ್ರ ಸಿದ್ಧಪಡಿಸುವುದು. ನನಗೆ ಖುಶಿ ಎಂದರೆ ಈ ಎರಡೂ ಕೆಲಸಗಳನ್ನು ಆನಂದದಿಂದ ಮಾಡಿದ್ದೇನೆ. ಇಂತಹುದೇ ಆನಂದ ಅನೇಕಾನೇಕ ಮಂದಿ ತಮ್ಮ ತಮ್ಮದೇ ರೀತಿಯಲ್ಲಿ ಅನುಭವಿಸಿರಬಹುದು, ಪ್ರೀತಿಯ ಅನುಭೂತಿ ಒಂದಷ್ಟು ಹೃದಯದೊಳಗೆ ಆಗಿರಬಹುದು ಅನ್ನುವ ನಂಬಿಕೆ ನನ್ನದು.

ಈ ಎಲ್ಲ ನೆನಪುಗಳನ್ನು ಬರುವ ದಿನಗಳಿಗೆ, ಬರುವ ತಲೆಮಾರಿಗೆ, ಬರುವ ಕಾಲದ ಸಂಗಾತಿಗಳಿಗೆ ದಾಟಿಸುವುದು ಬಹುಮುಖ್ಯ ಎನಿಸಿದ್ದರಿಂದ ದಾಖಲೀಕರಣ ಸ್ವರೂಪದ ಈ ಹೊತ್ತಗೆ ರೂಪುಗೊಂಡಿದೆ. ಮಹಿಳಾ ದಿನಾಚರಣೆಯ ಸಂದರ್ಭ ನಡೆದ ಸೆಮಿನಾರ್, ಸಮಾವೇಶ, ಗೌರಿ ಸ್ಮರಣೆ ಕಾಲದಲ್ಲಿ ನಡೆದ ಚರ್ಚೆ-ಸಂವಾದ-ಭಾಷಣಗಳನ್ನು ಇಲ್ಲಿ ಬರಹ ರೂಪದಲ್ಲಿ ಪ್ರಕಟಿಸಲಾಗಿದೆ. ಕೊನೆಗೆ ಚಿತ್ರಸಂಪುಟವನ್ನೂ ಇಟ್ಟಿದ್ದೇವೆ. ಆದರೆ ಒಂದು ತಪ್ಪೊಪ್ಪಿಗೆ: ನಮ್ಮೆಲ್ಲ ಮುನ್ನೆಚ್ಚರಿಕೆಯ ಹೊರತಾಗಿಯೂ ಕಾರ್ಯಕ್ರಮಗಳ ಸಂಪೂರ್ಣ ಆಡಿಯೋ ರೆಕಾರ್ಡಿಂಗ್ ಸಿಗದೇ, ಮತ್ತೆ

ಕೆಲವರಿಂದ ಬರಹಗಳನ್ನು ಪಡೆದುಕೊಳ್ಳಲಾಗದೆ ಕೆಲವರ ಮಾತುಗಳ ಬರಹ ರೂಪ ಬಿಟ್ಟುಹೋಗಿರಬಹುದು. ಸಂಗಾತಿಗಳು ಅದನ್ನೆಲ್ಲ 'ಹೊಟ್ಟೆಗೆ ಹಾಕಿಕೊಳ್ಳುವರೆಂಬ' ಧೃಢ ನಂಬಿಕೆ ನಮ್ಮದು. ನಡೆದ ಎಲ್ಲ ಪ್ರಕ್ರಿಯೆಗಳಿಗೆ ಸಾಕ್ಷಿಯಾಗಿ ಈ ಹೊತ್ತಗೆಯನ್ನು ನಿಮ್ಮ ಕೈಗೆ ದಾಟಿಸುವ ಈ ಹೊತ್ತು ನಮ್ಮೊಡನಿರುವ, ನಮ್ಮೊಡನೆ ನಿಂತ ಎಲ್ಲ ಜೀವಗಳಿಗೂ ಶರಣು ಶರಣು..

## ಕಾರ್ಯಕ್ರಮ ವಿವರ

**ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ**

**ಮಹಿಳಾ ಅಧ್ಯಯನ ವಿಭಾಗ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ,** ವಿಜಯಪುರ

**ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಕೊಪ್ಪಳ ಮಾ. 8 ಮತ್ತು 9.**

**ವಿಚಾರ ಸಂಕಿರಣ - ಮಹಿಳೆ ಮತ್ತು ಪ್ರಜನನ ಹಕ್ಕುಗಳು**

**'ಜೊತೆಗೂಡಿ ನಡೆಯೋಣ' - ಪುಸ್ತಕ ಬಿಡುಗಡೆ**

**ಸ್ಥಳ: ಜಿಲ್ಲಾಡಳಿತ ಭವನದ ಸಭಾಂಗಣ, ಕೊಪ್ಪಳ, ತಾ 08-03-2017**

**ಉದ್ಘಾಟನಾ ಸಮಾರಂಭ : ಬೆ. 10-30**

**ಪ್ರಾಸ್ತಾವಿಕ ನುಡಿ:** ವಾಣಿ ಪೆರಿಯೋಡಿ

**ಸರ್ವರನ್ನು ಬರಮಾಡಿಕೊಳ್ಳುವವರು:** ಶ್ರೀ ವಿಠ್ಠಪ್ಪ ಗೋರಂಟ್ಲಿ

**ಉದ್ಘಾಟನೆ ಮತ್ತು ದಿಕ್ಸೂಚಿ ಮಾತು:** ರಂಜನಾ ಪಾಡಿ, ಒರಿಸ್ಸಾ

**ಪುಸ್ತಕ ಬಿಡುಗಡೆ - 'ಜೊತೆಗೂಡಿ ನಡೆಯೋಣ'** - ಬಾನು ಮುಷ್ತಾಕ್, ಹಾಸನ

**ಉಪಸ್ಥಿತಿ:** ಸಾವಿತ್ರಿ ಮುಜುಂದಾರ್, ಶಕುಂತಲಾ ಮಾಲಿ ಪಾಟೀಲ

**ಅಧ್ಯಕ್ಷತೆ:** ಶಾಂತಾದೇವಿ ಹಿರೇಮಠ

**ನಿರ್ವಹಣೆ:** ನಸ್ರೀನ್, ಶಿವಲೀಲಾ

**ವಿಚಾರ ಗೋಷ್ಠಿ:**

**ಗೋಷ್ಠಿ 1:** 1.30 –2.30, **ದೇವದಾಸಿ ಪದ್ಧತಿ - ಒಂದು ವಾಸ್ತವ :**

ಬಿ. ಮಾಳಮ್ಮ, ಬಳ್ಳಾರಿ, ಶೋಭಾ ಗಸ್ತಿ, ಘಟಪ್ರಭಾ

**ಗೋಷ್ಠಿ 2:** 2.30-3.30, **ಸ್ತ್ರೀಭ್ರೂಣ ಹತ್ಯೆ ಮತ್ತು ಶಿಶುಮರಣ -**

ನಂದಿನಿ, ಬೆಂಗಳೂರು , ಡಾ. ಸೋಮಕ್ಕ, ಗಂಗಾವತಿ

**ಗೋಷ್ಠಿ 3:** 3.30-4.30, **ಬಾಲ್ಯ ವಿವಾಹ: ಕಳೆದ ಕನಸುಗಳು -**

ಶೀಲಾ ರಾಮನಾಥನ್ ಪಣಜಿ , ಮೋಕ್ಷಮ್ಮ, ಸಿಂಧನೂರು

**ನಿರ್ವಹಣೆ:** ಆಶಾ, ಲಕ್ಷ್ಮಿದೇವಿ

**ಸಂಜೆ: 5.30 ರಿಂದ 6.30ರವರೆಗೆ**

**'ಬಿಳಿಯುಡುಪಿನಲ್ಲಿ ನಾವು', ಮೌನಜಾಗೃತಿ, ಅಶೋಕ ಸರ್ಕಲ್, ಕೊಪ್ಪಳ**

# ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ

ಸಮತೆಯೆಡೆಗೆ ನಮ್ಮ ನಡಿಗೆ

## ನಮ್ಮ ಮಗಳು ಜಗದ ಬೆಳಕು ನಮ್ಮ ದೇಹ ನಮ್ಮ ಹಕ್ಕು

## ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಕೊಪ್ಪಳ

**ತಾ. 9-03-17, ಹಕ್ಕೊತ್ತಾಯ ಜಾಥಾ ಮತ್ತು ಬೃಹತ್ ಸಾರ್ವಜನಿಕ ಸಮಾವೇಶ**

**ಬೆಳಿಗ್ಗೆ 11 ಘಂಟೆಗೆ, ಗವಿಸಿದ್ದೇಶ್ವರ ಮಠದ ಆವರಣದಿಂದ,**

**ಜಾಥಾ ಉದ್ಘಾಟನೆ :** ಗೋಗು ಶ್ಯಾಮಲ, ಖ್ಯಾತ ತೆಲುಗು ಲೇಖಕಿ

**ಜಾಥಾ ಚಾಲನೆ :** ಕವಿತಾ ಕೃಷ್ಣನ್, ಐಪ್ವಾ, ದೆಹಲಿ.

**ನಿರ್ವಹಣೆ :** ಕೆ. ವಿ. ನೇತ್ರಾವತಿ, ಸಂಪತ್ತುಕುಮಾರಿ

**ಜಾಥಾ ಮಾರ್ಗ :** ಗವಿಸಿದ್ದೇಶ್ವರ ಮಠದ ಮೈದಾನ – ಗಡಿಯಾರ ಕಂಬ – ಜವಾಹರ್ ರಸ್ತೆಯ ಅಶೋಕ ಸರ್ಕಲ್ – ಬಾಲಕಿಯರ ಸರ್ಕಾರಿ ಪ್ರೌಢಶಾಲೆ ಬಳಿಯ ಪಬ್ಲಿಕ್ ಗ್ರೌಂಡ್

**ಬಹಿರಂಗ ಸಾರ್ವಜನಿಕ ಸಭೆ – ಮಧ್ಯಾಹ್ನ 2.00**

**ಆಶಯ ಗೀತೆಗಳು :** ಸಾಂಸ್ಕೃತಿಕ ತಂಡದಿಂದ

**ಸರ್ವರನ್ನು ಬರಮಾಡಿಕೊಳ್ಳುವವರು :** ಜೆ. ಭಾರದ್ವಾಜ್

**ಆಶಯ ಮಾತು :** ದು. ಸರಸ್ವತಿ

**ದಿಕ್ಸೂಚಿ ಭಾಷಣ :** ಕವಿತಾ ಕೃಷ್ಣನ್

**ನಿರ್ಣಯ ಮಂಡನೆ :** ಅಖಿಲಾ ವಿದ್ಯಾಸಂದ್ರ

**ಉಪಸ್ಥಿತಿ :** ವಿಮಲಾ ಇನಾಂದಾರ್, ಸಂಧ್ಯಾ ಮಾದಿನೂರ್, ವಿದ್ಯಾ ಪಾಟೀಲ್, ಮಂಜಮ್ಮ ಜೋಗತಿ, ಪುಷ್ಪಾ ಮೇಸ್ತ್ರಿ ಮುಮ್ತಾಜ್ ಬೇಗಂ, ವಿಜಯಲಕ್ಷ್ಮಿ, ಕೋಮಲಾ ಕುದುರೆಮೋತಿ, ಯಮುನಾ ಜರಬಂಡಿ, ರೇಣುಕಾ ಉಪ್ಪಾರ ಗದಗ, ಸಲೀಮಾ, ಡಾ. ರಾಧಾ ಕುಲಕರ್ಣಿ, ಪಾರ್ವತಿ ದೇವಿ ಪಾಟೀಲ, ಮಾಯಮ್ಮ ಗಂಗಾವತಿ, ಲಕ್ಷ್ಮಿ, ಸರಸ್ವತಿ ಪಾಟೀಲ್, ಜಯಂತಿ, ಅರುಣಾ ನರೇಂದ್ರ, ಸರೋಜಾ ಬಾಕಳೆ, ನಿರ್ಮಲಾ ಬಳ್ಳೊಳ್ಳಿ, ಜಯಾ, ತಾಯಿರಾ, ರೇಣುಕಮ್ಮ ಸಂಗನಾಳ ಮತ್ತು ಸಮಾನ ಮನಸ್ಕ ಸಂಘ–ಸಂಸ್ಥೆಗಳ ಪ್ರತಿನಿಧಿಗಳು.

**ನಿರ್ವಹಣೆ :** ಮಲ್ಲಿಗೆ, ಮಂಜುಳಾ ಸುನಿಲ್

**ನಮ್ಮೊಡನೆ :**

ಕೊಪ್ಪಳದ ಎಲ್ಲ ಸಹೃದಯರು ಮತ್ತು ರಾಜ್ಯಾದ್ಯಂತ ಎಲ್ಲ ಕಡೆಗಳಿಂದ
ಬಂದ ಸಮಾನ ಮನಸ್ಕ ಸಂಗಾತಿಗಳು

**ಬನ್ನಿ, ಸಹಸ್ರಾರು ಸಂಖ್ಯೆಯಲ್ಲಿ ಪಾಲ್ಗೊಳ್ಳಿ..**

## ‘ಸ್ತ್ರೀವಾದವೆಂದರೆ..’

**– ರಂಜನಾ ಪಾಡಿ**

(ರೈತ ಆತ್ಮಹತ್ಯೆ ಸಂಭವಿಸಿದಾಗಲೆಲ್ಲ ಬೆಂಬಲ ಬೆಲೆ, ಬೆಳೆವಿಮೆ, ಸಾಲ–ಬಡ್ಡಿ ಮನ್ನಾ ಮೊದಲಾದ ವಿಷಯಗಳು ಮುನ್ನೆಲೆಯ ಚರ್ಚೆಗೆ ಬರುತ್ತವೆ. ಆದರೆ ಪಿತೃಪ್ರಧಾನ ಭಾರತೀಯ ಸಮಾಜದಲ್ಲಿ ಮಾರುಕಟ್ಟೆ ಸೃಷ್ಟಿಸಿರುವ ಕೃಷಿಬಿಕ್ಕಟ್ಟುಗಳನ್ನು ಆತ್ಮಹತ್ಯೆಯಾದ ರೈತಕುಟುಂಬದ ವಿಧವೆಯರ ದೃಷ್ಟಿಯಿಂದ ನೋಡಬೇಕು ಎಂದು ಒರಿಸ್ಸಾದ ಮಹಿಳಾ ಹೋರಾಟಗಾರ್ತಿ ರಂಜನಾ ಪಾಡಿ ಒತ್ತಾಯಿಸುತ್ತಾರೆ. ಮಾಳವಾದ 10 ಜಿಲ್ಲೆಗಳಲ್ಲಿ ಆತ್ಮಹತ್ಯೆ ಮಾಡಿಕೊಂಡ 125 ರೈತರ ಕುಟುಂಬಗಳ ವಿಸ್ತೃತ ಅಧ್ಯಯನ ನಡೆಸಿ ಅವರು ಬರೆದ ‘ದೋಸ್ ಹು ಡಿಡ್‌ನಾಟ್ ಡೈ’ ಪುಸ್ತಕವು ಕೃಷಿ ಬಿಕ್ಕಟ್ಟು ಕುರಿತ ಅನನ್ಯ ಒಳನೋಟಗಳನ್ನೊಳಗೊಂಡಿದೆ.

ಮಾಳವಾ ಪ್ರದೇಶ ಅತಿಹೆಚ್ಚು ರೈತ ಆತ್ಮಹತ್ಯೆಗಳಿಗೆ ಸಾಕ್ಷಿಯಾಗಿರುವ, ಅತಿಹೆಚ್ಚು ವಿಧವೆಯರಿರುವ ಪ್ರದೇಶ. ರೈತನ ವಿಧವೆ ಜೀವಮಾನವಿಡೀ ಏಕಾಂಗಿಯಾಗಿ ತಂದೆಯಿಲ್ಲದ ಕುಟುಂಬದ ಗಹನ ಜವಾಬ್ದಾರಿಗಳಿಗೆ ಹೆಗಲು ಕೊಡಬೇಕು. ಗಂಡ ಮಾಡಿಹೋದ ಸಾಲಕ್ಕೂ ಹೊಣೆಗಾರಳಾಗಬೇಕು. ಸಮಾಜ, ಸರಕಾರಗಳು ರೂಪಿಸುವ ಕೃಷಿನೀತಿಗಳಲ್ಲಿ ರೈತನ ವಿಧವೆಯ ಭಾವನಾತ್ಮಕ ಬಿಕ್ಕಟ್ಟುಗಳಿಗೆ ಯಾವ ಪರಿಹಾರವೂ ಇರುವುದಿಲ್ಲ. ಇಂಥವೆಲ್ಲ ವಿಷಯಗಳನ್ನು ತಮ್ಮ ಪುಸ್ತಕದಲ್ಲಿ ಚರ್ಚಿಸಿರುವ ರಂಜನಾ ಅವರನ್ನು ‘ಪ್ರಜಾವಾಣಿ’ಗಾಗಿ ಡಾ. ಎಚ್. ಎಸ್. ಅನುಪಮಾ ಮಾತನಾಡಿಸಿದ ಸಂದರ್ಶನ ಇಲ್ಲಿದೆ.)

**ಮಹಿಳಾ ಚಳುವಳಿ ನಿಮ್ಮನ್ನು ಸೆಳೆದದ್ದು ಹೇಗೆ?**

ನಾನು ಒರಿಸ್ಸಾದವಳು. 80ರ ದಶಕದ ಕೊನೆ ಭಾಗದಲ್ಲಿ ಸ್ನಾತಕೋತ್ತರ ಪದವಿಗೆ ಭುವನೇಶ್ವರ ಬಿಟ್ಟು ದೆಹಲಿ ಸೇರಿದೆ. ಆಗಲ್ಲಿ ಸಹೇಲಿ, ಮಾನುಷಿ ಮೊದಲಾದ ಮಹಿಳಾಗುಂಪುಗಳು ಶಾಬಾನೊ ಪ್ರಕರಣ, ವರದಕ್ಷಿಣೆ ವಿರೋಧಗಳ ಸುತ್ತ ತೀವ್ರ ಚರ್ಚೆ ಹುಟ್ಟುಹಾಕಿದ್ದವು. ಏಕವ್ಯಕ್ತಿ ನಾಯಕತ್ವಕ್ಕಿಂತ ಸಾಮೂಹಿಕ ಪ್ರಯತ್ನದಲ್ಲಿ ಹೆಚ್ಚು ನಂಬಿಕೆಯಿದ್ದುದರಿಂದ ಸ್ವಾಯತ್ತ ಸಂಘಟನೆ ‘ಸಹೇಲಿ’ ಸೇರಿದೆ. ಆಗ ಮಹಿಳಾ ಸಂಘಟನೆಗಳು ಪ್ರತಿಯೊಬ್ಬ ಮಹಿಳೆಗೂ ತಾನು ಮುಕ್ತಳಾಗುವುದು ಸಾಧ್ಯವಾದರೆ, ಸಮಷ್ಟಿಯಲ್ಲೂ ಮಹಿಳೆಗೆ ಅದೇ ವಾಸ್ತವವಾಗುವುದೆಂದು ನಂಬಿದ್ದವು. ಅಲ್ಲಿ ಕೊಂಚ ನಿರಾಸೆಯಾಯಿತೆಂದೇ ಹೇಳಬೇಕು. ಅಕ್ಯಾಡೆಮಿಕ್ ಸಭೆ, ಸಮಾರಂಭಗಳಿಗೆ ಹೋದರೆ ಮೆಥಡಾಲಜಿ, ತಾತ್ವಿಕತೆ ಮುಂತಾದ ಮಾತುಗಳು ತಲೆಚಿಟ್ಟು ಹಿಡಿಸುತ್ತಿದ್ದವು. ಇದೆಲ್ಲದರಿಂದ ಸಾಮಾನ್ಯ ಮಹಿಳೆಗೆ, ರೈತ ಮಹಿಳೆಗೆ ಏನುಪಯೋಗ ಎಂಬ ಪ್ರಶ್ನೆ ಒಳಗನ್ನು ಕೊರೆಯುತ್ತಿತ್ತು. ಅದನ್ನೇ ಅಲ್ಲಿದ್ದವರಿಗೂ ಕೇಳಿದರೆ ತಬ್ಬಿಬ್ಬುಗೊಳ್ಳುತ್ತಿದ್ದರು.

ಆಗ 'ಕ್ಲೀನ್ ಡೆಲ್ಲಿ, ಬ್ಯೂಟಿಫೈ ಡೆಲ್ಲಿ' ಅಭಿಯಾನ ನಡೆಯುತ್ತಿತ್ತು. ರಸ್ತೆಬದಿಯ ಬಸ್ತಿಗಳ ಜನರನ್ನು, ಸಂದುಗೊಂದುಗಳಲ್ಲಿ ವಾಸಿಸುತ್ತಿದ್ದವರನ್ನು ಒಕ್ಕಲೆಬ್ಬಿಸಿದರು. ಅಂಗೈಯಗಲದ ಗೂಡುಗಳಲ್ಲೇ ಬದುಕು ಕಟ್ಟಿಕೊಂಡವರು ಏಕಾಏಕಿ ಅತಂತ್ರವಾದರು. ಆ ವರ್ಷ ದೀಪಾವಳಿಯಂದು ರಸ್ತೆಗೆ ಬಿದ್ದ ಬಸ್ತಿಗಳ ಜನರ ಕೊನೆಮೊದಲಿರದ ಕಷ್ಟದ ಬದುಕು ಕಣ್ಣೆದುರು ತಂತಾನೇ ಅನಾವರಣಗೊಂಡಿತು. ಅದ್ಯಾವುದರ ಪರಿವೆಯೇ ಇಲ್ಲದ ಸಿರಿವಂತರ ದೆಹಲಿ ಸಿಲ್ಕ್ ಸ್ಯಾರಿ-ಕಟೋರಿ ಚೋಲಿ ತೊಟ್ಟು ಸಿಹಿಯುಂಡು, ಪಟಾಕಿ ಸುಟ್ಟು ಸಂಭ್ರಮಿಸಿತು. ನಾವು ಯಾರಿಗಾಗಿ ಹೋರಾಡುತ್ತಿದ್ದೇವೆ ಎಂದು ನನ್ನ ಮೇಲೆ ನನಗೇ ಅನುಮಾನವಾಯಿತು. ಜನಸಾಮಾನ್ಯ ಮಹಿಳೆಯರೊಡನೆಯೇ ಕೆಲಸ ಮಾಡಬೇಕೆಂಬ ನಿರ್ಧಾರ ಗಟ್ಟಿಯಾಯಿತು.

**ರೈತ ಸಮುದಾಯದತ್ತ ಗಮನ ಕೇಂದ್ರೀಕರಿಸಲು ಕಾರಣವೇನು?**

ವಿದರ್ಭ ಕುರಿತ ವರದಿಗಳು ಬರುತ್ತಿದ್ದವು. ದಕ್ಷಿಣದ ರಾಜ್ಯಗಳಲ್ಲೂ ರೈತ ಆತ್ಮಹತ್ಯೆ ಸಂಭವಿಸ ತೊಡಗಿದ್ದವು. 'ಹಸಿರುಕ್ರಾಂತಿ'ಯ ಪಂಜಾಬಿನಲ್ಲೂ ರೈತ ಆತ್ಮಹತ್ಯೆ ಆಗುತ್ತಿದ್ದವು. ದೆಹಲಿಗೆ ಹತ್ತಿರವಿದ್ದ ಪಂಜಾಬಿಗೆ 'ಪೈಲಟ್ ಸ್ಟಡಿ'ಗೆಂದು ಹೋದರೆ, ಭೇಟಿಯಾದ ಮಹಿಳೆಯರಲ್ಲಿ ಅರ್ಧಕ್ಕರ್ಧ ಜನ ನಿದ್ರೆ ಮಾತ್ರೆ ನುಂಗುತ್ತಿರುವುದಾಗಿ ಹೇಳಿದರು! ಒಂದು ಮನೆಯ ಪುಟ್ಟ ಹುಡುಗಿ ಬಹಳ ಹಚ್ಚಿಕೊಂಡಳು. ಹಿಂದೆಮುಂದೆ ಸುಳಿಯುತ್ತ ನನ್ನ ಮುಟ್ಟುತ್ತಿದ್ದಳು, ಪಕ್ಕವೇ ಕೂರುತ್ತಿದ್ದಳು, ಕೂದಲು ಸವರುತ್ತಿದ್ದಳು. ಕೊನೆಯ ದಿನ ತಾನೂ ನನ್ನ ಜೊತೆ ಬರುವೆನೆಂದು ಹಠ ಹಿಡಿದಳು. 'ನೀನು ಬಂದರೆ ಅಮ್ಮನ ಜೊತೆ ಯಾರಿರುತ್ತಾರೆ ಪುಟ್ಟಿ?' ಎಂದೆ. ಅವಳಮ್ಮ, 'ನನ್ನ ಜೊತೆ ಇದ್ದರೆ ನನ್ನಂತೇ ಆದಾಳು. ನಿನ್ನ ಜೊತೆಯಿದ್ದರೆ ನಿನ್ನಂತಾದರೂ ಆಗುತ್ತಿದ್ದಳೇನೋ' ಎಂದು ವಿಷಣ್ಣಳಾಗಿ ಹೇಳಿದಳು. ಒಬ್ಬ ತಾಯಿ ತನ್ನ ಬಗ್ಗೆ ತಾನು ಇದಕ್ಕಿಂತ ಅಸಹಾಯಕತೆ, ನೇತ್ಯಾತ್ಮಕ ಭಾವ ಹೊಂದಲು ಸಾಧ್ಯವೆ?

ನಿದ್ರಾಹೀನ, ವಿಷಣ್ಣ ತಾಯಂದಿರ ಕಂಡು ಇದು ಸಾಮಾನ್ಯ ಸಮಸ್ಯೆಯಾಗಿರಲಿಕ್ಕಿಲ್ಲ ಎನಿಸಿತು. ಜಾಗತೀಕರಣ, ಮುಕ್ತ ಮಾರುಕಟ್ಟೆ ತಂದೊಡ್ಡಿದ ಸಂಕಷ್ಟಗಳಿಗೆ ನಾವು ಮೂಕಸಾಕ್ಷಿಯಾದೆವೇ ಎಂಬ ಪಾಪಪ್ರಜ್ಞೆ ಆವರಿಸಿ ವಿಸ್ತೃತ ಅಧ್ಯಯನಕ್ಕೆಂದು ಪಂಜಾಬಿಗೆ ಹೊರಟುಬಿಟ್ಟೆ.

**ನೀವು ರೈತ ಕುಟುಂಬದಿಂದ ಬಂದವರೇ?**

ನಾನು ರೈತ ಕುಟುಂಬದವಳಲ್ಲ. ನಾನಷ್ಟೇ ಅಲ್ಲ, ಈಗ 'ಅಕ್ಷರವಂತ'ರೆನಿಸಿಕೊಂಡರಲ್ಲಿ ಬಹಳಷ್ಟು ಜನ ರೈತ ಕುಟುಂಬದವರಲ್ಲ. ಅದೇ 'ಯಾರ್‍ಯಾರ ತಾಯ್ತಂದೆಯರು ರೈತ ಕುಟುಂಬದವರು?' ಎಂದು ಕೇಳಿನೋಡಿ, ಒಂದಷ್ಟು ಜನ ಸಿಗುತ್ತಾರೆ. ಅಜ್ಜಿ-ಅಜ್ಜ ರೈತರಾಗಿರುವವರು ಹಲವಷ್ಟು ಜನ ಸಿಗುತ್ತಾರೆ. ಎಂದರೆ ಕೃಷಿ ನೆಚ್ಚಿದವರ ಸಂಖ್ಯೆ ಕಡಿಮೆಯಾಗುತ್ತಿರುವುದರ ಸೂಚನೆಯಿದು. ಆದರೆ ನಾವು ರೈತರೊಂದಿಗೆ ಕನೆಕ್ಟ್ ಆಗಲೇಬೇಕು. ಅನ್ನ ಬೆಳೆವ ರೈತನ ಸಮಸ್ಯೆ ಎಲ್ಲರಿಗೂ ಸಂಬಂಧಿಸಿದ್ದೆಂದು ತಿಳಿದುಕೊಳ್ಳಬೇಕು.

**ಕ್ಷೇತ್ರಕಾರ್ಯದ ವೇಳೆ ಮರೆಯಲಾಗದ ಕೆಲ ಸಂಗತಿಗಳು..?**

ವಿಧವೆಯರ ಸ್ಥಿತಿಗತಿಗೆ ಜಾತಿಯ ಕೊಡುಗೆಯೂ ಸಾಕಷ್ಟಿದೆ. ಜಾಟ್ ಸಿಖ್ ಮತ್ತು ದಲಿತ ರೈತ ವಿಧವೆಯರನ್ನು ಕಂಡಮೇಲೆ ದಮನದ ನೆಲೆಗಳು, ಹೊರದಾರಿಗಳು ಮತ್ತು ಅವರವರ ಶಕ್ತಿಗಳು ಭಿನ್ನ ಎಂದರಿವಾಯಿತು. ಜಾತಿ-ವರ್ಗ ಕುರಿತ ನನ್ನ ತಿಳುವಳಿಕೆ ಈ ಅಧ್ಯಯನ ಮಾಡುವಾಗ ಪುಷ್ಟೀಕರಿಸಲ್ಪಟ್ಟಿತು.

ಒಂದು ಮನೆಯಲ್ಲಿ ವಿಧವೆಯ ಬಳಿ ಒಳಮನೆಯಲ್ಲಿ ಎಲ್ಲ ಮಾತು ಮುಗಿಸಿದ್ದೆ. ತಲೆಬಾಗಿಲಲ್ಲಿ ಕೂತ ಮಾವ, 'ಎಲ್ಲ ಹೇಳಿದಳೇ?' ಎಂದರು. ಅದು ಆರೋಪವೋ, ವಿಚಾರಣೆಯೋ ತಿಳಿಯದೇ, 'ಅವಳು ಹೇಳಿದಳು. ನೀವೂ ಹೇಳಿ' ಎಂದೆ. ಅವರು ಮುಂಬಾಗಿ ಮೆಲುದನಿಯಲ್ಲಿ ಮಾತನಾಡತೊಡಗಿದರು: 'ಕೆಲಸ ಹುಡುಕುತ್ತ ನನ್ನ ಮಗ ಹಡಗು ಹತ್ತಿ ಕೆನಡಾಗೆ ಅಕ್ರಮ ವಲಸೆ ಹೊರಟಿದ್ದ. ದಾರಿಯಲ್ಲಿ ಡರ್ಬಾನಿನಲ್ಲಿ ಸಿಕ್ಕಿಕೊಂಡ. ಅಲ್ಲಿ ಗುರುದ್ವಾರದವರ ಕೈಗೆ ಸಿಕ್ಕು ಪುಣ್ಯವಶಾತ್ ಮರಳಿ ಬಂದ. ಬಂದಮೇಲೆ ಅವನು ಖಲಿಸ್ತಾನ್ ಟೆರರಿಸ್ಟ್ ಎಂದು ಬೆನ್ನುಹತ್ತಿದರು. ನನ್ನನ್ನು ಬಂಧಿಸಿ ಜೈಲಿಗೆ ಹಾಕಿದರು. ಕೊನೆಗೆ ವ್ಯವಸಾಯ ಶುರು ಮಾಡಿದ. ಕೈಹತ್ತಲಿಲ್ಲ. ಅವರೂ ಅವನ ಬೆನ್ನು ಬಿಡಲಿಲ್ಲ. ಅವನಿರುವಷ್ಟೂ ದಿನವೂ ಒಂದಿಲ್ಲ ಒಂದು ತೊಂದರೆ. ಕೊನೆಗೀಗ ಹೀಗೆ..'. ಮಾತಾಡುತ್ತ ಆಡುತ್ತ ಅಪ್ಪ ಗದ್ಗದರಾದರು.

ಒಂದೊಂದೂ ಬದುಕಿನ ಹಿಂದೆ, ಸಾವಿನ ಹಿಂದೆ ಅದೆಷ್ಟು ಗುಟ್ಟುಗಳು! ಒಳಸುಳಿಗಳು!!

ಇಂಥ ಎಷ್ಟನ್ನೋ ಪುಸ್ತಕದಲ್ಲಿ ದಾಖಲಿಸಲಾಗಿಲ್ಲ. ಆದರೆ ಅವು ಕಲಿಸಿದ ಪಾಠವನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ.

**ಬರಪೀಡಿತ, ಒಣನೆಲದ ಪ್ರದೇಶಗಳಿಗಿಂತ ನೀರಾವರಿ ಇರುವಲ್ಲೇ ರೈತ ಆತ್ಮಹತ್ಯೆ ಹೆಚ್ಚು ಸಂಭವಿಸುತ್ತಿದೆ. ಇದನ್ನು ಹೇಗೆ ಅರ್ಥೈಸುವಿರಿ?**

ನೀರಾವರಿ ಇರುವಲ್ಲಿ ಕೃಷಿಗೆ ಬಂಡವಾಳ ಹೂಡಿಕೆ ಇರುತ್ತದೆ. ಅಲ್ಲಿ ಜಮೀನೆಂದರೆ ಆಸ್ತಿ, ಅಂತಸ್ತು, ಶ್ರೇಣಿಯ ಸಂಕೇತ. ಜಾತಿ-ಲಿಂಗಗಳಿಗಿಂತ ಜಮೀನು ಕೊಡುವ ಅಂತಸ್ತೇ ದೊಡ್ಡ ಐಡೆಂಟಿಟಿ. ಕೊನೆಗೆ ಉತ್ಪಾದನೆಗಿಂತಲೂ ಭೂಮಿಯೇ ಹೆಮ್ಮೆಯ ಪ್ರತೀಕವಾಗಿಬಿಡುತ್ತದೆ. ಬಂಡವಾಳ ಒತ್ತಾಯಿಸುವ ಪುರುಸೊತ್ತಿಲ್ಲದ ಕೃಷಿಯ ದುಷ್ಪರಿಣಾಮಗಳು ಹೆಂಗಸರು, ಮಕ್ಕಳು, ಮುದುಕರು, ಕೃಷಿಕೂಲಿಗಳ ದಿನನಿತ್ಯದ ಬದುಕಿನಲ್ಲಿ ಆಗುತ್ತವೆ. ಇದು ಪುರುಷಪ್ರಾಧಾನ್ಯ ಹುಲುಸಾಗಿ ಬೆಳೆಯಲು ಇಂಬು ಕೊಟ್ಟು ಸ್ತ್ರೀಭ್ರೂಣ ಹತ್ಯೆ, ವರದಕ್ಷಿಣೆ ಪಿಡುಗು ಹೆಚ್ಚಲೂ ಕಾರಣವಾಗಿದೆ.

**ಕೃಷಿ ಬಿಕ್ಕಟ್ಟು ಕೊನೆಗೊಳಿಸುವುದು ಹೇಗೆ?**

ಸಾವಯವ ಕೃಷಿಯಿಂದ ಬೆಳೆ ಸಾಲ, ಬೀಜಸಾಲ ತಪ್ಪುತ್ತದೆ; ರೈತ ಆತ್ಮಹತ್ಯೆ ಕಡಿಮೆಯಾಗುತ್ತದೆನ್ನುತ್ತಾರೆ. ಆದರೆ ನನಗೆ ಹಾಗೆನಿಸುವುದಿಲ್ಲ. ಇಷ್ಟು ಬೃಹತ್ ದೇಶದ ಜನಸಂಖ್ಯೆಗೆ ಕೈಗೆಟುಕುವ ದರದಲ್ಲಿ ಪೌಷ್ಟಿಕಾಹಾರ ಒದಗಿಸುವುದು ಹಸಿರು ಕ್ರಾಂತಿಯ ನಂತರವೂ ಕಷ್ಟವಾಗಿರುವಾಗ ಆರೋಗ್ಯಕರ, ವೈಜ್ಞಾನಿಕ ಆಧುನಿಕ ಕೃಷಿಪದ್ಧತಿಯಷ್ಟೇ ಬಿಕ್ಕಟ್ಟಿಗೆ ಪರಿಹಾರವಾಗಬಲ್ಲದು. ಬಂಡವಾಳ ಕೃಷಿಯನ್ನು ಸರಕೀಕರಣಗೊಳಿಸಿದೆ. ಕೃಷಿ ಅತಿ ಯಾಂತ್ರೀಕರಣಗೊಂಡು, ಅನಗತ್ಯ ಖರ್ಚು ಸೃಷ್ಟಿಸಿ, ನಿರುದ್ಯೋಗಕ್ಕೆ ಕಾರಣವಾಗಿದೆ. ಅಧ್ಯಯನದ ವೇಳೆ ದಾಖಲಿಸಿರುವಂತೆ ಕೃಷಿ ಯಂತ್ರೋಪಕರಣಗಳಲ್ಲಿ 81% ಅನವಶ್ಯಕವಾಗಿವೆ. 19% ಮಾತ್ರ ಬಳಕೆಯಾಗುತ್ತಿವೆ. 19% ಯಂತ್ರೋಪಕರಣಗಳಿಗೆ; ವರದಕ್ಷಿಣೆ, ಅನಾರೋಗ್ಯ ಮತ್ತಿತರ ಸಮಸ್ಯೆಗಳಿಗೆ ರೈತರ ಬಹುಪಾಲು ಲಾಭ ಸೂರೆಗೊಂಡು ಅವರು ಸಾಲಗಾರರಾಗಿದ್ದಾರೆ. ಎಂದೇ ಕೃಷಿಯ ಯಾಂತ್ರೀಕರಣ ಕಡಿಮೆಯಾಗಬೇಕಿದೆ. ಬೃಹತ್ ಬಂಡವಾಳಗಾರರು, ವ್ಯಾಪಾರಿ-ದಲ್ಲಾಳಿಗಳಿರದ ರೈತಸ್ನೇಹಿ ಕೃಷಿನೀತಿ ಅವಶ್ಯವಾಗಿದೆ.

**ಮಹಿಳೆಯರ ಬಿಕ್ಕಟ್ಟುಗಳಿಗೆ ಪರಿಹಾರವೇನು?**

'ನೀನು ಹುಡುಗಿ, ಓದಿದ್ದು ಸಾಕು, ಗಂಡು ಸಿಗುವುದಿಲ್ಲ, ನಿನ್ನ ವರದಕ್ಷಿಣೆಗೆ ಹಣ ಕೂಡಿಡಬೇಕು' ಎನ್ನುವಂತಹ ಮಾತುಗಳು ಇವತ್ತಿಗೂ ಸಾಮಾನ್ಯವೇ ಆಗಿರುವಾಗ, ಜಾಗೃತಿಗಾಗಿ ಸಂಘಟಿತರಾಗುವುದೊಂದೇ ಮಹಿಳೆಯರಿಗಿರುವ ದಾರಿ. ಅದು ಇವತ್ತು ಆಗುತ್ತಿರುವ ರೀತಿಯಿಂದ, ಪ್ರಮಾಣದಿಂದ ಸಾಧ್ಯವಿಲ್ಲ. ಮಹಿಳಾ ಚಳುವಳಿಗೆ ಮಹಿಳೆಯರ ವ್ಯಕ್ತಿಗತ ಸಮಸ್ಯೆಗಳ ಬಗೆಗೆ ಗಮನ ಕಡಿಮೆಯಾಗುತ್ತಿದೆ ಎಂದು ನನಗೆ ಗಾಢ ಅಸಮಾಧಾನವಿದೆ. ನಾವು ಪಿತೃಪ್ರಾಧಾನ್ಯವನ್ನು ಸೂಕ್ತವಾಗಿ ಗುರುತಿಸಿದೆವು. ಸಮಾಜದ ಆಂತರಿಕ ರಚನೆ ಬದಲಾದರೆ ಎಲ್ಲವು ಸರಿಯಾಗುವುದೆಂದು ಹೋರಾಡಿದೆವು. ಆದರೆ ವರದಕ್ಷಿಣೆ ಆಗಲೂ ಇತ್ತು, ಈಗಲೂ ಇದೆ. ವರದಕ್ಷಿಣೆ ಬಗ್ಗೆ ನಾವು ಮಾತ್ರ ಮಾತನಾಡುವುದನ್ನೇ ನಿಲಿಸಿದ್ದೇವೆ. ನಮ್ಮ ಗ್ರಹಿಕೆ ವಿಶಾಲವಾಗುತ್ತ ಹೋದಂತೆ, ಹೆಣ್ಮಕ್ಕಳನ್ನು ಬುಡಮಟ್ಟ ಕಾಡುವ ಮೂಲಭೂತ ಪ್ರಶ್ನೆಗಳ ಕೈಬಿಟ್ಟು ಪಿತೃಪ್ರಾಧಾನ್ಯವೆಂಬ ಒಂದೇ ಎಳೆ ಹಿಡಿದು ಜಗ್ಗಾಡತೊಡಗಿದ್ದೇವೆ.

ಇವತ್ತು ಮಹಿಳಾ ಚಳುವಳಿಯ ದೊಡ್ಡ ಸಮಸ್ಯೆ ಎಂದರೆ ಅದು ಎನ್ಜಿಓಕರಣಗೊಂಡಿರುವುದು. ಎನ್ಜಿಓಗಳು ವ್ಯವಸ್ಥೆಯ ಆರ್ಥಿಕ, ರಾಜಕೀಯ ಲೋಪಗಳ ಕುರಿತು ಚರ್ಚಿಸುವ ಗೋಜಿಗೇ ಹೋಗುವುದಿಲ್ಲ. ಸರ್ಕಾರದ 'ಸ್ತ್ರೀಶಕ್ತಿ' ಕಾರ್ಯಕ್ರಮಗಳಾದರೋ ಹೆಣ್ಮಕ್ಕಳನ್ನು ಸುಮ್ಮನಿರಲು, ಇರುವಂತೇ ಇರಲು ಒತ್ತಾಯಿಸುತ್ತವೆಯೇ ಹೊರತು ಸಮಗ್ರ ಜಾಗೃತಿಗೆ ಕಾರಣವಾಗುತ್ತಿಲ್ಲ. ಎಂದೇ ಸಮಸಮಾಜ ಬಯಸುವ ಪ್ರಗತಿಪರ-ಪರಿಸರ-ಎಡಪಂಥೀಯ ಚಳುವಳಿಗಳೆಲ್ಲ ಮಹಿಳಾ ಸಮಸ್ಯೆಗಳನ್ನು ಮುಖ್ಯವೆಂದು, ತಮ್ಮದೆಂದು ಪರಿಗಣಿಸಬೇಕು. ಎಲ್ಲ ಸಮಸ್ಯೆಗಳ ಲಿಂಗಸಂಬಂಧಿ ಆಯಾಮ ಕುರಿತು ಚರ್ಚಿಸಬೇಕು. ಜೊತೆಗೆ ಮಹಿಳಾ ಚಿಂತನೆಯೂ ಎಲ್ಲ ವಾದಗಳ ಸತ್ವ ಹೀರಿ ಅದರಾಚೆ ಬೆಳೆಯಬೇಕು. ಕೊನೆಯ ಮಹಿಳೆ ಮುಕ್ತಳಾಗುವವರೆಗೂ, ನಡುರಾತ್ರಿಯೂ ಮಹಿಳೆ ನಿರ್ಭಯಳಾಗಿ ಓಡಾಡುವಂತೆ ಆಗುವವರೆಗೂ ಚಳುವಳಿ ಮುಂದುವರೆಯಬೇಕು. ಅದೊಂದೇ ಸಮತೆಯ ಕನಸನ್ನು ಬಿತ್ತುವ ಶಕ್ತಿಯಾಗಿದೆ.

ಮಾಳವಾದಲ್ಲಿ ಏಳನೇ ತರಗತಿಯ ಒಂದು ಹುಡುಗಿ ನನ್ನ ಹಿಂದೆಮುಂದೆ ಸುಳಿಯುತ್ತ ಮಾತು, ಬರವಣಿಗೆಗಳನ್ನು ಆಸಕ್ತಿಯಿಂದ ಗಮನಿಸುತ್ತಿದ್ದಳು. ಕೊನೆಯ ದಿವಸ 'ನೀನು ಮಹಿಳಾ ವಿಮೋಚನೆಗಾಗಿ ಕೆಲಸ ಮಾಡ್ತಿದೀಯಾ?' ಎಂದಳು. 12-13 ವರ್ಷದ ಹುಡುಗಿಯ ಬಾಯಿಯಲ್ಲಿ ಆ ಪದ ಕೇಳಿ ನನಗೋ ಅತ್ಯಾಶ್ಚರ್ಯ. ಅವಳಿಗದು ಹೇಗೆ ಗೊತ್ತಾಯಿತೆಂದು ಕೇಳಿದೆ. ತನಗೆ ಸಮಾಜ ಪುಸ್ತಕದಲ್ಲಿ ಹಾಗೊಂದು ಪಾಠ ಇದೆಯೆಂದು ಹೇಳಿದಳು.

ಪಠ್ಯದಲ್ಲಿ ಇಂಥ ಸೂಕ್ಷ್ಮವಿಷಯಗಳನ್ನಿಟ್ಟರೆ, ಬೆಳೆಯುವ ಹುಡುಗಹುಡುಗಿಯರಲ್ಲಿ ಸಮತೆಯ ಭಾವ ತುಂಬಿದರೆ, ನಮ್ಮ ನಾಳೆಗಳು ಹೇಗಿದ್ದಾವು, ಊಹಿಸಿಕೋ..

**ಸ್ತ್ರೀವಾದ ಎಂಬ ಪದ ಕೇಳಿದರೆ ಕೆಲವರಿಗೆ ಮೈಮೇಲೆ ಮುಳ್ಳುಗಳೇಳುತ್ತವೆ..**

ಲಿಂಗತಾರತಮ್ಯದ ಫಲಸುಖಾನುಭವಿಗಳು ಅವರು. ಅವರಿಗೆ ಹಾಗೆನಿಸುವುದು ಸಹಜ. ದಲಿತನೊಬ್ಬ ಮೇಲ್ಜಾತಿಯವರೆದುರು ತನ್ನ ಹಕ್ಕುಗಳ ಕೇಳಿದಾಗ ಯಾವ ವಿರೋಧ ಬರುವುದೋ, ಹೆಣ್ಣು ತನ್ನ ಹಕ್ಕುಗಳ ಕುರಿತು ಖಚಿತವಾಗಿ ಮಾತನಾಡತೊಡಗಿದಾಗಲೂ ಅದೇ ಆಗುತ್ತದೆ. ಆದರೆ ಸಮಾಜ ತಿಳಿಯಲಿ: ಸ್ತ್ರೀವಾದ ಎಂದರೆ ಮಹಿಳೆ ಗಂಡಸರಿಂದ ಅಧಿಕಾರ ಕಸಿಯುವುದಲ್ಲ, ಅಧಿಕಾರದ ವ್ಯಾಖ್ಯೆ ಬದಲಿಸುವುದು. ಸ್ತ್ರೀವಾದ ಎಂದರೆ ಪುರುಷ ವಿರೋಧವಲ್ಲ; ಸಮತೆಯ, ಘನತೆಯ ಬದುಕನ್ನು ಪ್ರತಿಪಾದಿಸುವುದು.

## ಸಾಯದೇ ಬದುಕುಳಿದವರು

**- ರಂಜನಾ ಪಾಡಿ**

(ಮಾರ್ಚ್ ತಿಂಗಳಲ್ಲಿ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದಿಂದ ಕೊಪ್ಪಳದಲ್ಲಿ ನಡೆದ ಮಹಿಳಾ ದಿನಾಚರಣೆಯನ್ನು ಉದ್ಘಾಟಿಸಲು ದೆಹಲಿಯಿಂದ ಲೇಖಕಿ ರಂಜನಾ ಪಾಡಿಯವರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಪಂಜಾಬಿನಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಸಾವಿನ ನಂತರ ಆ ಕುಟುಂಬಗಳ ಮಹಿಳೆಯರ ಬದುಕಿನ ಮೇಲೆ ಉಂಟಾದ ಪರಿಣಾಮವನ್ನು ಕುರಿತಂತೆ ಅಧ್ಯಯನ ನಡೆಸಿರುವ ರಂಜಿತ ಪಡಿಯವರ **''ದೋಸ್ ಹು ಡಿಡ್ ನಾಟ್ ಡೈ''** ಪುಸ್ತಕವು ನಮ್ಮ ದೇಶದ ಕೃಷಿ ಬಿಕ್ಕಟ್ಟಿನ ಸಮಸ್ಯೆಯನ್ನು ಲಿಂಗ ಸಂಬಂಧಿ ದೃಷ್ಟಿಕೋನದಿಂದ ನೋಡಿದ ವಿಶಿಷ್ಟ ಪ್ರಯತ್ನವಾಗಿದೆ. ಈ ಸಮ್ಮೇಳನದಲ್ಲಿ ಭಾಗವಹಿಸಿದ್ದ ಹೊಸತು ಸಂಪಾದಕ ಬಳಗದ ಶ್ರೀಮತಿ ಎನ್.ಗಾಯತ್ರಿಯವರು ವಿಶಿಷ್ಟ ಸ್ತ್ರೀವಾದಿ ಚಿಂತಕಿ ಮತ್ತು ಬರಹಗಾರ್ತಿ ರಂಜನಾ ಪಾಡಿಯವರನ್ನು ಹೊಸತು ಪತ್ರಿಕೆಗಾಗಿ ಸಂದರ್ಶಿಸಿದ್ದಾರೆ.)

**ಹೊಸತು :** ನಮಸ್ಕಾರ. ನಿಮ್ಮ **''ದೋಸ್ ಹು ಡಿಡ್ ನಾಟ್ ಡೈ''** ಪುಸ್ತಕ ಓದಿದೆ. ತುಂಬಾ ಚೆನ್ನಾಗಿದೆ. ಅರ್ಥಶಾಸ್ತ್ರದ ಹಿನ್ನೆಲೆಯಲ್ಲಿ ಮಹಿಳಾ ಪ್ರಶ್ನೆಯನ್ನು ಅರ್ಥೈಸಿದ್ದೀರ. ಈ ಸಂಬಂಧವಾಗಿ ನಿಮ್ಮೊಡನೆ ನಮ್ಮ ಪತ್ರಿಕೆಗಾಗಿ ಮಾತನಾಡಬೇಕೆನಿಸಿದೆ.

**ರಂಜನಾ:** ಸಂತೋಷ. ಕೇಳಿ.

**ಹೊಸತು:** ನೀವು ಒಬ್ಬ ಅಕೆಡೆಮಿಷಿಯನ್ ಆಗಿ ಈ ವಿಷಯದ ಅಧ್ಯಯನ ಮಾಡುವಾಗ ಸಾಮಾಜಿಕ ಕಾರ್ಯಕರ್ತೆಯ ಪಾತ್ರವನ್ನೂ ವಹಿಸಿದ್ದೀರ ಅಂತ ನನಗೆ ಅನ್ನಿಸುತ್ತಿದೆ. ಇದನ್ನು ಹೇಗೆ ನಿಭಾಯಿಸಿದಿರಿ?

**ರಂಜನಾ :** ನನ್ನದು ಅಕೆಡೆಮಿಷಿಯನ್ ಕೆಲಸ ಅಂತ ನಾನು ಅಂದುಕೊಂಡಿಲ್ಲ. ನನ್ನದು ಒಂದು ರೀತಿಯಲ್ಲಿ ವಸ್ತುಸ್ಥಿತಿಯ ಸತ್ಯ ಶೋಧನೆಯ ಕೆಲಸ. ನಂತರ, ಆ ವಾಸ್ತವಾಂಶಗಳನ್ನು ಆಧರಿಸಿ ಹುಟ್ಟಿಕೊಂಡದ್ದು ಅಧ್ಯಯನ. ನನಗೆ ಸೆಕೆಂಡರಿ ಡಾಟಾ ಇಟ್ಟುಕೊಂಡು ಅಧ್ಯಯನ ಮಾಡುವುದರಲ್ಲಿ ವಿಶ್ವಾಸವಿಲ್ಲ. ಇವತ್ತು ವಿಶ್ವವಿದ್ಯಾಲಯಗಳಲ್ಲೂ ಎಂಫೆರಿಕಲ್ ಅಧ್ಯಯನವನ್ನು ಪ್ರೋತ್ಸಾಹಿಸುವವರೇ ಇಲ್ಲ. ಚಳುವಳಿಯು ನಮಗೆ ವಸ್ತುಸ್ಥಿತಿಯ ಹಲವಾರು ಅನುಭವಗಳನ್ನು ಕೊಡುತ್ತದೆ. ನಾನು ನಡೆಸುವ ಕ್ಷೇತ್ರಕಾರ್ಯದ ಮಾಹಿತಿಗಳು ಮತ್ತು ಚಳುವಳಿಯಿಂದ ದಕ್ಕಿಸಿಕೊಂಡ ಅನುಭವದ ಆಧಾರದ ಮೇಲೆ ನನ್ನ ಅಧ್ಯಯನದ ಫಲಿತಗಳು ಇರುತ್ತವೆ.

**ಹೊಸತು :** ಇಂತಹ ಅಧ್ಯಯನಗಳನ್ನು ಕೈಗೊಳ್ಳುವುದಕ್ಕೆ ನಿಮ್ಮನ್ನು ಪ್ರೇರೇಪಿಸಿದ ಹಿನ್ನೆಲೆ ಯಾವುದು?

**ರಂಜನಾ :** ನಾನು ಒರಿಸ್ಸಾದವಳು. ನಮ್ಮ ತಂದೆ ಪ್ರಿಂಟಿಂಗ್ ಇಂಡಸ್ಟ್ರಿಯಲ್ಲಿ ಕೆಲಸ ಮಾಡಿದವರು.

ಶಿಕ್ಷಣದ ಮಹತ್ವವನ್ನು ಬಲ್ಲವರು. ಮಕ್ಕಳಿಗೆಲ್ಲಾ ಒಳ್ಳೆಯ ಶಿಕ್ಷಣವನ್ನು ಕೊಟ್ಟರು. ಮಕ್ಕಳೆಲ್ಲಾ ತಮ್ಮ ಅನ್ನ ತಾವೇ ಸಂಪಾದಿಸಿಕೊಳ್ಳಬೇಕೆಂದು ಬೋಧಿಸಿದವರು. ನಾನು ಸ್ನಾತಕೋತ್ತರ ಶಿಕ್ಷಣಕ್ಕೆಂದು ದೆಹಲಿಗೆ ಬಂದು ದೆಹಲಿ ವಿಶ್ವವಿದ್ಯಾಲಯದಲ್ಲಿ ಓದಿದೆ. ನಾನು ದೆಹಲಿಗೆ ಬಂದ ಕಾಲ ಮಹಿಳಾ ಚಳುವಳಿಯು ಉತ್ತುಂಗದಲ್ಲಿದ್ದ ಕಾಲ. ಸಹೇಲಿ, ಮಾನುಷಿಯಂತಹ ಮಹಿಳಾ ಗುಂಪುಗಳು ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸುತ್ತಿದ್ದ ಕಾಲ. ಶಾಬಾನೋ ಪ್ರಕರಣ, ವರದಕ್ಷಿಣೆ–ವಧುದಹನದ ಮತ್ತು ಅತ್ಯಾಚಾರ ಪ್ರಕರಣಗಳ ಸುತ್ತ ಮಹಿಳಾ ಪ್ರಶ್ನೆಯು ಕೇಂದ್ರೀಕೃತವಾಗಿದ್ದ ಕಾಲ. ನಾನು ಸಹೇಲಿಯ ಮೂಲಕ ಈ ಚಳುವಳಿಯ ಭಾಗವಾಗಲು ತೊಡಗಿಕೊಂಡೆ. ಇಲ್ಲಿ ನಾನು ಗಳಿಸಿದ ಅನುಭವ ಅಪಾರ. ಕ್ರಮೇಣ ಇದರಿಂದಲೂ ನಿರಾಸೆಯಾಗಲು ಆರಂಭಿಸಿತು. ಅಕೆಡೆಮಿಕ್ ಚರ್ಚೆಗಳಲ್ಲಿ ಬರೀ ಶಬ್ದಾಡಂಬರ ತುಂಬಿರುತ್ತಿತ್ತು. ಎಲ್ಲವೂ ಪರಿಕಲ್ಪನೆಯ ಚರ್ಚೆಯ ಹಂತದಲ್ಲಿಯೇ ನಿಂತುಹೋಗುತ್ತಿತ್ತು.

ಇದೇ ಸಮಯದಲ್ಲಿ ದೆಹಲಿಯಲ್ಲಿ 'ಕ್ಲೀನ್ ಡೆಲ್ಲಿ' ಚಳುವಳಿ ನಡೆಯುತ್ತಿತ್ತು. ನಗರವನ್ನು ಸುಂದರಗೊಳಿಸಬೇಕೆಂದು ಸ್ಲಂಗಳನ್ನು ಮತ್ತು ಹಾದಿಬೀದಿಗಳಲ್ಲಿ ವಾಸಿಸುತ್ತಿದ್ದವರನ್ನು ಒಕ್ಕಲೆಬ್ಬಿಸುತ್ತಿದ್ದರು. ಸಿರಿವಂತರು ತಮ್ಮ ಶೋಕಿಗಾಗಿ ಬಡವರ ಹೊಟ್ಟೆಯ ಮೇಲೆ ಹೊಡೆಯುವ ಈ ಪರಿಯನ್ನು ಕಂಡು ದಿಗ್ಭ್ರಾಂತಳಾದೆ. ಅದು ನನ್ನ ಕಣ್ಣು ತೆರೆಸಿತು. ಹಲವಾರು ವಾಸ್ತವಗಳನ್ನು ನನ್ನ ಮುಂದೆ ಹರಡಿತು. ಈ ಹಿನ್ನೆಲೆಯಲ್ಲಿ ನನ್ನ ಕೆಲಸ ಮುಂದುವರೆಸಿದೆ.

**ಹೊಸತು :** ನೀವು ಕೃಷಿಯ ಸಂಕಷ್ಟಗಳನ್ನು ಕುರಿತು ಅಧ್ಯಯನ ನಡೆಸಿದ್ದೀರಿ. ನೀವು ರೈತ ಕುಟುಂಬದಿಂದ ಬಂದವರೇ?

**ರಂಜನಾ :** ಇಲ್ಲ ನಾನು ರೈತ ಕುಟುಂಬದಿಂದ ಬಂದವಳಲ್ಲ. ಇಂದು ಅಕ್ಷರಸ್ಥರೆನಿಸಿಕೊಂಡ ಬಹುಮಂದಿ ರೈತ ಕುಟುಂಬದವರಾಗಿರುವುದಿಲ್ಲ. ಕೃಷಿಯನ್ನು ನೆಚ್ಚಿಕೊಂಡು ಬದುಕುತ್ತಿರುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಆದರೆ ಇಡೀ ದೇಶಕ್ಕೆ ಅನ್ನ ಕೊಡುವ ರೈತನ ಸಮಸ್ಯೆಯನ್ನು ಗಂಭೀರವಾಗಿ ತೆಗೆದುಕೊಳ್ಳದಿದ್ದರೆ ಹೇಗೆ? ತಮ್ಮ ಬೆಳೆಯನ್ನು ರಕ್ಷಿಸಲು ಬಳಸುವ ಕೀಟ ನಾಶಕಗಳನ್ನು ಸೇವಿಸಿ ತಮ್ಮ ಬದುಕನ್ನೇ ಕೊನೆಗೊಳಿಸಿಕೊಳ್ಳುತ್ತಿರುವ ರೈತರ ಬದುಕಿನ ದುರಂತತೆ ನನ್ನ ಮನಸ್ಸನ್ನು ಬಹುವಾಗಿ ಕಾಡಿತು. ಕುಟುಂಬದಲ್ಲಿ ಮನೆಯ ಯಜಮಾನನಾದ ರೈತನ ಆತ್ಮಹತ್ಯೆಯಾದ ನಂತರ ಅದು ಕುಟುಂಬದ ಇತರರ ಮೇಲೆ ಮಾಡುವ ಪರಿಣಾಮ ಮತ್ತು ಆ ಸ್ಥಿತಿಯನ್ನು ಕುಟುಂಬದ ಮಹಿಳೆಯರು ಎದುರಿಸುವ ರೀತಿ– ಈ ಎಲ್ಲ ಅಂಶಗಳು ನನ್ನನ್ನು ಚಿಂತನೆಗೆ ಹಚ್ಚಿತು. ಇವತ್ತು ಕೃಷಿಯ ಸಂಕಟದ ಬಗ್ಗೆ ಎಷ್ಟೋ ಅಧ್ಯಯನಗಳು ನಡೆದರೂ ಮಹಿಳೆಯರ ಮೇಲಿನ ಅದರ ಪರಿಣಾಮದ ಬಗ್ಗೆ ಅವು ಮೌನವಾಗಿಯೇ ಇರುತ್ತವೆ. ಈ ಮೌನವನ್ನು ಬೇಧಿಸುವುದೇ ನನ್ನ ಅಧ್ಯಯನದ ಗುರಿಯಾಗಿದೆ.

**ಹೊಸತು :** ಈ ಅಧ್ಯಯನಕ್ಕೆ ಪಂಜಾಬನ್ನೇ ಆರಿಸಿಕೊಂಡದ್ದಕ್ಕೆ ಏನಾದರೂ ವಿಶೇಷ ಕಾರಣವಿತ್ತೇ?

**ರಂಜನಾ :** ಮಹಾರಾಷ್ಟ್ರದ ವಿದರ್ಭದ ರೈತರ ಆತ್ಮಹತ್ಯೆಗಳು ದೊಡ್ಡ ಸುದ್ದಿಯಾಗಿರುತ್ತಿತ್ತು. ಕೇರಳದಿಂದ ಪಂಜಾಬಿನವರೆಗೆ ರೈತರ ಆತ್ಮಹತ್ಯೆ ಪ್ರಕರಣಗಳು ವರದಿಯಾಗುತ್ತಿದ್ದವು. ದೆಹಲಿಗೆ ಪಂಜಾಬ್ ಹತ್ತಿರವಾಗಿದ್ದುದು ಒಂದು ಮುಖ್ಯ ಕಾರಣವಾಗಿ ನಾನು ನನ್ನ ಅಧ್ಯಯನವನ್ನು ಪಂಜಾಬಿಗೆ ಸೀಮಿತಗೊಳಿಸಿಕೊಂಡೆ. ಅಲ್ಲದೆ, ನಮ್ಮ ದೇಶದ 'ಹಸಿರು ಕ್ರಾಂತಿ'ಯ ತೊಟ್ಟಿಲೆಂದೇ ಹೆಸರಾಗಿರುವ ಪಂಜಾಬು ಸಮೃದ್ಧಿಯ ಸಂಕೇತವೆಂಬ ಭ್ರಮೆಯನ್ನು ಇತ್ತೀಚಿನ ಘಟನೆಗಳು ಸುಳ್ಳಾಗಿಸಿವೆ, ಪ್ರಶ್ನಿಸುವಂತೆ ಮಾಡಿವೆ. 1984ರ ಸಿಖ್ ವಿರೋಧಿ ನರಮೇಧದಲ್ಲಿ ಸುಮಾರು 3000 ಜನರ

ಕಗ್ಗೊಲೆಯಾಗಿದ್ದು ಅದರ ಭೀಕರ ಪರಿಣಾಮಗಳನ್ನು ನಾವು ದೆಹಲಿಯಲ್ಲಿ ವಿದ್ಯಾರ್ಥಿ ದಿನಗಳಲ್ಲಿ ಓದಿ ತಿಳಿದಿದ್ದೆವು. ಅದರ ನಂತರದ ಪರಿಣಾಮಗಳು, ಆಪರೇಶನ್ ಬ್ಲೂಸ್ಟಾರ್ ಮತ್ತು ಜಾಗತೀಕರಣದ ಪರಿಣಾಮಗಳಿಂದ ಪಂಜಾಬಿನ ಜನಸಾಮಾನ್ಯರ ಜೀವನ ಸಂಕಷ್ಟಕ್ಕೆ ಸಿಲುಕಿತ್ತು. ಈ ಹಿನ್ನೆಲೆಯಲ್ಲಿ ನಾನು ಪಂಜಾಬಿಗೆ ಹೋಗಿ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳನ್ನು ಮಾತನಾಡಿಸಿ, ಅವರನ್ನು ಆವರಿಸಿರುವ ಆರ್ಥಿಕ ಸಂಕಷ್ಟಗಳನ್ನು ಕುರಿತು ಅಧ್ಯಯನ ಮಾಡಬೇಕೆಂದು ನಿರ್ಧರಿಸಿದೆ. ಅಲ್ಲದೆ ಈ ಪ್ರದೇಶದಲ್ಲಿ ಕೆಲಸ ಮಾಡುತ್ತಿರುವ ರೈತ ಸಂಘಟನೆಗಳ ನೆರವಿನೊಂದಿಗೆ ಅವರ ಸಮಸ್ಯೆಯ ವಿವಿಧ ಆಯಾಮಗಳನ್ನು ಅರ್ಥಮಾಡಿಕೊಳ್ಳುವುದು ನನ್ನ ಉದ್ದೇಶವಾಗಿತ್ತು. ಸಾಮಾಜಿಕ ತೊಡಗುವಿಕೆಯಲ್ಲಿ ಬರವಣಿಗೆ ಮತ್ತು ಕ್ರಿಯೆ – ಎರಡೂ ಮುಖ್ಯವಾದರೂ ಇವೆರಡರಲ್ಲಿ ನಾನು ಬರವಣಿಗೆಯನ್ನು ಆಯ್ದುಕೊಂಡಿರುವೆ.

**ಹೊಸತು :** ಪಂಜಾಬಿನ ಕೃಷಿ ಸಂಕಷ್ಟಗಳ ಕುರಿತ ನಿಮ್ಮ ಅಧ್ಯಯನದ ಬಗ್ಗೆ ಹೇಳಿ.

**ರಂಜನಾ :** ಸ್ತ್ರೀವಾದಿಯಾಗಿ, ನಾನು ಕೇಳಬಯಸುವ ಪ್ರಶ್ನೆಯೆಂದರೆ, ಇಂದಿನ ದಿನಗಳಲ್ಲಿ ಮಹಿಳಾ ಹೋರಾಟ ಎತ್ತ ಸಾಗಿದೆ? ಮಹಿಳಾ ಚಳುವಳಿಯ ಕಾಣ್ಕೆ ಎಲ್ಲಿ ಹೋಯಿತು? ಇಲ್ಲಿಯವರೆಗೂ ಮಹಿಳಾ ಚಳುವಳಿ ಗಳಿಸಿದ ಫಲ ಯಾರಿಗೆ ಸಿಕ್ಕಿದೆ? ಈ ಹಿನ್ನೆಲೆಯಲ್ಲಿ ಪಂಜಾಬಿನ ರೈತರ ಆತ್ಮಹತ್ಯೆಯ ಪ್ರಕರಣಗಳನ್ನು ಕುರಿತು ನಾನು ಚಿಂತಿಸಿದ್ದೇನೆ.

ಹಸಿರು ಕ್ರಾಂತಿಯ ಫಲಿತಗಳು ಎಲ್ಲಿ ಹೋದವು, ಅಂತ ಪ್ರಶ್ನಿಸಿಕೊಂಡರೆ ಆಶ್ಚರ್ಯವಾಗುತ್ತದೆ. ಕೆಲವೇ ಮಂದಿ ದೊಡ್ಡ ದೊಡ್ಡ ಜಮೀನುದಾರರು ಅಭಿವೃದ್ಧಿ ಹೊಂದಿದರು. ವಿದ್ಯಾ ಸಂಸ್ಥೆಗಳು ಮತ್ತು ಖಾಸಗಿ ನರ್ಸಿಂಗ್ ಹೋಮ್‌ಗಳು ನಾಯಿಕೊಡೆಗಳಂತೆ ಹುಟ್ಟಿಕೊಂಡವು . ಸಾರ್ವಜನಿಕ ಸೇವೆಯ ಸಂಸ್ಥೆಗಳನ್ನು ಮುರಿದು ಹಾಕಿದ್ದು ಕಾರ್ಮಿಕರು ಮತ್ತು ಬಡರೈತರ ಜೀವನಕ್ಕೆ ಭಾರಿ ಪೆಟ್ಟು ಕೊಟ್ಟಿತು. ಆತ್ಮಹತ್ಯೆ ಮಾಡಿಕೊಳ್ಳಲು ಹೋಗಿ ಸಫಲರಾಗದೇ ಉಳಿದು ಬಿಟ್ಟರೆ, ಚಿಕಿತ್ಸೆಗೆಂದು 70,000 ರೂಗಳು ಖರ್ಚಾಗುತ್ತವೆ. ಬಡತನ ಮತ್ತು ರೈತರ ಸಂಕಟದ ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಳ್ಳುವ ರಣಹದ್ದುಗಳು ಇವರು.

ಪಂಜಾಬಿನಲ್ಲಿ ಭಟಿಂಡಾ ಮತ್ತು ಸಂಗ್ರೂರ್ ಜಿಲ್ಲೆಯಲ್ಲಿ 2890 ರೈತರ ಆತ್ಮಹತ್ಯೆ ಪ್ರಕರಣಗಳು ನಡೆದಿವೆ. ಇದರಲ್ಲಿ ಶೇಕಡ 61 ಮಂದಿ ರೈತರಾದರೆ, ಶೇಕಡ 39 ಮಂದಿ ಕೃಷಿ ಕೂಲಿಕಾರರು. ಈ ಪ್ರಕರಣಗಳನ್ನು ಕೃಷಿಗೆ ಸಂಬಂಧಪಟ್ಟ ನೀತಿಯ ವೈಫಲ್ಯವನ್ನಾಗಿ ಗುರುತಿಸಲಾಗುತ್ತದೆ. ಆದರೆ ನನಗೆ ಇದನ್ನು ಇನ್ನೂ ಆಳವಾಗಿ ನೋಡಬೇಕೆನ್ನಿಸುತ್ತದೆ. ಆತ್ಮಹತ್ಯೆಗೆ ಮುಖ್ಯ ಕಾರಣ ಇಲ್ಲಿನ ರೈತರು ಸಾಲದ ಕೂಪದಲ್ಲಿ ಸಿಲುಕಿಕೊಂಡಿರುವುದು ಎನ್ನುವುದು ನಿಜವಾದರೂ ಈ ಸಾಲ ಮಾಡಿರುವುದು ಕೃಷಿಯ ಕಾರಣಕ್ಕಾಗಿ ಅಲ್ಲ, ಅಗೋಚರವಾಗಿರುವ ಕುಟುಂಬದ ನಿರೀಕ್ಷೆಗಳು ಮತ್ತು ಒತ್ತಡಗಳು ಇದರ ಹಿಂದಿವೆ. ಪಂಜಾಬಿನ ಸ್ಥಿತಿಯಿಂದ ನನಗೆ ಅನ್ನಿಸಿದ್ದು ಕುಟುಂಬಗಳು ಕೃಷಿಯನ್ನು ಅವಲಂಬಿಸಿರುವುದು ಅವರು ತಿನ್ನುವ ಆಹಾರಕ್ಕಾಗಿಯಲ್ಲದೆ, ಮಕ್ಕಳ ಶಿಕ್ಷಣ, ಕುಟುಂಬದ ಆರೋಗ್ಯ ಮತ್ತು ಹೆಣ್ಣುಮಕ್ಕಳ ಮದುವೆ ಇತ್ಯಾದಿಗಳ ಪೂರೈಕೆಗಾಗಿ. ಈ ಕ್ಷೇತ್ರಗಳೆಲ್ಲಾ ವಾಣಿಜ್ಯೀಕರಣಗೊಂಡು ಸಮಸ್ಯೆ ಬಿಗಡಾಯಿಸಿದೆ.

**ಹೊಸತು :** ನಿಮ್ಮ ಅಧ್ಯಯನದ ಸಂದರ್ಭದಲ್ಲಿ 'ಪಿತೃಪ್ರಾಧಾನ್ಯತೆ' ಯ ಪರಿಕಲ್ಪನೆಗೆ ವಿಸ್ತಾರವನ್ನು ಒದಗಿಸಿದ್ದೀರ. ಅದನ್ನು ಸ್ವಲ್ಪ ವಿವರಿಸುತ್ತೀರ.

**ರಂಜನಾ :** ಪಿತೃಪ್ರಾಧಾನ್ಯತೆಯು ಹೆಣ್ಣಿನ ಶೋಷಣೆಯ ಮೂಲವೆನ್ನುವುದು ನಿಜವಾದರೂ

ಹೆಂಗಸಿನಷ್ಟೇ ಗಂಡಸಿಗೂ ಅದು ಹೊರೆಯಾಗಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಕುಟುಂಬದ ಜವಾಬ್ದಾರಿಯನ್ನು ಹೊರುವುದು ಗಂಡಸುತನದ ಲಕ್ಷಣವೆಂಬ ಭಾವನೆಯನ್ನು ನಮ್ಮ ಸಮಾಜದಲ್ಲಿ ಹುಟ್ಟುಹಾಕಲಾಗಿದೆ. ಮನೆಯ ಯಜಮಾನನೆನಿಸಿಕೊಂಡ ಗಂಡಸು, ತಂದೆಯಾಗಿರಲಿ, ಗಂಡನಾಗಿರಲಿ ಇಲ್ಲವೆ ಅಣ್ಣನಾಗಿರಲಿ ಮನೆಯ ಸಮಸ್ತ ಹೊರೆಯನ್ನು ಹೊರುವುದು ತನ್ನ ಕರ್ತವ್ಯ ಮತ್ತು ಹೆಮ್ಮೆಯೆಂದು ಭಾವಿಸುತ್ತಾನೆ. ಕುಟುಂಬದ ಅಗತ್ಯಗಳಿಗೆ ಸ್ಪಂದಿಸಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾದಾಗ, ಅವನ 'ಕರ್ಮದಾತ'ನ ಚಿತ್ರಣಕ್ಕೆ ಭಂಗ ಬಂದಾಗ ಅವನಿಗೆ ಬದುಕಿನಲ್ಲಿ ಸೋತೆ ಎಂದೆನಿಸುವುದು, ಜೀವನದ ನಿರರ್ಥಕತೆಯನ್ನು ಅನುಭವಿಸುವುದು ಮತ್ತು ಅವನ ಹೆಮ್ಮೆಯ ಬೆಲೂನು ಚುಚ್ಚಿ ಗಾಯವಾಗಿ ನರಳುವಂತಹ ಸ್ಥಿತಿ ನಿರ್ಮಾಣವಾಗುತ್ತದೆ. ಮನೆಯ ಗಂಡಸರನ್ನು ಆತ್ಮಹತ್ಯೆಗೆ ದೂಡುವ ಸನ್ನಿವೇಶ ನಿರ್ಮಾಣವಾಗುತ್ತದೆ. ಆತ್ಮಹತ್ಯೆಯ ಕಾರಣಗಳು ಸರಳವಾಗಿರುವುದಿಲ್ಲ, ಅದಕ್ಕೆ ಹಲವಾರು ಹೊದಿಕೆಗಳಿರುತ್ತವೆ. ಕೆಲವೊಮ್ಮೆ ಮಾಡಿದ ಸಾಲಕ್ಕಾಗಿ ತಮ್ಮ ಭೂಮಿಯನ್ನು ಮಾರಿಕೊಂಡು ಭೂರಹಿತರಾಗುವ ಸಂದರ್ಭಗಳೂ ಉಂಟು. ಇದು ಕುಟುಂಬದ 'ಇಜ್ಜತ್'ನ ಪ್ರಶ್ನೆಯೂ ಆಗಿಬಿಡುತ್ತದೆ. ಎಷ್ಟೋ ಬಾರಿ ಕುಟುಂಬದ ಹೆಂಗಸರಿಗೆ ಗಂಡಸರ ಸಾಲದ ಹೊರೆಯ ಬಾಹುಳ್ಯ ಅರ್ಥವಾಗುವುದು ಅವರು ಸತ್ತ ನಂತರವೇ. ಪುರುಷರು ತಮ್ಮ ಪುರುಷತ್ವದ ಹೆಮ್ಮೆಯನ್ನು ಕಾಯ್ದುಕೊಳ್ಳಲು ತಮ್ಮ ಹಣಕಾಸು ತಾಪತ್ರಯಮವನ್ನು ಮನೆಯ ಹೆಂಗಸರಿಂದ ಮುಚ್ಚಿಡುತ್ತಾರೆ.

ಪಿತೃಪ್ರಾಧಾನ್ಯತೆಯ ವಿರುದ್ಧದ ಹೋರಾಟವೆಂದರೆ, ಮಹಿಳೆಯರ ಶ್ರಮ ಮತ್ತು ಲೈಂಗಿಕತೆಯೆಲ್ಲದರ ಮೇಲಿನ ನಿಯಂತ್ರಣ ಸಾಧಿಸಿ ಶೋಷಣೆ ಮಾಡುತ್ತಿರುವ ಶಕ್ತಿಗಳ ವಿರುದ್ಧದ ಹೋರಾಟ. ಮಹಿಳಾ ಚಳುವಳಿ ಇದನ್ನು ಅಂತರ್ಗತಗೊಳಿಸಿಕೊಂಡರೆ ಮಾತ್ರ ನಾವು ಅರ್ಥಪೂರ್ಣವಾದುದನ್ನು ಸಾಧಿಸಲು ಸಾಧ್ಯವಾಗುತ್ತದೆ. ಕೃಷಿಕರು ಎಂದರೆ ಇಡೀ ಕುಟುಂಬ ಕೃಷಿಯಲ್ಲಿ ಮುಳುಗಿರುತ್ತದೆ. ಗಂಡು, ಹೆಣ್ಣು ಮತ್ತು ಮಕ್ಕಳು ಎಲ್ಲರು ಕೃಷಿಗೆ ಸಂಬಂಧಿಸಿದ ಕೆಲಸಗಳನ್ನು ಮಾಡುತ್ತಿರುತ್ತಾರೆ ಮತ್ತು ಅದರ ಆದಾಯದ ಮೇಲೆಯೇ ಜೀವಿಸುತ್ತಿರುತ್ತಾರೆ. ಹೀಗಿರುವಾಗ ಕೃಷಿ ಎಂದಾಗ ಅದು ಪುರುಷರ ಲೋಕ ಎಂದು ಭಾವಿಸುತ್ತಾ, ಅದರ ಸಮಸ್ಯೆಗಳನ್ನು ಏಕಮುಖವಾಗಿ ಚರ್ಚಿಸುವುದೇ ಹಾಸ್ಯಾಸ್ಪದ. ರೈತ ಸಂಘಟನೆಗಳು ವಾಣಿಜ್ಯೀಕರಣಗೊಂಡಿರುವ ಕೃಷಿಯ ವಿರುದ್ಧ ಹೋರಾಟ ನಡೆಸುತ್ತಾರೆಯೇ ಹೊರತು ಮನೆಯ ಒಳಗೆ ಮತ್ತು ಹೊರಗೆ ಆವರಿಸಿರುವ ಒಟ್ಟು ವ್ಯವಸ್ಥೆಯಲ್ಲಿ ಪಿತೃಪ್ರಾಧಾನ್ಯತೆಯ ಸಮಸ್ಯೆಗಳನ್ನು ಯಾಕೆ ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ ಎಂಬುದು ನನ್ನ ಪ್ರಶ್ನೆ.

**ಹೊಸತು :** ಈ ಸಂಬಂಧವಾಗಿ ನೀವು ನಡೆಸಿದ ಕ್ಷೇತ್ರ ಕಾರ್ಯದ ಬಗ್ಗೆ ಸ್ವಲ್ಪ ವಿವರಿಸುತ್ತೀರ?

**ರಂಜನಾ :** ನಾನು ಸುಮಾರು ಎಂಟು ಜಿಲ್ಲೆಗಳ ನೂರೈವತ್ತು ಕುಟುಂಬಗಳನ್ನು ಭೇಟಿಯಾಗಿ ಮಾತನಾಡಿಸಿದೆ. ಪಂಜಾಬಿನಲ್ಲಿ ಇವರನ್ನು 'ಆತ್ಮಹತ್ಯೆ ಕುಟುಂಬ'ಗಳೆಂದೇ ಕರೆಯುತ್ತಾರೆ. ಇವುಗಳಲ್ಲಿ ಬಹುಪಾಲು 'ನ್ಯೂಕ್ಲಿಯರ್' ಕುಟುಂಬಗಳು ಮತ್ತು ಆತ್ಮಹತ್ಯೆ ಮಾಡಿಕೊಂಡವರೆಲ್ಲಾ ಪುರುಷರೇ. ಕೂಡು ಕುಟುಂಬಗಳಾಗಿದ್ದರೆ ಸಾಲಗಾರರ ಒತ್ತಡವನ್ನು ತಡೆಯಲು ಸ್ವಲ್ಪವಾದರೂ ಸಾಧ್ಯವಾಗಿರುತ್ತಿತ್ತೇನೋ! ಶೇಕಡ 67.6ರಷ್ಟು ಮಹಿಳೆಯರು ಹೆಂಡತಿಯರು, ಶೇಕಡ 20.6ರಷ್ಟು ಮಂದಿ ತಾಯಿಯರು ಮತ್ತು ಉಳಿದ ಮನೆಗಳಲ್ಲಿ ಇತರ ಹೆಣ್ಣು ಮಕ್ಕಳನ್ನು ಮಾತನಾಡಿಸಿರುವೆ. ನಾನು ಮಾತನಾಡಿಸಿದ ಬಹುಮಂದಿ ಚಿಕ್ಕ ವಯಸ್ಸಿನವರೇ. ಒಟ್ಟು ಸರಾಸರಿ ವಯಸ್ಸು 46 ವರ್ಷಗಳು. ಮನೆಯ ಗಂಡಸಿನ ಸಾವಿನ ನಂತರ ಸಾಲದ ಒತ್ತಡ, ಮಾರುಕಟ್ಟೆಯಲ್ಲಿ ಬೆಲೆ ಏರಿಕೆ ಮತ್ತು ಬಡ್ಡಿ ವ್ಯಾಪಾರಿಗಳ ದುಂಡಾವರ್ತಿ ಇವುಗಳಿಂದ ನೊಂದು ಬೆಂದಿದ್ದರು. ಅವರೊಡನೆ ನಡೆಸಿದ ಸಂದರ್ಶನ

ಗಳು ಹಲವಾರು ಸಂಗತಿಗಳನ್ನು ಬಯಲಿಗೆಳೆಯಿತು. ನನ್ನ ಅಧ್ಯಯನದ ಪ್ರಯತ್ನದಲ್ಲಿ ನಾನು ರೈತ ಸಂಘಟನೆಗಳ ನೆರವನ್ನು ಬಹಳ ಪಡೆದುಕೊಂಡೆ.

ಕೃಷಿಕ ಸಮಾಜದ ಊಳಿಗಮಾನ್ಯ ಮೌಲ್ಯಗಳು, ನವ ವಸಾಹತೀಕರಣ ಹುಟ್ಟುಹಾಕಿರುವ ಬಂಡವಾಳಶಾಹಿಯ ಗಧಾ ಪ್ರಹಾರ, ರಾಜ್ಯ ಮತ್ತು ಕೇಂದ್ರ ಸರ್ಕಾರದ ಜನವಿರೋಧಿ ನೀತಿಗಳು ಮತ್ತು ಕಾರ್ಯಕ್ರಮಗಳು ಒಟ್ಟಾಗಿ ಶೋಷಣೆಯ ಶಕ್ತಿಗಳಾಗಿ ಕೆಲಸ ಮಾಡಿವೆ. ಔದ್ಯೋಗೀಕರಣದ ದಬ್ಬಾಳಿಕೆಯಿಂದ ಕೃಷಿ ಭೂಮಿ, ಗಣಿಗಳು ಮತ್ತು ಕಾಡುಗಳು ಗುಳುಂ ಆಗುತ್ತಿವೆ. ಆದಿವಾಸಿಗಳು, ದಲಿತರು ಮತ್ತು ಹಿಂದುಳಿದ ವರ್ಗದ ಜನರ ಜೀವನೋಪಾಯವಾಗಿದ್ದ ನೆಲ ಮತ್ತು ಪ್ರಾಕೃತಿಕ ಸಂಪತ್ತುಗಳ ಲೂಟಿಯಾಗುತ್ತಿವೆ. ಕೃಷಿ ವ್ಯವಸ್ಥೆಯೇ ಸಂಪೂರ್ಣವಾಗಿ ಮುರಿದು ಬಿದ್ದು ರೈತರ ಆತ್ಮಹತ್ಯೆಯು ಈ ರೋಗದ ಸೂಚಕವಾಗಿದೆ.

ಮತ್ತೊಂದು ಗಮನಿಸಬೇಕಾದ ಅಂಶವೆಂದರೆ, ಸಮರ್ಪಕವಾದ, ಕೈಗೆಟುಕುವ ಆರೋಗ್ಯ ವ್ಯವಸ್ಥೆ ಇಲ್ಲದಿರುವುದು ಸಮಸ್ಯೆಯನ್ನು ಮತ್ತಷ್ಟು ಹೆಚ್ಚಿಸಿದೆ. ಭಾಟಿಂಡಾ ನಿಲ್ದಾಣದಿಂದ ಬಿಕನೇರ್‌ಗೆ ಪ್ರತಿರಾತ್ರಿ ಹೊರಡುವ ''ಕ್ಯಾನ್ಸರ್ ಎಕ್ಸ್‌ಪ್ರೆಸ್'' ಹಸಿರುಕ್ರಾಂತಿಯ ವಿಕಾರದ ಸೂಚಕ. ಹತ್ತಿ ಹೆಚ್ಚು ಬೆಳೆಯುವ ಭಾಟಿಂಡಾ, ಮಾನ್ಸಾ ಮತ್ತು ಫರೀದ್ ಕೋಟ್‌ನಲ್ಲಿ ಅತ್ಯಂತ ಹೆಚ್ಚು ಸಂಖ್ಯೆಯ ಕ್ಯಾನ್ಸರ್ ರೋಗಿಗಳಿರುವುದು ವರದಿಯಾಗಿದೆ. ಈ ಪ್ರದೇಶಗಳಲ್ಲಿ ಬಳಸಲಾಗುವ ಕ್ರಿಮಿನಾಶಕಗಳ ಪರಿಣಾಮವಾಗಿ ಈ ಪ್ರದೇಶಗಳಲ್ಲಿ ಕ್ಯಾನ್ಸರ್ ರೋಗಿಗಳ ಸಂಖ್ಯೆ ಹೆಚ್ಚಿದೆ. ರಾಜ್ಯ ಸರ್ಕಾರಕ್ಕೆ ನಾಚಿಕೆಯಿಲ್ಲ. ಈ ರಾಜ್ಯದಲ್ಲಿ ಕ್ಯಾನ್ಸರ್ ಆಸ್ಪತ್ರೆಯಿಲ್ಲ. ಇಲ್ಲಿನ ರೋಗಿಗಳು ಭಾಟಿಂಡಾದಲ್ಲಿರುವ ಕ್ಯಾನ್ಸರ್ ಆಸ್ಪತ್ರೆಗೇ ಹೋಗಬೇಕು.

**ಹೊಸತು :** ಈ ಆತ್ಮಹತ್ಯೆಯ ಕುಟುಂಬದಲ್ಲಿ ಬದುಕುಳಿದವರು ಯಾವ ರೀತಿಯಲ್ಲಿ ಜೀವನವನ್ನು ಕಟ್ಟಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ? ಸಂಘಟನೆಗಳು ಯಾವ ರೀತಿಯಲ್ಲಿ ಕೆಲಸ ಮಾಡುತ್ತಿವೆ?

**ರಂಜನಾ :** ಕುಟುಂಬದಲ್ಲಿ ಗಂಡಸಿನ ಆತ್ಮಹತ್ಯೆಯ ನಂತರದಲ್ಲಿ ಹೆಂಗಸರು ಯಾರೂ ತಮ್ಮ ಜೀವನವನ್ನು ಕೊನೆಗಾಣಿಸಿಕೊಂಡಿಲ್ಲ. ಆದರೆ ನಂತರದ ಅವರ ಬದುಕು ಕಠಿಣವಾಗಿದೆ. ಮನೆಯ ಗಂಡಸರು ಮಾಡಿದ್ದ ಸಾಲದ ಹೊರೆಯನ್ನು ಬೆನ್ನಲ್ಲಿ ಕಟ್ಟಿಕೊಂಡೇ ದಿನನಿತ್ಯದ ಬದುಕನ್ನು ನಡೆಸಬೇಕಿದೆ. ಜೊತೆಗೆ ರೈತ ಸಂಘಟನೆಗಳು ಮತ್ತು ಎಡ ಸಂಘಟನೆಗಳು ಈ ದಿಕ್ಕಿನಲ್ಲಿ ಕಾರ್ಯಕ್ರಮಗಳನ್ನು ನಡೆಸಿದ್ದಾರೆ. ಉದ್ಯೋಗ ಮತ್ತು ತಲೆಯ ಮೇಲೊಂದು ಸೂರಿಗಾಗಿ ಕೃಷಿಕೂಲಿಗಾರರು ಮೇ 2009ರಲ್ಲಿ ಮಾನ್ಸಾ, ಸಂಗ್ರೂರ್ ಮತ್ತು ಭಾಟಿಂಡಾದಲ್ಲಿ ಪ್ರತಿಭಟನೆ ನಡೆಸಿದಾಗ ಪಂಜಾಬ್ ಸರ್ಕಾರವು 1,300 ಕೂಲಿಗಾರರನ್ನು, 511 ಮಹಿಳೆಯರನ್ನು ಮತ್ತು 42 ಮಕ್ಕಳನ್ನು ಜೈಲಿಗಟ್ಟಿತ್ತು. ಆ ಸರ್ಕಾರವು ನರೇಗಾ ಯೋಜನೆಯಡಿ ಖರ್ಚು ಮಾಡಬೇಕಿದ್ದ 350 ಕೋಟಿ ರೂಪಾಯಿಗಳನ್ನು ಬಳಸಿಕೊಳ್ಳದೆ ಕೇಂದ್ರ ಸರ್ಕಾರಕ್ಕೆ ಹಿಂದಿರುಗಿಸಿದಾಗ ಒಂದು ದೊಡ್ಡಮಟ್ಟದ ಪ್ರತಿಭಟನೆಯೇ ನಡೆಯಿತು. ಜಾಗರಣ ಸಾರ್ವಜನಿಕ ಸಭೆಗಳಲ್ಲಿ ಮಹಿಳಾ ಪ್ರತಿಭಟನಾಕಾರರ ಸಂಖ್ಯೆ ಬೃಹತ್ ಸಂಖ್ಯೆಯಲ್ಲಿತ್ತು. ಕುಟುಂಬದ ದೈನಿಕ ಅಗತ್ಯಗಳಿಗೆ ಸ್ಪಂದಿಸುತ್ತಲೇ ಪಂಜಾಬಿನ ಮಹಿಳೆಯರು ಸಾರ್ವಜನಿಕವಾಗಿಯೂ ಕಾಣಿಸಿಕೊಳ್ಳುತ್ತಿರುವುದು ಒಂದು ಆಶಾದಾಯಕವಾದ ಸೂಚನೆಯೇ ಆದರೂ ಅವರ ಸಮಸ್ಯೆಗಳನ್ನು ಸರಿಯಾಗಿ ಅರ್ಥಮಾಡಿಕೊಂಡು ಹೋರಾಡುವುದಕ್ಕೆ ಮಹಿಳಾ ಚಳುವಳಿಯೂ ಸಮರ್ಥವಾಗಿರಬೇಕು.

**ಹೊಸತು :** ಇವತ್ತಿನ ಮಹಿಳಾ ಚಳುವಳಿಯ ಸವಾಲುಗಳೇನು?

**ರಂಜನಾ :** ಮಹಿಳಾ ಚಳುವಳಿಯಲ್ಲಿ ಎನ್.ಜಿ.ಓಗಳ ಹಾವಳಿ ತುಂಬಾ. ಇವು ವ್ಯವಸ್ಥೆಯ ಆರ್ಥಿಕ,

ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಗಳ ಕುರಿತು ಚರ್ಚಿಸುವುದೇ ಇಲ್ಲ. ತತ್‌ಕ್ಷಣದ ಸಮಸ್ಯೆಗಳ ಪರಿಹಾರವನ್ನಷ್ಟೇ ದೃಷ್ಟಿಯಲ್ಲಿಟ್ಟುಕೊಂಡಿರುತ್ತವೆ. ಸಮಾನತೆಯ ಸಮಾಜಕ್ಕಾಗಿ ದುಡಿಯುವ ಎಲ್ಲ ಪ್ರಗತಿಪರ ಮತ್ತು ಎಡ ಸಂಘಟನೆಗಳು ತಮ್ಮ ಎಲ್ಲ ಕಾರ್ಯಕ್ರಮಗಳಿಗೆ ಲಿಂಗಸಂಬಂಧಿ ಆಯಾಮ ಕೊಡಲು ಪ್ರಯತ್ನಿಸಬೇಕು. ವರದಕ್ಷಿಣೆಯ ಸಮಸ್ಯೆ, ಜಾತಿಯ ದಬ್ಬಾಳಿಕೆ, ಮನೆಗೆಲಸ ಮತ್ತು ಹೊಲದ ಕೆಲಸದ ದುಪ್ಪಟ್ಟು ಶ್ರಮ, ಹೆಣ್ಣು ಕೃಷಿಗೆ ನೀಡುವ ಶ್ರಮದ ಕೊಡುಗೆಯನ್ನು ಗುರುತಿಸದೇ ಇರುವುದು– ಈ ಎಲ್ಲ ಸಂಗತಿಗಳನ್ನು ರೈತ ಚಳುವಳಿ ಒಳಗೊಳ್ಳುವಂತಾಗಬೇಕು. ಇದು ತುರ್ತಾಗಿ ಆಗಬೇಕಾಗಿರುವ ರಾಜಕೀಯ ಸವಾಲು.

ಮೊದಲನೆಯದಾಗಿ, ಮಹಿಳಾ ಚಳುವಳಿಯು ತನ್ನ ಆರಂಭದ ದಿನಗಳಲ್ಲಿ ವರದಕ್ಷಿಣೆ ಸಮಸ್ಯೆಯನ್ನು ತೆಗೆದುಕೊಂಡಿತ್ತಾದರೂ, ಈಗ ಆಸ್ತಿಯಿಲ್ಲದ ದಲಿತ ಕುಟುಂಬಗಳ ಸಮಸ್ಯೆಗಳನ್ನು ತೆಗೆದುಕೊಳ್ಳುತ್ತಿಲ್ಲ. ಎರಡನೆಯದು, ಭೂಹೀನ ಬಡವರ ಪರವಾಗಿರುವ ದಲಿತ ಚಳುವಳಿಯೂ ಪಿತೃಪ್ರಾಧಾನ್ಯತೆಯ ಸಮಸ್ಯೆಗಳನ್ನು ತೆಗೆದುಕೊಳ್ಳುತ್ತಿಲ್ಲ. ಮೂರನೆಯದು, ರೈತ ಚಳುವಳಿಯೂ ಪಿತೃಪ್ರಾಧಾನ್ಯತೆಯ ಸಮಸ್ಯೆಗಳನ್ನು ತೆಗೆದುಕೊಳ್ಳುತ್ತಿಲ್ಲ. ಒಟ್ಟಿನಲ್ಲಿ, ಸಾಂಪ್ರದಾಯಿಕ ಮತ್ತು ಸಾಮಾಜಿಕ ಪದ್ಧತಿಗಳಿಂದಾಗಿ ಬಡ ರೈತಸಮುದಾಯದ ಬಹುಮಂದಿ ದಿವಾಳಿಯೆದ್ದಿದ್ದಾರೆ.

ನನಗೆ ಮಹಿಳೆಯರ ಚರಿತ್ರೆಯೆಂದರೆ ಅದೊಂದು ನಿರಂತರ ಹೋರಾಟದ ಚರಿತ್ರೆಯೇ ಆಗಿದೆ. ಎಡ ಚಳುವಳಿಯು ಮಹಿಳೆಯರ ಸಮಸ್ಯೆ ಮತ್ತು ಚಳುವಳಿಯಲ್ಲಿ ಅವರ ಪಾತ್ರವನ್ನು ಕುರಿತು ಇನ್ನೂ ವಿಶೇಷ ಗಮನ ಹರಿಸಬೇಕಾಗಿದೆ. ನಾವು ಮರೆಯದೇ ಇರಬೇಕಾದ ಒಂದು ಬಹುಮುಖ್ಯ ಅಂಶ ವೆಂದರೆ, ಹೆಣ್ಣಿನ ಮೇಲಿನ ದಾಳಿ ಬಂಡವಾಳಶಾಹಿಯ ಮೂಲದಿಂದಲೇ ಬರಲಿ, ಇಲ್ಲ ಊಳಿಗಮಾನ್ಯ ಸಂಸ್ಕೃತಿಯಿಂದಲೇ ಬರಲಿ ಅಥವಾ ಪಿತೃಪ್ರಾಧಾನ್ಯತೆಯ ಹೊಡೆತವೇ ಆಗಿರಲಿ, ನಾವು ಆರ್ಥಿಕ ಸಂಗತಿಗಳನ್ನು ಅದರ ಸಾಮಾಜಿಕ ಸ್ವರೂಪದಿಂದ ಬೇರ್ಪಡಿಸುವುದಕ್ಕಾಗುವುದಿಲ್ಲ ಮತ್ತು ಒಂದು ಮತ್ತೊಂದರ ಬದಲಿನ ಆದ್ಯತೆಯ ವಿಷಯವೆಂದು ಪರಿಗಣಿಸುವುದೂ ಸರಿಯಲ್ಲ. ಒಂದಕ್ಕೆ ಬೀಳುವ ಹೊಡೆತ ಮತ್ತೊಂದಕ್ಕೆ ನೋವನ್ನು ಕೊಡುವುದು ಖಂಡಿತ.

**ಹೊಸತು :** ನಿಮ್ಮ ಇತ್ತೀಚಿನ ಚಟುವಟಿಕೆಯೇನು?

**ರಂಜನಾ :** ಒರಿಸ್ಸಾದ ಖಂದಧಾರ್ ಬೆಟ್ಟಗಳಲ್ಲಿನ ಕಬ್ಬಿಣದ ಅದಿರನ್ನು ಲಪಟಾಯಿಸಿಕೊಳ್ಳಲು ದಕ್ಷಿಣ ಕೊರಿಯಾದ ಕಬ್ಬಿಣ ಕಾರ್ಪೋರೇಷನ್ ಒರಿಸ್ಸಾ ಸರ್ಕಾರದ ಜೊತೆಗೂಡಿ ಒಪ್ಪಂದವನ್ನು ಮಾಡಿ ಕೊಂಡಿತ್ತು. ಇದಕ್ಕಾಗಿ ಒರಿಸ್ಸಾ ಸರ್ಕಾರವು 2700 ಎಕರೆ ಭೂಮಿಯನ್ನು ಪೋಸ್ಕೋ ಯೋಜನೆಗಾಗಿ ವಶಪಡಿಸಿಕೊಂಡಿತ್ತು. 2005ರಿಂದ ಅಲ್ಲಿನ ಸಣ್ಣ ರೈತರು, ಅರಣ್ಯವಾಸಿಗಳು ಮತ್ತು ಬೆಸ್ತರು ವಿದೇಶಿ ಸಹಯೋಗದ ಈ ಕಬ್ಬಿಣದ ಉತ್ಪಾದನೆಯನ್ನು ವಿರೋಧಿಸಿದ್ದರು. ಜನರ ಪ್ರತಿಭಟನೆಯನ್ನು ಹತ್ತಿಕ್ಕಲು ಸರ್ಕಾರವು ಪ್ರತಿಭಟನಾಕಾರರ ಮೇಲೆ ಕ್ರಿಮಿನಲ್ ದಾವೆಗಳನ್ನು ಹೂಡಿತ್ತು. ಅಂತೂ ಜನರ ಹೋರಾಟಕ್ಕೆ ಜಯಸಿಕ್ಕಿದೆ. ಒಡಿಶಾದ ಕೈಗಾರಿಕಾ ಮಂತ್ರಿ ಮಾರ್ಚ್ 18,2017ರಂದು ಪೋಸ್ಕೋದ ನಿರ್ಗಮನವನ್ನು ಕುರಿತು ಮಾರ್ಚ್ 18ರಂದು ಪತ್ರಿಕಾ ಸಭೆಯಲ್ಲಿ ಪ್ರಕಟಿಸಿದರು. ಈ ಹೋರಾಟದ ಭಾಗವಾಗಿ ಅದರ ವಿವಿಧ ಆಯಾಮಗಳನ್ನು ಕುರಿತು ಅಧ್ಯಯನ ಮಾಡಿ ಬರೆಯುತ್ತಿರುವೆ.

**ಹೊಸತು:** ನೀವು ನಮ್ಮೊಂದಿಗೆ ಹಲವಾರು ವಿಷಯಗಳನ್ನು ಹಂಚಿಕೊಂಡಿದ್ದೀರ. ಅದಕ್ಕಾಗಿ ವಂದನೆಗಳು. ನಮಸ್ಕಾರ.

## ಮಹಿಳೆಯ ಇತಿಹಾಸವೆಂದರೆ ಮಹಿಳಾ ಹೋರಾಟದ ಇತಿಹಾಸ

**- ರಂಜನಾ ಪಾಡಿ**

(ದಿನಾಂಕ 08/03/2017ರಂದು ಕೊಪ್ಪಳದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ವತಿಯಿಂದ ನಡೆದ ವಿಚಾರ ಸಂಕಿರಣದಲ್ಲಿ ರಂಜನಾ ಪಾಡಿಯವರು ಮಾಡಿದ ದಿಕ್ಸೂಚಿ ಭಾಷಣದ ಕನ್ನಡ ಅನುವಾದ. **ಅನು : ದು. ಸರಸ್ವತಿ**)

ಮಾರ್ಚ್, 8 ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲು ಮಾಡಿರುವ ಈ ವಿಶೇಷ ಪ್ರಯತ್ನಕ್ಕಾಗಿ ಸ್ವಯಂ ಸೇವಕರು, ಸಂಘಟಕರು ಮತ್ತು ಈ ಕಾರ್ಯಕ್ರಮಕ್ಕೆ ಬಂದಿರುವ ಎಲ್ಲರಿಗೂ ಕ್ರಾಂತಿಕಾರಿ ಅಭಿನಂದನೆಗಳು. ಸೋದರಿತ್ವ ಮತ್ತು ಐಕ್ಯತೆಯ ಭಾವದಲ್ಲಿ ಎಲ್ಲರನ್ನು ಬರಮಾಡಿಕೊಳ್ಳುತ್ತೇನೆ. ಹಾಗೆಯೇ ನಮ್ಮೆಲ್ಲರ ಹೋರಾಟಗಳು ಸೋಲರಿಯದೇ ನಿರಂತರವಾಗಿ ಹೊಸ ಸಮಾಜದತ್ತ ಮುನ್ನಡೆಯಲಿ. ಆ ಹೊಸ ಸಮಾಜ ನಾವೇ ನಿರ್ಮಾಣ ಮಾಡುವ ಸಮಾಜ, ಹೋರಾಡುವ ಜನ ನಿರ್ಮಿಸುವ ಸಮಾಜ. ಜಾತಿ, ಪಿತೃಪ್ರಧಾನತೆ ಮತ್ತು ಬಂಡವಾಳಶಾಹಿಯ ವಿರುದ್ಧ ಹೋರಾಡುತ್ತಿರುವ ಮಹಿಳೆಯರ ಮುಂದಿರುವ ಸವಾಲುಗಳ ಕುರಿತು ಅವಲೋಕಿಸಿ ಕೊಳ್ಳಬೇಕಾದ ಕಾಲವಿದು. ಇಂದು ನನಗೆ ತುಂಬಾ ಖುಷಿಯಾಗಿದೆ. ಆದರೆ ನಾನು ಮಾತನಾಡಲಿರುವ ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ರೈತರ ಆತ್ಮಹತ್ಯೆಯಂತಹ ವಿಷಯ ಖುಷಿಯದಲ್ಲ. ಮಹಿಳಾ ಚಳುವಳಿಯ ಇತಿಹಾಸವೆಂದರೆ ಮಹಿಳೆಯರ ದುಡಿಮೆಯ, ಲೈಂಗಿಕತೆಯ ಶೋಷಣೆಯ ಇತಿಹಾಸ. ಆದರೆ ಇಂದು ಬಂಡವಾಳಶಾಹಿಗಳು ಮಹಿಳಾ ದಿನಾಚರಣೆಯನ್ನು ಅದೆಷ್ಟು ಆಕರ್ಷಕಗೊಳಿಸಿವೆ ಎಂದರೆ ವಿಮಾನದಲ್ಲಿ ಕೆಂಪು ಗುಲಾಬಿ ನೀಡಿ ಮಹಿಳಾ ದಿನಾಚರಣೆಯ ಶುಭಾಶಯಗಳನ್ನು ಹೇಳುತ್ತಾರೆ, ಸೌಂದರ್ಯ ಸಾಧನಗಳ ತಯಾರಕರು, ಒಡವೆಗಳ ತಯಾರಕರು, ಮಹಿಳಾ ದಿನಾಚರಣೆಯ ಪ್ರಯುಕ್ತ ರಿಬೇಟ್ ನೀಡುತ್ತಾರೆ. ಟಿವಿ ಸಿರಿಯಲ್‌ಗಳು ಆಚರಣೆಗಳನ್ನು ಅದೆಷ್ಟು ಆಕರ್ಷಕಗೊಳಿಸಿವೆ ಎಂದರೆ ಮಹಿಳೆಯರು ಟಿವಿಗೆ ಅಂಟಿಕೊಂಡಿರುತ್ತಾರೆ.

ಇಂದು ಇಲ್ಲಿ ಸೇರಿ ಮಹಿಳಾ ದಿನಾಚರಣೆಯನ್ನು ಆಚರಿಸುತ್ತಿದ್ದೇವೆ ಎಂದಾಕ್ಷಣ ನಾವೆಲ್ಲರೂ ಸ್ವತಂತ್ರರಾಗಿದ್ದೇವೆ ಎಂದಲ್ಲ. ಶ್ರೇಣೀಕರಣದ ಕಟ್ಟಕೊನೆಯಲ್ಲಿರುವ ಮಹಿಳೆಯ ಮೇಲಿನ ಶೋಷಣೆ ಕೊನೆಯಾಗುವವರೆಗೂ ನಾವು ಸ್ವತಂತ್ರರಲ್ಲ. ಮಹಿಳೆಯರಲ್ಲೇ ಇರುವ ಜಾತಿ, ವರ್ಗಗಳ ತಾರತಮ್ಯವನ್ನು ನಾವು ಮರೆಯುವಂತಿಲ್ಲ. ಜಾತಿ, ಲಿಂಗ ಮತ್ತು ವರ್ಗ ತಾರತಮ್ಯಗಳಿಗೆ ನಾವೂ ಜವಾಬ್ದಾರರು ಎಂಬುದನ್ನು ಮರೆಯಬಾರದು. ಹಿಂತಿರುಗಿ ನೋಡಿಕೊಂಡಾಗ ಮಹಿಳಾ ಚಳುವಳಿ ದಲಿತ, ಆದಿವಾಸಿ ಹಾಗೂ ಬಡ ಮಹಿಳೆಯರ ಕುರಿತು ಕಾಳಜಿವಹಿಸಿಲ್ಲ ಎಂಬುದು ತಿಳಿಯುತ್ತದೆ. ಶೋಷಣೆ ಮತ್ತು ಸಂಘರ್ಷ ಎಲ್ಲ ಹಂತದಲ್ಲಿಯೂ ಇದೆ. ಎಲ್ಲ ಕಡೆಯೂ ಮಹಿಳೆ ಇದ್ದಾಳೆ.

ಸುಶಿಕ್ಷಿತರಾದ, ಆರ್ಥಿಕವಾಗಿ ಸುಭದ್ರವಾದ ಮಹಿಳೆಯರು ತಾವು ಒಮ್ಮೆ ಕೊಡುವ ಹೋಟೆಲಿನ ಬಿಲ್ಲಿನಷ್ಟು ದುಡ್ಡನ್ನು ತಮ್ಮ ಮನೆಯಲ್ಲಿ ಕೆಲಸ ಮಾಡುವ ಮಹಿಳೆಗೆ ನೀಡುತ್ತಾರೆ, ಕೆಲಸದವಳು ಸರಿಯಾಗಿ ಬರುವುದಿಲ್ಲೆಂದೋ, ಕೆಲಸ ಸರಿಯಾಗಿ ಮಾಡುವುದಿಲ್ಲವೆಂದೂ ಚರ್ಚಿಸುತ್ತಾರೆ. ಆಕೆಯ ಆರೋಗ್ಯ ಸರಿ ಇಲ್ಲವೆಂದು ಒಂದೆರೆಡು ಗುಳಿಗೆಗಳನ್ನು ಕೊಟ್ಟು ತಮ್ಮ ದೊಡ್ಡತನ ಮೆರೆಯುತ್ತಾರೆ. ಮಹಿಳಾ ಚಳುವಳಿ ತಪ್ಪು ಮಾಡಿದೆ ಆದರೆ ಆ ತಪ್ಪನ್ನು ಸಾರ್ವಜನಿಕವಾಗಿ ಹೇಳಿಕೊಳ್ಳುವುದರಲ್ಲಿ ಮಹಿಳಾ ಚಳುವಳಿ ಹಿಂದೆ ಬಿದ್ದಿಲ್ಲದಿರುವುದು ಅದರ ದೊಡ್ಡತನವಾಗಿದೆ. ಸ್ತ್ರೀವಾದಿ ಚಿಂತಕಿ ವರ್ಜೀನಿಯಾ ವುಲ್ಫ್ ಅವರು ಯಾವುದೇ ದೇಶವಾಗಲಿ ಕಟ್ಟಕೊನೆಯಲ್ಲಿರುವ ಮಹಿಳೆ ಹಿಂಸೆಯಿಂದ ಬಿಡುಗಡೆ ಹೊಂದುವವರೆಗೂ ನಾವು ಸಂಪೂರ್ಣ ಸ್ವತಂತ್ರರಲ್ಲವೆಂದು ಹೇಳುತ್ತಾರೆ. ಈ ಅರ್ಥದಲ್ಲಿಯೇ ಅವರು 'ಮಹಿಳೆಯಾಗಿ ನನಗೆ ದೇಶವಿಲ್ಲ, ಮಹಿಳೆಯಾಗಿ ನನಗೆ ದೇಶ ಬೇಕಾಗಿಲ್ಲ, ಮಹಿಳೆಯಾಗಿ ನನಗೆ ದೇಶವೆಂದರೆ ಇಡಿ ಜಗತ್ತು' ಎಂದು ಹೇಳಿದ್ದು. ಪಿತೃಪ್ರಧಾನತೆಯ ವಿರುದ್ಧದ ಹೋರಾಟವು ಗಡಿಯ ರಾಜಕಾರಣವನ್ನು ಮೀರಿದ್ದು. ಮಹಿಳಾ ರಾಜಕಾರಣಕ್ಕೆ ಇಲ್ಲಿನ ದುಡಿಯುವ ಮಹಿಳೆಯಂತೆಯೇ ಬ್ರೆಜಿಲ್ ದೇಶದ ಗಣಿಗಳಲ್ಲಿ ದುಡಿಯುವ ಮಹಿಳೆಯೂ ಮುಖ್ಯವಾಗುತ್ತಾಳೆ.

ಇಂದು ಮಂತ್ರಿಗಳ, ಕಾರ್ಪೊರೇಟ್‌ಗಳ ಮತ್ತು ಧನಸಹಾಯ ಪಡೆಯುವ ಸರ್ಕಾರೇತರ ಸಂಸ್ಥೆಗಳ ಖಾಲಿ ವಾಕ್‌ಚಾತುರ್ಯ ಮತ್ತು ಚೀರಾಟದ ಆಚರಣೆಗಳು ಭವ್ಯತೆಯ ಸಂಕೇತವಾದ ಮಾರ್ಚ್ 8ರ ಮಹಿಳಾ ಹೋರಾಟದ ವೈಚಾರಿಕ ಚೈತ್ಯನಕ್ಕೆ ಮಂಕು ಬಡಿಸಿವೆ. ಇಂತಹ ಸಂದರ್ಭದಲ್ಲಿ ಒಕ್ಕೂಟವು ಮಾಡುತ್ತಿರುವ ಈ ಪ್ರಯತ್ನವು ನನ್ನಲ್ಲಿ ಭರವಸೆ ಹುಟ್ಟಿಸಿದೆ, ಮೆಚ್ಚುಗೆ ಮೂಡಿಸಿದೆ.

ಮಾರ್ಚ್ 8 ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಬೇರುಗಳಿರುವುದು 1907ರಲ್ಲಿ ಘಟಿಸಿದ ಐತಿಹಾಸಿಕ ದಿನದಲ್ಲಿ ಎಂಬುದನ್ನು ನಾವೆಂದಿಗೂ ಮರೆಯಬಾರದು. ವಿಶ್ವ ಸಂಸ್ಥೆಯು 1975ರಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲು ಆರಂಭಿಸಿದ ಎಷ್ಟೋ ವರ್ಷಗಳ ಮೊದಲು ಸೂಜಿ ಮತ್ತು ನೇಯ್ಗೆ ಉದ್ದಿಮೆಯಲ್ಲಿ ಕೆಲಸ ಮಾಡುತ್ತಿದ್ದ 15000 ಮಹಿಳೆಯರು ಉತ್ತಮ ವೇತನ, ಕಡಿಮೆ ಕೆಲಸದ ವೇಳೆ ಮತ್ತು ಮತದಾನದ ಹಕ್ಕಿಗಾಗಿ ಒತ್ತಾಯಿಸಿ ನ್ಯೂಯಾರ್ಕ್ ನಗರದ ಬೀದಿಗಳಲ್ಲಿ ಜಾಥಾ ನಡೆಸಿದ್ದರು.

ಕೋಪನ್‌ಹೆಗನ್‌ನಲ್ಲಿ 1910ರಲ್ಲಿ ನಡೆದ ಎರಡನೇ ಮಹಿಳಾ ಅಂತಾರಾಷ್ಟ್ರೀಯ ಸಮಾವೇಶದಲ್ಲಿ, ಹೋರಾಟದ ಇತಿಹಾಸದಲ್ಲಿ ಐತಿಹ್ಯವಾಗಿರುವ ಕ್ಲಾರಾ ಜಟ್ಕಿನ್ ಅವರು 1907ರ ಮಹಿಳಾ ಕಾರ್ಮಿಕರ ಹೋರಾಟದ ಸಂಕೇತವಾಗಿ ಪ್ರತಿ ವರ್ಷವೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ನಡೆಸುವ ಪ್ರಸ್ತಾಪವನ್ನು ಮುಂದಿಟ್ಟರು. ಅಂದಿನಿಂದಲೂ ಅದು ಮುನ್ನಡೆದುಕೊಂಡೇ ಬಂದಿದೆ. ಇಂದು ಭಾರತದಲ್ಲಿ,

★ ಕೇರಳದ ಇಡುಕ್ಕಿ ಜಿಲ್ಲೆಯ ಟೀ ತೋಟಗಳಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರು ಸೆಪ್ಟಂಬರ್ 2015ರಲ್ಲಿ ಮುನ್ನಾರಿನಲ್ಲಿ ಸಂಘರ್ಷಕ್ಕೆ ಇಳಿದರು. ಹೆಚ್ಚಿನ ಬೋನಸ್ ನೀಡಬೇಕೆಂಬುದು ಅವರ ಮುಖ್ಯ ಬೇಡಿಕೆಯಾಗಿತ್ತು. ಈ ಸಂಘರ್ಷವನ್ನು ಕಂಡ ಪ್ರಭುತ್ವ ಮತ್ತು ಇಡೀ ದೇಶವೇ ಚಕಿತಗೊಂಡಿತಲ್ಲದೆ ಹಲವಾರು ಮಹಿಳಾ ಕಾರ್ಮಿಕರಿಗೆ ಅದು ಸ್ಫೂರ್ತಿಯಾಯಿತು.

★ ಏಪ್ರಿಲ್ 18, 2016ರಲ್ಲಿ ಮಹಿಳಾ ಗಾರ್ಮೆಂಟ್ಸ್ ಕಾರ್ಮಿಕರು ಬೆಂಗಳೂರಿನ ಏಳು ಕಿ.ಮಿ ಉದ್ದದ ಹೊಸೂರು ರಸ್ತೆಯನ್ನು ಹಲವಾರು ಘಂಟೆಗಳ ಕಾಲ ಬಂದು ಮಾಡಿದರು. ಹತ್ತು ಸಾವಿರದಷ್ಟು

ಮಹಿಳೆಯರು ರಸ್ತೆಗಳಿಗೆ ನದಿಯಂತೆ ನುಗ್ಗಿ ಬಂದರು. ನೌಕರರ ಪ್ರಾವಿಡೆಂಟ್ ಹಣವನ್ನು ಪಡೆಯಲು ಇರುವ ನಿಯಮಗಳಿಗೆ ತಿದ್ದುಪಡಿ ತರಲು ಕೇಂದ್ರ ಸರ್ಕಾರವು ಮಾಡಿದ್ದ ನಿರ್ಧಾರದ ವಿರುದ್ಧ ಅವರು ಮಾಡಿದ ಪ್ರತಿಭಟನೆಯು ನಗರ ಮತ್ತು ಆಡಳಿತವನ್ನು ತಬ್ಬಿಬ್ಬುಗೊಳಿಸಿತು.

★ ಮಂಡ್ಯ ಜಿಲ್ಲೆಯಲ್ಲಿ ನಡೆದ ಮತ್ತೊಂದು ಪ್ರತಿಭಟನೆಯು ಹತ್ತು ಘಂಟೆಗಳ ಕಾಲ ಬೆಂಗಳೂರು–ಮೈಸೂರು ಹೆದ್ದಾರಿಯನ್ನು ಬಂದು ಮಾಡಿತು. ಎಂಪ್ಲಾಯಿಸ್ ಪ್ರಾವಿಡೆಂಟ್ ಫಂಡ್ಸ್ ಅಂಡ್ ಮಿಸಲೇನಿಯಸ್ ಪ್ರಾವಿಷನ್ಸ್ ಆಕ್ಟ್ 1952ಕ್ಕೆ ತಿದ್ದುಪಡಿ ತಂದು, ಕಾರ್ಮಿಕರು 58 ವಯಸ್ಸಿನ ನಂತರವೇ ಮಾಲೀಕರು ಹಾಕುವ ಪಾಲನ್ನು ಪಡೆಯಬೇಕೆಂಬ ನಿಯಮವನ್ನು ಮಾಡಿದ್ದು ಕಾರ್ಮಿಕರನ್ನು ಸಿಟ್ಟಿಗೆಬ್ಬಿಸಿತು. ಲಾಠಿ ಚಾರ್ಜು, ಅಶ್ರುವಾಯು ಪ್ರಯೋಗಿಸಿದರು ಪ್ರತಿಭಟನೆ ಮುಂದುವರೆಯಿತು.

★ ಕೂಡಂಕುಳಂ ಮಹಿಳೆಯರಿಗೆ ಸಲಾಮು ಹೇಳಲೇಬೇಕು. ಮಧ್ಯಪ್ರದೇಶದ ಖಾಂಡ್ವದಲ್ಲಿ ತಮ್ಮ ಹಳ್ಳಿಗಳು ಮುಳುಗಡೆಯಾಗುವುದನ್ನು ವಿರೋಧಿಸಿ ಜಲಸತ್ಯಾಗ್ರಹ ಮಾಡುತ್ತಿರುವ ಮಹಿಳೆಯರಿಗೆ ಸಲಾಮು

★ ಭಾರತದಲ್ಲಿ ಮಹಿಳಾ ದಿನಾಚರಣೆ ಆರಂಭವಾಗುವ ಬಹಳ ಮೊದಲೇ ಮಹಿಳೆಯರು ಅನೇಕ ಮೈಲಿಗಲ್ಲುಗಳನ್ನು ಸಾಧಿಸಿದ್ದರು. ಸಾವಿತ್ರಿ ಬಾಯಿ ಫುಲೆಯವರು ತಮ್ಮ ಪತಿಯೊಂದಿಗೆ, 1848ರಲ್ಲೇ ಮಹಾರಾಷ್ಟ್ರದಲ್ಲಿ ಹೆಣ್ಣುಮಕ್ಕಳ ಪ್ರಥಮ ಶಾಲೆಯನ್ನು ತೆರೆದು ಜಾತಿ ಮತ್ತು ಲಿಂಗ ತಾರಮ್ಯವನ್ನು ಕೊನೆಗಾಣಿಸಬೇಕೆಂಬ ಕ್ರಾಂತಿಯ ಕಹಳೆ ಮೊಳಗಿಸಿದ್ದರು. ಮಹಿಳಾ ಚಳುವಳಿ ಆರಂಭವಾಗುವ ಬಹಳ ಮೊದಲೇ ತೆಲಂಗಾಣ ಮತ್ತು ಥೇಬಾಗದ ರೈತ ಮಹಿಳೆಯರ ಹೋರಾಟದ ಶ್ರೀಮಂತ ಇತಿಹಾಸವೂ ಈ ದೇಶಕ್ಕಿದೆ.

ಆರ್ಥಿಕತೆಯು ಹಿಮ್ಮೆಟ್ಟುತ್ತಿರುವ ಸಂದರ್ಭದಲ್ಲಿ ಬಡ ಮತ್ತ ಅಲಕ್ಷಿತ ಜನರ ಮೇಲಿನ ಹೊಡೆತವು ಹಿಂದೆಂದಿಗಿಂತಲೂ ಹೆಚ್ಚಾಗಿರುವಂಥ ಇತಿಹಾಸದ ನಿರ್ಣಾಯಕ ಕಾಲಘಟ್ಟದಲ್ಲಿ ನಾವಿದ್ದೇವೆ. ಕೃಷಿ ಕ್ಷೇತ್ರವೂ ಇನ್ನಿಲ್ಲದಂತೆ ನೆಲಕಚ್ಚಿದೆ. ರೈತರ ಆತ್ಮಹತ್ಯೆಯು ದೇಶಾದ್ಯಂತ ವ್ಯಾಪಕವಾಗಿರುವ ಕೃಷಿ ಬಿಕ್ಕಟ್ಟಿನ ಗಂಭೀರತೆಗೆ ಸಾಕ್ಷಿಯಾಗಿದೆ. ಮತ್ತೊಂದೆಡೆ ಬಲವಂತದ ಕೈಗಾರಿಕರಣವು ಕೃಷಿ ಭೂಮಿಯನ್ನು, ಗಣಿ ಮತ್ತು ಅರಣ್ಯಗಳನ್ನು ಒತ್ತುವರಿ ಮಾಡಿಕೊಂಡು ಆದಿವಾಸಿಗಳ, ದಲಿತರ, ಹಿಂದುಳಿದ ವರ್ಗಗಳ ಮತ್ತು ಬಡವರ ಬದುಕಿಗೆ ಆಸರೆಯಾಗಿದ್ದ ನೈಸರ್ಗಿಕ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆಯುತ್ತಿದೆ. ಪ್ರಭುತ್ವ ಮತ್ತು ಬಂಡವಾಳದ ಪರ ನಿಂತ ಮಿಲಿಟರಿಯು ತನ್ನದೇ ಜನರ ವಿರುದ್ಧ ಕಾಳಗ ಹೂಡಿರುವುದನ್ನು ಛತ್ತಿಸ್‌ಗಢ, ಜಾರ್ಖಂಡ್ ಮತ್ತು ಒಡಿಶಾಗಳಲ್ಲಿ ಕಾಣಬಹುದು.

ಯಾವುದೇ ಕೃಷಿಕ ಸಮಾಜದಲ್ಲಿನ ಊಳಿಗಮಾನ್ಯ ಸಂಬಂಧಗಳು ಮತ್ತು ನವ–ಉದಾರವಾದಿ ಆರ್ಥಿಕತೆಯು ಹುಟ್ಟುಹಾಕಿದ ಬಂಡವಾಳಶಾಹಿಯ ಹೊಡೆತ ಹಾಗೂ ಪ್ರಭುತ್ವ ಮತ್ತು ಬಂಡವಾಳವು ರೂಪಿಸಿರುವ ನೀತಿಗಳು, ಕ್ರಮಗಳು ಒಟ್ಟುಗೂಡಿ ದಮನಕಾರಿ ಶಕ್ತಿಗಳ ಬಲಾಢ್ಯ ಮಿಶ್ರಣವನ್ನು ಹುಟ್ಟುಹಾಕುತ್ತವೆ. ಇದು ಮಹಿಳೆಯರ ಬಿಡುಗಡೆಯೆಡೆಗಿನ ಪ್ರಗತಿಗೆ ತಡೆಯೊಡ್ಡುತ್ತದೆ. ದುಡಿಯುವ ಮಹಿಳೆಯರು, ರೈತ ಮಹಿಳೆಯರು ಮತ್ತು ಭೂಮಿಹೀನ ದಲಿತ ಮಹಿಳೆಯರು ಅರೆಬರೆ ಬಿಡುಗಡೆಯ ಸ್ಥಿತಿಯಲ್ಲಿ ಬಹಳ ಕಷ್ಟಪಟ್ಟು ಎರಡು ಹೆಜ್ಜೆ ಮುಂದೆ ಹೋಗುವುದನ್ನು ಕಲಿತರೆ ಅದಕ್ಕು ಬೆದರಿಕೆಯೊಡ್ಡುತ್ತದೆ.

ನಾನೊಬ್ಬಳು ಸ್ತ್ರೀವಾದಿಯಾಗಿ ನಿಮ್ಮೆಲ್ಲರಿಗೂ ಕೇಳುವ ಪ್ರಶ್ನೆ ಏನೆಂದರೆ– ಪ್ರಸ್ತುತ ಸಂದರ್ಭದಲ್ಲಿ

ಮಹಿಳಾ ಹೋರಾಟವು ಎಲ್ಲಿ ನಿಂತಿದೆ? ಮಹಿಳಾ ಬಿಡುಗಡೆಯ ದರ್ಶನಕ್ಕೆ ಏನಾಯಿತು? ಮಹಿಳಾ ಚಳುವಳಿಯು ನೀಡಿದ ಫಲ ಏನಾಗಿದೆ? ಮಹಿಳೆಯರ ಮೇಲೆ ಆದ ಬಿಕ್ಕಟ್ಟಿನ ಪರಿಣಾಮವನ್ನು ತಿಳಿಯಲು ಹಸಿರು ಕ್ರಾಂತಿಯ ತೊಟ್ಟಿಲಾದ ಪಂಜಾಬ್‌ನಲ್ಲಿ ನಡೆಯುತ್ತಿರುವ ರೈತರ ಆತ್ಮಹತ್ಯೆಯನ್ನೇ ನೋಡಬಹುದು. ನಾನು ರೈತ ಸಮುದಾಯದವಳಲ್ಲ, ನನಗೆ ಕೃಷಿ ಪರಿಚಯವಿರಲ್ಲಿಲ್ಲ. ರೈತರ ಬಗ್ಗೆ ನಾನು ಅಜ್ಞಾನಿಯಾಗಿದ್ದೆ. ಕೇರಳ, ತಮಿಳುನಾಡು, ಮಹಾರಾಷ್ಟ್ರ, ಪಂಜಾಬ್ ರಾಜ್ಯಗಳಲ್ಲಿ ರೈತರು ಆತ್ಮಹತ್ಯೆಮಾಡಿಕೊಳ್ಳುತ್ತಿದ್ದ ಸಂದರ್ಭದಲ್ಲಿ ಊಟದ ತಟ್ಟೆಯನ್ನು ನೋಡುವಾಗ ಯಾವ ರೈತನ ಉಸಿರನ್ನು ಈ ಊಟ ಕಿತ್ತುಕೊಂಡಿದೆಯೊ ಎನಿಸುತ್ತಿತ್ತು. ಹಸಿರುಕ್ರಾಂತಿಯ ಕೇಂದ್ರವಾಗಿದ್ದ ಪಂಜಾಬ್ ಕೃಷಿ ಬಿಕ್ಕಟ್ಟಿನಿಂದಾಗಿ ದುಸ್ಥಿತಿಯಲ್ಲಿದೆ. ಪಂಜಾಬಿನ 'ಸರ್‌ಸೋಂಕಿ ಸಾಗ್ ಮತ್ತು ಮಕ್ಕಿ ಕಾ ರೋಟಿ'ಯ ರುಚಿಯ ಬಗ್ಗೆ ರಮ್ಯಕವಾಗಿ ಮಾತನಾಡುತ್ತೇವೆ. ಸರ್‌ಸೋಂಕ್ ಕಾ ಸಾಗ್ ಮಾಡಲು ಇಡಿಯ ದಿನ ಕಾಳನ್ನು ಬೇಯಿಸಲಾಗುತ್ತದೆ. ಅದರ ಹಿಂದಿನ ಮಹಿಳೆಯರ ದುಡಿಮೆಯನ್ನು ಯಾರೂ ಪರಿಗಣಿಸುವುದಿಲ್ಲ.

ಕೃಷಿಕ ಸಮಾಜದಲ್ಲಿನ ಮಹಿಳೆಯರಿಗೆ ಸಂಬಂಧಿಸಿದ ಮುಖ್ಯ ಅಂಶಗಳನ್ನು ಕುರಿತು ನಾನಿಲ್ಲಿ ಹೇಳಬಯಸುತ್ತೇನೆ. ಅವೆಷ್ಟು ಮುಖ್ಯವೆಂದರೆ ಅದಿಲ್ಲದೆ ಮಹಿಳಾ ಹೋರಾಟವಾಗಲಿ, ರೈತ ಹೋರಾಟವಾಗಲಿ ಪೂರ್ಣವಾಗುವುದಿಲ್ಲ. ಕರ್ನಾಟಕವೂ ಸೇರಿದಂತೆ ದೇಶ್ಯಾದ್ಯಂತ ವ್ಯಾಪಕವಾಗಿರುವ ಕೃಷಿ ಬಿಕ್ಕಟ್ಟು ಕೃಷಿಕ ಕುಟುಂಬದ, ಕೃಷಿ ಸಮುದಾಯದ ಮಹಿಳೆಯರು, ಮಕ್ಕಳು, ಯುವ ಜನತೆಗೆ, ವೃದ್ಧರಿಗೆ ಪ್ರತಿ ನಿತ್ಯವೂ ತೀವ್ರವಾದ ಸವಾಲುಗಳನ್ನು ಒಡ್ಡುತ್ತಿದೆ. ರೈತಸಂಘಟನೆಗಳು ಕೃಷಿಯ ವಾಣಿಜ್ಯೀಕರಣ, ಪರಿಹಾರ ಮತ್ತು ವಿಮೆಯ ಖಾತ್ರಿಗಾಗಿ ಹೋರಾಡುತ್ತಿವೆ. ಇಲ್ಲಿ ಕೃಷಿ ಸಮಾಜದಲ್ಲಿ ಚಾಲ್ತಿಯಲ್ಲಿರುವ ಪಿತೃಪ್ರಧಾನತೆ ಮತ್ತು ಅದು ಹೇಗೆ ಮಹಿಳೆಯರಿಗಷ್ಟೇ ಅಲ್ಲದೆ ಒಟ್ಟಾರೆ ಕೃಷಿಸಮುದಾಯಕ್ಕೆ ಕೃಷಿ ಬಿಕ್ಕಟ್ಟನ್ನು ತೀವ್ರಗೊಳಿಸುತ್ತದೆ ಎಂಬುದರ ಕುರಿತ ಟೀಕೆ ಸಂಪೂರ್ಣ ಮರೆಯಾಗಿರುವ ಅಂಶವಾಗಿದೆ. ಈ ಅಂಶವನ್ನು ಕಡೆಗಣಿಸಿರುವುದರಿಂದಲೇ ಕೃಷಿ ಸಮುದಾಯದ ಬಹು ಮುಖ್ಯ ಭಾಗವಾಗಿರುವ ಮಹಿಳೆಯರು ಭಾರೀ ಬೆಲೆಯನ್ನು ತೆರಬೇಕಾಗಿದೆ. ಜೊತೆಗೆ ಜಾತಿ ಮತ್ತು ಪಿತೃಪ್ರಧಾನತೆಯು ಪುರುಷ ರೈತರು ಅಥವ ಕೃಷಿ ಕೂಲಿಗಳಿಗೂ ಹೊರಲಾಗದ ಹೊರೆಯನ್ನು ಹೊರಿಸಿದೆ ಎಂಬುದನ್ನು ಪಂಜಾಬ್‌ನಲ್ಲಿ ಕೃಷಿ ಬಿಕ್ಕಟ್ಟನ್ನು ಕುರಿತು ನಾನು ಮಾಡಿದ ಅಧ್ಯಯನವು ತೋರಿಸಿಕೊಟ್ಟಿತು.

ರೈತರೆಂದರೆ ಗಂಡಸು ಎಂಬ ಒಂದೇ ಕಲ್ಪನೆಯೇ ಇಡಿ ಸಮಾಜದಲ್ಲಿ ಮಾತ್ರವಲ್ಲದೆ ರೈತ ಸಂಘಗಳಲ್ಲಿಯೂ ಮನೆಮಾಡಿದೆ. ಕುಟುಂಬದ ಅಥವಾ ಗ್ರಾಮದ ಪ್ರತಿಯೊಂದು ವ್ಯಕ್ತಿಯನ್ನು ರೈತಾಪಿ ಸಮುದಾಯವು ಒಳಗೊಂಡಿದೆ; ಕುಟುಂಬದ ಮತ್ತು ಸಮುದಾಯದ ಎಲ್ಲಾ ಸದಸ್ಯರು ಕೃಷಿಯಲ್ಲಿ ಪಾಲ್ಗೊಳ್ಳುವುದಲ್ಲದೆ ಅದನ್ನೇ ಜೀವನಾಧಾರಕ್ಕಾಗಿ ಅವಲಂಬಿಸಿರುವುದು, ಅಲ್ಲಿ ಅಸಮಾನತೆಯಿದ್ದರೂ ಇಡಿ ಸಮುದಾಯವನ್ನೇ ರೈತಾಪಿ ಬದುಕಿನ ಭಾಗವಾಗಿಸುತ್ತದೆ. ಹಿರಿಯ ಮಹಿಳೆಯರು ಮತ್ತು ಪುರುಷರು ಪಂಜಾಬನ್ನು ಇಡೀ ದೇಶದ ರೊಟ್ಟಿಯ ಬುಟ್ಟಿಯನ್ನಾಗಿ ಮಾಡಲು ಶ್ರಮಿಸಿದ್ದಾರೆ. ಅವರ ಬೆಳೆದು ನಿಂತ ಮಕ್ಕಳು ಇಂದು ತೀವ್ರವಾದ ಸಂಕಟಕ್ಕೆ ಸಿಲುಕಿದ್ದಾರೆ. ಅವರ ಮೊಮ್ಮಕ್ಕಳು ಅಂದರೆ ಇಂದಿನ ಮಕ್ಕಳು ಮತ್ತು ಯುವ ಜನತೆಯು ಕೃಷಿಯಲ್ಲಿ ಯಾವ ಭವಿಷ್ಯವನ್ನೂ ಕಾಣುತ್ತಿಲ್ಲ. ಮಾನಸಿಕ ವ್ಯಾಕುಲತೆಗೆ ಒಳಗಾಗಿರುವ ಮಹಿಳೆಯರು ನಿತ್ಯವೂ 'ನೀನು ಅಪ್ಪನ ಹಾಗೆ,

ಎದುರಿಸಲಾಗದೆ ಸಾಯುವವನು' ಎನ್ನುತ್ತಾ ತಮ್ಮ ಮಕ್ಕಳಿಗೆ ಡೆತ್ ವಾರೆಂಟ್ ನೀಡುತ್ತಿದ್ದಾರೆ

ನಾವು ವಾಸ್ತವದ ನೆಲೆಯಲ್ಲಿ ಸಾಮಾಜಿಕ ಭದ್ರತೆ ಅಥವಾ ಪರಿಹಾರವನ್ನು ಕುರಿತು ಮಾತನಾಡುವಾಗ ಅಥವಾ ಹೊಸ ಮತ್ತು ಸಂಪೂರ್ಣಕ್ರಾಂತಿಕಾರಕ ಸಮಾಜವನ್ನು ಕುರಿತ ದರ್ಶನವನ್ನು ಆಲೋಚಿಸುವಾಗ ಒಟ್ಟಾರೆ ರೈತಾಪಿ ಸಮಾಜದ ಅಗತ್ಯಗಳು ಮತ್ತು ವಿಷಯಗಳನ್ನು ನಾವು ಜೊತೆಗೆ ಒಯ್ಯಬೇಕೆಂಬುದಕ್ಕೆ ಒತ್ತುನೀಡಬೇಕು. ಸೀಮಿತ ಆರ್ಥಿಕ ಬೇಡಿಕೆಗಳಾಚೆಗೆ ಹೋಗಬೇಕೆಂದು ಮತ್ತೆ ಮತ್ತೆ ಹೇಳುತ್ತಲೇ ಬಂದಿದ್ದೇವೆ. ಆದರೆ ಅದನ್ನು ನಾವು ನಮ್ಮ ಆಂದೋಲನಗಳಲ್ಲಿ ಮತ್ತು ಕೃಷಿ ಬಿಕ್ಕಟ್ಟಿನ ವಿಶ್ಲೇಷಣೆಯಲ್ಲಿ ವಾಸ್ತವಿಕ ಮತ್ತು ಸಂಘಟನಾತ್ಮಕ ಮಟ್ಟದಲ್ಲಿ ಅವಲೋಕಿಸುವ ಅಗತ್ಯವಿದೆ.

ಈ ಯೋಚನೆಯೇನು ಹೊಸತಲ್ಲ. ರೋಸಾ ಲಕ್ಸೆಂಬರ್ಗ್‌ನಂತಹವರು ಪರಿವರ್ತನೆ ಮತ್ತು ಕ್ರಾಂತಿಯ ಮಾದರಿಯು ಜೊತೆಯಾಗಿ ಸಾಗುವಂತಹ ಮುನ್ನೋಟ ಮತ್ತು ತಂತ್ರವನ್ನು 1900 ರಷ್ಟು ಹಿಂದೆಯೇ ಹುಟ್ಟುಹಾಕಿದ್ದರು. ಪಂಜಾಬಿನಲ್ಲಿ ನಾನು ಮಾಡಿದ ಕೆಲಸವನ್ನು ಆಧರಿಸಿ ರೈತ ಚಳವಳಿಯು ಗಮನಿಸಲೇಬೇಕಾದ ಹಲವು ಸ್ತರಗಳ ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಲು ಬಯಸುತ್ತೇನೆ. ನಾನು ನಡೆಸಿದ ಅಧ್ಯಯನವು ಪಂಜಾಬಿ ಮತ್ತು ಹಿಂದಿ ಭಾಷೆಗಳಲ್ಲಿ ಪುಸ್ತಕ ರೂಪದಲ್ಲಿ ಪ್ರಕಟಗೊಂಡಿದೆ. ಬರ್ನಾಲಾದ ತಾರಕ್ ಭಾರತಿಯವರು, ಭೂಪಾಲಿನ ಮಹಿಳಾ ಮಂಚ್‌ನವರು ಆ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಆ ಅಧ್ಯಯನದಲ್ಲಿ ಕಂಡುಕೊಂಡ ಕೆಲವು ವಿಷಯಗಳನ್ನು ನಿಮ್ಮ ಮುಂದಿಡುತ್ತೇನೆ. ಈ ಪುಸ್ತಕವು ಕೇವಲ ಪುಸ್ತಕವೋ ಅಥವಾ ಕ್ಷೇತ್ರ ಅಧ್ಯಯನವೋ ಅಲ್ಲ. ಇದೊಂದು, ಇವತ್ತಿನ ಸವಾಲಿನ ಸಂದರ್ಭದಲ್ಲಿ ಕೃಷಿ ಬಿಕ್ಕಟ್ಟಿನ ಸಾಮಾಜಿಕ- ಆರ್ಥಿಕ ವಾಸ್ತವವನ್ನು ಅರಿಯುವ ಪ್ರಯತ್ನವಾಗಿದೆ.

ಅಧ್ಯಯನದ ಭಾಗವಾಗಿ ಮಾಳವಾ ಪ್ರಾಂತ್ಯದಲ್ಲಿರುವ ಎಂಟು ಜಿಲ್ಲೆಗಳಲ್ಲಿನ 136 ಕುಟುಂಬಗಳನ್ನು ಸಮೀಕ್ಷೆ ಮಾಡಲಾಯಿತು. ಈ ಅಧ್ಯಯನವೊಂದು ಕಲಿಕೆಯಾಗಿದೆ.ಈ ಎಲ್ಲ ಕುಟುಂಬಗಳಲ್ಲಿಯೂ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರು. ಹೆಚ್ಚಿನವರು ಮಜ್‌ಹಬೀಸ್, ರಾಯ್ ಸಿಖ್, ರಾಮ್‌ದಾಸಿಯಾ, ರವಿದಾಸಿಯಾ ಮತ್ತು ಬೈರಾಗಿ ಸಮುದಾಯಗಳ ಭೂಹೀನ ದಲಿತರಾಗಿದ್ದಾರೆ. ಕೃಷಿಯನ್ನೇ ಅವಲಂಬಿಸಿದ್ದ ಭೂಹೀನ ಕೃಷಿಕರ ಆತ್ಮಹತ್ಯೆಗಳು ಕೃಷಿ ಕ್ಷೇತ್ರದ ಕುಸಿತದಿಂದಲೇ ಎಂಬುದು ಸ್ಪಷ್ಟವಾಗುತ್ತದೆ. ಆತ್ಮಹತ್ಯೆಯು ಕೃಷಿ ಬಿಕ್ಕಟ್ಟಿನ ತೀವ್ರತೆಯ ಒಂದು ಅಂಶವಷ್ಟೇ. ಇದರೊಂದಿಗೆ ಸಾವಿರಾರು ಅಂಶಗಳಿರುವುದನ್ನು ಅದು ಸೂಚಿಸುತ್ತದೆ.

ಆತ್ಮಹತ್ಯೆಗಳ ನಂತರ ಮಹಿಳೆಯರು ಮುಂದಿಡುತ್ತಿರುವ ಬೇಡಿಕೆಗಳೇನು? ಅವರು ಸರ್ಕಾರದಿಂದ ನಿರೀಕ್ಷಿಸುವುದು ಕುಟುಂಬದ ಸದಸ್ಯರಿಗೆ ಉದ್ಯೋಗ, ಮಕ್ಕಳ ಶಿಕ್ಷಣಕ್ಕೆ ಬೆಂಬಲ ಮತ್ತು ನಗದು ಪರಿಹಾರಗಳಂತಹ ಮುಖ್ಯ ಬೇಡಿಕೆಗಳನ್ನು. ಸಂದರ್ಶನ ಮಾಡಿದವರಲ್ಲಿ ಶೇ 60 ರಷ್ಟು ಮಹಿಳೆಯರು ಈ ಬೇಡಿಕೆಗಳನ್ನು, ಶೇ 55 ರಷ್ಟು ಮಹಿಳೆಯರು ಸಾಲ ಮನ್ನಾವನ್ನು ಕೇಳಿದರು.

ಇನ್ನೂ ಹಲವಾರು ನಿರೀಕ್ಷೆಗಳನ್ನು ಲೆಕ್ಕ ಹಾಕುವುದೇ ಕಷ್ಟ. ಆದರೆ ಆ ಕಷ್ಟಗಳು ಒಂದು ಲೋಕವನ್ನೇ ನಿಮ್ಮ ಮುಂದೆ ಬಿಚ್ಚಿಡುತ್ತವೆ. ಹಿರಿಯ ಜಾಟ್ ಸಿಖ್ ಸಮುದಾಯದ ಮಹಿಳೆಯೊಬ್ಬರು ನನಗೆ ಬೇಕಾಗಿರುವುದು ಒಂದು ಎಮ್ಮೆಯನ್ನು ಇಟ್ಟುಕೊಳ್ಳುವಷ್ಟು ಜಾಗ ಮಾತ್ರ, ಮತ್ತೇನೂ ಬೇಡ. ಜಾಗ ಸಿಕ್ಕರೆ ಎಮ್ಮೆ ಸಾಕಿ ಹಾಲು ಮಾರಿ ಬದುಕುವೆನೆಂದು ಹೇಳಿದಳು. ಬರ್ನಾಲಾ ಜಿಲ್ಲೆಯಲ್ಲಿನ ಹರೆಯದ ಮಕ್ಕಳಿರುವ ಮತ್ತೊಬ್ಬ ಮಹಿಳೆ, ನನ್ನ ಮಾವನಿಂದ ನನಗೆ ಬರಬೇಕಾದ ಒಂದು ಎಕರೆ ಜಮೀನು ಸಿಕ್ಕರೆ ಸಾಕು, ಅದನ್ನು ಬಾಡಿಗೆ ಕೊಟ್ಟು ಜೀವನ ಮಾಡುತ್ತೇನೆ ಎನ್ನುತ್ತಾಳೆ. ಈ ಬೇಡಿಕೆಗಳು ಈಡೇರಿದರೆ

ಇವರಿಗೆ ಸಿಗುವುದು ತಿಂಗಳಿಗೆ ಒಂದು ಸಾವಿರ ಮಾತ್ರ. ಅದೂ ಸಹ ಅವರ ಕೈಗೆ ಎಟುಕುತ್ತಿಲ್ಲ. ಹಲವಾರು ಹರೆಯದ ಹುಡುಗಿಯರು ಅದರಲ್ಲಿಯೂ ವಿಶೇಷವಾಗಿ ದಲಿತ ಸಮುದಾಯದವರು ಕೆಲಸ ಮಾಡಲು ಆಸಕ್ತರಿದ್ದಾರೆ. ಕೆಲವರಿಗೆ ಕಾಲೇಜಿಗೆ ಹೋಗಲು ಇಷ್ಟವಿದೆ. ಆದರೆ ಸಧ್ಯದ ಸಂದರ್ಭದಿಂದ ಹೊರಬರುವುದು ಸಾಧ್ಯವೇ ಇಲ್ಲದಂತಾಗಿದೆ. ಅವರೆಲ್ಲರಿಗೂ ಟಿವಿ ಮತ್ತು ಪತ್ರಿಕೆಗಳ ಮೂಲಕ ರೈತ ಸಂಘಟನೆಯ ಚಟುವಟಿಕೆಗಳ ಪರಿಚಯವಿದೆ. ಹೊರಗೆ ಬದುಕು ವಿಶಾಲವಾಗಿದೆ ಎಂಬುದನ್ನು ಅವರು ಅರಿತಿದ್ದಾರೆ. ಆದರೆ ಹುಡುಕಿಕೊಳ್ಳುವ ದಾರಿಗಳಿಲ್ಲ.

ನಿತ್ಯದ ಸಮಸ್ಯೆಗಳಲ್ಲಿ ಮುಖ್ಯವಾದವೆಂದರೆ:

ಶೇ 79 ರಷ್ಟು- ಹಣಕಾಸನ್ನು ಹೊಂದಿಸುವುದು,

ಶೇ 66 ರಷ್ಟು ಕುಟುಂಬಕ್ಕೆ ಸಂಬಂಧಪಟ್ಟವು,

ಶೇ 49 ರಷ್ಟು ನಿತ್ಯದ ಒತ್ತಡಗಳು/ ರಗಳೆಗಳು,

ಶೇ 35 ರಷ್ಟು ಸಾಲ ಮರುಪಾವತಿಯದು.

ಕೆಲವು ಮಹಿಳೆಯರು ಮನೆಯಿಂದ ಹೊರಗೆ ಹೋಗಿ ದುಡಿಯಲು ಇರುವ ಸಾಂಪ್ರದಾಯಿಕ ನಿರ್ಬಂಧಗಳ ಬಗ್ಗೆ ಹೇಳಿದರು. ಅಂದರೆ ಜಾತಿ ನಿರ್ಬಂಧಗಳಿಂದಾಗಿ ಓಡಾಡುವುದು ಮತ್ತು ಕೆಲಸ ಮಾಡುವುದು ಅವರಿಗೆ ಸಾಧ್ಯವಾಗುತ್ತಿಲ್ಲ. ಭೂಮಾಲೀಕ ಕುಟುಂಬಗಳಲ್ಲಿ ಮಹಿಳೆಯರು ಹೊರಗೆ ಹೋಗಿ ಕೆಲಸ ಮಾಡಲು, ವಿಶೇಷವಾಗಿ ಬೇರೆಯವರ ಹೊಲಗಳಲ್ಲಿ ಕೆಲಸ ಮಾಡಲು ನಿಷೇಧವಿದೆ. ಕೆಲಸ ಮಾಡುವ ಸಾಮರ್ಥ್ಯವಿದ್ದಾಗಲೂ ಹೊರಗೆ ಹೋಗುವಂತಿಲ್ಲ ಎಂಬುದು ಮಹಿಳೆಯರಲ್ಲಿ ಒತ್ತಡ ಮತ್ತು ನೋವನ್ನುಂಟು ಮಾಡುತ್ತದೆ. ಈ ಸಮಸ್ಯೆ ದಲಿತ ಸಮುದಾಯಗಳಿಗಿಂತ ಜಾಟ್ ಸಿಖ್ ಸಮುದಾಯಗಳಲ್ಲಿ ಹೆಚ್ಚು.

**ಅವರು ಎಲ್ಲಿಂದ ಬೆಂಬಲವನ್ನು ಪಡೆದುಕೊಳ್ಳುತ್ತಿದ್ದಾರೆ?**

ಸಿಗಬಹುದಾದ ಎಂಟು ಬೆಂಬಲಗಳ ಬಗ್ಗೆ ಕೇಳಿದಾಗ-ಮೂರು ರೀತಿಯ ಬೆಂಬಲಗಳ ಬಗ್ಗೆ ಮಹಿಳೆಯರು ಮತ್ತೆ ಮತ್ತೆ ಹೇಳಿದರು. ರೈತ ಸಂಘಗಳಿಂದ ಸಿಗುವ ಬೆಂಬಲ ಶೇ 66 ರಷ್ಟು, ಪೋಷಕರಿಂದ ಸಿಗುವ ಬೆಂಬಲ ಶೇ22 ರಷ್ಟು, ಯಾವ ಬೆಂಬಲವೂ ಸಿಗುತ್ತಿಲ್ಲವೆಂದವರು ಶೇ 22 ರಷ್ಟು, ಪೋಷಕರಿಂದ ಸಿಗುವ ಬೆಂಬಲ ಕುರಿತು ಹೇಳಿದವರಲ್ಲಿ ದಲಿತ ಮಹಿಳೆಯರೇ ಹೆಚ್ಚು. ಆ ಕುಟುಂಬಗಳಲ್ಲಿ ಪತಿಯ ಆತ್ಮಹತ್ಯೆಯ ನಂತರ ತಂದೆ ಅಥವಾ ಸೋದರ ಕುಟುಂಬದೊಡನೆ ಬಂದು ನೆಲೆಸಿದ್ದಾರೆ. ಆದರೆ ಹೀಗೆ ಬಂದು ನೆಲೆಸುವ ಬಗ್ಗೆ ಜಾಟ್ ಸಿಖ್ಖರಲ್ಲಿ ನಿಷೇಧವಿದೆ. ಆದರೆ ಕೆಲವು ತಾಯಂದಿರು ನಿಷೇಧವನ್ನು ಮೀರಿಯೂ ಹೋಗಿದ್ದಾರೆ. ಇಡೀ ರೈತಾಪಿ ಸಮುದಾಯವೇ ಬಿಕ್ಕಟ್ಟನ್ನು ಎದುರಿಸುತ್ತಿರುವಾಗ ತೌರುಮನೆಯೂ ಬಿಕ್ಕಟ್ಟಿಗೆ ಹೊರತಾಗಿರುವುದಿಲ್ಲ. ಸಾಲಕೊಟ್ಟವರ ನಿತ್ಯದ ಕಿರುಕುಳಗಳಿಗೆ ಕೊನೆ ಹಾಡುವಲ್ಲಿ ರೈತ ಸಂಘಗಳು ಮುಖ್ಯ ಪಾತ್ರವಹಿಸಿವೆ. ಈ ರೈತ ಸಮುದಾಯದೊಂದಿಗೆ ನಿಂತಿರುವ ಒಂದೇ ಬಲವೆಂದರೆ ರೈತ ಸಂಘಗಳು ಮಾತ್ರ.

ಇಲ್ಲಿ ನೆರೆದಿರುವ ಎಲ್ಲ ಸಂಘಟನೆಗಳಿಗೂ ನಾನು ಹೇಳುವುದು ಮಹಿಳೆಯರು ಏನು ಹೇಳಬೇಕಾಗಿದೆ ಎಂಬುದನ್ನು

**ವರದಕ್ಷಿಣೆ :** ಹಸಿರು ಕ್ರಾಂತಿಯು ಹಲವಾರು ಬದಲಾವಣೆಗಳನ್ನು ಸಾಮಾಜಿಕ ನಿಯಮ/ ಪದ್ಧತಿಗಳಲ್ಲಿ ತಂದಿತು – ಅದ್ದೂರಿ ಮದುವೆಗಳು ಜಾಟ್ ಸಿಖ್ಖರ ಸಂಸ್ಕೃತಿಯ ಭಾಗವೇ ಆಯಿತು.

ಸಮಾಜದಲ್ಲಿ ರೈತ ಕುಟುಂಬದ ಮರ್ಯಾದೆಯು ಅವಲಂಬಿಸಿರುವುದು, ತಂದೆ ಅಥವಾ ಸೋದರ ಪ್ರದರ್ಶಿಸುವ ಮದುವೆಯ ಅದ್ದೂರಿತನವನ್ನು. ಟೆಂಟ್‌ಹೌಸುಗಳು, ಶಾಮಿಯಾನಗಳು, ವೀಡಿಯೋ, ಒಡವೆಗಳು, ಬಟ್ಟೆಗಳ ಮೂಲಕ ಸದ್ದಿಲ್ಲದೆ ಪಾಲು ಪಡೆದುಕೊಳ್ಳುವ ಆಚರಣೆಗಳು ಜಾರಿಗೆ ಬಂದವು ಎಂದು ರೈತ ಸಂಘದ ಸಂಗಾತಿಗಳು ಹೇಳಿದರು. 2008-2009ರಲ್ಲಿ 3/ 7/ 10 ಎಕರೆ ಇರುವ ರೈತರು ತಮ್ಮ ಹೆಣ್ಣುಮಗಳ ಮದುವೆಗೆಂದು 3/7/10 ಲಕ್ಷ ಖರ್ಚು ಮಾಡುತ್ತಿದ್ದರು. ಈಗ ಬೆಲೆ ಏರಿಕೆಯಿಂದಾಗಿ ಅದಿನ್ನೂ ಹೆಚ್ಚಾಗಿರುತ್ತದೆ.

ಹೆಣ್ಣು ಭ್ರೂಣ ಹತ್ಯೆ- ಕಳೆದೆರೆಡು ದಶಕಗಳಿಂದ ತಂತ್ರಜ್ಞಾನದ ದುರ್ಬಳಕೆಯಿಂದಾಗಿ ಹೆಣ್ಣುಮಕ್ಕಳನ್ನು ಭ್ರೂಣದಲ್ಲಿಯೇ ಹೊಸಕಿಹಾಕಲಾಗುತ್ತಿದೆ. ಇದು ಪಂಜಾಬ್ ಮತ್ತು ಹರ್ಯಾಣದಲ್ಲಿ ಹೆಚ್ಚು ವ್ಯಾಪಕವಾಗಿದೆ. ಪ್ರಸವಪೂರ್ವ ಲಿಂಗಪತ್ತೆ ಕಾಯ್ದೆ 2001ರ ಮೂಲಕ ಅದಕ್ಕೆ ತಡೆಯೊಡ್ಡಲಾಯಿತು. ಆದರೆ ಈಗಲೂ ಇದು ಚಾಲ್ತಿಯಲ್ಲಿದೆ. ಲಿಂಗಾನುಪಾತ ಪಂಜಾಬಿನಲ್ಲಿ 893ರಷ್ಟಿದೆ. ಇದು ರಾಷ್ಟ್ರದ ಸರಾಸರಿ 914ಕ್ಕಿಂತಲೂ ಕಡಿಮೆ ಇದೆ. ಈ ಅಂಶವು ರಾಜ್ಯ ಹಾಗೂ ದೇಶದಲ್ಲಿ ಎಲ್ಲ ವಿಷಯಗಳು ಹೇಗೆ ಒಂದಕ್ಕೊಂದು ಸಂಬಂಧಪಟ್ಟಿವೆ ಎಂಬುದನ್ನು ಸೂಚಿಸುತ್ತದೆ. ಈ ಬಗ್ಗೆ ಯಾರನ್ನು ಕೇಳಬೇಕು? ನಮ್ಮನ್ನೂ ನಾವು ಕೇಳಿಕೊಳ್ಳಬೇಕಲ್ಲವೇ?

ಇದು ನನ್ನಲ್ಲಿ ಎರಡು ಮುಖ್ಯ ವಿಷಯಗಳನ್ನು ಎತ್ತುತ್ತದೆ. ವಿವಾಹ, ಕುಟುಂಬ, ಆಸ್ತಿ ಮತ್ತು ವಾರಸುದಾರಿಕೆ/ಉತ್ತರದಾಯಿತ್ವದ ಸಂಸ್ಥೆಗಳು ನಿರ್ಧರಿಸುವ ಮಹಿಳೆಯ ಅಧೀನ ಸ್ಥಿತಿಯನ್ನು ಹೊರತುಪಡಿಸಿ ವರದಕ್ಷಿಣೆಯನ್ನು ನೋಡಲು ಸಾಧ್ಯವೇ ಇಲ್ಲ. ವರದಕ್ಷಿಣೆಯ ಹೊರೆಯನ್ನು ಹೊರುವುದು ಸಣ್ಣಪ್ರಮಾಣದ ರೈತರು ಮತ್ತು ಭೂಹೀನ ಕೃಷಿಕ ಕುಟುಂಬಗಳಿಗೆ ದುಸ್ಸಾಧ್ಯವಾಗಿದೆ. ಜಾಟರ ಅದ್ದೂರಿ ಮದುವೆಗಳು ಹುಟ್ಟುಹಾಕಿದ ಈ ಸಂಸ್ಕೃತಿಯು ಎಲ್ಲ ಜಾತಿಗಳಿಗೂ ವಿಸ್ತರಿಸಿಕೊಂಡಿದೆ.

ಮಹಿಳಾ ಚಳುವಳಿಯು ವರದಕ್ಷಿಣೆ ಸಮಸ್ಯೆಯನ್ನು ಬಹಳ ಹಿಂದೆಯೇ ಕೈಗೆತ್ತಿಕೊಂಡರೂ, ಆಸ್ತಿ ಇಲ್ಲದ ದಲಿತ ಮತ್ತು ಅಪಾರ ಸಂಖ್ಯೆಯಲ್ಲಿರುವ ಗ್ರಾಮೀಣ ಬಡಕುಟುಂಬಗಳ ವಿಷಯವನ್ನು ಪರಿಗಣಿಸಲಿಲ್ಲ. ದಲಿತ ಚಳುವಳಿಯು ಪಿತೃಪ್ರಧಾನತೆಯ ವಿಷಯವನ್ನು ಅದರಲ್ಲಿಯೂ ಬಡ ಭೂಹೀನ ಕುಟುಂಬಗಳಲ್ಲಿಯೂ ಅದು ಆಚರಣೆಯಲ್ಲಿರುವುದನ್ನು ಪರಿಗಣಿಸುವುದೇ ಇಲ್ಲ. ರೈತ ಚಳುವಳಿಯು ಮಹಿಳಾ ವಿಷಯವನ್ನೇ ಪರಿಗಣಿಸುವುದಿಲ್ಲ. ಆದ್ದರಿಂದಲೇ ರೈತ ಸಮುದಾಯದ ಬಹುಪಾಲು ಬಡವರ ಸ್ಥಿತಿ ಸಾಂಪ್ರದಾಯಿಕ-ಸಾಮಾಜಿಕ-ಪಿತೃಪ್ರಧಾನೀಯ ನಿರಂಕುಶ ಆಚರಣೆಗಳು ಹುಟ್ಟುಹಾಕಿರುವ ದಿವಾಳಿತನದಲ್ಲಿ ದಿಕ್ಕೆಟ್ಟು ಹೋಗಿದೆ.

ಅಂಚಿನಲ್ಲಿರುವವರಂತೂ ನಿತ್ಯದ ಅಗತ್ಯಗಳಿಗೂ ಹೋರಾಡುವಂತಾಗಿದೆ. ಇವರೆಲ್ಲ ಆಸ್ತಿ ಇಲ್ಲದವರು. ಮಗಳಿಗೆ ವಿದಾಯ ಹೇಳಿ, ಮಗನಿಗೆ ಆಸ್ತಿಯನ್ನು ಉಳಿಸಿಕೊಳ್ಳುವ ಈ ಹೀನಾಯ ಆಚರಣೆಯ ಅನುಕರಣೆ ಹೇಗೆ ಮತ್ತು ಯಾಕೆ ಮುಂದುವರೆದುಕೊಂಡು ಬರುತ್ತಿದೆ ಎಂಬುದು ವಿಷಾದನೀಯ ಸಂಗತಿ. ಮಗನಿಗೋ ಮಗಳಿಗೋ ಕೊಡಲು ಆಸ್ತಿಯೇ ಇಲ್ಲವೆಂದಾದಾಗ ಮದುವೆಗಾಗಿ ಯಾಕೆ ಖರ್ಚು ಮಾಡಬೇಕು? ವೈದಿಕಶಾಹಿ ಮೂಲದ ಈ ಸಾಂಸ್ಕೃತಿಕ ಆಚರಣೆಯನ್ನು ಊಳಿಗಮಾನ್ಯ ಜಾತಿ ಮತ್ತು ವರ್ಗಗಳು ಅಳವಡಿಸಿಕೊಂಡದ್ದು ಕೃಷಿ ಕಾರ್ಮಿಕರ ಬಹುದೊಡ್ಡವಲಯಕ್ಕೂ ವಿಸ್ತರಿಸಿಕೊಂಡು ಅವರನ್ನು ಅಧೋಗತಿಗೆ ಇಳಿಸಿತು.

ಹಾಗಾಗಿ ವರದಕ್ಷಿಣೆ ಸಾಮಾಜಿಕ ವಿಷಯ ಮಾತ್ರ ಆಗುವುದು ಹೇಗೆ ಸಾಧ್ಯ? ಈ ಸಮಸ್ಯೆಯನ್ನು

ನಾವು ವಿವಾಹ ಮತ್ತು ಖಾಸಗಿ ಆಸ್ತಿಯನ್ನು ಹೊರತುಪಡಿಸಿ ನೋಡಲು ಸಾಧ್ಯವೇ? ಮಹಿಳಾ ಚಳುವಳಿಯೂ ಸಹ ವರದಕ್ಷಿಣೆಯನ್ನು ಇಂದಿನ ವೆಚ್ಚಗಳ ಖೋತಾ, ಕಾರ್ಖಾನೆಗಳ ಮುಚ್ಚುವಿಕೆ, ನಿರುದ್ಯೋಗ, ಸ್ಥಳಾಂತರ ಮತ್ತು ವ್ಯಾಪಕವಾಗುತ್ತಿರುವ ರೈತರ ಆತ್ಮಹತ್ಯೆಯ ಹಿನ್ನೆಲೆಯಲ್ಲಿ ನೋಡಬೇಕು. ಜೊತೆಗೆ, ದುಡಿಯುವ ಮತ್ತು ರೈತ ಮಹಿಳೆಯ ಹಿನ್ನೆಲೆಯಲ್ಲಿಯೂ, ಮಹಿಳೆಯರ ನಡುವೆ ರಾಚನಿಕ ಅಸಮಾನತೆಗಳು ಹುಟ್ಟುಹಾಕಿರುವ ಅಗಾಧ ವರ್ಗ ಮತ್ತು ಸಾಮಾಜಿಕ ವಿಭಜನೆಯ ಹಿನ್ನೆಲೆಯಲ್ಲಿಯೂ ಗಮನಿಸಲೇಬೇಕಾಗಿದೆ. ಆಸ್ತಿಯು ಸವಲತ್ತಾಗಿರುವುದನ್ನು ಪ್ರಶ್ನಿಸಬೇಕಾಗುತ್ತದೆ. ಸಮಾನತೆಯನ್ನು ಸಾಧಿಸಬೇಕಾದರೆ ಆಸ್ತಿವಂತರಿಗೆ ಕೊರತೆಯಾದರೂ ಸರಿಯೆ ಸಾಮಾಜಿಕ ರಚನೆಗಳನ್ನು ಅಲ್ಲಾಡಿಸಬೇಕಾಗುತ್ತದೆ. ಆಸ್ತಿ ಕೆಲವು ಮಹಿಳೆಯರಿಗೆ ದೊರಕಿರುವುದೇ ಪಿತೃಪ್ರಧಾನತೆಯ ರಕ್ಷಣೆಯಿಂದಾಗಿ.

ಪ್ರಗತಿಪರ ನಿಲುವಿನ ಅಂದರೆ ಮಾರ್ಕ್ಸ್‌ವಾದಿ, ಸ್ತ್ರೀವಾದಿ ಅಥವಾ ಸಮಾಜವಾದಿ ನಿಲುವಿನಿಂದ ನೋಡುವಾಗ ಸವಲತ್ತುಗಳನ್ನು ಆಧರಿಸಿದ ವ್ಯವಸ್ಥೆಯ ರಚನೆಗಳಿಗೆ ಸವಾಲೊಡ್ಡುವುದು, ದುಡಿಯುವ ವರ್ಗ ಮತ್ತು ರೈತ ಮಹಿಳೆಯ ಸ್ವಸಾಮರ್ಥ್ಯದ/ಸ್ವಸಾಧನೆಯ ಸಾಧ್ಯತೆಗಳನ್ನು ಹೆಚ್ಚಿಸುವ ದಾರಿಗಳನ್ನು ಹುಡುಕಿಕೊಳ್ಳಲು ನಮ್ಮನ್ನು ಒತ್ತಾಯಿಸುತ್ತದೆ. ಸ್ತ್ರೀವಾದಿಯೊಬ್ಬಳು ಈ ವಿಷಯ ಎತ್ತುತ್ತಿರುವುದು, ವರ್ಗ ಐಕ್ಯತೆಗೆ ಧಕ್ಕೆ ತರುತ್ತದೆ ಎಂದು ನೋಡಬೇಕಾಗಿಲ್ಲ. ಈ ರೀತಿ 70 ಮತ್ತು 80ರ ದಶಕದಲ್ಲಿ ಭಾವಿಸಲಾಗುತ್ತಿತ್ತು. ಏಂಗೆಲ್ಸ್ ಅವರು 1880ರಲ್ಲಿ 'ದಿ ಆರಿಜಿನ್ ಆಫ್ ಫ್ಯಾಮಿಲಿ, ಪ್ರೈವೇಟ್ ಪ್ರಾಪರ್ಟಿ ಅಂಡ್ ಸ್ಟೇಟ್' (ಕುಟುಂಬ, ಖಾಸಗಿ ಆಸ್ತಿ ಮತ್ತು ಪ್ರಭುತ್ವದ ಉಗಮ) ಪುಸ್ತಕವನ್ನು ಬರೆದರು. ಖಾಸಗಿ ಆಸ್ತಿ ಮತ್ತು ಕುಟುಂಬ ಸಂಸ್ಥೆಯನ್ನು ಪಲ್ಲಟಗೊಳಿಸಬೇಕೆಂಬ ವಿಷಯವನ್ನು ನಾವು ಹಿಂದೆಯೇ ಕೈಬಿಟ್ಟು ಪ್ರಭುತ್ವದೊಂದಿಗೆ ನಿರತರಾಗಿದ್ದೇವೆ. ಅಂದಿನ ಸ್ಫೂರ್ತಿದಾಯಕ ಇತಿಹಾಸದಿಂದಲೇ ನಾವು ಸಮಕಾಲೀನ ಸಂದರ್ಭಗಳನ್ನು ಎದುರಿಸುವ ಉತ್ತರಗಳನ್ನು ಹುಡುಕಿಕೊಳ್ಳಬೇಕಾಗಿದೆ. ಅದನ್ನೆ ನಮ್ಮ ರಾಜಕೀಯ ಆಂದೋಲನಗಳಲ್ಲಿ ಹಾಗೂ ಗ್ರಾಮೀಣ ಬಡವರು ಮತ್ತು ದುಡಿಯುವ ವರ್ಗದವರೊಂದಿಗೆ ಕೆಲಸ ಮಾಡುವಾಗ ಅವಲೋಕನ ಮಾಡಿಕೊಳ್ಳಬೇಕಾಗಿದೆ.

ಮಕ್ಕಳ ಮತ್ತು ಯುವಜನತೆಯ ಭವಿಷ್ಯ – ಪಂಜಾಬಿನಲ್ಲಿ ಶೇ 70ರಷ್ಟು ಯುವಕರು ಮಾದಕ ವ್ಯಸನಿಗಳಾಗಿದ್ದಾರೆ. ಹೊಲಗಳಲ್ಲಿ ಸುಲಭವಾಗಿ, ಉಚಿತವಾಗಿ ದೊರೆಯುವ ಭುಕಿ(ಗಸಗಸೆ ಮರದ್ದು) ಹೊಟ್ಟಿನ ಸೇವನೆಯಿಂದ ಆರಂಭವಾಗುತ್ತದೆ. ತೇಲಾಡುವ ಅನುಭವ ಪಡೆಯಲು ಗುಟ್ಕಾ ಮತ್ತು ತಂಬಾಕನ್ನು ತಿನ್ನುವುದು, ಹುರಿದ ಹಲ್ಲಿಗಳ ಬಾಲವನ್ನು ತಿನ್ನುವುದು, ಪೆಟ್ರೋಲ್ ಮೂಸುವುದು, ಶೂ ಪಾಲಿಷ್ ತಿನ್ನುವುದು ಚಾಲ್ತಿಯಲ್ಲಿದೆ. ಬ್ರೆಡ್ಡಿನ ಮೇಲೆ ಐಯೋಡೆಕ್ಸ್ ಸವರಿ ತಿನ್ನುವುದು ಸಾಮಾನ್ಯವಾಗಿದೆ. ನಿಧಾನವಾಗಿ ಔಷಧಿ ಅಂಗಡಿಗಳಲ್ಲಿ ಸಿಗುವ ವಿವಿಧ ರಾಸಯಾನಿಕಗಳ ಮಿಶ್ರಣಗಳ ದಾಸರಾಗುತ್ತಾರೆ. ಅವುಗಳಲ್ಲಿ ಕಡಿಮೆ ಬೆಲೆಗೆ ದೊರಕುವ ಫೆನ್ಸಿಡ್ರಿಲ್, ಗ್ರಿಲಿಂಕ್‌ಟಸ್ ಮತ್ತು ಕೊರೆಕ್ಸ್‌ನಂತಹ ಕೆಮ್ಮಿನ ಔಷಧಿಗಳು, ನೋವು ನಿವಾರಕಗಳು, ಪ್ರಾಕ್ಸಿವಾನ್ ಮತ್ತು ಡೈಝಿಪಾಮ್‌ನಂತಹ ನಿದ್ದೆ ಮಾತ್ರೆಗಳು ಸೇರಿವೆ. ಬೇಡಿಕೆ ಹೆಚ್ಚಿರುವುದರಿಂದ ಈ ಔಷಧಗಳ ಕಾಳಸಂತೆಯೂ ವ್ಯಾಪಕವಾಗಿದೆ. ಯುವಜನತೆಯ ಆರೋಗ್ಯವನ್ನು ದಾಳಮಾಡಿಕೊಂಡು ಲಾಭ ದೋಚಲಾಗುತ್ತಿದೆ. ರೈತ ಸಂಘಟನೆಗಳಿಗೆ ಈ ವಿಷಯ ಗೊತ್ತಿದೆ, ಅದನ್ನು ಅವರು ತಮ್ಮ ರಾಜಕೀಯ ಅಜೆಂಡದಲ್ಲಿ ಸೇರಿಸಿಕೊಂಡಿದ್ದಾರೆ.

ಭಟಿಂಡ ನಿಲ್ದಾಣದಿಂದ ಪ್ರತಿರಾತ್ರಿ ಹೊರಡುವ ಕ್ಯಾನ್ಸರ್ ಎಕ್ಸ್‌ಪ್ರೆಸ್ ಹಸಿರುಕ್ರಾಂತಿಯ ಭೀಕರ ಅಭಿವ್ಯಕ್ತಿಯಾಗಿದೆ. ಭಟಿಂಡಾ, ಮುಕ್ತಸರ್, ಮನ್ಸಾ ಮತ್ತು ಫರೀದ್‌ಕೋಟ್‌ಗಳಲ್ಲಿ ಕ್ಯಾನ್ಸರ್ ರೋಗ ಹೆಚ್ಚಿದೆ. ಆ ಪ್ರದೇಶದಲ್ಲಿ ಹತ್ತಿಬೆಳೆಗೆ ಕೀಟನಾಶಕಗಳನ್ನು ಅತಿಯಾಗಿ ಬಳಸಲಾಗುತ್ತದೆ. ಕ್ಯಾನ್ಸರ್ ಚಿಕಿತ್ಸೆಗೆಂದು ದೂರದ ಬಿಕನೇರಿಗೆ ಹೋಗಬೇಕಾಗಿರುವುದು ನಾಚಿಕೆಗೇಡಿನ ವಿಷಯವಾಗಿದೆ. ಸರ್ಕಾರವಿನ್ನೂ ಕ್ಯಾನ್ಸರ್ ಆಸ್ಪತ್ರೆಯನ್ನು ಆರಂಭಿಸುತ್ತಲೇ ಇದೆ. ಆತ್ಮಹತ್ಯೆಗೆ ಕೀಟನಾಶಕವಂತು ಲಭ್ಯವಿದೆ ಜೊತೆಗೆ ನಿಮ್ಮ ರಕ್ತದಲ್ಲಿಯೇ ಕೀಟನಾಶಕವನ್ನು ತುಂಬಲಾಗುತ್ತಿದೆ!

ಆರ್ಥಿಕ ತಜ್ಞರು ಹಸಿರು ಕ್ರಾಂತಿಯ ಮಿಗುತಾಯವು ಎಲ್ಲಿಗೆ ಹೋಗುತ್ತಿದೆ ಎಂಬುದನ್ನು ವಿಶ್ಲೇಷಿಸುತ್ತಿದ್ದಾರೆ. ಇದರ ಪ್ರಯೋಜನ ಪಡೆದುಕೊಂಡವರು ದೊಡ್ಡ ಭೂಮಾಲಿಕರೇ ಎಂಬುದರ ಬಗ್ಗೆ ಸಂಶಯವೇ ಇಲ್ಲ. ಇಂದು ಶೈಕ್ಷಣಿಕ ಸಂಸ್ಥೆಗಳು ಮತ್ತು ನರ್ಸಿಂಗ್ ಹೋಮ್‌ಗಳು ಲಾಭದಾಯಕ ಉದ್ದಿಮೆಯಾಗಿದ್ದು ಎಲ್ಲೆಡೆ ಅಣಬೆಗಳಂತೆ ಏಳುತ್ತಿವೆ. ಆರೋಗ್ಯ ಮತ್ತು ಶಿಕ್ಷಣದ ಖಾಸಗೀಕರಣ ಮತ್ತು ಸಾರ್ವಜನಿಕ ಸೇವೆಗಳ ಪಲ್ಲಟದಿಂದ ತೀವ್ರವಾದ ಹೊಡೆತ ತಿನ್ನುತ್ತಿರುವವರು ಬಡ ರೈತಾಪಿ ಸಮುದಾಯ ಮತ್ತು ದುಡಿಯುವ ವರ್ಗ.

ಅಲ್ಪಸ್ವಲ್ಪ ಸಂಪಾದನೆಯೂ ಸಹ ಶ್ರೀಮಂತರ ಚೀಲಗಳನ್ನು ಸೇರುತ್ತಿದೆ. ಮೋಗ ಅಂತಹ ಪಟ್ಟಣಗಳಲ್ಲಿ ಆತ್ಮಹತ್ಯೆ ವಿಫಲವಾದರೂ ಸಹ ಚಿಕಿತ್ಸೆಗೆಂದು 70000 ರೂಪಾಯಿಗಳಷ್ಟು ಖರ್ಚು ಮಾಡಬೇಕಾಗುತ್ತದೆ. ಬಿಕ್ಕಟ್ಟು ಮತ್ತು ಬಡತನದ ಬೇಗೆಯಿಂದ ಹೆಣ ಬಿದ್ದರೆ, ತಿನ್ನಲು ರಣಹದ್ದುಗಳಂತೆ ಇವರು ಕಾಯುತ್ತಾರೆ.

ಸಂಪೂರ್ಣ ಕ್ರಾಂತಿಯೆಂಬ ದೂರದ ಕನಸಿನತ್ತ ಸಣ್ಣ ಹೆಜ್ಜೆಗಳನ್ನಿಡುವ ಬಗ್ಗೆ ಮತ್ತೆ ನಾವು ಆಲೋಚಿಸುವಾಗ ನಮ್ಮ ಅವ್ವಂದಿರು, ಮಗಳು ಮತ್ತು ಸೋದರಿಯರು ದಾರಿಯಲ್ಲಿ ಸಹಪಯಣಿಗರಾಗುವಂತಾಗಬೇಕು. ಒಟ್ಟು ದೇಶದ ಭೂಭಾಗದ 1.5% ದಷ್ಟಿರುವ, ದೇಶದ ಆಹಾರ ಉತ್ಪನ್ನದಲ್ಲಿ ಶೇ 13 ರಷ್ಟು ಕೊಡುಗೆ ನೀಡುತ್ತಿರುವ, ಪಂಜಾಬನ್ನು ರೂಪಿಸಿದ ಅಜ್ಜ ಅಜ್ಜಿಯರ ಅಗತ್ಯವೂ ನಮಗೆ ಇದೆ. ದೇಶದ ಒಟ್ಟು ಕೃಷಿ ಭೂಮಿಯು ಶೇ52 ದಷ್ಟಿದ್ದರೆ, ಪಂಜಾಬ್‌ನಲ್ಲಿ ಶೇ85% ರಷ್ಟು ಭೂಮಿಯು ಕೃಷಿಯೋಗ್ಯವಾಗಿದೆ. ಪಂಜಾಬ್ ಅನ್ನು ಇಡೀ ದೇಶದ ಅನ್ನದ ಬಟ್ಟಲನ್ನಾಗಿಸಿರುವುದರ ಹಿಂದೆ ಇರುವುದು ಬೆನ್ನುಮೂಳೆ ಮುರಿದುಕೊಂಡು ದುಡಿಯುವ ರೈತರ ಬವಣೆ ಮತ್ತು ಬಹುಪಾಲು ಜನರ ಜೀವನದ ದುಃಸ್ಥಿತಿ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಹಿರಿಯ ನಾಗರಿಕರಿಗೆ ಬಿಡಿಗಾಸಿನ ಪಿಂಚಣಿ ಸಿಕ್ಕರೆ, ವಿಧವೆಯರಿಗೆ 250 ರೂ ಪಿಂಚಣಿ ಸಿಗುತ್ತಿದೆ ಎಂಬ ವಾಸ್ತವವು ಲೂಟಿಕೋರರು ಯಾರು ಮತ್ತು ಲೂಟಿಯಾದವರು ಯಾರು ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಈ ವಾಸ್ತವವನ್ನು ಎದುರಿಸಲು ರಾಜಕೀಯ ಮತ್ತು ಸಂಘಟನಾ ಆಂದೋಲನಗಳು ಹಾಗೂ ಕಾರ್ಯಚಟುವಟಿಕೆಗಳ ಮಧ್ಯಸ್ಥಿಕೆಯ ಅಗತ್ಯವಿದೆ. ಆಂದೋಲನಗಳಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಆದರೆ ಅವರು ಮತ್ತು ಅವರ ನಿತ್ಯದ ಸಮಸ್ಯೆಗಳಿಗೆ ಪ್ರಾತಿನಿಧ್ಯವೇ ಇಲ್ಲದಂತಾಗಿದೆ. ಈ ಮಹಿಳೆಯರು ವೇದಿಕೆಯಲ್ಲೂ ಇರುವುದಿಲ್ಲ ಮತ್ತು ನಿರ್ಧರಿಸುವುದರಲ್ಲಿಯೂ ಇರುವುದಿಲ್ಲ.

ಮಹಿಳೆಯರು ಹೊರಬಂದು ತಮ್ಮ ವಿಷಯಗಳನ್ನು ರೈತ ಹೋರಾಟದ ಭಾಗವಾಗಿಸುವ ಅಗತ್ಯವಿದೆ. ವರದಕ್ಷಿಣೆ, ಜಾತಿದಮನ, ದುಪ್ಪಟ್ಟು ದುಡಿಮೆ, ಕೃಷಿದುಡಿಮೆಯಲ್ಲಿ ಅವರ ಕೊಡುಗೆಯನ್ನು ಗಮನಿಸದೇ ಇರುವುದು ಇವೆಲ್ಲವೂ ಆದ್ಯತೆ ಪಡೆದುಕೊಳ್ಳುವುದು, ಮಹಿಳೆಯರು

ಹೊರಬಂದಾಗ ಮಾತ್ರವಲ್ಲ, ಸ್ವಸಂಘಟಿತರಾದಾಗ ಮಾತ್ರ. ಇಲ್ಲವಾದರೆ ಶೇ 50ರಷ್ಟು ರೈತ ಸಮುದಾಯವನ್ನು ಕೈಬಿಡುವುದು ನಮ್ಮನ್ನು ಅಪಾಯಕ್ಕೆ ಒಡ್ಡಿಕೊಂಡಂತೆ. ಇಂತಹ ಬದಲಾವಣೆಗಾಗಿ ವೇದಿಕೆ ನಿರ್ಮಿಸುವುದು ರಾಜಕೀಯ ತುರ್ತಾಗಿದೆ.

ಪಿತೃಪ್ರಧಾನತೆಯ ವಿರುದ್ಧ ಹೋರಾಡುವುದೆಂದರೆ ಮಹಿಳಾ ದುಡಿಮೆಯ, ಮಹಿಳಾ ಲೈಂಗಿಕತೆಯ ನಿಯಂತ್ರಣ ಮತ್ತು ಶೋಷಣೆಯ ವಿರುದ್ಧದ ಹೋರಾಟ ಎಂಬುದನ್ನು ನಾವು ನಂಬುವುದಾದರೆ ಮಹಿಳೆಯರು ಈಗಾಗಲೇ ಹೋರಾಟದ ಇತಿಹಾಸವನ್ನು ನಿರ್ಮಿಸಿದ್ದಾರೆ. ಹೋರಾಟದ ಬಗೆಗಿನ ಆ ನಂಬಿಕೆ ಮತ್ತು ಬದ್ಧತೆಯನ್ನು ನಾವು ಇಂದಿನ ದಿನ ಮರು ಸ್ಥಾಪಿಸಿಕೊಳ್ಳಬೇಕಿದೆ. ಏಕೆಂದರೆ ಮಹಿಳೆಯರಿಗೆ ಯಾವುದೂ ಸುಲಭವಾಗಿ ಸಿಕ್ಕಿಲ್ಲ.

ಅದಕ್ಕಾಗಿಯೇ ಮಹಿಳೆಯ ಇತಿಹಾಸವೆಂದರೆ ಬೇರೇನಲ್ಲ, ಅದು ಮಹಿಳಾ ಹೋರಾಟದ ಇತಿಹಾಸ.

# ಗೋಗು ಶ್ಯಾಮಲಾ ಪರಿಚಯ

ಗೋಗು ಶ್ಯಾಮಲಾ ತೆಲುಗು ಕವಿ, ಬರಹಗಾರ್ತಿ ಮತ್ತು ಮಹಿಳಾ ಹೋರಾಟಗಾರ್ತಿ. ಈಗ ತೆಲಂಗಾಣ ರಾಜ್ಯದಲ್ಲಿರುವ ರಂಗಾರೆಡ್ಡಿ ಜಿಲ್ಲೆಯವರಾದ ಶ್ಯಾಮಲಾ ಕೃಷಿ ಕಾರ್ಮಿಕ ಕುಟುಂಬದಿಂದ ಬಂದವರು. ಕೆಲಕಾಲ ತಾವೂ ಕೃಷಿ ಕಾರ್ಮಿಕರ ಮುಂದಾಳಾಗಿ ಅವರೊಡನೆ ಕೆಲಸ ಮಾಡಿದರು. ಅವರ ಕುಟುಂಬದಲ್ಲಿ ಶ್ಯಾಮಲಾ ಮಾತ್ರ ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾದದ್ದು. ಭೀಮರಾವ್ ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾಲಯದಿಂದ ಬಿಎ ಮಾಡಿದ ಶ್ಯಾಮಲಾ ನಂತರ ಅಧ್ಯಯನ ನಿರತರಾಗಿಯೇ ಇದ್ದಾರೆ. ಭೂಮಿಕಾ, ಮನ ತೆಲಂಗಾಣ, ಪ್ರಸ್ಥಾನಂ, ಪ್ರತಿಘಟನಾ, ಪ್ರಜಾ ಕಲಾ ಮಂಡಲಿ ಮೊದಲಾದ ಪತ್ರಿಕೆಗಳಿಗೆ ನಿಯಮಿತವಾಗಿ ಬರೆಯುತ್ತಾರೆ.

ಮೊದಮೊದಲಿಗೆ ಜಾತಿ ತಾರತಮ್ಯ ತಮ್ಮ ಗಮನಕ್ಕೆ ಬಂದಿರಲಿಲ್ಲವೆಂದೂ, ಬೆಳೆಯುತ್ತ ಹೋದಮೇಲೇ ಅದು ಅರಿವಾಯಿತೆಂದು ಶ್ಯಾಮಲಾ ನೆನೆದುಕೊಂಡಿದ್ದಾರೆ. ವಿದ್ಯಾರ್ಥಿಯಾಗಿದ್ದಾಗ ಹಾಸ್ಟೆಲಿನಲ್ಲಿ ಸೌಲಭ್ಯ ಸರಿಯಿಲ್ಲವೆಂದು ಎಲ್ಲರನ್ನು ಸೇರಿಸಿ ಹೋರಾಟ ನಡೆಸಿದ್ದರು. ಸಿಪಿಐ(ಎಂಎಲ್) ಪಕ್ಷದ ವಿದ್ಯಾರ್ಥಿ ಸಂಘಟನೆಯಲ್ಲಿ ಕ್ರಿಯಾಶೀಲವಾಗಿ ತೊಡಗಿಕೊಂಡಿದ್ದರು. ಚುಂಡೂರು ದಲಿತ ಹತ್ಯಾಕಾಂಡದ ನಂತರ ಆ ಎಡಪಕ್ಷದಿಂದ ದೂರ ಸರಿದರು. ತಮ್ಮನ್ನು ಈಗ ದಲಿತ ಸ್ತ್ರೀವಾದಿ ಎಂದೇ ಶ್ಯಾಮಲ ಕರೆದುಕೊಳ್ಳುತ್ತಾರೆ. ರೋಹಿತ ವೇಮುಲನ ಆತ್ಮಹತ್ಯೆ ಪ್ರಕರಣವು ಹೈದರಾಬಾದ್ ವಿ.ವಿ.ಯಲ್ಲಿ ಸಂಭವಿಸಿದ ನಂತರ ಅವರು ರಾಧಿಕಾ ವೇಮುಲ ಅವರನ್ನು ಪೂರ್ಣವಾಗಿ ಬೆಂಬಲಿಸಿ ನಿಂತರು. ಮಾಧ್ಯಮಗಳು ದಲಿತ ಮತ್ತು ಸ್ತ್ರೀವಾದಿ ದೃಷ್ಟಿಕೋನಗಳಿಂದ ವಿಷಯಗಳನ್ನು ವಿವೇಚಿಸಬೇಕೆಂದು ಹೇಳಿದರು.

ತೆಲುಗು ಸಾಹಿತ್ಯದ ಕೆಲವು ಉತ್ಕೃಷ್ಟ ಕತೆಗಳನ್ನು ಬರೆದಿರುವ ಶ್ಯಾಮಲಾ, ಶ್ರೀಮಂತ ಮೌಖಿಕ ಪರಂಪರೆಯನ್ನು ಸಾಕಷ್ಟು ತಮ್ಮ ಬರಹಗಳಲ್ಲಿ ಬಳಸುತ್ತಾರೆ. 'ಫಾದರ್ ಮೇ ಬಿ ಅನ್ ಎಲಿಫೆಂಟ್ ಅಂಡ್ ಮದರ್ ಓನ್ಲಿ ಎ ಸ್ಮಾಲ್ ಬಾಸ್ಕೆಟ್, ಬಟ್', 'ತಾಟಕಿ ವಿನ್ಸ್ ಆಗೇನ್ ಅಂಡ್ ಬ್ರೇವ್ ಹಾರ್ಟ್ ಬಡೆಯ್ಯಾ' ಎಂಬ ಎರಡು ಕಥಾಸಂಕಲನಗಳು ತೆಲುಗಲ್ಲಿ ಬಂದು ಇಂಗ್ಲೀಷಿಗೆ ಅನುವಾದವಾಗಿವೆ. 'ನೇನೆ ಬಲಾನ್ನಿ' (ಟಿ. ಎನ್. ಸದಾಲಕ್ಷ್ಮಿ ಜೀವನ ಚರಿತ್ರೆ), 'ವಾಡ ಪಿಳ್ಳಾಲ ಕಥಾಲು', 'ಜೆಂಡರ್ ಕಾನ್ಶಸ್‌ನೆಸ್ ಇನ್ ದಲಿತ್ ವಿಮೆನ್ಸ್ ಲಿಟರೇಚರ್' ಮೊದಲಾದ ಅಧ್ಯಯನಪೂರ್ಣ ಪುಸ್ತಕ ಪ್ರಕಟಿಸಿದ್ದಾರೆ. ಮಾದಿಗ ಸಮುದಾಯದ ಮಹಿಳೆಯರ ಕಥೆಗಳನ್ನು ಸಂಪಾದಿಸಿದ್ದಾರೆ.

ಪ್ರಸ್ತುತ ಹೈದರಾಬಾದಿನ ಅನ್ವೇಷಿ ಮಹಿಳಾ ಅಧ್ಯಯನ ಕೇಂದ್ರದ ಸೀನಿಯರ್ ಫೆಲೋ ಆಗಿದ್ದಾರೆ. ರಾಜಕೀಯ ಕ್ಷೇತ್ರದ ದಲಿತ ಮಹಿಳೆಯರ ಕುರಿತ ಜೀವನ ಚರಿತ್ರೆ ರೂಪಿಸುವ ಕೆಲಸದಲ್ಲಿ ತೊಡಗಿದ್ದಾರೆ.

## ಹೋರಾಟದಿಂದ ಸಾಧಿಸಿಕೊಂಡ ಹಕ್ಕುಗಳನ್ನು ನಾವು ಕಾಪಾಡಿಕೊಳ್ಳಬೇಕಾಗಿದೆ

**-ಗೋಗು ಶ್ಯಾಮಲ**

(ಕನ್ನಡಾನುವಾದ : ಕೆ. ವಿ. ನೇತ್ರಾವತಿ)

ಎಲ್ಲರಿಗೂ ನಮಸ್ಕಾರ, ಮಹಿಳಾ ಒಕ್ಕೂಟದ ಕುರಿತು ನನಗೆ ತುಂಬಾ ಖುಷಿ ಇದೆ. ನಾನು ಪಕ್ಕದ ರಾಜ್ಯದಿಂದ ಇಲ್ಲಿಗೆ ಬಂದಿರುವುದು ಅತಿಥಿಯಾಗಿ ಅಲ್ಲ, ಒಕ್ಕೂಟದ ಸದಸ್ಯೆಯಾಗಿ ಬಂದಿರುವೆ. ನಾನು ಒಕ್ಕೂಟಕ್ಕೆ ತುಂಬಾ ಹತ್ತಿರದವಳಂತೆ ಅನಿಸುತ್ತಾ ಇದೆ. ನೀವೆಲ್ಲರೂ ಒಟ್ಟಾಗಿ ಸೇರಿರುವುದು ನನ್ನಲ್ಲಿ ತುಂಬಾ ಆಸಕ್ತಿಯನ್ನು ಹುಟ್ಟಿಸಿದೆ. ಬಿರುಬಿಸಿಲಿನಲ್ಲಿ ಕಾಮನಬಿಲ್ಲು ಮೂಡಿದಂತಾಗಿದೆ. ಹಾಗೆ ಹಲವು ಬಣ್ಣಗಳು ಒಂದೆಡೆ ಸೇರಿರುವುದು ತುಂಬಾ ಖುಶಿಯ ವಿಚಾರ ಹಾಗೂ ಹೀಗೆ ಮಹಿಳೆಯರೆಲ್ಲರೂ ಒಂದೆಡೆ ಸೇರಬೇಕಾದುದು ತುಂಬಾ ಅವಶ್ಯವೂ ಹೌದು.

ಕೊಪ್ಪಳವನ್ನು ನಡುಮಧ್ಯದ ಪ್ರದೇಶವಾಗಿಟ್ಟುಕೊಂಡು, ಇಲ್ಲಿಯ ಮಹಿಳಾ ವಿಚಾರಗಳನ್ನು ಇರಿಸಿಕೊಂಡು, ಸಮಾನತೆಗಾಗಿ, ಎಲ್ಲರ ಹಕ್ಕುಗಳಿಗಾಗಿ ಕೆಲಸ ಮಾಡುತ್ತಿರುವುದು ತುಂಬಾ ಖುಶಿಯ ವಿಚಾರ. ಇದು ಪ್ರಪಂಚಕ್ಕೆ ದಿಕ್ಸೂಚಿಯ ಹಾಗೆ ಕಾಣುತ್ತಿದೆ.

ಸರಸ್ವತಿ, ವಾಣಿ, ಅನುಪಮಾ ಇವರ ಯೋಚನಾ ವಿಧಾನದಲ್ಲಿ ಒಕ್ಕೂಟದ ಒಳನೋಟಗಳನ್ನು ಅರ್ಥ ಮಾಡಿಕೊಳ್ಳುತ್ತಿದ್ದೇನೆ.

ಜಾಗತೀಕರಣದ ಕಾರಣದಿಂದ ಅನೇಕ ತಾರತಮ್ಯಗಳನ್ನು ನಾವು ಹಿಂದಿಗಿಂತಲೂ ಇಂದು ಹೆಚ್ಚು ಎದುರುಗೊಳ್ಳುತ್ತಿದ್ದೇವೆ. ಆ ಹಿನ್ನೆಲೆಯಲ್ಲಿ ಒಕ್ಕೂಟದ ಗೆಳತಿಯರ ಐಡಿಯಾಲಜಿಯನ್ನು ಮುಖ್ಯವಾಗಿ ಅರ್ಥಮಾಡಿಕೊಳುತ್ತಿದ್ದೇನೆ. ಸಮಾನತೆ, ಗೌರವ, ಘನತೆ ಇವುಗಳನ್ನು ಬಯಸುವವರು, ಅವು ಸಮಾಜದಲ್ಲಿ ಇರಬೇಕೆಂದು ಬಯಸುತ್ತಾರೆ. ಈ ನೆಲೆಯಲ್ಲಿ ಒಬಿಸಿ, ದಲಿತ, ಬುಡಕಟ್ಟು ಸ್ತ್ರೀಯರು ಐತಿಹಾಸಿಕವಾಗಿ ಕರ್ನಾಟಕವನ್ನು ನಿರ್ಮಿಸಿದ ಸಮುದಾಯಗಳಾಗಿವೆ. ಇದನ್ನು ಅವರ ಜ್ಞಾನ, ಜೀವನ ಶೈಲಿಯಲ್ಲಿ ನೋಡಬಹುದು. ಅದಕ್ಕೆ ಉತ್ತಮ ಉದಾಹರಣೆ ಕೊಪ್ಪಳ ಸೀರೆ. ನನಗೂ ಸಹ ಕೊಪ್ಪಳ ಸೀರೆಯನ್ನು ಉಡುಗೊರೆಯಾಗಿ ಕೊಟ್ಟು ಆತ್ಮೀಯವಾಗಿ ಬರಮಾಡಿಕೊಂಡಿದ್ದಾರೆ. ಇವರ ಪ್ರಭಾವ ಇಡೀ ಉತ್ತರಕರ್ನಾಟಕ, ಇಡೀ ಇಂಡಿಯಾವನ್ನೂ ಪಸರಿಸಬೇಕಾಗಿದೆ. ಆ ನಿಟ್ಟಿನಲ್ಲಿ ಆ ದಾರಿಯಲ್ಲಿ ನಮ್ಮ ಕೆಲಸದ ವಿಧಾನ ಸಾಧ್ಯವಾಗಬೇಕಾಗಿದೆ.

ನಾವು ಮಾಡುವ, ಮಾಡುತ್ತಿರುವ ಕೆಲಸ, ಹೋಗುತ್ತಿರುವ ದಾರಿ ಹೊಸದಲ್ಲ, ಅವಕ್ಕೆಲ್ಲ ನಾವು ಪ್ರಾರಂಭಿಕರಲ್ಲ, ಮೊದಲೇ ಈ ಜ್ಞಾನ, ಚಿಂತನೆ ಇದೆ. ನಾವು ಅದಕ್ಕೆ ವಾರಸುದಾರರಾಗಿದ್ದೇವೆ. ಮತ್ತು ಅದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದೇವೆ. ಭಾರತದಲ್ಲಿ, ಕರ್ನಾಟಕದಲ್ಲಿ ಅಕ್ಕಮಹಾದೇವಿ,

ಶೇಕ್ ಫಾತಿಮಾ, ಜ್ಯೋತಿಬಾ–ಸಾವಿತ್ರಿಬಾಯಿ ಫುಲೆಯಂತಹ ಧೀರರು, ದಿಟ್ಟ ಮಹಿಳೆಯರು ಶಿಕ್ಷಣ ಎಲ್ಲರಿಗೂ ಬೇಕೆಂದು, ಶಿಕ್ಷಣವೆಂದರೆ ಜ್ಞಾನವೆಂದು ಅರಿತು ಅದು ಎಲ್ಲರಿಗೂ ತಲುಪುವ ದಿಸೆಯಲ್ಲಿ ಬಹು ಹಿಂದೆಯೇ ಕೆಲಸ ಮಾಡಿದ್ದಾರೆ. ಆ ಕೆಲಸಗಳತ್ತ ಗಮನ ಹರಿಸಿದರೆ ಅವರು ತುಂಬಾ ಪ್ರಾಕ್ಟಿಕಲ್ ಆಗಿ ಮಾಡಿರುವುದು ತಿಳಿಯುತ್ತದೆ. ಅವರು ಸುಮ್ಮನೆ ಕೂತು ಮಾತಾಡಿಲ್ಲ, ಕೆಲಸ ಮಾಡಿದ್ದಾರೆ.

ಮನುವಾದ, ಬ್ರಾಹ್ಮಣವಾದ ಈ ಸಮಾಜವನ್ನು ಕತ್ತಲಲ್ಲಿ ಇಟ್ಟಿವೆ. ಇದರಿಂದ ಹೊರ ಬರುವ ನೆಲೆಯಲ್ಲಿ ನಮ್ಮ ಹಿಂದಿನ ನಾಯಕ, ನಾಯಕಿಯರು ಬಹುವಾಗಿ ಶ್ರಮಿಸಿದ್ದಾರೆ. ತೆಲಂಗಾಣದ ರಾಮಕ್ಕ, ಸದಾಲಕ್ಷ್ಮಿ, ಈಶ್ವರ ಬಾಯಿ, ಸುಮಿತ್ರಾಬಾಯಿ ಮುಂತಾದ ದಲಿತ ಮಹಿಳೆಯರು ತೆಲಂಗಾಣದ ಏಳಿಗೆಗಾಗಿ ಶ್ರಮಿಸಿದ್ದಾರೆ. ಸಮಾಜದಲ್ಲಿ ಇರುವ ಇಂತಹ ಸ್ತ್ರೀಯರಿಗೆ ಶ್ರೀಮಂತ ಜ್ಞಾನವಿದೆ. ಅವರ ಜ್ಞಾನವನ್ನು ಗೌರವಿಸುತ್ತಾ ಅವರ ಜ್ಞಾನ ವಿಸ್ತಾರವಾಗುವ ನೆಲೆಯಲ್ಲಿ ನಾವು ಕೆಲಸ ಮಾಡಬೇಕಾಗಿದೆ. ಅಂತಹ ರಿಫ್‌ಲೆಕ್ಷನ್ ಒಕ್ಕೂಟದಲ್ಲಿ ಕಾಣ್ತಿದೆ. ಈ ಮಹಿಳಾ ಒಕ್ಕೂಟದ ಸಮಾನತೆಯ ದೃಷ್ಟಿ, ಆತ್ಮಗೌರವದ ನಡೆ ನನಗೆ ತುಂಬಾ ಖುಶಿ ಕೊಟ್ಟಿದೆ.

ಸರಕಾರಿ ಕಾಯ್ದೆಗಳು, ಸಾವಿರಾರು ವರ್ಷಗಳಿಂದ ಹೋರಾಟದಿಂದ ಸಾಧಿಸಿಕೊಂಡ ಹಕ್ಕುಗಳನ್ನು ನಾವು ಕಾಪಾಡಿಕೊಳ್ಳಬೇಕಾಗಿದೆ. ಹಿಂದುಳಿದ ದಲಿತ ಸಮುದಾಯಗಳಿಗೆ ದೀರ್ಘವಾದ ಚರಿತ್ರೆ ಇದೆ. ಅದ್ಭುತ  ಜ್ಞಾನವಿದೆ. ಅದನ್ನು ಹೊರತಾಗಿಸಿ ಅವರಿಗೆ ಏನೂ ಗೊತ್ತಿಲ್ಲ, ಅವರು ಕೇವಲ ಪ್ರಜೆಗಳು, ಅವರಿಗೆ ಏನೂ ಗೊತ್ತಿಲ್ಲ. ಅವರಿಗೆ ನಾವು ಏನಾದರೂ ಕೊಡಬೇಕು ಎಂದು ತಿಳಿಯದ ಮೂಢರು 'ನೀವು ಬರಿ ಓಟು ಹಾಕಿ, ನಾವು ನಿಮಗೆ ಏನಾದರೂ ಮಾಡುತ್ತೀವಿ, ನಿಮ್ಮನ್ನು ಉದ್ಧಾರ ಮಾಡ್ತೀವಿ' ಎಂದು ಹೇಳುವ ಕೆಟ್ಟ ಸಂಸ್ಕೃತಿ ಸ್ಥಾಪಿತಗೊಂಡಿದೆ. ಈಗ ಏನೆಲ್ಲಾ ದೌರ್ಜನ್ಯಗಳು ನಡೆಯುತ್ತಿವೆ ಅವೆಲ್ಲವೂ ಅವರ ನೆರಳುಗಳೇ ಆಗಿವೆ.

ಮಹಿಳೆ, ದಲಿತ, ಆದಿವಾಸಿಗಳ ಮೇಲೆ ದೌರ್ಜನ್ಯಗಳು ನಿರಂತರವಾಗಿ ನಡೆಯುತ್ತಲೇ ಇದೆ. ಇವುಗಳ ವಿರುದ್ಧ ನಿರಂತರವಾಗಿ ಕೆಲಸ ಮಾಡಬೇಕಾಗಿದೆ. ಒಂದು ಎರಡು ಹೋರಾಟ ಮಾಡಿ ಕುಂತರೆ ಪ್ರಯೋಜನವಿಲ್ಲ. ನಮ್ಮ ಹಿರಿಯರ ನಡೆಗಳಲ್ಲಿನ ಜ್ಞಾನವನ್ನು ಅಂದರೆ ಪರ್ಯಾಯವಾಗಿ ಪುರಾಣ, ಐತಿಹ್ಯ, ಕಥೆ, ಗೀತೆಗಳಲ್ಲಿನ ಜ್ಞಾನವನ್ನೂ ತೆಗೆದುಕೊಂಡು ಅವಶ್ಯವಾಗಿ ಬಳಸಿ ಅವನ್ನು ನಮ್ಮ ನಡೆಗೆ ಶಕ್ತಿಯಾಗಿ ಸ್ವೀಕರಿಸುವ ಅಗತ್ಯವಿದೆ. ಹಿಂದುಳಿದ ಜಾತಿಗಳಿಂದ, ದಲಿತ ಜಾತಿಗಳಿಂದ ಯುವಜನರು ಇತ್ತೀಚೆಗೆ ಬಹುಮುಖ್ಯವಾದ ಅಜೆಂಡಾವನ್ನು ಇಟ್ಟುಕೊಂಡು ಪ್ರಧಾನಧಾರೆಗೆ ಬರುತ್ತಿದ್ದಾರೆ. ಅವರಿಗೆ ಸರಿಯಾದ ದಾರಿ ಮಾಡಿ ಕೊಡಬೇಕಾಗಿದೆ. ಈ ರೀತಿಯ ವಾರಸತ್ವ, ಸಂಶೋಧನೆ, ಹುಡುಕಾಟ ಮಾಡುತ್ತಾ ಸಮುದಾಯಗಳನ್ನು ಬಲಶಾಲಿ ಮಾಡುತ್ತಾ ನಾವೂ ಬಲಶಾಲಿ ಆಗುವ ಅವಶ್ಯಕತೆ ಇದೆ.

ಸಬಲೀಕರಣ ಎಂದರೆ ಅದು ಪರ್ಯಾಯ ಸಂಸ್ಕೃತಿಯ ಒಂದು ಭಾಗ. ಒಂದು ಸಮುದಾಯಕ್ಕೆ ಅಥವಾ ವ್ಯಕ್ತಿಗೆ ಜ್ಞಾನ, ನಿರ್ಧಾರ ಕೈಗೊಳ್ಳುವಿಕೆ, ಆತ್ಮಾವಲೋಕನ ಬರುವಂತಾದರೆ ನಿಜವಾದ ಸಬಲೀಕರಣ ಆಗುತ್ತಿದೆ ಎಂದರ್ಥ. ಇಲ್ಲಿ ದಲಿತ ಹಿಂದುಳಿದ, ಆದಿವಾಸಿಗಳ ಪ್ರಾತಿನಿಧ್ಯ ಬಲವಾಗಿ ಇರಬೇಕಾಗಿದೆ. ಹಾಗೆ ಆಗಬೇಕಾದರೆ ನಮ್ಮ ನಡೆ ತುಂಬಾ ಸ್ಪಷ್ಟವಾಗಿ ಇರಬೇಕಾಗಿದೆ. ಅಂತಹ ನಡೆಯಲ್ಲಿ ಮಹಿಳಾ ಒಕ್ಕೂಟ ಇದೆ ಎಂದು ನಾನು ಭಾವಿಸುತ್ತೇನೆ. ಹಕ್ಕುಗಳೇ ಇಲ್ಲದ ದಿನಗಳಲ್ಲಿ ಮಾನವ ಹಕ್ಕುಗಳಿಗಾಗಿ ಹೋರಾಡಿದ, ಸಮಾನತೆಗಾಗಿ ಹೋರಾಡಿದ ಅಂಬೇಡ್ಕರ್ ಅಂತಹವರ ದಾರಿಯನ್ನು ಮಹಿಳಾ ಒಕ್ಕೂಟ ಅನುಕರಣೆ ಮಾಡಬೇಕಾಗಿದೆ. ಇಲ್ಲಿಗೆ ನನ್ನನ್ನು ಕರೆದು ಪ್ರೀತಿಯಿಂದ ಉಪಚರಿಸಿ,

ಕೊಪ್ಪಳ ಸೀರೆಯನ್ನು ಉಡಿಸಿ, ಪ್ರಾದೇಶಿಕ ಸೊಗಡಿನೊಂದಿಗೆ ನಾನು ಭಾಗವಹಿಸಲು ಅವಕಾಶ ಮಾಡಿಕೊಟ್ಟ ಒಕ್ಕೂಟದ ಗೆಳತಿಯರೆಲ್ಲರಿಗೂ, ಎಲ್ಲರಿಗೂ ನನ್ನ ಮನಃಪೂರ್ವಕ ವಂದನೆಗಳು. ನನ್ನನ್ನು ಮತ್ತೆ ಕರೆಯಿರಿ ಬರುತ್ತೇನೆ. ನಮ್ಮ ಸಂಬಂಧ ಹೀಗೆ ಇರುತ್ತದೆ. ಇನ್ನೂ ಗಟ್ಟಿಯಾಗುತ್ತದೆ.

# ಭಯವಿರದ ಸ್ವಾತಂತ್ರ್ಯ ಪ್ರತಿಪಾದಿಸಿದ ಕವಿತಾ ಕೃಷ್ಣನ್

**- ಡಾ. ಎಚ್. ಎಸ್. ಅನುಪಮಾ**

(ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು 2017ರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಾರ್ಚ್ 8, 9ರಂದು ಕೊಪ್ಪಳದಲ್ಲಿ ನಡೆಸಲಿದೆ. ಮಾರ್ಚ್ 9ರಂದು ನಡೆಯಲಿರುವ ಹಕ್ಕೊತ್ತಾಯ ಜಾಥಾ ಮತ್ತು ಸಾರ್ವಜನಿಕ ಸಮಾವೇಶದಲ್ಲಿ ದೆಹಲಿಯ ಕವಿತಾ ಕೃಷ್ಣನ್ ಪಾಲ್ಗೊಳ್ಳಲಿದ್ದಾರೆ. ಗೌರಿ ಲಂಕೇಶ್ ಪತ್ರಿಕೆಯಲ್ಲಿ ಪ್ರಕಟವಾದ ಅವರ ಕಿರು ಪರಿಚಯ ಇದು.)

ಕವಿತಾ ಕೃಷ್ಣನ್ 'ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘ' (ಆಲ್ ಇಂಡಿಯಾ ಪ್ರೊಗ್ರೆಸಿವ್ ವುಮೆನ್ಸ್ ಅಸೋಸಿಯೇಷನ್–ಐಪ್ವಾ)ದ ಜಂಟಿ ಕಾರ್ಯದರ್ಶಿ. ದೆಹಲಿಯಲ್ಲಿ ನಿರ್ಭಯಾ ಅತ್ಯಾಚಾರ ನಡೆದ ನಂತರ ಭುಗಿಲೆದ್ದ ಬೀದಿ ಹೋರಾಟಗಳಲ್ಲಿ ಹಾಗೂ ಜಾಲತಾಣಗಳಲ್ಲಿ ಮುಂಚೂಣಿಗೆ ಬಂದ ಹೆಸರು. ಮಹಿಳೆಯರ ಹಕ್ಕುಗಳ ಕುರಿತು ಖಚಿತ ಮತ್ತು ಮುಕ್ತ ಅಭಿಪ್ರಾಯಗಳನ್ನು ಹೊಂದಿರುವ ಕವಿತಾ ತಮ್ಮ ಈ ಗುಣಗಳಿಂದಲೇ ತರುಣ ಪೀಳಿಗೆಯನ್ನು ಸೆಳೆದಿರುವ ನಾಯಕಿ.

ಮೂಲತಃ ತಮಿಳುನಾಡಿನ ಕೂನೂರಿನ ಕವಿತಾ ಹುಟ್ಟಿ ಬೆಳೆದಿದ್ದು ಭಿಲಾಯಿಯಲ್ಲಿ. ತಂದೆ ಉಕ್ಕು ಕಾರ್ಖಾನೆಯಲ್ಲಿ ಇಂಜಿನಿಯರ್. ತಾಯಿ ಇಂಗ್ಲಿಷ್ ಉಪನ್ಯಾಸಕಿ. ಮುಂಬಯಿಯಲ್ಲಿ ಪದವಿ ಓದುವಾಗ ಬೀದಿ ನಾಟಕಗಳಲ್ಲಿ, ವಿದ್ಯಾರ್ಥಿ ಚಟುವಟಿಕೆಗಳಲ್ಲಿ ಮುಂದಿದ್ದ ಕವಿತಾ ದೆಹಲಿಯ ಜವಾಹರ್‌ಲಾಲ್ ವಿವಿಯಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿ ಎಂಫಿಲ್ ಮಾಡಿದರು. 1994ರಲ್ಲಿ ಜೆಎನ್ಯು ವಿದ್ಯಾರ್ಥಿ ಸಂಘದ ಚುನಾವಣೆಗೆ ಸ್ಪರ್ಧಿಸಿದ್ದ ಶಿವಸೇನಾ ವಿದ್ಯಾರ್ಥಿ ಸಾಂಪ್ರದಾಯಿಕ ನಿಲುವು ತಳೆದು ಮಹಿಳಾವಿರೋಧಿ ಭಾಷಣ ಮಾಡಿದಾಗ ಅದಕ್ಕೆ ಪ್ರತಿಯಾಗಿ ಅವನೆದುರು ತುಂಡುಲಂಗ ತೊಟ್ಟು ಸಿಗರೇಟ್ ಎಳೆಯುತ್ತ ಕವಿತಾ ಮತ್ತವರ ಗೆಳತಿಯರು ತಿರುಗಾಡಿದ್ದರು. 'ನೀನೇನಾದರೂ ಆಯ್ಕೆಯಾದರೆ ನಮ್ಮಂತಹ ಹುಡುಗಿಯರನ್ನು ಏನು ಮಾಡುತ್ತಿ?' ಎಂದು ಪ್ರಶ್ನಿಸಿದಾಗ, 'ಜೈಲಿಗೆ ಅಟ್ಟುತ್ತೇನೆ' ಎಂದಿದ್ದ ಅವನು. ಅವನ ದರ್ಪದ ಮಾತು ಕವಿತಾ ಮತ್ತವರ ಗೆಳತಿಯರಲ್ಲಿ ರೊಚ್ಚು ಕೆಚ್ಚು ಎರಡನ್ನೂ ಮೂಡಿಸಿತು.

ಆಗ ಕವಿತಾ 'ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸಿಸ್ಟ್–ಲೆನಿನಿಸ್ಟ್) ಲಿಬರೇಷನ್'ನ ವಿದ್ಯಾರ್ಥಿ ಸಂಘಟನೆ ಆಲ್ ಇಂಡಿಯಾ ಸ್ಟೂಡೆಂಟ್ಸ್ ಅಸೋಸಿಯೇಷನ್ (ಐಸಾ) ಸೇರಿದರು. ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿದ್ದ ಚಂದ್ರಶೇಖರ್ ಪ್ರಸಾದ್ ಎಂಬ ಯುವನಾಯಕನ ಗಾಢ ಪ್ರಭಾವಕ್ಕೆ ಒಳಗಾದರು. ನಂತರ ಜೆಎನ್ಯು ವಿದ್ಯಾರ್ಥಿ ಸಂಘಕ್ಕೆ ಜಂಟಿ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಆದರೆ ವಿದ್ಯಾರ್ಥಿ ಮುಖಂಡರಾದ ಚಂದ್ರಶೇಖರ್ ಹಾಗೂ ಶ್ಯಾಂ ನಾರಾಯಣ್ ಯಾದವ್ ಬಿಹಾರದ

ಸಿವನ್‌ನ ರ್‍ಯಾಲಿಯಲ್ಲಿ ಭಾಷಣ ಮಾಡುವಾಗ ಹತ್ಯೆಯಾದರು. ಅದಕ್ಕೆ ಕಾರಣರಾದ ಆರ್‌ಜೆಡಿ ಎಂಪಿ ಸೈಯದ್ ಶಹಾಬುದ್ದೀನ್ ಅವರನ್ನು ಬಂಧಿಸಬೇಕೆಂದು ಒತ್ತಾಯಿಸಿ ವಿದ್ಯಾರ್ಥಿಗಳು ಭಾರೀ ಪ್ರತಿಭಟನೆ ನಡೆಸಿದಾಗ ಕವಿತಾ ಜೈಲಿಗೆ ಹೋದರು.

ಹೀಗೆ ವಿದ್ಯಾರ್ಥಿ ದೆಸೆಯಲ್ಲೇ ರಾಜಕೀಯ ಜೀವನ ಆಯ್ದುಕೊಂಡ ಕವಿತಾ ಮುಂದೆಯೂ ಹಲವು ಬಾರಿ ಜೈಲುವಾಸಿಯಾದರು. ಈಗ ಅವರು 'ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸಿಸ್ಟ್-ಲೆನಿನಿಸ್ಟ್) ಲಿಬರೇಷನ್'ನ ಪಾಲಿಟ್ ಬ್ಯೂರೋ ಸದಸ್ಯೆ. ಪಕ್ಷದ ಮುಖವಾಣಿ ಪತ್ರಿಕೆ 'ಲಿಬರೇಷನ್'ನ ಸಂಪಾದಕಿ. ತಮ್ಮ ಪಕ್ಷದ ಮಹಿಳಾ ಸಂಘಟನೆ ಆಲ್ ಇಂಡಿಯಾ ಪ್ರೋಗ್ರೆಸಿವ್ ವುಮೆನ್ಸ್ ಅಸೋಸಿಯೇಷನ್ (ಐಪ್ವಾ)ದ ಕಾರ್ಯದರ್ಶಿ. ಕರ್ನಾಟಕದ ಹಿರಿಯ ಮಹಿಳಾ ಹೋರಾಟಗಾರ್ತಿ ಮೈಸೂರಿನ ರತಿ ರಾವ್ ಈಗ ಐಪ್ವಾದ ಅಧ್ಯಕ್ಷರಾಗಿದ್ದಾರೆ.

ಐಪ್ವಾ, ಮಹಿಳೆಯರ ಮೇಲಾಗುವ ಎಲ್ಲ ರೀತಿಯ ಶೋಷಣೆ, ತಾರತಮ್ಯ ಮತ್ತು ಹಿಂಸೆಯನ್ನು ವಿರೋಧಿಸುತ್ತ ಹಕ್ಕು ಮತ್ತು ಸಮಾನತೆಯನ್ನು ಪ್ರತಿಪಾದಿಸಲು ಮಹಿಳೆಯರನ್ನು ಸಂಘಟಿಸುತ್ತದೆ. ಸಾಮಾಜಿಕ ಬದಲಾವಣೆಗಾಗಿ ಪ್ರಗತಿಪರ ಶಕ್ತಿಗಳ ಜೊತೆ ಕೈ ಜೋಡಿಸುತ್ತದೆ. ಮನೆ, ಉದ್ಯೋಗ ಸ್ಥಳ ಹಾಗೂ ಸಮಾಜದಲ್ಲಿ ಮಹಿಳೆಯರು ಎದುರಿಸುತ್ತಿರುವ ತಾರತಮ್ಯ, ದೌರ್ಜನ್ಯಕ್ಕೆ ಕಾರಣವಾದ ಪುರುಷ ಪ್ರಧಾನ ದಬ್ಬಾಳಿಕೆಯನ್ನು ಐಪ್ವಾ ವಿರೋಧಿಸುತ್ತದೆ. ಸಮಾಜವಾದ ನೆಲೆಗೊಂಡ ಸಮಾನತೆಯ ಸಮಾಜಕ್ಕಾಗಿ ಹೋರಾಡುತ್ತದೆ. ಜಾತಿ, ವರ್ಗ, ಪಿತೃಪ್ರಾಧಾನ್ಯಗಳು ಶೋಷಣೆಯ ಮೂರು ಮುಖಗಳೆಂದು ಗುರುತಿಸಿ, ಅವುಗಳ ವಿರುದ್ಧ ಹೋರಾಟದಲ್ಲಿ ಸಮಾಜದ ಎಲ್ಲ ಸ್ತರಗಳ ಮಹಿಳೆಯರು ಭಾಗಿಯಾಗಬೇಕೆಂದು ಬಯಸುತ್ತದೆ.

ಐಪ್ವಾ ಸರ್ಕಾರಿ-ವಿದೇಶಿ ಧನಸಹಾಯದಿಂದ ನಡೆಯುವ ಸಂಘಟನೆಯಲ್ಲ. ಅದು ತನ್ನ ಇರವಿಗೆ ಜನಸಾಮಾನ್ಯ ಮಹಿಳೆಯರ ಶಕ್ತಿಯನ್ನೇ ಅವಲಂಬಿಸಿದೆ. 16 ವರ್ಷ ಮುಗಿದ, ಐಪ್ವಾದ ಸಂವಿಧಾನ-ಕಾರ್ಯಕ್ರಮಗಳ ಬಗೆಗೆ ಸಹಮತವುಳ್ಳ ಯಾರೇ ಆದರೂ ಅದರ ಸದಸ್ಯರಾಗಬಹುದು. ಸದಸ್ಯತ್ವ ಶುಲ್ಕ 2 ರೂಪಾಯಿ ಮಾತ್ರ. ಸಹಮತವಿರುವ ವ್ಯಕ್ತಿಗಳು, ಜನಸಾಮಾನ್ಯರಿಂದ ಸಂಗ್ರಹಿಸುವ ಹಣವೇ ಅದರ ಕೆಲಸ ಕಾರ್ಯಗಳಿಗೆ ಆಧಾರ. ಇಂತಹ ಸಂಘಟನೆಗಳ ಸದಸ್ಯರಲ್ಲಿ ಸಹಜವಾಗಿ ಕಾಣುವ ಸರಳ, ನಿರ್ಭಯ, ದಿಟ್ಟ ವ್ಯಕ್ತಿತ್ವ ಕವಿತಾ ಅವರದು.

**'ಫ್ರೀಡಂ ವಿತೌಟ್ ಫಿಯರ್'**: 2012ರ ನಿರ್ಭಯಾ ಅತ್ಯಾಚಾರ ಪ್ರಕರಣದ ವೇಳೆ ಕವಿತಾ ತಮ್ಮ ಭಿನ್ನ ನಿಲುವು, ನಾಯಕತ್ವದ ಗುಣಗಳಿಂದ ಮುನ್ನೆಲೆಗೆ ಬಂದರು. ಜಂತರ್ ಮಂತರ್, ಇಂಡಿಯಾ ಗೇಟ್, ಶೀಲಾ ದೀಕ್ಷಿತ್ ಮನೆ ಎದುರು ಮತ್ತು ದೆಹಲಿಯ ಇತರ ಕಡೆಗಳಲ್ಲಿ ನಡೆದ ಅತ್ಯಾಚಾರ ವಿರೋಧಿ ಪ್ರತಿಭಟನೆಗಳಲ್ಲಿ ಅವರು ಮುಂಚೂಣಿಯಲ್ಲಿದ್ದರು. 'ಅತ್ಯಾಚಾರವಾದದ್ದು ದೆಹಲಿಯಲ್ಲಾದರೆ, ಸಾವಿರಾರು ಜನ ಪ್ರತಿಭಟಿಸಿದರೆ, ರಾಷ್ಟ್ರ-ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾದರೆ ಪ್ರಕರಣದ ವಿಚಾರಣೆ ತ್ವರಿತಗೊಂಡು ಕೂಡಲೇ ತೀರ್ಪು ಬರುತ್ತದೆ. ಇಲ್ಲದಿದ್ದರೆ ದಶಕಗಟ್ಟಲೆ ಕಳೆದ ನಂತರವೂ 'ಸಾಕ್ಷ್ಯಾಧಾರಗಳಿಲ್ಲದೆ' ಕೇಸು ಸಾಯುತ್ತದೆ. ಖೈರ್ಲಾಂಜಿಯಲ್ಲಿ, ನಾಗ್ಪುರದಲ್ಲಿ, ಮಣಿಪುರದಲ್ಲಿ ನಡೆದದ್ದು ಮುಚ್ಚಿ ಹೋಗುತ್ತವೆ. ಭಾರತದಲ್ಲಿ ನ್ಯಾಯ ಸಿಗುವುದು ಎಂದರೆ ಲಾಟರಿ ಹೊಡೆಯುವ ಹಾಗೆ' ಎಂದು ಕವಿತಾ ನ್ಯಾಯವ್ಯವಸ್ಥೆಯ ವಿಳಂಬ ಮತ್ತು

ಅದಕ್ಷತೆಯನ್ನು ಕಟುವಾಗಿ ಟೀಕಿಸಿದರು. ಬಲಿಪಶು ಆದವರ ಸಾಕ್ಷ್ಯ ನಂಬುವ ಬದಲು ಫೋರೆನ್ಸಿಕ್ ಸಾಕ್ಷ್ಯಗಳನ್ನೇ ಕೋರ್ಟು ಹೆಚ್ಚೆಚ್ಚು ನಂಬುತ್ತಿರುವುದು ನ್ಯಾಯವ್ಯವಸ್ಥೆಯ ದುರಂತ ಎಂದು ಬಣ್ಣಿಸಿದ ಕವಿತಾ, ಅತ್ಯಾಚಾರಿಗೆ ಮರಣದಂಡನೆ-ಪೌರುಷಹರಣ ಮಾಡುವುದನ್ನು ಖಂಡತುಂಡ ವಿರೋಧಿಸಿದರು.

'ಅತ್ಯಾಚಾರವಾಗುವುದು ಲೈಂಗಿಕ ಬಯಕೆಯ ಕಾರಣದಿಂದಲ್ಲ. ಜ್ಯಾಕ್ ದ ರಿಪ್ಪರ್ ಎಂಬ ಸರಣಿ ಅತ್ಯಾಚಾರಿ-ಕೊಲೆ ಪಾತಕಿ ಷಂಡನಾಗಿದ್ದ. ಹೆಣ್ಣಿನ ಮೇಲೆ ಅತ್ಯಾಚಾರವೆಸಗಲು ಲೈಂಗಿಕ ಅಂಗವೇ ಬೇಕಿಲ್ಲ, ವಸ್ತುಗಳೂ ಸಾಕು. ಆದ್ದರಿಂದ ಪುರುಷತ್ವ ಹರಣ ಮಾಡುವುದು ಅತ್ಯಾಚಾರ ಕೊನೆಗೊಳಿಸುವುದಿಲ್ಲ. 100 ಅತ್ಯಾಚಾರಿಗಳಲ್ಲಿ 26 ಜನರಿಗೆ ಮಾತ್ರ ಶಿಕ್ಷೆಯಾಗುತ್ತಿರುವಾಗ ಮರಣ ದಂಡನೆ ಶಿಕ್ಷೆಯೂ ಅತ್ಯಾಚಾರ ತಡೆಗಟ್ಟಲಾರದು' ಎಂದು ಅತ್ಯಂತ ಸ್ಪಷ್ಟ ಮಾತುಗಳಲ್ಲಿ ಕವಿತಾ ತಿಳಿಸಿದರು. ಹೆಣ್ಣಿಗೆ ಬೇಕಿರುವುದು ಬರಿಯ ರಕ್ಷಣೆಯಲ್ಲ, ಸ್ವಾತಂತ್ರ್ಯ, ಭಯವಿರದ ಸ್ವಾತಂತ್ರ್ಯ ಎನ್ನುತ್ತಾ, 'ಫ್ರೀಡಂ ವಿತೌಟ್ ಫಿಯರ್' ಎಂಬ ಘೋಷವಾಕ್ಯ ಚಾಲ್ತಿಯಲ್ಲಿಟ್ಟರು. ಹೆಣ್ಣಿಗೆ ಎಂದೆಂದೂ ನಿರಾಕರಿಸಲಾದ ಸ್ವಾತಂತ್ರ್ಯವನ್ನು ಎಲ್ಲ ದನಿಗಳೂ ಪ್ರತಿಪಾದಿಸಿದವು. ಅವರ ವಿಭಿನ್ನ ವಿಶ್ಲೇಷಣೆ ತರುಣ ಪೀಳಿಗೆಯನ್ನು ಸೆಳೆದು ಸಾಮಾಜಿಕ ಜಾಲತಾಣದ ಕಣ್ಮಣಿಯಾದರು.

ಎಲ್ಲರೂ ಮಹಿಳೆಯ ರಕ್ಷಣೆ-ಭದ್ರತೆಯ ಬಗೆಗೆ ಮಾತನಾಡಿದರೆ ಕವಿತಾ ಮಹಿಳಾ ಸ್ವಾತಂತ್ರ್ಯದ ಬಗೆಗೆ ಮಾತನಾಡಿದರು. 'ಜಗತ್ತಿನ ಎಲ್ಲಕಡೆ ಹೆಣ್ಣನ್ನು ಆಸೆಯಿಂದಲೆ ನೋಡುತ್ತಾರೆ. ಎಲ್ಲಿ ಹೆಜ್ಜೆಯಿಟ್ಟರೂ ಹೆಣ್ಣು ಅವೇ ನೋಟಗಳ ಎದುರಿಸಬೇಕು. ಸುಂದರ ಹೆಣ್ಣುಗಳ ಚರ್ಮ, ಆಕಾರ, ಸ್ತನ, ನಿತಂಬಗಳಿಗೆ ಸೌಂದರ್ಯದ ಕಾರಣದಿಂದ ಜಾಹೀರಾತಿನಲ್ಲಿ ತೋರಿಸಿಕೊಳ್ಳುವ ಸ್ವಾತಂತ್ರ್ಯ ವಾದರೂ ಇದೆ. ಹಾಗಿಲ್ಲದಿರುವ 'ಕುರೂಪಿ'ಗಳಿಗೆ ಯಾವ ಸ್ವಾತಂತ್ರ್ಯವಿದೆ? ಹೆಣ್ಣಿನ ಸಾಮಾಜಿಕ ಸ್ವಾತಂತ್ರ್ಯ, ಲೈಂಗಿಕ ಸ್ವಾತಂತ್ರ್ಯ ಬೇರೆ ಬೇರೆ ಅಲ್ಲ. ಯಾಕೆಂದರೆ ಲೈಂಗಿಕ ಸ್ವಾತಂತ್ರ್ಯ ಎಂದರೆ ನಿಮ್ಮ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವೂ ಆಗಿದೆ.'

ಅತ್ಯಾಚಾರದ ಸುತ್ತ, ಅಪರಾಧಿಗಳ ಸುತ್ತ, ಹುಡುಗಿಯರ 'ನಡತೆ-ಬಟ್ಟೆ'ಗಳ ಸುತ್ತ ಗಿರಕಿ ಹೊಡೆಯುತ್ತಿದ್ದ ಚರ್ಚೆ-ಸಂವಾದಗಳನ್ನು ಕವಿತಾ ಹೆಣ್ಣಿನ ಲೈಂಗಿಕ ಸ್ವಾತಂತ್ರ್ಯದ ವಿಸ್ತೃತ ಆಯಾಮ ಗಳತ್ತ ಒಯ್ದರು. 'ಭಯವಿಲ್ಲದೆ ಹೆಣ್ಣು ಹೊರಗೆಲ್ಲು ಮುಕ್ತವಾಗಿ ತಿರುಗದಂತಹ ಸನ್ನಿವೇಶ ನಿರ್ಮಾಣ ವಾಗಿದೆ. ಮಾಧ್ಯಮಗಳು ಹೆಣ್ಣು ಎಂದರೆ ಸತಿ ಸಾವಿತ್ರಿಯಂತೆ ತೋರಿಸಿ 'ಪಢಿಯೆ ಗೀತಾ ಬನೀಯೆ ಸೀತಾ' ಎನ್ನುವ ತಪ್ಪು ಮಾದರಿ ಸೃಷ್ಟಿಸಿವೆ. ನಾನು ಅಂಥ ಎಲ್ಲ ಮಾದರಿಗಳ ವಿರುದ್ಧ ನಿಲ್ಲಬಯಸುತ್ತೇನೆ. ರಾತ್ರಿ ಏಕೆ ಓಡಾಡಬೇಕು? ಹುಡುಗರೊಡನೆ ಏಕೆ ಅಡ್ಡಾಡಬೇಕು? ಎಂದೆಲ್ಲ ನಮ್ಮನ್ನು ಕೇಳಬೇಡಿ. ಹೆಂಗಸರಿಗೆ ಅಡ್ವೆಂಚರಸ್ ಆಗುವ ಎಲ್ಲ ಹಕ್ಕೂ ಇದೆ: ನಾವು ಹಾಗೇ ಇರುವವರು. ನಮಗೆ ಎಂತೆಂಥ ಬಟ್ಟೆ ಹಾಕಬೇಕು ಎಂದು ಸಲಹೆ ಕೊಡಬೇಡಿ. ಹಗಲು-ರಾತ್ರಿಗಳ ಯಾವ ಹೊತ್ತಿನಲ್ಲಿ ಸಂಚರಿಸುವುದು ಸುರಕ್ಷಿತ ಎಂದು ಹೇಳಬೇಡಿ. ಸುರಕ್ಷಿತವಾಗಿರಲು ಯಾರ ಜೊತೆ, ಎಷ್ಟು ಪುರುಷರ ಜೊತೆಗೆ ಅಡ್ಡಾಡಬೇಕು ಎಂಬ ಲೆಕ್ಕ ಕೊಡಬೇಡಿ. ಎಂಥ ದಿರಿಸು ತೊಡಬೇಕೆಂದು ನಮಗಲ್ಲ, ಅವರಿಗೆ ಹೇಳಿ. ಏಕೆ ಅತ್ಯಾಚಾರ ಮಾಡಬಾರದು ಎಂದು ಅವರಿಗೆ ತಿಳಿಸಿ. ಅಪರಿಚಿತರು, ಹೊರಗಿನವರೇ ಅತ್ಯಾಚಾರಿಗಳು ಎಂದು ಹೆಣ್ಮಕ್ಕಳನ್ನು ಹೆದರಿಸಲಾಗುತ್ತಿದೆ. ಅದು ಪೂರ್ಣ ಸತ್ಯವಲ್ಲ. ಪರಿಚಯಸ್ಥರು, ಬಂಧುಗಳು, ಗುರುಗಳು, ನಾವು ಗೌರವಿಸುವವರು, ರಕ್ಷಿಸುವವರೇ ಅತ್ಯಾಚಾರ ಎಸಗುವುದು

ಹೆಚ್ಚಿರುವಾಗ ಯಾರಿಂದ ಯಾರನ್ನು ರಕ್ಷಿಸುತ್ತೀರಿ? ಸಿಸಿಟಿವಿಗಳಿಂದ ಎಷ್ಟು ಹೆಣ್ಮಕ್ಕಳನ್ನು ರಕ್ಷಿಸುತ್ತೀರಿ? ಅತ್ಯಾಚಾರಕ್ಕೊಳಗಾಗದ ಹಾಗೆ ಸದಾ ನಮ್ಮನ್ನು ನಾವೇ ಕಾಪಾಡಿಕೊಳ್ಳುತ್ತಿರಲು ಸಾಧ್ಯವಿಲ್ಲ. ನಮಗೆ ಸ್ವಾತಂತ್ರ ಬೇಕು. ಭಯವಿರದ ಸ್ವಾತಂತ್ರ್ಯ ಬೇಕು.'

ಸಹಜವಾಗಿ ಅವರಿಗೆ ಬೆಂಬಲಿಗರೆಷ್ಟೋ ಅಷ್ಟೇ, ವಿರೋಧಿಗಳೂ ಹುಟ್ಟಿಕೊಂಡರು. ಕೆಟ್ಟ ಮೆಸೇಜುಗಳು, ಟೀಕೆ, ಪ್ರತಿಕ್ರಿಯೆಗಳ ಸುರಿಮಳೆಯೇ ಆಯಿತು. ಮಹಿಳೆ ತನ್ನ ಹಕ್ಕುಗಳ ಬಗೆಗೆ, ಸ್ವಾತಂತ್ರ್ಯದ ಬಗೆಗೆ ಮಾತನಾಡಿದಾಗಲೆಲ್ಲ ಲೈಂಗಿಕ ಸ್ವೇಚ್ಛಾಚಾರಿ ಎಂಬ ಗೂಬೆ ಕೂರಿಸಿ, 'ಸೂಳೆ' ಎಂಬ ಪಟ್ಟ ಕಟ್ಟಿ ಬಾಯ್ಮುಚ್ಚಿಸಲಾಗುತ್ತದೆ. 'ನಕ್ಸಲೈಟ್' ಎಂದು ಜರೆಯಲಾಗುತ್ತದೆ. ಕವಿತಾಗೂ ಅವೇ ಟೀಕೆಗಳು ಕೇಳಿಬಂದವು.

ಒಬ್ಬನಂತೂ, 'ಇಷ್ಟಪಟ್ಟವರ ಜೊತೆ ಮಲಗುವುದು ಹಕ್ಕು ಎನ್ನುತ್ತೀ. ನಿನ್ನಮ್ಮನೂ ಇಷ್ಟಪಟ್ಟವರ ಜೊತೆ ಮಲಗಿದ್ದಳೇ ಕೇಳು' ಎಂದ. 'ಹೌದು, ನನ್ನಮ್ಮ ಅವಳಿಷ್ಟಪಟ್ಟವರ ಜೊತೆಯೇ ಮಲಗಿದ್ದಳು. ಬಹುಶಃ ನಿನ್ನಮ್ಮನೂ ಸಹ. ಇಷ್ಟಪಟ್ಟವರ ಜೊತೆ ಮಲಗುವುದು ಮಾತ್ರ ಸೆಕ್ಸ್. ಉಳಿದದ್ದು ರೇಪ್, ತಿಳಕೊ' ಎಂದು ಅವನಿಗೆ ಖಾರವಾಗಿ ಪ್ರತಿಕ್ರಿಯಿಸಿದ್ದರು. ಕವಿತಾಗೆ ಪೂರಕವಾಗಿ ಅವರ ತಾಯಿ ಲಕ್ಷ್ಮಿ ಕೃಷ್ಣನ್, 'ನಾನು ನನಗೆ ಬೇಕಾದಾಗ, ನನಗಿಷ್ಟಬಂದವರ ಜೊತೆ ಮಲಗಿದ್ದೇನೆ. ಪ್ರತಿ ಸ್ತ್ರೀಪುರುಷರಿಗು ಪರಸ್ಪರ ಒಪ್ಪಿಗೆ ಮೂಲಕ ಸೇರಲು ಇರುವ ಈ ಸ್ವಾತಂತ್ರ್ಯವನ್ನು, ಬಲವಂತವಿರದ, ಬಂಧನಗಳಿರದ ಲೈಂಗಿಕ ಸ್ವಾತಂತ್ರ್ಯವನ್ನು ಕೊನೆತನಕ ಎತ್ತಿ ಹಿಡಿಯುತ್ತೇನೆ' ಎಂದು ಟೀಕಾಕಾರರ ಬಾಯಿ ಮುಚ್ಚಿಸಿದರು!

ಒಟ್ಟಾರೆಯಾಗಿ ಹೇಳುವುದಾದರೆ ಸಂಪ್ರದಾಯನಿಷ್ಠ, ಬಲಾಢ್ಯ ವರ್ಗವು ಒಪ್ಪದ ವಿಷಯಗಳನ್ನು ಎತ್ತಿ ಆಡುವ, ಹಕ್ಕು ಪ್ರತಿಪಾದಿಸುವ ಕವಿತಾ ಕೃಷ್ಣನ್ ಒಬ್ಬ ಶಕ್ತ ಸಂಘಟಕಿ, ಮುಕ್ತ ನಿರ್ಭೀತ ಮಾತುಗಾರಿಕೆಯಿಂದ ಜನಸಾಮಾನ್ಯರ ಸೆಳೆವ ವಾಗ್ಮಿ. ಅವರ ವಿಚಾರಗಳ ಬಗೆಗೆ ಸಹಮತ ಇಲ್ಲದವರಿಗೂ ಅವರ ಹಿಂದಿನ ಬದ್ಧತೆ, ಕಳಕಳಿ, ಹೋರಾಟದ ಕೆಚ್ಚಿನ ಬಗೆಗೆ ಭಿನ್ನಮತವಿರಲು ಸಾಧ್ಯವಿಲ್ಲ. ಮಹಿಳಾಪರ ಮತ್ತು ಸಾಮಾಜಿಕ ಹೋರಾಟಗಾರ್ತಿಯಾಗಿ ತನ್ನದೇ ಹಾದಿ ರೂಪಿಸಿಕೊಳ್ಳುತ್ತಿರುವ ಕವಿತಾ ಭವಿಷ್ಯದ ಭರವಸೆಯ ನಾಯಕಿ ಎನ್ನುವುದರಲ್ಲಿ ಅನುಮಾನವಿಲ್ಲ.

ಹೆಜ್ಜೆ ಹಾಕಿ ಕವಿತಾ ಜೊತೆಗೆ; ಬನ್ನಿ ಎಲ್ಲರು ಕೊಪ್ಪಳದೆಡೆಗೆ..

# ನಾವು ಪ್ರೀತಿಯ ಸಂಘರ್ಷ ನಡೆಸುತ್ತೇವೆ

**- ಕವಿತಾ ಕೃಷ್ಣನ್**

(ಕನ್ನಡಾನುವಾದ : ಮಲ್ಲಿಗೆ ಸಿರಿಮನೆ)

ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟಕ್ಕೆ ಹೃದಯಪೂರ್ವಕ ಧನ್ಯವಾದಗಳನ್ನು ಸಲ್ಲಿಸುವ ಮೂಲಕ ನನ್ನ ಮಾತುಗಳನ್ನು ಆರಂಭಿಸುತ್ತೇನೆ.

ಬಂಧುಗಳೇ ನನ್ನ ಪರಿಚಯ ಮಾಡುವಾಗ ಅನುಪಮರವರು ನಿನ್ನೆ ಇನ್ನೊಂದು ಕಾರ್ಯಕ್ರಮದಲ್ಲಿ ಭಾಗವಹಿಸಿ ದಣಿದು ಬಂದಿದ್ದಾರೆ ಎಂದರು. ಅದು ನಿಜ ಆದರೆ ನಿಮ್ಮೊಂದಿಗೆ ರ್‍ಯಾಲಿಯಲ್ಲಿ ಹೆಜ್ಜೆ ಹಾಕಿದ ತಕ್ಷಣ ನನ್ನ ದಣಿವು ಎಲ್ಲಿ ಹೋಯಿತು ಎಂಬುದೇ ಗೊತ್ತಾಗುತ್ತಿಲ್ಲ. ನಿಮ್ಮ ಮೆರವಣಿಗೆಯಲ್ಲಿ ಹಲವು ಘೋಷಣೆಗಳನ್ನು ಕೂಗಿದಿರಿ, ಅದರಲ್ಲಿ ನಿನ್ನೆ ಬೆಂಗಳೂರಿನಲ್ಲಿ ಪೌರಕಾರ್ಮಿಕರು ಸಾವನ್ನಪ್ಪಿದ ಬಗ್ಗೆ ಘೋಷಣೆ ಕೂಗಿದಿರಿ. ಅದು ಸಾವು ಅಲ್ಲ ಕೊಲೆ ಎಂಬುದೇ ನನ್ನ ಅಭಿಪ್ರಾಯ.

ನಿನ್ನೆ ಬೆಂಗಳೂರಿನಲ್ಲಿ ಮಹಿಳಾ ದಿನಾಚರಣೆಯ ಅಂಗವಾಗಿ ಪೌರಕಾರ್ಮಿಕ ಮಹಿಳೆಯರು ದೊಡ್ಡ ಚಳುವಳಿ ನಡೆಸಿದ್ದಾರೆ. ''ಕನಿಷ್ಠ ವೇತನ ಜಾರಿ ಮಾಡಿ ಮತ್ತು ನಮಗೆ ಕನಿಷ್ಠ ಮೂಲಭೂತ ಸೌಲಭ್ಯಗಳನ್ನು ಕೊಡಿ'' ಎಂದು ಕೂಗಿದ್ದಾರೆ. ದಿನಾ ಬೆಂಗಳೂರನ್ನು ಸ್ವಚ್ಛವಾಗಿಡುವ ನಮಗೆ ನಮ್ಮ ಹಕ್ಕುಗಳನ್ನು ಯಾಕೆ ಕೊಡುವುದಿಲ್ಲ ಎಂದು ಪ್ರಶ್ನಿಸಿದ್ದಾರೆ. ಇಂದು ನೀವು ಕೂಡ ಅವರ ಪರವಾಗಿ ದೊಡ್ಡ ಘೋಷಣೆ ಕೂಗಿದ್ದೀರಿ. ಈ ಹಿಂದೆ ಬೆಂಗಳೂರಿನ ಗಾರ್ಮೆಂಟ್ಸ್ ಮಹಿಳೆಯರು ದೊಡ್ಡ ಹೋರಾಟ ನಡೆಸಿದ್ದರು. ಅದರ ಘೋಷಣೆಗಳನ್ನು ಕೂಗಿದಿರಿ.

ನಿಮಗೆಲ್ಲಾ ಗೊತ್ತಿದೆ. ಮಣಿಪುರದಲ್ಲಿ ಸೈನಿಕರ ಸಶಸ್ತ್ರ ಪಡೆಯ ವಿಶೇಷ ಅಧಿಕಾರದ ವಿರುದ್ಧ ಮಹಿಳೆಯರು ಬೆತ್ತಲಾಗಿ ಹೋರಾಡಬೇಕಾದ ಪರಿಸ್ಥಿತಿ ಬಂದಿತು. ಅದರ ಕುರಿತು ಘೋಷಣೆಗಳು ಕೇಳಿ ಬಂದವು. ಈ ರೀತಿಯ ಎಷ್ಟೋ ಹೋರಾಟದ ಪರವಾಗಿ ಘೋಷಣೆಗಳನ್ನು ಕೂಗಿದಿರಿ. ಆಜಾದಿ ಘೋಷಣೆಗಳು ಕೂಡ ಮೊಳಗಿ ಬಂದವು. ಉಣ್ಣೋದಕ್ಕೆ, ಬದುಕುವುದಕ್ಕೆ, ಶಿಕ್ಷಣ ಪಡೆಯೋದಕ್ಕೆ, ಓಡಾಡೋದಿಕ್ಕೆ, ಹಿಂಸೆಯ ವಿರುದ್ಧ ನಾವು ಸ್ವಾತಂತ್ರ್ಯ ಕೇಳುತ್ತೇವೆ.

ಆಜಾದಿ ಘೋಷಣೆಗಳನ್ನು ಮೊದಲ ಬಾರಿಗೆ ಭಾರತ ಮತ್ತು ಪಾಕಿಸ್ತಾನದ ಮಹಿಳೆಯರು ಕೂಗಿದರು. ಅದೇ ರೀತಿ ನಮ್ಮ ದೇಶದ ಭಾಗವಾಗಿರುವ ಕಾಶ್ಮೀರದ ಹೆಣ್ಣುಮಕ್ಕಳ ಪರವಾಗಿ ಕೂಡ ನಾವು ಘೋಷಣೆ ಕೂಗುತ್ತೇವೆ. ಅಲ್ಲಿ ಸೈನಿಕರು ನಮ್ಮ ಹೆಸರಿನಲ್ಲಿ ಅಲ್ಲಿನ ಮಹಿಳೆಯರ ಮೇಲೆ ಅತ್ಯಾಚಾರ ನಡೆಸುತ್ತಾ ಇದ್ದಾರೆ. ನಮಗೆ ಗೊತ್ತು ಈ ರೀತಿ ಅವರ ಪರ ದನಿಯೆತ್ತಿದರೆ ನಮ್ಮನ್ನು ದೇಶದ್ರೋಹಿಗಳ ಪಟ್ಟಿಗೆ ಸೇರಿಸುತ್ತೀರಿ. ಪರವಾಗಿಲ್ಲ ನಮ್ಮನ್ನು ದೇಶದ್ರೋಹಿಗಳೆಂದು ಕರೆದರೂ ಕೂಡ ನಾವು ನಮ್ಮ ಸಹೋದರಿ ಮಹಿಳೆಯರ ಮೇಲಿನ ಹಿಂಸೆಯನ್ನು ವಿರೋಧಿಸುತ್ತೇವೆ.

ಮಹಿಳೆಯರನ್ನು ''ಏನು ಮಾಡುತ್ತಿದ್ದೀರಿ'' ಎಂದರೆ ನೀವು, ''ಏನೂ ಇಲ್ಲಾ'' ಅನ್ನುತ್ತೀರಿ. ನೀವು

ದಿನ ಪೂರ್ತಿ ಹಲವು ಕೆಲಸಗಳನ್ನು ಮಾಡುತ್ತಿದ್ದೀರಿ. ರಾತ್ರಿ 12 ಗಂಟೆಯಲ್ಲಿ ಮಗು ಎದ್ದರೆ ಅದಕ್ಕೆ ಹಾಲುಣಿಸುವ ಎಲ್ಲಾ ಕೆಲಸಗಳನ್ನು ಮಾಡುತ್ತೀವಿ. ಆದರೆ ಕೆಲಸ ಮಾಡುವುದಿಲ್ಲ ಅನ್ನುತ್ತೀರಿ. ಅಷ್ಟೇ ಅಲ್ಲ, ನಾವು ಮಾತ್ರ ಯಾಕೆ ಮಾಡಬೇಕು. ಯಾಕೆ ಗಂಡಸರು ಮಾಡುವುದಿಲ್ಲ ಎಂಬುದಾಗಿ ಕೂಡಾ ನಾವು ಪ್ರಶ್ನಿಸಬೇಕು.

ನೀವು ಸರ್ಕಾರಕ್ಕೆ ಒಂದು ಅಂಶ ಗಮನಕ್ಕೆ ತರುತ್ತಿದ್ದೀರಿ. ಅದು ಈ ಸಂದರ್ಭದಲ್ಲಿ ಪಡಿತರ ಕಿತ್ತುಕೊಳ್ಳುತ್ತಿದೆ. ಗ್ಯಾಸ್ ಬೆಲೆ ಹೆಚ್ಚು ಮಾಡುತ್ತಿದೆ. ಇದರ ವಿರುದ್ಧ ಹೋರಾಡುವುದು ಕೂಡ ಮಹಿಳೆಯರ ಪರವಾದ ಹೋರಾಟವೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಈ ಎಲ್ಲಾ ಸಹೋದರರು ನಮ್ಮ ಜೊತೆ ಸೇರಿದ್ದಾರೆ. ಅವರಿಗೆ ಅಭಿನಂದನೆ ಸಲ್ಲಬೇಕು, ಅದೇ ಸಂದರ್ಭದಲ್ಲಿ ಒಂದು ಅವರಿಗೆ ಅರ್ಥವಾಗಿರಬೇಕು. ಮನೆಯ ಎಲ್ಲಾ ಕೆಲಸಗಳನ್ನು ಅವರು ಕೂಡ ಹಂಚಿಕೊಂಡು ಮಾಡಬೇಕು ಎಂಬುದು.

ಮನೆಯಲ್ಲಿ ಮಹಿಳೆಯರು ಮಾತ್ರ ಕೆಲಸ ಮಾಡುವುದರಿಂದ ಯಾರಿಗೆ ಲಾಭವಾಗುತ್ತಿದೆ? ಗಂಡಸರು ದುಡಿದು ಬಂದಾಗ ಅವರಿಗೆ ವಿಶ್ರಾಂತಿ ಪಡೆಯಲು ಬಿಡುತ್ತೇವೆ. ಅಂದರೆ ಅವರನ್ನು ಮಹಿಳೆಯರು ಸಂತೈಸಿ, ಊಟ ಬಡಿಸಿ, ಮನೆಯ ಕೆಲಸವನ್ನೆಲ್ಲಾ ತಾನೊಬ್ಬಳೇ ಮಾಡಿ ಸಲಹುತ್ತಾಳೆ. ಇದರಿಂದ ಪುರುಷರಿಗೆ ಮಾತ್ರವಲ್ಲದೇ ನಾಳೆ ಆತ ದುಡಿಯಲು ಹೋಗುವ ಬಂಡವಾಳಶಾಹಿ ಮಾಲೀಕರಿಗೂ ಲಾಭವಾಗುತ್ತದೆ. ಆದರೆ ಶ್ರಮದ ಮೌಲ್ಯದ ವಿಚಾರಕ್ಕೆ ಬಂದಾಗ ಮಾತ್ರ ಮಹಿಳೆಯರು ಏನೂ ಮಾಡುವುದಿಲ್ಲ, ಎಲ್ಲಾ ಪುರುಷರೇ ಮಾಡುತ್ತಾರೆ ಎನ್ನುವುದು ಸರಿಯಲ್ಲ. ನಾವು ಇದನ್ನು ಒಪ್ಪುವುದಿಲ್ಲ. ಇನ್ನು ಮುಂದೆ ಎಲ್ಲಾ ಕೆಲಸಗಳನ್ನು ಹಂಚಿಕೊಳ್ಳೋಣ.

ಇನ್ನೊಂದು ವಿಚಾರ ನೆನಪಾಗುತ್ತಿದೆ. ಹೆಣ್ಣು ಮಕ್ಕಳು ಮನೆಯ ಗಾಡಿ ಇದ್ದ ಹಾಗೆ. ಅದನ್ನು ಮನೆಯಲ್ಲಿ ಪಾರ್ಕ್ ಮಾಡಿದರೆ ಅಪಘಾತ ಆಗುವುದಿಲ್ಲ. ಹೊರಗೆ ಬಂದಾಗ ಮಾತ್ರ ಅಪಘಾತವಾಗುವುದು ಎಂದು ಕೆಲವರು ಹೇಳುತ್ತಿದ್ದಾರೆ. ಅಂದರೆ ನಮ್ಮನ್ನು ಮನೆಯ ನಾಲ್ಕು ಗೋಡೆಗಳ ಒಳಗೆ ಕೂಡಿ ಹಾಕಲು ಪ್ರಯತ್ನಿಸುತ್ತಿದ್ದಾರೆ. ಅವರಿಗೆ ನಾವು ಈ ಸಮಾವೇಶದ ಮೂಲಕ ಉತ್ತರ ಕೊಡುತ್ತೇವೆ. ನಮ್ಮ ಮೆರವಣಿಗೆಯ ಮೂಲಕ, ''ನಾವು ಗಾಡಿಯಲ್ಲ, ಹೊರುವ ದುಡಿಯುವ ಕತ್ತೆಯಲ್ಲ, ಮನೆಯ ಕಾಲೊರೆಸುವ ಮ್ಯಾಟ್ ಅಲ್ಲ, ಬದಲಿಗೆ ನಾವು ಹೆಣ್ಣು ಮಕ್ಕಳು, ಶ್ರಮ ಜೀವಿಗಳು, ನಮ್ ಇಷ್ಟದ ಪ್ರಕಾರ ಹಾಡುತ್ತೇವೆ, ಕುಣಿಯುತ್ತೇವೆ, ನಮ್ಮ ಇಷ್ಟದ ಹಾಗೆ ನಮ್ಮ ಬದುಕನ್ನು ರೂಪಿಸಿಕೊಳ್ಳುತ್ತೇವೆ,'' ಎಂದು ಉತ್ತರಿಸಿದ್ದೇವೆ.

ಒಬ್ಬ ಮಂತ್ರಿ ಹೇಳುತ್ತಾರೆ, ಪುರುಷರ ಮತ್ತು ಮಹಿಳೆಯರ ವಸತಿ ನಿಲಯದ ಸಮಯಗಳು ಬೇರೆ ಬೇರೆಯಾಗಿರುತ್ತವೆ ಯಾಕೆ ಎಂದರೆ, ಹೆಣ್ಣು ಮಕ್ಕಳ ಹಾರ್ಮೋನ್‌ಗಳು ಕೆಲವು ಸಮಯದಲ್ಲಿ ಸ್ಫೋಟಗೊಳ್ಳುತ್ತವೆ, ಎಂದು. ನಾವು ಅವರಿಗೆ ವಿಜ್ಞಾನದ ಜೀವಶಾಸ್ತ್ರ ಬೋಧಿಸಬೇಕಿದೆ. ಹಾರ್ಮೋನ್‌ಗಳು ಕೇವಲ ಹೆಣ್ಣುಮಕ್ಕಳಿಗೆ ಮಾತ್ರ ಇರುವುದಿಲ್ಲ, ಪುರುಷರಿಗೂ ಇರುತ್ತವೆ ಮತ್ತು ಹೆಚ್ಚಾಗಿ ಸ್ಫೋಟಿಸುತ್ತವೆ ಎಂದು ಅವರಿಗೆ ಹೇಳಿಕೊಡೋಣ. ನೀವು ಆರ್.ಎಸ್.ಎಸ್‌ಗೆ ಸೇರಿ ನಮ್ಮ ಮೇಲೆ ಮನುವಾದ ಹೇರಲು ಬಂದರೆ ಒಪ್ಪುವುದಿಲ್ಲವೆಂದು ನಾವು ಗಟ್ಟಿ ಉತ್ತರ ಕೊಡುತ್ತೇವೆ.

ನಾವು ಕಾರ್ಮಿಕರನ್ನು ಸಂಘಟಿಸುತ್ತೇವೆ. ತಮಿಳುನಾಡಿನ ಗಾರ್ಮೆಂಟ್ಸ್ ಕಾರ್ಮಿಕರನ್ನು ಕೆಲಸದ ಅವಧಿಯಲ್ಲಿ ಬಹಳ ಬಿಗಿಯಾಗಿ ಇಡಲಾಗುತ್ತದೆ. ಅವರಿಗೆ ಯಾವುದೇ ಹಕ್ಕುಗಳಿರುವುದಿಲ್ಲ, ಅವರು

ಫೋನ್ ಬಳಸುವಂತಿಲ್ಲ, ಯಾರೊಡನೆಯೂ ಮಾತಾಡುವಂತಿಲ್ಲ ಇತ್ಯಾದಿ ಕಟ್ಟಳೆಗಳಿವೆ. ನಾನು ಯಾವುದೋ ಕಾಲದ ಕಾಪ್ ಪಂಚಾಯ್ತ್ ಬಗ್ಗೆ ಹೇಳುತ್ತಿಲ್ಲ. ಬದಲಿಗೆ ಆಧುನಿಕ ಯುಗದಲ್ಲಿ ಬ್ರಾಂಡ್ ಕಂಪನಿಯ ಬಟ್ಟೆಗಳನ್ನು ತಯಾರು ಮಾಡುವ ಮಹಿಳಾ ಕಾರ್ಮಿಕರ ನೋವಿನ ಕಥೆ ಹೇಳುತ್ತಿದ್ದೇನೆ. ಆ ಕಂಪನಿಯವರನ್ನು ಯಾಕೆ ಹೀಗೆ ಮಹಿಳೆಯರನ್ನು ಇಟ್ಟಿದ್ದೀರಿ ಎಂದು ಕೇಳಿದರೆ, ''ಈ ಮಹಿಳಾ ಕಾರ್ಮಿಕರ ತಂದೆ ತಾಯಿಗಳು ಮೊಬೈಲ್ ಬಳಸಲು ಒಪ್ಪುವುದಿಲ್ಲ ಅದಕ್ಕೆ,'' ಎಂದು ಕ್ಷುಲ್ಲಕ ಉತ್ತರ ಕೊಡುತ್ತಾರೆ. ನಾವು ಹೇಳುತ್ತೇವೆ, ಇವರು ಯಾಕೆ ಅವರವರ ಅಪ್ಪ ಅಮ್ಮಂದಿರ ಹಾಗೆ ವರ್ತಿಸಬೇಕು? ಕೇವಲ ಕಂಪನಿಯ ಮಾಲೀಕರಾಗಿ ಉತ್ತರಿಸಲಿ. ಇದಕ್ಕೆ ನಿಜ ಕಾರಣವೆಂದರೆ ಈ ಕಾರ್ಮಿಕ ಮಹಿಳೆಯರು ಕಾರ್ಮಿಕರ ಯೂನಿಯನ್ ಕಟ್ಟಬಾರದು, ಹಕ್ಕಗಳಿಗಾಗಿ ದನಿಯೆತ್ತಬಾರದು ಅಂತ. ಇದೇ ಅವರ ಉದ್ದೇಶ.

ಇವತ್ತು ನನಗೆ ಟ್ವೀಟ್ಟರಿನಲ್ಲಿ ಒಬ್ಬ ಹೀಗೆ ಪ್ರಶ್ನಿಸಿದ, ''ನನ್ನ ತಾಯಿ ಖುಷಿಯಾಗಿದ್ದಾಳೆ. ನೀವು ಮಾತ್ರ ಯಾಕೆ ಹೀಗೆ ಮಹಿಳಾ ಸಮಾನತೆ ಅಂತ ಬೊಬ್ಬೆ ಹೊಡೆಯುತ್ತಿದ್ದೀರಿ'' ಅಂತ? ಅದಕ್ಕೆ ನಾನು ಕೇಳುತ್ತೇನೆ, ''ನಿಮ್ಮ ತಾಯಿಯ ಜೊತೆ ಮಾತನಾಡಲು ನನಗೆ ಅವಕಾಶ ಕೊಡು, ಆಗ ಅವಳು ಅವಳ ನೋವುಗಳನ್ನು ಹೇಳಬಹುದು. ಅವಳ ಒಳಗೇನಿದೆ ಎಂದು ನಮಗೆ ಗೊತ್ತಾಗುತ್ತದೆ''. ಈ ರೀತಿಯ ಮನುವಾದಿ ಮನಃಸ್ಥಿತಿಯ ಹುಡುಗರು ನಮ್ಮಲ್ಲಿದ್ದಾರೆ. ಹಿಂದೂ ಮುಸ್ಲಿಂ ಹುಡುಗ ಹುಡುಗಿ ಜೊತೆಗೆ ಸ್ನೇಹ, ಪ್ರೀತಿ ಮಾಡಿದರೆ ಲವ್ ಜಿಹಾದ್ ಹೆಸರಿನಲ್ಲಿ ಗಲಭೆ ಹುಟ್ಟಿಸುತ್ತಿದ್ದಾರೆ. ಅವರು ನಮ್ಮ ಪ್ರೀತಿಗೆ ಹೆದರುತ್ತಾರೆ. ಹೆದರಿದರೆ ನಾವು ಹೆಚ್ಚು ಹೆಚ್ಚು ಪ್ರೀತಿಸುತ್ತೇವೆ. ಬೆದರಿಕೆಗಳಿಗೆ ಮಾತ್ರ ಹೆದರುವುದಿಲ್ಲ. ಜಿಹಾದ್ ಎಂದರೆ ಸಂಘರ್ಷ ಅಂತ. ನಾವು ಪ್ರೀತಿಯ ಸಂಘರ್ಷ ನಡೆಸುತ್ತೇವೆ.

ನಮ್ಮ ದೇಹ ನಮ್ಮ ಹಕ್ಕು. ನಮ್ಮ ಸುರಕ್ಷತೆಯ ಹೆಸರಿನಲ್ಲಿ ಎಲ್ಲೆಡೆ ಗದ್ದಲ, ದಂಗೆ ಮೂಡಿಸಿದರೆ, ಈ ಶಕ್ತಿಗಳನ್ನು ನಾವು ವಿರೋಧಿಸುತ್ತೇವೆ.

100 ವರ್ಷಕ್ಕಿಂತ ಹಿಂದೆ ಪ್ರಪಂಚದ ಹಲವಾರು ದೇಶಗಳಲ್ಲಿ ಕಾರ್ಮಿಕರು ಹೋರಾಟಕ್ಕಿಳಿದರು, ನಮಗೆ ಕೇವಲ 8 ಗಂಟೆಯ ಕೆಲಸವಿರಬೇಕು, ನಮಗೂ ಹಕ್ಕುಗಳು ದಕ್ಕಬೇಕು ಎಂದು. ಅಲ್ಲಿಂದ ಅನೇಕ ಘೋಷಣೆಗಳು ನಮಗೆ ಸಿಕ್ಕಿವೆ.

ನಿನ್ನೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ 40 ದೇಶಗಳಲ್ಲಿ ಏಕಕಾಲದಲ್ಲಿ ಮಹಿಳೆಯರು ಮುಷ್ಕರ ಘೋಷಿಸಿದರು. ಹೆಣ್ಣು ಮಕ್ಕಳು ಮಾಡುವ ಹತ್ತಾರು ಕೆಲಸಗಳಲ್ಲಿ ಯಾವುದಾದರೂ ಒಂದು ಕೆಲಸ ನಿಲ್ಲಿಸಿ ಮುಷ್ಕರ ಮಾಡಿದ್ದಾರೆ. ಪ್ಯಾಲೆಸ್ತೇನ್ ಮಹಿಳೆಯರ ಸ್ವಾತಂತ್ರ್ಯಕ್ಕಾಗಿ ದನಿಯೆತ್ತಿದ್ದಾರೆ. ಅಮೆರಿಕದಲ್ಲಿ ಟ್ರಂಪ್ ವಿರುದ್ಧ ಸಾವಿರಾರು ಮಹಿಳೆಯರು ನಿನ್ನೆ ಮುಷ್ಕರ ಹೂಡಿದ್ದಾರೆ. ಈತ ಹೇಳುತ್ತಾನೆ ''ನನ್ನ ಹತ್ತಿರ ಬೇಕಾದಷ್ಟು ದುಡ್ಡಿದೆ. ಬೇಕಾದ ಹೆಣ್ಣು ಮಕ್ಕಳನ್ನು ಮುಟ್ಟುತ್ತೇನೆ,'' ಎಂದು. ಅವನ ವಿರುದ್ಧ ಮುಷ್ಕರ ನಡೆದಿದೆ.

100 ವರ್ಷದ ಹಿಂದೆ ದುಡಿವ ಕಾರ್ಮಿಕರ ಪರವಾಗಿ ಮಹಿಳೆಯರು 8 ಗಂಟೆಗಳ ವಿಶ್ರಾಂತಿ, 8 ಗಂಟೆಗಳ ವಿರಾಮ, ಕೆಲಸದ ಸಮಾನ ಹಕ್ಕುಗಳಿಗಾಗಿ ಹೋರಾಟ ನಡೆಸಿದರು. ಅವರು ತೋರಿಸಿಕೊಟ್ಟಂತೆ ನಮ್ಮ ವಿಮೋಚನೆ ಎಂದು ಸಾರಿಹೇಳಬೇಕಿದೆ. ಅದಕ್ಕೆ ಇಂದಿನ ಕಾರ್ಯಕ್ರಮ ಬಹಳ ಅರ್ಥಪೂರ್ಣವಾದ ಮುನ್ನುಡಿಯಾಗಿದೆ.

ಸಾವಿತ್ರಿ ಬಾಯಿ ಫುಲೆಯವರ ಮತ್ತು ಬಾಬಾ ಸಾಹೇಬರ ಆಶಯಗಳನ್ನು ಖಂಡಿತವಾಗಿ ಈಡೇರಿಸುತ್ತೇವೆ ಎಂದು ಭರವಸೆ ಕೊಡುತ್ತಾ ಆಂದೋಲನವನ್ನು ಮುಂದುವರಿಸೋಣ.

## ವಿಚಾರ ಸಂಕಿರಣ, ಸಮಾವೇಶದಲ್ಲಿ ಓದಿದ ಕವನಗಳು:

### ಎದ್ದು ಬನ್ನಿರಿ

– ಶಾಂತಾದೇವಿ ಹೀರೇಮಠ

ಎದ್ದು ಬನ್ನಿರಿ, ಗೆದ್ದು ಬನ್ನಿರಿ,
ಓ ನಮ್ಮ ಮಹಿಳೆಯರೇ,
ಪುರಾಣ ಇತಿಹಾಸ ಕಾಲದಿಂದಲೂ
ತುಳಿತಕ್ಕೊಳಗಾಗಿಸಿ
ನಿಮ್ಮ ತನುಮನಗಳನ್ನು
ಸುಟ್ಟು ಬೂದಿಯಾಗಿಸಿಹ
ಧರ್ಮ ಕರ್ಮಗಳು ಸಾಕಿನ್ನು
ಎದ್ದು ಬನ್ನಿರಿ.

ಬುದ್ಧ ಬಸವ ಏಸು
ಗಾಂಧಿ ಮಹಾತ್ಮರು
ಸೋತು ಸುಣ್ಣವಾದರೂ
ನಾಲ್ಕು ಗೋಡೆಗಳ ಮಧ್ಯದಲಿ
ಬಂದಿಯಾಗಿ, ಸಾವು ನೋವುಗಳ
ಅನುಭವಿಸಿದ್ದೂ, ನರಳಿದ್ದೂ.
ನರಕಯಾತನೆಯು ಸಾಕಿನ್ನು
ಎದ್ದು ಬನ್ನಿರಿ.

ಇಪ್ಪತ್ತನೆಯ ಶತಮಾನಕೆ
ಸಿಕ್ಕಿದ್ದು ಶಿಕ್ಷಣ ಮಾತ್ರ
ಸಮಾನತೆ, ಸಾಮಾಜಿಕ ನ್ಯಾಯ
ಕನ್ನಡಿಯ ಗಂಟು
ಬಂದಿಹುದು ಇಂದು ಕೊಪ್ಪಳಕೆ
''ರಾಜ್ಯ ಮಹಿಳಾ ದೌರ್ಜನ್ಯ
ವಿರೋಧಿ ಒಕ್ಕೂಟ ಸಮಾವೇಶ''

ಎದ್ದು ಬನ್ನಿರಿ.
ಸಂಪ್ರದಾಯ ಕಟ್ಟಳೆಗೆ
ಹೊಸ ಭಾಷ್ಯವ ಬರೆಯುವ
ಮೂಢನಂಬಿಕೆ, ದೌರ್ಜನ್ಯಗಳ
ಚಟ್ಟಕಟ್ಟಿ ಮೆಟ್ಟಿ ನಿಲ್ಲುವ
ಲಿಂಗಭೇದ, ಅಸಮಾನತೆಗೆ
ಕೋಳ ತೊಡಿಸುವ
''ನಮ್ಮ ಹಕ್ಕು'' ನಮ್ಮ ಸೊತ್ತಾಗಿಸಲು
ಎದ್ದು ಬನ್ನಿರಿ.

ನೂರಾರು ಸಮಸ್ಯೆಗಳ
ಸುಳಿಗೆ ಸಿಲುಕಿ, ನಲುಗಿ
ಬೇಡಿಕೊಳ್ಳುವ ತೋಡಿಕೊಳ್ಳುವ
ಅರಣ್ಯರೋದನವು ಸಾಕಿನ್ನು
ಸಾಗೋಣ ನಾವೆಲ್ಲ ಶಾಂತಿ
ಸೌಹಾರ್ದತೆ ಸಮಾನತೆಯೆಡೆಗೆ
ಎದ್ದು ಬನ್ನಿರಿ, ಏಳಿ ಎದ್ದೇಳಿ
ಎದ್ದು ಬನ್ನಿರಿ.

## ವಿರೋಧವಿದೆ

–ಶೀಲಾ ಹಾಲ್ಕುರಿಕೆ

ವಿರೋಧವಿದೆ
ಒತ್ತಾಯ ಪೂರ್ವಕ ಮುಜುಗರಪಡಿಸುವುದಕ್ಕೆ
ಅನುಮತಿಗೆ ಕಾಯದ್ದಕ್ಕೆ
ಅಂತರಾಳದ ಭಾವನೆಗೆ ಸ್ಪಂದಿಸದ್ದಕ್ಕೆ

ವಿರೋಧವಿದೆ
ದೌರ್ಜನ್ಯಕ್ಕೆ,
ಅತ್ಯಾಚಾರಕ್ಕೆ,
ಮಾರಾಟಕ್ಕೆ,
ತೊಗಲು ವ್ಯಾಪಾರದ ಒತ್ತಾಯಕ್ಕೆ

ವಿರೋಧವಿದೆ

ಪ್ರಶ್ನಿಸಲು ಬಿಡದ್ದಕ್ಕೆ
ಹೊಸಿಲಾಚೆಗಿನ ಹೆಜ್ಜೆಯನ್ನು ಒಪ್ಪದ್ದಕ್ಕೆ
ಸಮಾಜದ ದನಿಗೆ
ದನಿಯಾಗುವಾಗ ತಡೆದದ್ದಕ್ಕೆ

ವಿರೋಧವಿದೆ
ಅಡುಗೆ ಮನೆ ಜಗತ್ತು ಎಂದದ್ದಕ್ಕೆ
ಅಕ್ಷರ ಕಲಿಕೆ ಸಲ್ಲದು ಎಂದದ್ದಕ್ಕೆ
ಯಂತ್ರ ಎಂದದ್ದಕ್ಕೆ
ಬಾಳು ದಾಸಿಯಾಗಿ ಎಂಬ ಒತ್ತಾಯಕ್ಕೆ

ವಿರೋಧವಿದೆ
ಅಮಲಿನಲ್ಲಿದ್ದು
ಬದುಕು ದುಸ್ತರ ಎಂದದ್ದಕ್ಕೆ
ಮತ್ತು ಬೇಜವಾಬ್ದಾರಿತನಕ್ಕೆ ಒಳಗಾಗಿ
ಹೆಣ್ಣೇ ಈ ಚಟಕ್ಕೆ ಮೂಲಾಧಾರ ಎಂದದ್ದಕ್ಕೆ

ವಿರೋಧವಿದೆ
ಮೈ ಮೇಲಿನ ಬಟ್ಟೆಗಳು
ಸಡಿಲವಾಗಿ ಸರಳವಾಗುವುದು ನೀವು ಬಯಸಿದ್ದಕ್ಕೆ
ಹಾಗೂ ತುಂಡುಬಟ್ಟೆ ಧಾರಣೆ
ಅತ್ಯಾಚಾರಕ್ಕೆ ಕಾರಣ ಎನ್ನುವ
ಸಮಜಾಯಿಷಿಗೆ

ಹೌದು ನಾವು ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದವರು
ವಿರೋಧಿಸುವೆವು ಅಸಮಾನತೆಯನ್ನು
ಬಯಸುವೆವು ಸಮಾನ ಹೆಜ್ಜೆಯನ್ನು
ಸಮತೆಯೆಡೆಗೆ ಸಾಗಲು

## ಅಕ್ಕ ನಾನು ಹುಡುಕುತ್ತಿದ್ದೇನೆ..

– ಅರುಣಾ ನರೇಂದ್ರ

ಅಕ್ಕ ನಾನು ಹುಡುಕುತ್ತಿದ್ದೇನೆ..
ಅಕ್ಕ ನಾನು ನಿನ್ನಂತೆ ಹುಚ್ಚು ಹಿಡಿಸಿಕೊಂಡಿದ್ದೇನೆ
ನನ್ನ ಮಲ್ಲಿಕಾರ್ಜುನನಿಗಾಗಿ..
ಕಾಡುವ ಬೇಡುವ ಪ್ರೀತಿಗಾಗಿ ಹಂಬಲಿಸುವ

ಗಂಡುಗಳನೊಯ್ದು ಗುಂಡು ಹಾಕವ್ವ ಎಂದು
ಅವನಿಗಾಗಿಯೇ ಕೊರಗುತ್ತೇನೆ ಕರಗುತ್ತೇನೆ – ಅಕ್ಕ

ಹುಡುಕುತ್ತೇನೆ ಗುಡಿ ಗುಂಡಾರಗಳಲಿ
ಬಾರಿನಂಗಡಿ ಉದ್ಯಾನ ಮಹಲುಗಳಲಿ
ಗಂಗೆ ನಿಂಗಿಯರ ಅಂತಃಪುರ ಪಟ್ಟಣಗಳಲಿ – ಅಕ್ಕ

ಕೇಳುತ್ತೇನೆ ಬಣ್ಣದ ಗರಿಯ ವಯ್ಯಾರದ ನವಿಲುಗಳನು
ನೀವು ಕಂಡಿರೇ ನೀವು ಕಂಡಿರೇ
ಅರಸುತ್ತೇನೆ ಗಿಳಿಕೋಗಿಲೆ ಕಬ್ಬಕ್ಕಿ
ಬೆಳ್ಳಕ್ಕಿಗಳ ಹಿಂಡಿನೊಳಗೆ – ಅಕ್ಕ

ಹಸಿವು ನೀರಡಿಕೆಗಳ ಸಹಿಸಕೊಂಡ ನನಗೆ
ಕುಡಿಸಿದ್ದಾನೆ ಬಹು ಕರುಣೆಯಿಂದ
ಏಳು ಕೆರೆಯ ನೀರ!
ಹೇಗೆ ಮರೆಯಲಿ ಅಕ್ಕ? – ಅಕ್ಕ

ಕೈಹಿಡಿದು ಕಾಣದಾದ ಮಾಯಕಾರನ
ಗುರುತು ಹೇಳಲೇನೆ ಅಕ್ಕ
ಗುಂಗುರು ಕೂದಲ ಗೊರವ
ಸ್ಮಶಾನ ವಾಸಿ ಅಲ್ಲಲ್ಲ.. 'ಶಾಂತಿ ನಿವಾಸಿ' – ಅಕ್ಕ

ಅಕ್ಕ ನೀನು ಅಲೌಕಿಕ ಗಂಡನ ಧಿಕ್ಕರಿಸಿ
ಉಟ್ಟವಸನದ ಹಂಗ ಹರಿದೊಗೆದಿ
ಗಿರಿಯ ತುದಿಯ ತಲುಪಿದಿ
ನಾನು .. ಪತಿಯೇ ಪರದೈವವೆಂಬ
ಹುಚ್ಚು ಭ್ರಮೆಯಲ್ಲಿ ನಾನಾಗಿಯೇ ತೊಟ್ಟುಕೊಂಡಿದ್ದೇನೆ
ಬಂಧನದ ಬಳೆಗಳನ್ನು – ಅಕ್ಕ

ಒಳಗೊಳಗೆ ಕುದಿಕುದಿದು
ಹಲುಬುಗೆಟ್ಟು ಹುಡುಕುತ್ತಿದ್ದೇನೆ
ಹುಬ್ಬುಗಂಟಿಕ್ಕಿದ
ಕೆಂಗಣ್ಣು ಕಾಲರುದ್ರನಿಗಾಗಿ – ಅಕ್ಕ

# ಒಡೆಯಲಾಗದ ಒಗಟು

– ವಿಜಯಲಕ್ಷ್ಮಿ ಕೊಟಗಿ

ಹೇ ಹುಲಿಗೆವ್ವ ಕೇಳ ಯಲ್ಲವ್ವ
ಹಿಂಗ ಕುಂತಿನಿ ಕೈಮುಕ್ಕೊಂಡು
ಎಡಕ್ಕೋ, ಬಲಕ್ಕೋ ಕೊಡು ಹೂವ
ನನ್ನ ಪರಶ್ಯಾನಿಗೆ ನಿನ್ನುತ್ರ
ಹುಲಿ ಸವಾರಿಣಿ ನೀನು
ಗಂಡುದೇವರಿಂದಾಗದ ದುರುಳರಕ್ಕಸ
ಸಂಹಾರಿಣಿ ಶಕ್ತಿದೇವತಾ
ನಿನ್ನಾಲ್ಕು ಉಧೋ ಉಧೋ
ನಿನ್ನ ಹುಲಿ ಬಾಯಿಗೆ ಸಿಕ್ಕ ಹುಲ್ಲೇ ನಾನೀದೋ,
ಏಳುಕೊಳ್ಳದ ಯಲ್ಲವ್ವತಾಯಿ
ನಿನಗ ಮೀಸಲಿಟ್ಟಾರ ನನ್ನ
ಹೆಣ್ಣು–ಹೆಣ್ಣಿಗೆ ಲಗ್ನಾ ಕಟ್ಯಾರ ಖರೇ
ಮುತ್ತಕಟ್ಟಿ ಕತ್ತಲ್ದಾಗ ಕೈಸವರೋ
ಗಂಡ್ಸು ಆ ನಿನ್ನ ಪೂಜಾರಪ್ಪನ,
ಬೇವನುಡಿಗಿ ಉಟ್ಟು ಹರಕೆ ತೀರ್ಸಂತಿದಿ
ಗುಡಿಮುಂದ ಊರ ಗಂಡಸಂತಾನ ತಂದುನಿಲ್ಲಸ್ತಿ!
ಊರಾಡಕಂತ ಪಡ್ಲಿಗ್ಗಿ ಹೊತ್ತರ
ಯಾರಿಗಿ ನಿನ್ನ ಖಬರೈತಿ?
ಅವ್ರ ನಜರ್ ನನ್ನ ಹರೆಯಾನ ಹರ್ದ ತಿಂತೈತಿ,
ಯವ್ವ ನನ್ನ ಉಸಿರನ್ಯಾಗ ನಿನ್ನ ಹೆಸರೈತಿ
ಆದ್ರ ನನ್ನ ಬಸಿರು ಬೇರ್‍ಯಾರ್‍ದೋ ಐತಿ
ಗುಬ್ಬಿಮ್ಯಾಲ ಯಾಕವ್ವ ಬ್ರಹ್ಮಾಸ್ತ್ರ?
ನನಗಾಗೋ ಅನ್ಯಾಯ ನಿಂದಲ್ಲೇನು?
ಹೆಣ್ಣಾಗಿ ನೀನ ಕಣ್ಮುಚ್ಚಿ ಕಲ್ಲಾಗಿ ಕುಂತಿದಿ
ದೇವದಾಸಿ ನಿತ್ಯಮುತ್ತೈದಿ ನಾನು
ಮಗ ಕೇಳ್ತಾನ ಯವ್ವ
ಎಲ್ಲಾರಿಗೂ ಅಪ್ಪ ಅದಾನಾ
ನಮ್ಮಪ್ಪ ಯಾರು? ಎಲ್ಲದಾನ?
ಉತ್ರ ಇಲ್ಲ ಯವ್ವ ನನ್ನತ್ರ, ಎಲ್ಲಾ ಬಲ್ಲಾಕಿ
ನೀನ ಒಡಿಬೇಕು ಈ ಒಗಟ.

## ಹೆಣ್ಣು

– ಸರೋಜಾ ಬಾಕಳೆ

ಹೆಣ್ಣು ಬಾಳಿನ ಕಣ್ಣು
ಭೂಮಿತಾಯಿ ಹೆಣ್ಣು
ನದಿದೇವತೆ ಹೆಣ್ಣು
ಸೃಷ್ಟಿಯ ಸೊಬಗೆ ಹೆಣ್ಣು
ಆದರೂ ಆಗಿದೆಯಲ್ಲಾ!!
ಹೆಣ್ಣಿನ ಜೀವನ ಮಣ್ಣು

ನೊಂದ ಹೆಣ್ಣಿಗೆ ಕೇಳುವವರ್‍ಯಾರು?
ಆಕೆಗೆ ಸಹೃದಯದಿಂದ ನೋಡುವವರ್‍ಯಾರು?
ಹೆಣ್ಣೆಂದರೆ ಭೋಗದ ವಸ್ತುವೆಂದು
ತೃಷೆಯ ದೃಷ್ಟಿಯಿಂದ
ನೋಡುವವರೇ
ನೂರಾರು, ಸಾವಿರಾರು

ಸರಕಾರ ಜಾರಿಗೆ ತಂದಿದೆ ಅನೇಕ ಕಾನೂನು
ಹೆಣ್ಣಿನ ದೌರ್ಜನ್ಯ ತಡೆ ಕಾನೂನು
ದೇವದಾಸಿ ಪದ್ಧತಿ ತಡೆ ಕಾನೂನು
ಬಾಲ್ಯವಿವಾಹ ತಡೆ ಕಾನೂನು
ಲಿಂಗತಾರತಮ್ಯ ತಡೆ ಕಾನೂನು

ಇವೆಲ್ಲಾ ಕಾನೂನು ಮನುಷ್ಯರಿಗೆ ಬೇಕಿಲ್ಲ
ಮುಖವಾಡ ಹಾಕಿದವರಿಗೆ ಅನಿವಾರ್ಯ
ಆದಾಗ್ಯೂ ಎಲ್ಲರೂ ತಿಳಿಯಬೇಕಾಗಿದೆ ಇದರ ಅರ್ಥ
ಇಲ್ಲದಿದ್ದರೆ ಎಲ್ಲವೂ ವ್ಯರ್ಥ
ಹೆಣ್ಣನ್ನು ಗೌರವಿಸು, ಪ್ರೀತಿಸು
ಹೆಣ್ಣು ಅನ್ನುವ ಪದ ಸಾರ್ಥಕ

ಹೆಣ್ಣು ಭೋಗದ ವಸ್ತು ಅಲ್ಲ
ಅವಳು ಪ್ರೇಮಮಯಿ, ಕರುಣಾಮಯಿ
ಅಂತಾ!! ಸಾರಿ ಹೇಳಲು ಬರುತಿಹರು
ದೌರ್ಜನ್ಯ ವಿರೋಧಿ ಒಕ್ಕೂಟದ ಧೀರೆಯರು
ದಾರಿ ಬಿಡಿ ದಾರಿ ಬಿಡಿ ಬಿಡದಿದ್ದರೆ

ದಾರಿ ಮಾಡಿಕೊಳ್ಳುವ ಇತಿಹಾಸಕಾರರು ಇವರು

ದಿಟ್ಟ ಧ್ವನಿಯ ಎತ್ತುವಂಥ
ಹಿಂಸೆಯನ್ನು ಮೆಟ್ಟುವಂಥ
ಮಹಿಳಾ ಮಣಿಯರು, ಎದ್ದು ನಿಂತು
ಶೆಡ್ಡು ಹೊಡೆಯೋ
ಕಾಲ ಬಂದಿರುವುದು

ಜಾತಿ ನೀತಿ ಎಂದು ಹೆಣ್ಣನ್ನು ತುಳಿದು
ಹೊಸಕಿ ಹಾಕುವ
ಹುನ್ನಾರ ಈಗ ಸಲ್ಲದು
ಎಂದು ಹೇಳೋ
ಕಾಲ ಈಗ ಬಂದಿಹುದು

ತಮ್ಮ ಪ್ರೀತಿ ಸಹಕಾರ
ಅತಿ ಅವಶ್ಯ
ಗಿಡಕೆ ನೀರುಣಿಸಿ ಬೆಳೆಸುವಂತೆ
ಹೆಣ್ಣನ್ನು ಗೌರವಿಸಿ ಪ್ರೀತಿಯಿಂದ
ಕಾಣಿರಿ ಎಂದು ಸಾರಿ ಸಾರಿ ಹೇಳುತಿಹೆವು

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ
ಒಕ್ಕೂಟದ ಅಕ್ಕ ತಂಗಿಯರು ಅಣ್ಣ ತಮ್ಮಂದಿರು
ಸೃಷ್ಟಿಕರ್ತನ ಮಾಸ್ಟರ್ ಪೀಸ್ ಸ್ತ್ರೀ ಎಂದು
ಹೆಮ್ಮೆಯಿಂದ ಸಾರುತಿಹೆವು ಜಗಕ್ಕೆಲ್ಲ ಇಂದು
ವಂದೇ ಮಾತರಂ

## ಮಹಿಳೆಯ ಮುನ್ನಡಿಗೆ

– ಕೋಮಲಾ ಕುದುರೆಮೋತಿ

ಮತ್ತೆ ಮತ್ತೆ ಮಾಡುತ್ತಲೇ ಇರುವ
ತರತರದ ಗೋಷ್ಠಿಗಳು ಹತ್ತು ಹಲವಾರು
ದೌರ್ಜನ್ಯಕ್ಕೊಳಗಾಗಿರುವ ಮಹಿಳಾ ರಕ್ಷಣೆ
ಪೋಷಣೆ, ಬೆಂಬಲ ಸೇವೆ, ಸಾಂತ್ವನ
ಚಲನಚಿತ್ರ, ಮಾಧ್ಯಮದಿ ಅಶ್ಲೀಲವಾಗಿ

ತೋರಿಸುವ ಭಿತ್ತಿ ಚಿತ್ರಗಳು ಕೇಂದ್ರದಿ ಚಾಲನೆಗೊಳಿಸುವದು
ತಂತ್ರಜ್ಞಾನದ ಬಳಕೆ ಬಲಗೊಳಿಸುವ
ಕೃಷಿಯಲ್ಲಿ ತೊಡಗಿರುವ ಆದ್ಯತೆಯ ಮೆರಿಗೆರಿಯಾಗಲಿ
ರಾಜ್ಯಮಟ್ಟದ ಸಹಕಾರಿ ಬ್ಯಾಂಕ್ ಸ್ಥಾಪನೆಗೆ ಚಾಲನೆ
ಸಬಲೀಕರಣವಾಗಿರಿಸುವ ವೃತ್ತಿಪರ ಉದ್ಯಮ ಶೀಲ
ಕೌಶಲ್ಯ ಸ್ಥಿರವಾಗಿ ಉಳಿಸುವ ಸೂಕ್ತ ತಂತ್ರ ಸಂಘಕ್ಕೆ
ವಿನ್ಯಾಸಗೊಳಿಸುವ ಸಂಶೋಧನೆ ತಂತ್ರಜ್ಞಾನಕ್ಕೆ
ಪ್ರೋತ್ಸಾಹಿಸಲು ತರಬೇತಿ ಮಹಿಳೆಗೆ
ವಿವಿಧ ಹಂತದಲ್ಲಿ ಕಾರ್ಯಗಾರ ಬೆಳಕಿಗಿ ತರುವ
11ನೇ ಪಂಚವಾರ್ಷಿಕ ಯೋಜನೆಯ ಮಹಿಳಾ ಘಟಕ
ಯೋಜನೆ ತಂತ್ರವನ್ನು ಅಳವಡಿಸುವ ಅಗತ್ಯ ಆಸಕ್ತಿ
ಪೂರೈಸುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಯ
ಯೋಜನೆಯ ಮೇಲ್ವಿಚಾರಣೆಯಲಿ
ಮತ್ತೆಮತ್ತೆ ಮಾಡುತ್ತಲೇ ಇರಬೇಕಾಗಿರುವ
ಹೆಚ್ಚು ಹೆಚ್ಚು ಪ್ರಯತ್ನವ, ಕಿವಿ ಮುಚ್ಚಿಕೊಂಡ
ಮಾತ್ರಕ್ಕೆ ಇದು ಲಭಿಸುವದಿಲ್ಲಾ ಹೆಂಗಸರ
ವಿರುದ್ಧ ಪದ ''ನಿಶ್ಯಬ್ಧ'' ಎಲ್ಲ ಶಬ್ದಗಳ ಅಂತಿಮ
ಗುರಿ ಸಾಧಿಸುವ ಮಹಿಳೆ ಸಾಧಿಸುವ ಮಹಿಳೆಗೆ
ಛಲ, ಛಲ, ಧೃಢ ಮನಸ್ಸು, ಧೃಢ ಮನಸ್ಸು

## ಬಂದು ಸೇರುವ ಬಂಧಗಳು

–ಮಹಾಲಕ್ಷ್ಮೀ. ಈ.ಕೆ

ಎಲ್ಲೆಡೆಯಿಂದ ಬಂದು ಬಿಳಿ ಉಡುಪು
ಧರಿಸಿ ಮಾನವೀಯತೆ ಮೌನ ಮುರಿದು
ಸಂಕೀರ್ಣ ಸಮಾವೇಶ ಮೌನ
ದೀಪ ಹಚ್ಚುವ ಘಳಿಗೆ ಬಂದೆ ಬಿಟ್ಟಿತು

ಹಿಂಸೆ ಅಳಿಸಿ, ನೋವು ಮರೆಸಿ
ಕಿರುಕುಳ, ದೌರ್ಜನ್ಯ ಗೋಡೆ ಒಡೆದು
ಬಂಧನ ಬಿಡಿಸಿ ಪ್ರಶ್ನೆ ಮಾಡುವ
ಒಂದು ಗೂಡುವ ಮನಸ್ಸು ಸೇರುವ

ಮನಸ್ಸು ಬಿಚ್ಚಿ ಮಾತನಾಡುವ ಘಳಿಗೆ ಬಂದೆ ಬಿಟ್ಟಿತು

ಬರಿಗೈಲಿ ಕಸ–ಮಲ ಮೂತ್ರ ತೆಗೆಯುವ
ಮನಸ್ಸು ನೊಜ್ಜ ಗೊಜ್ಜಲ ಗಟ್ಟಿ ಗಟ್ಟಿ
ಮಾಡುವ ಕೊಪ್ಪಳ ಸಮಾವೇಶ ಕೈಗೆ
ಕೈ ಜೊತೆ ಸೇರುವ ಮಹಿಳೆ ದಿನಾಚರಣೆ
ಕೊಪ್ಪಳದಲ್ಲಿ ಬಂದೇ ಬಿಟ್ಟಿತಸಾವಿರಾರು ಘೋಷಣೆಗೆ ಧ್ವನಿ ಗೂಡುವ
ಮೆರವಣಿಗೆ ಹೊರಡುವ ಸಮಯ
ಶಾಲೆಯಿಂದ ಪ್ರತಿಭಟನೆ ಮೌನ
ಸಮಾನತೆ ಹಕ್ಕನ್ನು ಪಡೆಯುವ
ಘಳಿಗೆ ಬಂದೇ ಬಿಟ್ಟಿತು.

ನೊಂದು ಬೆಂದು ಜೀವಿಗಳು
ದಣಿದು ಬೆವರು ಸುರಿಸಿ ದುಡಿದ
ಕೈಗಳು ಬಾಗಿಲು ದಾಟಿ ಬರುವ
ಭದ್ರತೆಯ ಇಲ್ಲದೆ ಕೈಗಳಿಗೆ, ಕಾರ್ಮಿಕರಿಗೆ
ಹೊಸ ಸಮಾಜದೊಂದಿಗೆ ಜೊತೆ ಸೇರುವ
ಎರಡು ದಿನಗಳ ಘಳಿಗೆ ಕೊಪ್ಪಳದಲ್ಲಿ
ಬಂದೇ ಬಿಟ್ಟಿತು

## ಕೊಪ್ಪಳ ಮಹಿಳಾ ದಿನಕ್ಕೆಂದೇ ಬರೆಯಲ್ಪಟ್ಟ ಹಾಡುಗಳು

### ಬೆಂಕಿಯಲ್ಲ ಬೆಳಕು

– ರಮೇಶ ಗಬ್ಬೂರು

ಹೆಣ್ಣೆಂದರೆ ದೀಪವೋ ಬೆಂಕಿಯಲ್ಲ ಬೆಳಕು
ಹೆಣ್ಣೆಂದರೆ ಪ್ರೀತಿಯೋ ಮಮತೆಯೆಂಬ ಮುಗಿಲು
ತಾಯಿ ಕರುಳಿದು ಆಕಾಶದಷ್ಟು ಅಗಲಾ..
ಅಪರಿಮಿತದ ಕತ್ತಲೆಯೊಳಗ ವಿಪರೀತದ ಬೆಳಗಾ..

ಬೆಳಕ ನೀಡಿದೆವು ಬೆಂಕಿ ಹಚ್ಚಿದಿರಿ ಯಾಕೆ,
ನೀವು ಯಾಕೆ
ತುತ್ತು ನೀಡಿದೆವು ಕತ್ತುಹಿಚುಕಿದಿರಿ ಯಾಕೆ,
ನೀವು ಯಾಕೆ

ಬನ್ನಿ ಸಾಗೋಣ ಮುಂದೆ ಇರಿಸೋಣ ಹೆಜ್ಜೆಗಳಾ
ನಾವು ಹೆಜ್ಜೆಗಳಾ
ಪ್ರೀತಿಯ ನುಡಿಸುತ ನಾದ ಚೆಲ್ಲೋಣ ಗೆಜ್ಜೆಗಳಾ..
ತಾಯಿ ಕರುಳಿದು ಆಕಾಶದಷ್ಟು ಅಗಲಾ..
ಅಪರಿಮಿತದ ಕತ್ತಲೆಯೊಳಗ ವಿಪರೀತದ ಬೆಳಗಾ..

ಕಾಯಕೆ ಬರೆದಾ ನೂರು ಕಥೆಗಳಾ ಅಳಿಸುತ್ತಾ
ನಾವು ಅಳಿಸುತ್ತಾ
ತಲೆಯ ಮೇಲಿನ ಗೊಡ್ಡು ಭಾರಗಳ ಇಳಿಸುತ್ತಾ
ನಾವು ಇಳಿಸುತ್ತಾ
ಬಿಟ್ಟು ಬಾ ನೀನು ದಿಟ್ಟ ಹೆಜ್ಜೆಗಳಾ ಇಡುತಾ
ನೀನಿಡುತಾ
ಬೆಳದಿಂಗಳ ಬೆಳಕನೂ ಅಂಗಳಕೆ ಚೆಲ್ಲುತ್ತಾ
ತಾಯಿ ಕರುಳಿದು ಆಕಾಶದಷ್ಟು ಅಗಲಾ..
ಅಪರಿಮಿತದ ಕತ್ತಲೆಯೊಳಗ ವಿಪರೀತದ ಬೆಳಗಾ..

ಹಚ್ಚಿಟ್ಟ ದೀಪವೊಂದು ಕೋಟಿ ಮನಸುಗಳ ಬೆಳಗಲು
ಮನಸುಗಳ ಬೆಳಗಲು
ನೀನೊಂದೆ ಸಾಕು ಮುನ್ನುಗ್ಗಿ ಬಾ ದೃಢ ಹೆಜ್ಜೆಯೊಳು
ದೃಢ ಹೆಜ್ಜೆಯೊಳು
ಆಕಾಶವೇ ಎಂದೆಂದೂ ನಮ್ಮಯ ವಸ್ತಿಲಾಗಲಿ
ನಮ್ಮ ವಸ್ತಿಲಾಗಲಿ
ಗಗನಾ ಬಾನು ಮುಗಿಲು ಮೋಡ ಸೇರಿ ಹಾಡಲಿ
ತಾಯಿ ಕರುಳಿದು ಆಕಾಶದಷ್ಟು ಅಗಲಾ..
ಅಪರಿಮಿತದ ಕತ್ತಲೆಯೊಳಗ ವಿಪರೀತದ ಬೆಳಗಾ..

ನಮ್ಮ ಮಗಳಿವಳು ಜಗದ ಬೆಳಕಾಗಿ ಹರಡಲಿ
ಬೆಳಕು ಹರಡಲಿ
ನಮ್ಮ ದೇಹವಿದು ನಮ್ಮ ಹಕ್ಕಾಗಿ ಉಳಿಯಲಿ
ಹಕ್ಕು ಉಳಿಯಲಿ
ಸಮತೆಯನ್ನು ಸಾರೋಣ ಜಗಕೆ ನೀ ಸಾಗಿ ಬಾ
ನೀನು ಸಾಗಿ ಬಾ
ಜಗದ ತುಂಬೆಲ್ಲ ಸಮತೆ  ಹಂಚೋಣ ಜೊತೆಗೆ ಬಾ
ತಾಯಿ ಕರುಳಿದು ಆಕಾಶದಷ್ಟು ಅಗಲಾ..
ಅಪರಿಮಿತದ ಕತ್ತಲೆಯೊಳಗ ವಿಪರೀತದ ಬೆಳಗಾ..

# ನಾವು ಈ ನೆಲದ ಹೆಣ್ಣುಗಳು

– ಹುಲಿಕುಂಟೆ ಮೂರ್ತಿ

ನಾವು.. ಈ ನೆಲದ ಹೆಣ್ಣುಗಳು

ಬೀಜವ ಮೊಳೆಸಿ ಗಿಡಗಳ ಬೆಳೆಸಿ
ಹೂಗಳ ಮುಡಿಸಿ ನಕ್ಕವರು..
ಗಿಡಗಿಡಕ್ಕೆಲ್ಲ ಒಲವನು ತೊಡಿಸಿ
ಹಣ್ಣಿನ ವರಗಳ ಕೊಟ್ಟವರು ..ನಾವು..

ನಾವು ಈ ನೆಲದ ಕಣ್ಣುಗಳು


ಮನುಜರ ಎಲುಬಿನ ಹಂದರದೊಳಗೆ
ಪ್ರಾಣದ ದೀಪ ಹಚ್ಚುವೆವು
ನೆತ್ತರ ಬಸಿದು ನರಗಳ ಹೊಸೆದು
ಬೆಳಕನು ಹಡೆಯುತ ಹಾಡುವೆವು
ನಮ್ಮ ಉಸಿರಿನ ಪರಿಮಳ ಬುದ್ಧ
ಕಾರುಣ್ಯದ ಲೋಕವ ಗೆದ್ದ
ನಮ್ಮ ಎದೆಯಾ ಹಾಡು ಜ್ಯೋತಿಬಾ
ಸಮತೆಯ ಬೆಳಕಿನ ಹಬ್ಬಾ
ನಮ್ಮ ಕರುಳಿನ ಕೊನರು ಬಾಬಾ ಸಾಹೇಬಾ
ನಮ್ಮೆಲ್ಲರ ಘನತೆಯ ಬದುಕಿನ ಆರಂಭಾ ..ನಾವು


ಆಕಾಶದ ಅರ್ಧ ನಕ್ಷತ್ರಗಳು ನಾವು
ಸಮಸಮಾಜದ ಕನಸ ಬಂಡಿಯ ಚಾಲಕರು
ಧರ್ಮದ ಜಾತಿಯ ಕಿಲುಬುಗಳನ್ನೆಲ್ಲ
ನೇರ್ಪುಮಾಡಿ..ಸಾಗುವೆವು
ತಲೆಯನೆಂದೂ ಬಾಗಿಸದೆ ..ನಾವು..

ನಿಮ್ಮ ಕಟ್ಟಳೆಗಳನ್ನು ಕಟ್ಟಿಡಿರಿ
ನಿಮ್ಮ ಹೆಜ್ಜೆ ಗುರುತುಗಳ ಜಾಡು ಹಿಡಿಯಿರಿ
ನಮ್ಮ ಗೆಲುವು ಅದು ಜಗದ ಗೆಲುವೂ
ಗೆದ್ದೇ ಗೆಲ್ಲುವೆವು ನಾವು ಗೆದ್ದೇ ಗೆಲ್ಲುವೆವು..ನಾವೂ..


Koppala is the centre of Arts & Culture of Karnataka. Here women's mass struggle against alcoholism & Devadasi system has exhibited gender solidarity. Yet growing child marriages unnerve us! To support struggles of the poor against the forces of structural inequalities this convention is a step towards peoples empowerment. Hence of great importance.
Rathi Rao













# ಭಾಗ 2

## ನಾ ಕಂಡಂತೆ ಕೊಪ್ಪಳ ಸಮಾವೇಶ

## ಬಿಳಿ ಉಡುಪಿನಲ್ಲಿ ಶಾಂತಿಗಾಗಿ ಬಿಳಿ ನಾವು: ಕೊಪ್ಪಳದ ಅನುಭವ

– ಜ್ಯೋತಿ ಹಿಟ್ನಾಳ

ಬಣ್ಣಗಳು ಅಂದರೆ ಯಾರಿಗೆ ತಾನೆ ಖುಷಿ ಇರೊಲ್ಲ ಹೇಳಿ? ನನಗೂ ಬಣ್ಣ, ಬೆಳಕು ಅಂದರೆ ತುಂಬಾ ಖುಷಿ. ಎಲ್ಲಾ ಮಹಿಳೆಯರು ಕಪ್ಪು ಬಟ್ಟೆ ಹಾಕಿಕೊಂಡು ಕೈಯಲ್ಲಿ ದೀಪ ಹಿಡಿದುಕೊಂಡು ಸಾಲಾಗಿ ನಿಂತಿರೋದು ನೋಡಿ ಕಣ್ಣು ತುಂಬಿ ಬಂತು. ಈ ಸಾಲು ಎಲ್ಲಿವರೆಗೆ ಇರಬಹುದು ಅಂತ ನೋಡ್ತೀನಿ... ಅಬ್ಬಾ! ಅಬ್ಬಾಬ್ಬಾ!! ಮುಗಿತಾನೇ ಇಲ್ಲ. ಖುಷಿ ಒಂದು ಕಡೆ, ಅಷ್ಟೇ ಆಶ್ಚರ್ಯ ಕೂಡ. 'ಹೀಗೂ ಶಾಂತಿಗಾಗಿ ಸಾಲು ದೀಪ ಹಿಡಕೊಂಡು ಬೀದಿಯಲ್ಲಿ ಸೇರುತ್ತಾರ?' ಅಂತ ಅನಿಸಿಬಿಟ್ಟಿತು.

ಸುಮಾರು ಆರು ವರುಷಗಳ ವರ್ಷಗಳ ಹಿಂದೆ ನಾನು ಮಂಗಳೂರಿನಲ್ಲಿ ''ಕಪ್ಪು ಉಡುಪಿನಲ್ಲಿ ಮಹಿಳೆಯರು'' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ಕಂಡ ದೃಶ್ಯ. ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭ ಅದಾಗಿತ್ತು.

ಶಾಂತಿ ಅನ್ನುವ ಪದ ಎಷ್ಟೊಂದು ನೆಮ್ಮದಿ ಕೊಡುತ್ತೆ ಅನ್ನೋ ಯೋಚನೆ ನನಗೆ ಮಾತ್ರ ಇದೆ ಅಂತ ಅಂದುಕೊಂಡಿದ್ದವಳಿಗೆ ಇಷ್ಟು ಜನರ, ಈ ಸಾಲು ದೀಪಗಳನ್ನು ನೋಡಿ, 'ನಾನು ಅಂದುಕೊಂಡಿದ್ದು ಸುಳ್ಳು' ಅಂತ ಅನಿಸಿಬಿಟ್ಟದ್ದು ನಿಜ. ಅಂದಿನಿಂದ ''ಶಾಂತಿಗಾಗಿ ಸಾಲು ದೀಪ''ದ ಹುಚ್ಚು ಎಲ್ಲಿವರೆಗೂ ನನ್ನ ಕರೆದುಕೊಂಡು ಹೋಯಿತು ಅಂದರೆ, ಮಂಗಳೂರಿನಿಂದ, ಮೈಸೂರಿಗೆ, ಅಲ್ಲಿಂದ ಬೆಂಗಳೂರಿಗೆ, ಮತ್ತೆ ವಿಜಾಪುರಕ್ಕೆ ಹೀಗೆ ಇಲ್ಲೆಲ್ಲಾ ಭಾಗವಹಿಸುತ್ತಾ ಬಂದೆ.

ನನಗೆ ಎಷ್ಟೋ ಸಲ, 'ಈ ಹುಚ್ಚನ್ನು ನಮ್ಮ ಜಿಲ್ಲೆಗೆ ಯಾಕೆ ಹಿಡಿಸಬಾರದು?' ಅಂತ ಅನಿಸುತ್ತಿತ್ತು. ಆದರೆ ಏನೋ ಒಂಥರಾ ಹಿಂಜರಿಕೆ. ಆಗ ಮುಂದಿನ ಸಲ ಈ ಕಾರ್ಯಕ್ರಮವನ್ನು ಕೊಪ್ಪಳದಲ್ಲಿ ಮಾಡುವ ಪ್ರಸ್ತಾಪದ ಬಗ್ಗೆ ದು.ಸರಸ್ವತಿ ಅಕ್ಕ ಕೇಳಿದಾಗ ಒಂದು ಸಲ ದಿಕ್ಕು ತೋಚದಂತಾದರೂ ಮನಸಿನಲ್ಲಿ ನನಗೂ ಅದೇ ಆಸೆ ಇದ್ದುದರಿಂದ ಹಾಗೂ ಎಲ್ಲರ ಸಹಕಾರ ಮತ್ತು ಬೆಂಬಲದಿಂದ ಮಾಡಿಯೇ ಬಿಡೋಣ ಎಂದು ಒಪ್ಪಿಕೊಂಡಾಯಿತು.

ಮುಂದಿನ ಬಾರಿ ಸಮಾವೇಶ ಮಾಡುವವರು ಬಿಜಾಪುರ ಸಮಾವೇಶದಿಂದ ಸಸಿಯನ್ನು ತೆಗೆದುಕೊಳ್ಳಬೇಕಿತ್ತು. ಕೊಪ್ಪಳದ ಪರವಾಗಿ ನಾನು ಸಸಿ ತೆಗೆದುಕೊಳ್ಳುವ ಸಂದರ್ಭದಲ್ಲಿ ಆ ದಿನ ನನಗೆ ಸಸಿ ನೀಡಿದ್ದು ಹೆಮ್ಮೆಯ ಹೋರಾಟಗಾರ್ತಿಯಾದ ಮೇಧಾ ಪಾಟ್ಕರ್ ಎಂಬುವುದನ್ನು ನೆನೆದಾಗಲೆಲ್ಲ ಖುಷಿಯಾಗುತ್ತದೆ. ಹೀಗೆ ಪಡೆಯುವಾಗ ಒಂದು ಕಡೆ ಖುಷಿ, ನಮ್ಮ ಊರಲ್ಲಿ ಇಂತಹ ಒಂದು ಕಾರ್ಯಕ್ರಮ ನಡೆಯುತ್ತಲ್ಲ ಎಂಬ ಸಂಭ್ರಮ ಇತ್ತು. ಕೊಪ್ಪಳದಲ್ಲಿ ಎಲ್ಲಾ ಕಡೆ ದೀಪ ಹಿಡಿದು ನಿಲ್ಲುವುದನ್ನು ನೆನದು ಆ ದಿನ ನನ್ನ ಮನದಲ್ಲಿ ಆದ ಖುಷಿ ವಿವರಿಸಲು ಸಾಧ್ಯವಿಲ್ಲ.

ಇತ್ತೀಚಿನ ದಿನಮಾನಗಳಲ್ಲಿ ಹೆಚ್ಚುತ್ತಿರುವ ಅನ್ಯಾಯ, ದಬ್ಬಾಳಿಕೆ, ಜಾತೀಯತೆ, ಧರ್ಮಾಂಧತೆ, ಅತ್ಯಾಚಾರ, ಕೊಲೆ ಅದರಲ್ಲೂ, ಹೈದರಾಬಾದ್ ಕರ್ನಾಟಕದ ಹಿಂದುಳಿದ ಜಿಲ್ಲೆಯಾದ, ಕೊಪ್ಪಳ ಜಿಲ್ಲೆಯಲ್ಲಿ ಬಾಲ್ಯ ವಿವಾಹ, ಕೌಟುಂಬಿಕ ದೌರ್ಜನ್ಯ, ತಾಯಿ ಮರಣ, ಶಿಶುಮರಣ, ಮುಂತಾದವು ಹೆಚ್ಚು ಹೆಚ್ಚು ದಾಖಲಾಗುತ್ತಿರುವುದನ್ನು ಕಂಡಾಗ ಆತಂಕವಾಗುತ್ತಿತ್ತು. ಹೀಗಾಗಿ ಇಂತಹ ಒಂದು ಜಾಗೃತಿ ಆಂದೋಲನದ ಅವಶ್ಯಕತೆ ಕೊಪ್ಪಳದಲ್ಲಿ ಹೆಚ್ಚಾಗಿತ್ತೆಂದು ನನ್ನ ಭಾವನೆ.

ಇಂತಹ ಸಂದರ್ಭದಲ್ಲಿ, ಈ ಸಲದಿಂದ ಕೊಪ್ಪಳದಲ್ಲಿ, ಹಿಂದೆ ಉಡುತ್ತಿದ್ದ ಕಪ್ಪು ಉಡುಪಿನ ಬದಲಿಗೆ ಬಿಳಿಯ ಉಡುಪನ್ನು ಧರಿಸುವುದು ಎಂದು ತೀರ್ಮಾನವಾಗಿತ್ತು. ಹೆಣ್ಣುಮಕ್ಕಳು ಬಿಳಿಸೀರೆ ಉಡುವುದು ಅಪಶಕುನ, ಅದು ವಿಧವೆಯರು ಉಡುವಂತಹದ್ದು ಎಂಬ ಮೌಢ್ಯವನ್ನು ಸಾಂಕೇತಿಕವಾಗಿ ಪ್ರಶ್ನಿಸಲು ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ನಮ್ಮ ಜಿಲ್ಲೆಗೆ ಒಂದು ಅವಕಾಶ ಕೊಟ್ಟಿತೆಂದೇ ಹೇಳಬಹುದು.

ನಿಜ ಹೇಳ್ತೀನಿ ನಾನು ಈ ಮೊದಲು ಜಿಲ್ಲಾ ಮಟ್ಟದಲ್ಲಿ ಇಂತಹ ಯಾವುದೇ ಕಾರ್ಯಕ್ರಮವನ್ನು ಮಾಡಿದ ಅನುಭವ ಇರಲಿಲ್ಲ. ಆದರೆ ನನಗೆ ಈ ಸಾಲು ದೀಪದ ಬಗ್ಗೆ ಇದ್ದ ನಂಬಿಕೆ, ವಿಶ್ವಾಸ ಮಾತ್ರ ನನ್ನಲ್ಲಿದ್ದ ಆತಂಕವನ್ನು ಹೊಡೆದೋಡಿಸಿತ್ತು. ಈ ಹೊತ್ತಿನಲ್ಲಿ ನಾನು ಒಂಟಿಯಾಗಿರಲಿಲ್ಲ ಕೊಪ್ಪಳದ ಹಲವಾರು ಸಂಘಟನೆಗಳು, ಸಂಸ್ಥೆಗಳು, ಅಪಾರ ಕಾಳಜಿಯ ಯುವ ಮಿತ್ರರು ಜೊತೆಗೂಡಿದ್ದೆವು. ರಾಜಾಭಕ್ಷಿ, ಸಿರಾಜ್ ಬಿಸರಳ್ಳಿ, ವಿಠ್ಠಪ್ಪ ಗೊರಂಟ್ಲಿ, ಭಾರದ್ವಾಜ್, ಪಂಪಾರೆಡ್ಡಿ ಅರಳಹಳ್ಳಿ, ಮಮ್ತಾಜ್ ಬೇಗಂ, ಸರೋಜ ಮೇಡಂ, ನಸ್ರೀನ್ ಮಿಠಾಯಿ ಮುಂತಾದವರೆಲ್ಲಾ ಸ್ಥಳೀಯವಾಗಿ ಜೊತೆ ನಿಂತರೆ, ಒಕ್ಕೂಟದಿಂದ ವಾಣಿ ಪೆರಿಯೋಡಿ ದಿನನಿತ್ಯ ತಯಾರಿಯಲ್ಲಿ ಜೊತೆಗೂಡಿದರು. ಕೆ.ವಿ.ಎಸ್., ಅಂಗಳ ಸಂಸ್ಥೆಯ ಯುವಜನರು ಇಡೀ ಪ್ರಚಾರಾಂದೋಲನದಲ್ಲಿ ಹೆಜ್ಜೆ ಹಾಕಿದರು.

ಯಾವುದೇ ರಾಜಕೀಯ ವ್ಯಕ್ತಿಗಳ ಬೆಂಬಲ ಪಡೆಯದೇ, ವಿನಾಕಾರಣ ದುಂದುವೆಚ್ಚ ಮಾಡದೇ ಪ್ರಚಾರಾಂದೋಲನ ನಡೆಸುತ್ತಾ, ಬೀದಿಬದಿಯ ವ್ಯಾಪಾರಿಗಳಲ್ಲಿ, ಜನಸಾಮಾನ್ಯರಲ್ಲಿ ಒಂದೊಂದು ರೂಪಾಯಿ ದೇಣಿಗೆ ಪಡೆದು ಕಾರ್ಯಕ್ರಮಕ್ಕಾಗಿ ಸಿದ್ಧತೆ ನಡೆಸಲು ನಮಗೆ ಎಲ್ಲಿಲ್ಲದ ಹುರುಪು ಎನಿಸಿತ್ತು. ಕೊಪ್ಪಳ ಜಿಲ್ಲೆಯ ನಾಲ್ಕೂ ತಾಲ್ಲೂಕುಗಳಲ್ಲಿ ದೀಪ ಹಚ್ಚಿ ಶಾಂತಿ, ನೆಮ್ಮದಿಯನ್ನು ಪಸರಿಸಲು ಸಜ್ಜಾದೆವು. ಫೆಬ್ರವರಿ 8 ರಂದು ಮೊದಲಿಗೆ ಕುಷ್ಟಗಿ ತಾಲೂಕಿನಲ್ಲಿ, ನಂತರ 15 ರಂದು ಯಲಬುರ್ಗಾ ತಾಲೂಕಿನಲ್ಲಿ, 22ರಂದು ಕಾರಟಗಿಯಲ್ಲಿ ನಡೆಯಿತು. ಮೊದಲಿಗೆ ಕೊಪ್ಪಳದ ನಾಲ್ಕು ತಾಲ್ಲೂಕು ಎಂದುಕೊಂಡಿದ್ದರೂ ನಂತರ ಕೊಪ್ಪಳಕ್ಕೆ ಸೇರದ ಸಿಂಧನೂರಿನ ಮಹಿಳೆಯರೂ ಉತ್ಸಾಹ ತೋರಿಸಿದರು, ಸರಸ್ವತಿ ಪಾಟೀಲ್ ಅವರ ಸಹಕಾರದಲ್ಲಿ ಅಲ್ಲೂ ಈ ಆಂದೋಲನ ನಡೆಯಿತು. ಕೊನೆಯದಾಗಿ ಮಾರ್ಚ್ 8 ರಂದು ಕೊಪ್ಪಳ ತಾಲೂಕಿನ ಅಶೋಕ ವೃತ್ತದಲ್ಲಿ ಬೃಹತ್ ರೀತಿಯಲ್ಲಿ ನಡೆಯಿತು.

ಪ್ರತಿಯೊಂದು ತಾಲೂಕಿನಲ್ಲಿ, ಎಲ್ಲೆಲ್ಲಿ ಯಾರ್ಯಾರು ಈ ಆಂದೋಲನದ ಜೊತೆ ಕೈಗೂಡಿಸಲು ಸಿದ್ಧರಿದ್ದರೋ ಎಲ್ಲರನ್ನು ಸಂಪರ್ಕಿಸುತ್ತಾ, ನಮ್ಮ ಉದ್ದೇಶವನ್ನು ಮನವರಿಕೆ ಮಾಡಿಕೊಡುತ್ತಾ, ಸಭೆ, ಸಂವಾದ, ಪತ್ರಿಕಾ ಗೋಷ್ಠಿಗಳನ್ನು ನಡೆಸುತ್ತಾ ತಯಾರಿ ನಡೆಸಿದೆವು. ಮಹಿಳಾ ದಿನಾಚರಣೆಯ ಮಹತ್ವ ಮತ್ತು ನಾವು ಹಮ್ಮಿಕೊಂಡಿರುವ ''ಬಿಳಿ ಉಡುಪಿನಲ್ಲಿ ಶಾಂತಿಗಾಗಿ ನಾವು'' ಮೌನ ಪ್ರತಿಭಟನೆ ಬಗ್ಗೆ, ಪ್ರೀತಿ ರಾಜಕಾರಣದ ಬಗ್ಗೆ ಜಾಗೃತಿ ಮೂಡಿಸತೊಡಗಿದೆವು. ಈ ಎಲ್ಲಾ ಸಂದರ್ಭಗಳಲ್ಲಿ ನಮಗೆ ಸಿಗುತ್ತಿದ್ದ ಪ್ರತಿಕ್ರಿಯೆ ಮಾತ್ರ ಅದ್ಭುತವಾಗಿತ್ತು, ಚೇತೋಹಾರಿಯಾಗಿತ್ತು. ನಮ್ಮ ಈ ಪ್ರಯತ್ನದ ಜೊತೆ

ನಿಲ್ಲುವವರ ಸಂಖ್ಯೆ ಐದರಿಂದ ಹತ್ತು, ಹತ್ತರಿಂದ ನೂರು, ನೂರರಿಂದ ಸಾವಿರ ಹೀಗೆ ಬೆಳೆಯುತ್ತಲೇ ಹೋಯಿತು.

ನಾನಂತೂ ಈ ಕೆಲಸವನ್ನು ಮಾಡುತ್ತಾ ಎಷ್ಟು ಖುಷಿ ಅನುಭವಿಸಿದೆ ಅಂದರೆ ಇಡೀ ಕರ್ನಾಟಕ ಕೊಟ್ಟರೂ ಓಡಾಡಿ ಈ ಕೆಲಸ ಮಾಡಬಲ್ಲೆ ಎಂಬ ಹುಮ್ಮಸ್ಸು ಬಂದುಬಿಟ್ಟಿತು. ಸಾಲಾಗಿ ಎಲ್ಲರೂ ಬಿಳಿ ಉಡುಪು ಹಾಕಿಕೊಂಡು, ಮೌನವಾಗಿ, ಕೆಲವು ಕಡೆ ಹಾಡುಗಳನ್ನು ಹಾಡುತ್ತಾ ಬೀದಿಯಲ್ಲಿ ಸಾಗುವಾಗ ಎಂತಹವರಿಗೂ ಕುತೂಹಲ ಮೂಡಿಸುವಂತಿತ್ತು. ವಿಶೇಷವೆಂದರೆ ಈ ಮಹಿಳಾ ಆಂದೋಲನದಲ್ಲಿ ನಮ್ಮ ಜೊತೆ ಪುರುಷರೂ ಸಹ ಹೆಚ್ಚಿನ ಸಂಖ್ಯೆಯಲ್ಲಿ ಸೇರಿಕೊಳ್ಳುತ್ತಿದ್ದರು. ಹಾಸ್ಟೆಲ್ ಮಕ್ಕಳು, ಪೋಲಿಸ್ ಸಿಬ್ಬಂದಿಗಳು, ಅಧಿಕಾರಿಗಳು, ಹೀಗೆ ಎಲ್ಲಾ ಬಗೆಯ ಜನರು ಸೇರಿಕೊಂಡು ಕ್ಯಾಂಪೇನ್ ಮಾಡುತ್ತಿದ್ದೆವು. ಇಲ್ಲಿ ಯಾರೂ ಮೇಲಲ್ಲ, ಯಾರೂ ಕೀಳಲ್ಲ ಎಂದು ನಂಬಿ ಕಾರ್ಯಕ್ರಮ ಮಾಡುವಾಗ ಹಾಸ್ಟೆಲ್‌ಗಳಲ್ಲಿ ಎಷ್ಟೋ ಹೆಣ್ಣು ಮಕ್ಕಳು, ''ದೀಪಗಳನ್ನು ಹಿಡಿದುಕೊಂಡು ಮೌನವಾಗಿ ನಡೆಸಿದ ಈ ಆಂದೋಲನ ನಮಗೆಲ್ಲಾ ಹೊಸ ಅನುಭವ'' ಎಂದು ಮನತುಂಬಿ ತಮ್ಮ ಸಂತಸ ಹಂಚಿಕೊಂಡಿದ್ದರು.

ಒಟ್ಟಿನಲ್ಲಿ, ಈ ''ಬಿಳಿ ಉಡುಪಿನಲ್ಲಿ ಶಾಂತಿಗಾಗಿ ನಾವು'' ಆಂದೋಲನದ ಇಡೀ ಪ್ರಕ್ರಿಯೆ, ಅದರಲ್ಲಿ ನಾನು ಭಾಗಿಯಾದದ್ದು, ಅದು ನನ್ನಲ್ಲಿ ಹುಮ್ಮಸ್ಸು, ಆತ್ಮವಿಶ್ವಾಸ ಹೆಚ್ಚಿಸಿದ್ದು, ನನ್ನಂತೆ ಯೋಚಿಸುವ ನೂರಾರು, ಸಾವಿರಾರು ಸಂಗಾತಿಗಳನ್ನು ಪರಿಚಯ ಮಾಡಿಕೊಟ್ಟದ್ದು, ಇವೆಲ್ಲವೂ ಜೀವನದಲ್ಲಿ ನಾನೆಂದೂ ಮರೆಯಲಾರದ ಸಂಗತಿಗಳು.

## ನಮ್ಮದು ಪ್ರೀತಿಯ ರಾಜಕಾರಣ, ನಮ್ಮದು ಕರಳುಬಳ್ಳಿಯ ಸಂಬಂಧ

– ವಿಜಯಲಕ್ಷ್ಮಿ ಕೊಟಗಿ

ಇದು ದು. ಸರಸ್ವತಿಯವರ ಹೃದಯದಾಳದಿಂದ ಬಂದ ಮಾತು. ಹೌದು ಎಂಥಹ ಸುಂದರವಾದ ಭಾವನೆ. ಯಾವುದ್ಯಾವುದೋ ಜಿಲ್ಲೆಯಿಂದ ಬಂದ ಅಪರಿಚಿತ ಮಹಿಳೆಯರಲ್ಲಿ ಇಂದು ಭಾವನಾತ್ಮಕ ಸ್ನೇಹಪೂರ್ಣ ನವಿರು ತಂತುಗಳು ಬೆಸೆದುಕೊಂಡಿವೆ. ಮೂರು ಜಡೆ ಸೇರಿ ಒಂದೆಡೆ ನಾಲ್ಕು ಘಳಿಗೆ ಇರಲಾರವು ಎಂಬ ಹಳೇ ಮಾತನ್ನು ಹಳ್ಳಕ್ಕೆ ತಳ್ಳಿ ಮೂರಲ್ಲ, ನೂರಲ್ಲ ಸಾವಿರಾರು ಜಡೆಗಳು ಅನ್ಯೋನ್ಯತೆಯಿಂದ ಚಂದವಾಗಿ ಹೆಣೆದುಕೊಂಡಿದ್ದು ಸುಳ್ಳಲ್ಲ.

ಅಯ್ಯೋ ಮಾತು ದಾರಿ ತಪ್ಪಿತು ಅಂದ್ಕೊಂಡ್ರಾ? ಹಾಗೇನಿಲ್ಲಾರಿ, ಕುಲುಕಿದ ಕೈಗಳು ಸ್ನೇಹವನ್ನು ಗಟ್ಟಿಗೊಳಿಸಿದ್ದು, ಬೆರಳು ಬೆರಳುಗಳು ಭಾವಪೂರ್ಣವಾಗಿ ಹೆಣೆದುಕೊಂಡಿದ್ದು, ಭುಜವೊಂದು ಮತ್ತೊಂದು ಭುಜಕ್ಕೆ ಆಸರೆಯಾಗಿದ್ದು, ತಬ್ಬಿಕೊಂಡ ಬಿಸುಪು ಅಪ್ಯಾಯಮಾನವಾಗಿದ್ದು, ಎಲ್ಲವೂ ಹಾಗೇ ಸುಮ್ಮನೆ ಆದದ್ದಲ್ಲ, ಹಲವು ಸಮಾನ ಮನಸ್ಸುಗಳು ನಿರಂತರವಾಗಿ ಶ್ರಮವಹಿಸಿ ಕಟ್ಟಿದ ಸ್ನೇಹಕೋಟೆಯಿದು.

ರಾಜ್ಯಮಟ್ಟದ ಮಹಿಳಾ ದೌರ್ಜನ್ಯ ಒಕ್ಕೂಟ ಸ್ಥಾಪಿಸಿ, ಪ್ರತಿವರ್ಷ ಒಂದೊಂದು ಜಿಲ್ಲೆಯಲ್ಲಿ ಈ ಮಹಾರ್‍ಯಾಲಿಯನ್ನು ಹಮ್ಮಿಕೊಳ್ಳಲು ತೀರ್ಮಾನಿಸಿದ ಕಾರಣ 2017ರಲ್ಲಿ ಕೊಪ್ಪಳ ಜಿಲ್ಲೆಯನ್ನು ಆಯ್ದುಕೊಳ್ಳಲಾಯಿತು. ಈ ದಿಸೆಯಲ್ಲಿ ನಾವು ಕೊಪ್ಪಳದ ಮಹಿಳೆಯರು ಭಾಗ್ಯವಂತರೆಂದೇ ಹೇಳಬಹುದು. ಈ ಮೊದಲು ಅನೇಕ ಸಲ ಕೊಪ್ಪಳಕ್ಕೆ ಬರುತ್ತಿದ್ದ ಪ್ರಗತಿಪರ ಚಿಂತನೆಯುಳ್ಳ, ಮಹಿಳಾಪರ ಹೋರಾಟಗಾರ್ತಿಯರೆಲ್ಲ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ

ಒಂದೆಡೆ ಸೇರಿ ಪರಿಚಿತರಾದೆವು. ವಾಣಿ ಪೆರಿಯೋಡಿ, ಎಚ್.ಎಸ್.ಅನುಪಮಾ, ದು.ಸರಸ್ವತಿ, ಅಖಿಲಾ ವಿದ್ಯಾಸಂದ್ರ, ಜ್ಯೋತಿ ಹಿಟ್ನಾಳ, ಉಷಾ ಅಂಬ್ರೋಸ್ ಮುಂತಾದ ವಿಚಾರವಾದಿ ಮಹಿಳೆಯರೆಲ್ಲಾ ಒಂದೆಡೆ ಸೇರಿದರು. ಸೇರಿದ್ದು ಮಾತ್ರವಲ್ಲ, ಕೊಪ್ಪಳದ ಗಲ್ಲಿಗಲ್ಲಿಯಲ್ಲಿರುವ ಮಹಿಳಾಮಂಡಲಗಳು, ಹಲವಾರು ಎನ್.ಜಿ.ಓ.ಗಳ ಸಂಚಾಲಕಿಯರು, ಸರಕಾರಿ ನೌಕರಸ್ಥ ಮಹಿಳೆಯರು, ಯುವತಿಯರು, ಯುವಕರು, ಸಾಹಿತಿಗಳು, ಪತ್ರಕರ್ತರು, ಶ್ರಮಿಕರು, ಹೋರಾಟಗಾರರು ಹೀಗೆ ಎಲ್ಲಾ ಸ್ತರದ ಮನಸ್ಸುಗಳು ಒಗ್ಗೂಡುವಂತೆ ಮಾಡಿದರು. ಒಂದೇ ಊರಲ್ಲಿದ್ದರೂ ಒಬ್ಬರಿಗೊಬ್ಬರ ಪರಿಚಯವೇ ಇಲ್ಲದಂತಿದ್ದ ನಾವು ಈ ಒಂದೇ ವೇದಿಕೆಯಲ್ಲಿ ಸ್ನೇಹಿತರಾದೆವು. ಒಂದಲ್ಲ ಎರಡಲ್ಲ ಹಲವಾರು ಸಲ ಮೀಟಿಂಗ್ ಕರೆದು ಅಭಿಪ್ರಾಯ ಹಂಚಿಕೊಳ್ಳಲು ಪ್ರಾರಂಭಿಸಿದೆವು. ಇಲ್ಲಿ ಯಾರೂ ಮೇಲಲ್ಲ, ಯಾರೂ ಕಡಿಮೆಯಲ್ಲ, ಎಲ್ಲರೂ ಸಮಾನರು ಎಂಬುದನ್ನು ಅರ್ಥ ಮಾಡಿಕೊಂಡೆವು.

ಇದರ ಮುಂದಾಳತ್ವದ ಜವಾಬ್ದಾರಿ ವಾಣಿಯವರ ಹೆಗಲ ಮೇಲಿತ್ತು. ಅವರ ಮಾರ್ಗದರ್ಶನದಲ್ಲಿ ನಾವೆಲ್ಲ ಮುಂದುವರೆದೆವು. ಹಿಂದಿನ ಸಮ್ಮೇಳನಗಳ ಅನುಭವವನ್ನು ಹಂಚಿಕೊಳ್ಳುತ್ತ ಮುಂದಿನ ಕಾರ್ಯದತ್ತ ಗಮನ ಹರಿಸಿದೆವು. ಮೊದಮೊದಲು ಮೀಟಿಂಗ್ ಸೇರಿದ ನಾವು ನಾಲ್ಕಾರು ಮಹಿಳೆಯರು ಇದೆಲ್ಲಾ ನಮ್ಮೂರಿನಲ್ಲಿ ಸಾಧ್ಯವಾಗಬಹುದಾ? ನಾವು ಮಾಡುತ್ತೇವಾ? ಎಂಬ ಅಪನಂಬಿಕೆಯನ್ನು ಹೊಂದಿದ್ದೆವು. ಆದರ ಜೊತೆಜೊತೆಗೆ ಇಂಥ ಒಂದು ಅದ್ದೂರಿ ಮಹಿಳಾ ಕಾರ್ಯಕ್ರಮ ಮಾಡಬೇಕೆಂಬ ಆಸೆಯೂ ಬಹುದಿನದಿಂದ ಮನಸ್ಸಿನೊಳಗೆ ಇದ್ದೇಇತ್ತು. ಇದಕ್ಕೆ ನನ್ನ ಹಲವಾರು ಸಂಗಾತಿಗಳೆಲ್ಲ ಧನಾತ್ಮಕ ಸ್ಫೂರ್ತಿ ತುಂಬಿದರು. ಒಂದೊಂದೇ ಯೋಜನೆಯನ್ನು ರೂಪಿಸಿಕೊಂಡು ಹಂತಹಂತವಾಗಿ ಮುಂದುವರೆದೆವು. ಇದು ಮಹಿಳಾ ಪರ ಕಾರ್ಯಕ್ರಮವಾಗಿದ್ದರೂ ಹಿರಿಯ ಸಾಹಿತಿ ವಿಠ್ಠಪ್ಪ ಗೋರಂಟ್ಲಿ, ಹೋರಾಟಗಾರ ಭಾರದ್ವಾಜರವರು, ಪತ್ರಕರ್ತ ಸಿರಾಜ್ ಬಿಸರಳ್ಳಿ, ರಾಜಾಭಕ್ಷಿಯವರು, ಲಡಾಯಿ ಪ್ರಕಾಶನದ ಬಸವರಾಜ್, (ಕ್ಷಮಿಸಿ ಹೆಸರಿನ ಪಟ್ಟಿ ತುಂಬಾ ಉದ್ದ ಇದೆ ಆದ್ದರಿಂದ ಕೆಲವರ ಹೆಸರನ್ನಷ್ಟೇ ಇಲ್ಲಿ ಪ್ರಸ್ತಾಪ ಮಾಡಿದ್ದೇನೆ) ಇನ್ನೂ ಅನೇಕ ಸಹೋದರರು ನಮ್ಮ ಬೆನ್ನ ಹಿಂದಿನ ಶಕ್ತಿಯಾಗಿ ನಿಂತರು. ನಮ್ಮ ಸಮಸಮಕ್ಕೆ ಶ್ರಮಿಸಿದರು. ನಮ್ಮೆಲ್ಲಾ ಮಹಿಳೆಯರಿಂದ ಅವರಿಗೊಂದು ಹಾರ್ದಿಕ ವಂದನೆಗಳು.

ಮೊಟ್ಟಮೊದಲು ನಾವು ಈ ಸಮಾವೇಶಕ್ಕೆ ಬೇಕಾಗುವ ಹಣಕಾಸಿನ ವ್ಯವಸ್ಥೆ ಮಾಡಬೇಕಿತ್ತು. ಎರಡು ದಿನದ ಮಹಿಳಾ ಸಮಾವೇಶಕ್ಕೆ ಸುಮಾರು 5000 ಮಹಿಳೆಯರನ್ನು ಸೇರಿಸಬೇಕೆಂಬ ಗುರಿ ನಮ್ಮದಾಗಿತ್ತು. ಕೆಲವರಿಗೆ ವಸತಿ ಕೊಡಬೇಕಿತ್ತು. ಎರಡು ದಿನ ಬಂದವರಿಗೆಲ್ಲಾ ಊಟ ಉಪಹಾರದ ಏರ್ಪಾಡು ಮಾಡಬೇಕಿತ್ತು. ಸಮಾವೇಶದ ಸ್ಥಳ ನಿಗದಿಯಾಗಬೇಕಿತ್ತು. ವಿಶಾಲವಾದ ವೇದಿಕೆ ನಿರ್ಮಾಣವಾಗಬೇಕಿತ್ತು. ಬೃಹತ್ ಮೆರವಣಿಗೆ ಹೊರಡಿಸಬೇಕಿತ್ತು. ಇದಕ್ಕೆಲ್ಲಾ ಅನುಕೂಲವಾಗಲಿ, ಕಾರ್ಯಕ್ರಮದ ಪ್ರಚಾರವಾಗಲಿ ಎಂದು ಮಹಿಳಾ ಸಂಘಟನೆ ಹೆಸರು ಮತ್ತು ಘೋಷಣೆಯಿರುವ ಕರವಸ್ತ್ರಗಳನ್ನು, ಕರಪತ್ರಗಳನ್ನು, ಮಹಿಳಾ ಜಾಗೃತಿ ಸಾಹಿತ್ಯದ ಚಿಕ್ಕ ಕೈಪಿಡಿಗಳನ್ನು ಮಾರುವ ಮೂಲಕ ಹಣವನ್ನು ಕೂಡಿಸುವ ಜೊತೆಗೆ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿದೆವು. ಇಂಥಹ ಹೊತ್ತಿನಲ್ಲಿ ನಮಗೇ ಅಚ್ಚರಿಯೆಂಬಂತೆ ಯಾರ್ಯಾರೋ ನಮ್ಮ ಕರೆಗೆ ಓಗೊಟ್ಟು ತಮ್ಮಿಂದಾದ ಸಹಾಯ ಮಾಡಲು ಮುಂದೆ ಬಂದರು. ನಾವು ಚಿಕ್ಕಚಿಕ್ಕ ತಂಡಗಳನ್ನು ಕಟ್ಟಿಕೊಂಡು ಹೋಗಿ ದಾನಿಗಳ ಮನ ಒಲಿಸಿದೆವು. ಎಲ್ಲಿಯೂ ನಮ್ಮನ್ನು ಬರಿಗೈಯಿಂದ ಕಳಿಸದೆ ತಮ್ಮಿಂದಾದ ಧನ ಸಹಾಯ ಮಾಡಿದರು. ಕೆಲವರು

ಶಾಮಿಯಾನ, ಆಸನಗಳು, ವೇದಿಕೆಯ ಹೊಣೆ ಹೊತ್ತುಕೊಂಡರು. ಕೆಲವರು ಕುಡಿಯುವ ನೀರಿನ ವ್ಯವಸ್ಥೆ ಮಾಡಿದರು. ಇನ್ನೂ ಕೆಲವರು ಆಹಾರವನ್ನು ತಯಾರಿಸಲು ಬೇಕಾದ ದಿನಸಿ ಪದಾರ್ಥಗಳನ್ನು ಕೊಟ್ಟರು. ಮತ್ತಷ್ಟು ಜನ ತಮ್ಮ ಶ್ರಮದಾನ ಮಾಡಲು ಸ್ವಯಂಸೇವಕರಾಗಿ ಮುಂದೆಬಂದರು. ಇದಲ್ಲದೇ ನಮ್ಮ ಹೊಸ ಸಂಗಾತಿಗಳು ತಮ್ಮ ಸ್ನೇಹಿತರಿಂದ ಸಂಸ್ಥೆಗಳಿಂದ ಹಣ ಕೂಡಿಸಿಕೊಟ್ಟರು. ಹೀಗೆ ನಮಗೆ ಬೆಂಬಲ ಸಿಕ್ಕಂತೆಲ್ಲಾ ನಮ್ಮಲ್ಲಿ ಹೊಸ ಹುರುಪು ತುಂಬಿತು. ಇಲ್ಲಿಯವರೆಗೆ ಗಂಡಸರೇ ಮಾಡಬಹುದೆಂದು ನಂಬಿದ್ದ ಗೋಡೆ ಬರಹವನ್ನು ಉತ್ಸಾಹಿತ ಯುವತಿಯರು ಮಾಡಿದುದು ಒಂದು ಒಳ್ಳೆ ಮುನ್ನಡೆ ಅಂದುಕೊಳ್ಳಬಹುದು.

ನಾವೆಲ್ಲಾ ಅತ್ಯಂತ ಉತ್ಸಾಹದಿಂದ ಕಾಯುತ್ತಿದ್ದ ಮಾರ್ಚ್ 8ನೇ ತಾರೀಕು ಬಂದೇಬಿಟ್ಟಿತು. ಎರಡು ದಿನಗಳ ನಮ್ಮ ಕಾರ್ಯಕ್ರಮ ಪ್ರಾರಂಭವಾಗೇ ಬಿಟ್ಟಿತು. ಮೊದಲದಿನ ಭಾಗ್ಯನಗರದ ಬಾಲಾಜಿ ಕಲ್ಯಾಣಮಂಟಪದಲ್ಲಿ ಮಹಿಳೆಯರದೇ ಕಲರವ. ''ನೆತ್ತಿಗೆ ಅಕ್ಷರದ ಅರಿವು, ಹೊಟ್ಟೆಗೆ ಅನ್ನದ ನೆರವು'' ಎಂಬ ಅಮೃತವಾಣಿಯ ಆಶಯ ನಮ್ಮದು. ಅಂದಿನ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ರಂಜನಾ ಪಾಡಿಯವರು ನೆರವೇರಿಸಿದರು. ಮಹಿಳೆ ಮತ್ತು ಪ್ರಜನನ ಹಕ್ಕುಗಳು ಕುರಿತು ವಿಚಾರ ಸಂಕಿರಣ ನಡೆಯಿತು. ಇದರೊಂದಿಗೆ 'ಜೊತೆಗೂಡಿ ನಡೆಯೋಣ' ಪುಸ್ತಕವನ್ನು ಬಿಡುಗಡೆಗೊಳಿಸಿದರು. ಮಹಿಳೆಯ ಸ್ಥಿತಿಗತಿ, ದೌರ್ಜನ್ಯದ ಕುರಿತು ಒಳ್ಳೊಳ್ಳೆ ವಿಚಾರಗಳು, ಅಭಿಪ್ರಾಯಗಳ ವಿಮರ್ಶೆ, ಅರ್ಥಪೂರ್ಣ ಕವಿಗೋಷ್ಠಿ ನೊಂದವರ ಬೆಂದ ನುಡಿಗಳು, ಬಾಂಧವ್ಯದ ಚಂದದ ಮಾತುಗಳು ಎಲ್ಲವೂ ಆದ್ಯತೆ ಪಡೆದಿದ್ದವು.

ಅಂದಿನ ಸಂಜೆಯನ್ನು ಮಾತ್ರ ನಾನೆಂದಿಗೂ ಮರೆಯಲಾರೆ. ನಮ್ಮ ವಯಸ್ಸು ಮರೆತು, ನಮ್ಮ ನಾಚಿಕೆ ಸಂಕೋಚಗಳನ್ನು ಬದಿಗಿಟ್ಟು, ಹುಮ್ಮಸ್ಸಿನಿಂದ ಹುಡುಗರಲ್ಲಿ ಹುಡುಗರಾಗಿ ಹಾಡಿ, ಆಡಿ ಕುಣಿದು ಸಂಭ್ರಮಿಸಿದೆವು. ಅಲ್ಲಿ ನಮ್ಮನ್ನು ಕುಣಿಸುವ ಜೋಷ್ ಇತ್ತು. ನಂತರ ಅಶೋಕ ವೃತ್ತದಲ್ಲಿ ಬಿಳಿಯುಡುಗೆಯಲ್ಲಿ ಮೇಣದಬತ್ತಿ ಹಿಡಿದು ವೃತ್ತಾಕಾರದಲ್ಲಿ ಮೌನವಾಗಿ ನಿಂತಿದ್ದರೆ ಮೈಜುಂ ಅನ್ನುವಂತಿತ್ತು. ''ದೀಪದ ಮಹಿಳೆ ನೈಟಿಂಗೇಲ್''ನಂತೆ ಪ್ರತಿಯೊಬ್ಬರು ಕಂಗೊಳಿಸುತ್ತಿದ್ದರು.

ಮರುದಿನದ ಸಡಗರವೇ ಬೇರೆ. ಕೊಪ್ಪಳದ ಆರಾಧ್ಯ ದೈವ ಶ್ರೀ ಗವಿಸಿದ್ಧೇಶ್ವರ ಮಠದಿಂದ ಹೊರಟ ಹಕ್ಕೊತ್ತಾಯ ಜಾಥಾವನ್ನು ಖ್ಯಾತ ತೆಲಗು ಲೇಖಕಿ ಶ್ರೀಮತಿ ಗೋಗು ಶ್ಯಾಮಲ ಉದ್ಘಾಟಿಸಿದರು ಮತ್ತು ಶ್ರೀಮತಿ ಕವಿತಾ ಕೃಷ್ಣನ್ ಜಾತಾಕ್ಕೆ ಚಾಲನೆ ನೀಡಿದರು. ನಾನು ಕೊಪ್ಪಳದ ಅನೇಕ ರ್‍ಯಾಲಿಯಲ್ಲಿ ಭಾಗವಹಿಸಿದ್ದೇನೆ, ಅನೇಕ ರ್‍ಯಾಲಿಗಳನ್ನೂ ನೋಡಿದ್ದೇನೆ. ಆದರೆ ಇಡೀ ಕೊಪ್ಪಳ ಜಿಲ್ಲೆಯ ವಿವಿಧೆಡೆಯಿಂದ ಆಗಮಿಸಿದ ಮಹಿಳೆಯರು ಚುರುಗುಡುವ ಆ ರಣಬಿಸಿಲಿನಲ್ಲೂ ನಿರುತ್ಸಾಹಗೊಳ್ಳದೇ ಒಳ್ಳೇ ಹುರುಪಿನಿಂದ ಕೊಪ್ಪಳದ ಮುಖ್ಯರಸ್ತೆಯುದ್ದಕ್ಕೂ ಘೋಷಣೆ ಕೂಗುತ್ತ, ಪ್ಲೆಕ್ಸ್ ಪ್ರದರ್ಶಿಸುತ್ತ, ಹಾಡುತ್ತ, ಕುಣಿಯುತ್ತ ಕೊಂಚವೂ ಜೋಶ್ ಕಳೆದುಕೊಳ್ಳದೆ ಶಿಸ್ತಿನಿಂದ ಸಾಲಾಗಿ ಸಾರ್ವಜನಿಕ ಮೈದಾನ ತಲುಪಿದ ಈ ರ್‍ಯಾಲಿಯಂತಹುದನ್ನು ಹಿಂದೆಂದೂ ನೋಡಿರಲಿಲ್ಲ. ಬಹಿರಂಗ ಸಮಾವೇಶದ ವಿಶಾಲವಾದ ವೇದಿಕೆ, ದೊಡ್ಡದಾದ ಶಾಮಿಯಾನದಲ್ಲಿ ವಿರಮಿಸಿದ ಮಹಿಳಾ ಸ್ತೋಮವನ್ನು ಕಂಡಾಗ ಹೃದಯ ತುಂಬಿ ಪುಳಕಿತವಾದದ್ದೂ ಖರೇ. ವೇದಿಕೆಯಲ್ಲಿ ಗಣ್ಯರ ಭಾಷಣ, ಅನಿಸಿಕೆ ಅಭಿಪ್ರಾಯಗಳ ಹಂಚಿಕೆ, ಕ್ರಾಂತಿಯ ಹಾಡುಗಳು ಎಲ್ಲರ ಮನಸೆಳೆದವು. ಯಾವುದೇ ಗದ್ದಲ ಗಲಾಟೆಗೆ ಅವಕಾಶವಿಲ್ಲದಂತೆ ಅಷ್ಟೂ ಜನರಿಗೂ ಇದ್ದಲ್ಲೇ ನೀರಿನಿಂದ ಹಿಡಿದು ಸಿಹಿ ಮತ್ತು ಪಲಾವ್ ರೈಸನ್ನು

ವಿತರಿಸುವಲ್ಲಿ ನಮ್ಮ ಸ್ವಯಂಸೇವಕರ ಶ್ರಮದಾನವನ್ನು ಮರೆಯುವಂತಿಲ್ಲ.

ಒಟ್ಟಿನಲ್ಲಿ ನಮ್ಮ ಕೊಪ್ಪಳ ಜಿಲ್ಲೆಯಲ್ಲಿ ಮಹಿಳಾ ದೌರ್ಜನ್ಯ ಒಕ್ಕೂಟದಿಂದ ನಡೆದ ಎರಡು ದಿನಗಳ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯು ಕೊಪ್ಪಳದ ಇತಿಹಾಸಕ್ಕೆ ಸೇರಿ ಒಂದು ದಾಖಲೆ ನಿರ್ಮಿಸಿದ್ದು ವಿಶೇಷ.

ವೈಯಕ್ತಿಕವಾಗಿ ಹೇಳುವುದಾದರೆ ನನಗಂತೂ ಒಳ್ಳೆಯ ಸ್ನೇಹಿತೆಯರು ಸಿಕ್ಕರು. ಸದಾ ಹಸನ್ಮುಖಿ ವಾಣಿಯವರು ಮತ್ತಷ್ಟು ಹತ್ತಿರವಾದರು. ಈ ಕಾರ್ಯಕ್ರಮ ಮುಗಿದು ನಾವೆಲ್ಲಾ ನಮ್ಮ ನಮ್ಮ ಸ್ಥಳಗಳಿಗೆ ಹೊರಟುಹೋಗಿ ಈ ಪಯಣ ಇಲ್ಲಿಗೇ ನಿಲ್ಲಬಾರದು, ಮತ್ತೇಮತ್ತೆ ನಾವು ಸೇರಬೇಕು ಎಂದು ಚಿಂತಿಸಿದೆವು. ಇದು ಸ್ತ್ರೀನೆಲೆಯ ಹೋರಾಟದ ಮಾರ್ಗದಲ್ಲಿ ನಿರಂತರವಾಗಿ ಸಾಗಬೇಕು. ಹಾಗಾಗಿ ಪುನ: ಕೊಪ್ಪಳ ಜಿಲ್ಲಾಮಟ್ಟದಲ್ಲಿ ನಾವು ಕೆಲವು ಸಮಾನಮನಸ್ಕರು ಈ ಸಂಬಂಧ, ಸಂಪರ್ಕ ಗಟ್ಟಿಗೊಳಿಸುವಲ್ಲಿ ಕಂಕಣಬದ್ಧರಾಗಿರುವೆವು. ನಿಮಗೆ ಗೊತ್ತಾ? ನಾವು ಸ್ತ್ರೀನೆಲೆಯ ಹೋರಾಟದ ದಾರಿಯಲ್ಲಿ ಮುನ್ನಡೆದರೂ ನಮ್ಮ ಹೋರಾಟ ಪುರುಷರ ವಿರುದ್ಧವಲ್ಲ. ಈ ಸಮಾಜದಲ್ಲಿ ಸ್ತ್ರೀಪುರುಷರಿಬ್ಬರೂ ಸಮಾನರು. ನಾವು ಅವರನ್ನು ದೂರುವುದಿಲ್ಲ. ಬದಲಾಗಿ ಅವರನ್ನು ನಮ್ಮ ಜೊತೆಗೆ ಕರೆದೊಯ್ಯಲು ಬಯಸುತ್ತೇವೆ. ನಮ್ಮ ಕೃತಿಯಲ್ಲಾಗಲಿ, ಮಾತಲ್ಲಾಗಲಿ ವೈಯಕ್ತಿಕ ನಿಂದನೆ, ಅಪವಾದಗಳು ಇರುವುದಿಲ್ಲ. ನಾವು ಏನು ಮಾಡುತ್ತಿದ್ದೇವೆ? ನಮಗೆ ಏನು ಅನ್ಯಾಯವಾಗಿದೆ? ನಮಗೆ ಬೇಕಾದ ನ್ಯಾಯ ಪಡೆಯುವುದು ಹೇಗೆ? ಎಂಬುದು ನಮಗೆ ಗೊತ್ತಿದೆ. ಅದಕ್ಕಾಗಿ ಹೋರಾಡುವುದು ನಮ್ಮ ಧ್ಯೇಯ. ಬನ್ನಿ ಅಕ್ಕತಂಗಿಯರೇ, ನಮ್ಮ ಹಾದಿಯಲ್ಲಿ ನಮ್ಮೊಂದಿಗೆ ನೀವೂ ಸಾಗಿ. ಕೈಕೈಹಿಡಿದು ಮುಂದೆ ಸಾಗೋಣ.

ನಮ್ಮ ಬದುಕು ನಮ್ಮದು, ಅದನ್ನು ನಮ್ಮಿಷ್ಟದಂತೆ ಬದುಕೋಣ. ನಮ್ಮ ದೇಹ ನಮ್ಮದು, ಅದನ್ನು ಪ್ರೀತಿಸೋಣ. ಸಮತೆಯತ್ತ ನಮ್ಮ ನಡಿಗೆ, ಬನ್ನಿ ಸಾಗೋಣ.

## ಕೈಗೆ ಕೈ ಜೋಡಿಸೋಣ ಬನ್ನಿ

– ಸಂತೋಷ್ ಎಚ್. ಎಂ. ಕೆವಿಎಸ್

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಈ ಬಾರಿ ರಾಜ್ಯ ಮಟ್ಟದ ಅಂತಾರಾಷ್ಟ್ರಿಯ ಮಹಿಳಾ ದಿನಾಚರಣೆಯ ಅಂಗವಾಗಿ ಕೊಪ್ಪಳದಲ್ಲಿ ನಡೆಸಿ ಸಮಾವೇಶ ಮಾಡಬೇಕೆಂದು ತೀರ್ಮಾನವಾಯಿತು. ಈ ಸಮಾವೇಶದ ಪ್ರಚಾರಾಂದೋಲನದ ಭಾಗವಾಗಿ ಜನವರಿ 2017ರಲ್ಲಿ ಕಾರ್ಯಕರ್ತರಿಗೆ ಎರಡು ದಿನಗಳ ತರಬೇತಿ ಏರ್ಪಡಿಸಲಾಗಿತ್ತು. ಈ ಎರಡು ದಿನಗಳು ನಮಗೆ ಮರೆಯಲಾರದ ದಿನಗಳಾಗಿದ್ದವು. ಹೆಣ್ಣಿನ ಮೇಲೆ ಆಗುತ್ತಿರುವ ದೌರ್ಜನ್ಯಗಳು, ಮಾನಸಿಕ ಹಿಂಸೆಗಳು, ಮತ್ತು ಮುಖ್ಯವಾಗಿ ಮುಟ್ಟಾಗುವ ಮಹಿಳೆಯರನ್ನು ಕೀಳಾಗಿ ಕಾಣುವುದು, ದೂರ ಅಟ್ಟುವುದು ಮುಂತಾದ ಮೂಢನಂಬಿಕೆಗಳಿಂದಾಗುತ್ತಿರುವ ತೊಂದರೆಗಳು ಅರ್ಥವಾದವು. ಹಾಗೆಯೇ ನಿಜವಾಗಿಯು ಪ್ರತಿಯೊಬ್ಬ ಗಂಡಸರು ಕೂಡ ಮೌಢ್ಯಾಚರಣೆಗಳಿಂದ ಹೊರಬಂದು ನೈಸರ್ಗಿಕ ಸಹಜ ಕ್ರಿಯೆಗಳನ್ನು, ನೈಜ ಗುಣಗಳನ್ನು ತಿಳಿದುಕೊಳ್ಳಬೇಕು. ಆಗ ಮಾತ್ರ ಗಂಡಸಿಗೆ ಸಮಾನತೆ ನಿಜವಾಗಿ ಅರ್ಥವಾಗುತ್ತದೆ ಎಂದು ಹೇಳಬಹುದು.

ಹೀಗೆ ಮಹಿಳಾ ಲೋಕ, ಕುಟುಂಬದ ಒಳಗೆ ಮತ್ತು ಹೊರಗೆ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ

ಅಕ್ಕಂದಿರು ಮನದ ಮಾತುಗಳನ್ನು ನಮ್ಮ ಮುಂದೆ ಬಿಚ್ಚಿಟ್ಟರು. ಮೊದಮೊದಲು ನಮಗೆ ಇದು ಮುಜುಗರ ಎನಿಸಿದರು ನಂತರ ಇದರ ಮಹತ್ವ ಅರ್ಥವಾಗಿ ನಮಗಿದ್ದ ಹಲವಾರು ಪೂರ್ವಾಗ್ರಹಗಳು ದೂರವಾದವು. ಈ ಕಾರ್ಯಾಗಾರದಲ್ಲಿ ಪ್ರತಿನಿತ್ಯ ಹೆಣ್ಣಿನ ಮೇಲೆ ಆಗುತ್ತಿರುವ ದೌರ್ಜನ್ಯ, ಶೋಷಣೆಗಳ ಬಗ್ಗೆ ತಿಳಿದು, ಇದನ್ನು ಬದಲಿಸಲೇಬೇಕು ಮತ್ತು ಅದು ನಮ್ಮ ಕರ್ತವ್ಯ ಕೂಡ ಎನಿಸಿತು. ಸಮಾನತೆ ಬರಬೇಕೆಂದು ಯೋಚಿಸುವ ನಮಗೆ ಪ್ರಪಂಚದ ಅರ್ಧ ಜನಸಂಖ್ಯೆ ಇರುವ ಮಹಿಳೆಯರಿಗೆ ಸಮಾನತೆ ಸಿಗದೇ ನಿಜವಾದ ಸಮಾನತೆ ಬರುವುದಿಲ್ಲ ಎಂಬುದು ಅರ್ಥವಾಯಿತು. ಈ ರೀತಿಯಾಗಿ ಒಂದಷ್ಟು ವಿಚಾರಗಳು, ಜಾಗೃತಿ ಹಾಡುಗಳು, ನಾಟಕಗಳನ್ನು ಎರಡೂ ದಿನ ಕಲಿತೆವು.

**ಪ್ರಚಾರಾಂದೋಲನ**

ಕಾರ್ಯಾಗಾರ ಮುಗಿದ ನಂತರ ಕೊಪ್ಪಳ ಜಿಲ್ಲೆಯಾದ್ಯಂತ ಸಮಾವೇಶದ ಆಶಯಗಳ ಕುರಿತು, ಮಹಿಳಾ ದಿನಾಚರಣೆಯ ಮಹತ್ವದ ಕುರಿತು ಪ್ರಚಾರಾಂದೋಲನವನ್ನು ನಡೆಸಿದೆವು. ಕರ್ನಾಟಕ ವಿದ್ಯಾರ್ಥಿ ಸಂಘಟನೆ (ಕೆ.ವಿ.ಎಸ್) ಮತ್ತು ಅಂಗಳ ಸಂಸ್ಥೆಯ ಯುವ ಮನಸ್ಸುಗಳು ಜೊತೆಯಾಗಿ ಎರಡು ತಂಡಗಳಾಗಿ ಕೆಲಸ ಮಾಡಲು ಮುಂದಾದೆವು. ನಮ್ಮೀ ಪ್ರಚಾರಾಂದೋಲನಕ್ಕೆ ''ಕೈಗೆ ಕೈ ಜೋಡಿಸೋಣ'' ಎಂದು ಹೆಸರಿಟ್ಟುಕೊಂಡೆವು. ಕೊಪ್ಪಳ ಜಿಲ್ಲೆಯಲ್ಲಿ ಅತಿ ಹೆಚ್ಚಾಗಿ ಕಾಡುವ ''ಬಾಲ್ಯ ವಿವಾಹ, ತಾಯಿ ಮರಣ, ದೇವದಾಸಿ ಪದ್ಧತಿ, ರಕ್ತ ಹೀನತೆ, ಲೈಂಗಿಕ ದೌರ್ಜನ್ಯ, ಮದ್ಯಪಾನ, ಸ್ತ್ರೀಭ್ರೂಣ ಹತ್ಯೆ, ಮುಟ್ಟು ಕುರಿತಾದ ತಪ್ಪು ಕಲ್ಪನೆಗಳು'' ಹೀಗೆ ಹಲವಾರು ವಿಚಾರಗಳ ಬಗ್ಗೆ ಕೊಪ್ಪಳ ಜಿಲ್ಲೆಯಾದ್ಯಂತ ಕಾಲೇಜುಗಳು, ಹಳ್ಳಿಗಳು ಮತ್ತು ಓಣಿಗಳಿಗೆ ಹೋಗಿ ಜಾಗೃತಿ ಹಾಡುಗಳು, ನಾಟಕ, ಸ್ವಲ್ಪ ಮಾತುಕತೆ ನಡೆಸಿದೆವು. ನಾವು ಹೋದಕಡೆಗೆಲ್ಲಾ ಜನ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದರು ಮತ್ತು ಸಮಾವೇಶದ ಖರ್ಚಿಗೆ ಧನಸಹಾಯ ಕೂಡ ಮಾಡಿದರು. ಇದೇ ವಿಚಾರಗಳ ಕುರಿತು ಕೆಲವು ಕಡೆ ಗೋಡೆ ಬರಹಗಳನ್ನು ಬರೆದೆವು. ಹೀಗೆ ಹಲವು ರೀತಿಯಲ್ಲಿ ಜನರಿಗೆ ಅರಿವು ಮೂಡಿಸುತ್ತ, ನೀವು ನಮ್ಮ ಜೊತೆ ಕೈ ಜೋಡಿಸಿ ಎಂದು ಹೇಳುತ್ತಾ ಬಿರುಸಿನ ಪ್ರಚಾರಾಂದೋಲನ ಮುಂದುವರಿಯಿತು.

ಹೀಗೆ ನಿರಂತರವಾಗಿ ಒಂದು ತಿಂಗಳ ಕಾಲ ಪ್ರಚಾರಾಂದೋಲನದಲ್ಲಿ ತೊಡಗಿಕೊಂಡೆವು. ಮುಖ್ಯವಾಗಿ ಫೆಬ್ರವರಿ ತಿಂಗಳ ನಾಲ್ಕೂ ಬುಧವಾರಗಳಲ್ಲಿ ನಾಲ್ಕೂ ತಾಲ್ಲೂಕುಗಳಲ್ಲಿ (ಗಂಗಾವತಿ, ಕಾರಟಗಿ, ಕುಷ್ಟಗಿ ಮತ್ತು ಯಲಬುರ್ಗ) ''ಮೌನಜಾಗೃತಿ'' ಕಾರ್ಯಕ್ರಮ ನಡೆಸಿದೆವು. ಬಿಳಿ ಉಡುಪಿನಲ್ಲಿ ನಾವು ಶಾಂತಿ ಸಂದೇಶ ಸಾರುತ್ತಾ, ''ಸಮತೆಯಡೆಗೆ ನಮ್ಮ ನಡಿಗೆ'', ಈ ನೆಲದಲ್ಲಿ ಹೆಣ್ಣುಗಂಡು ಸಮಾನರು ಎಂದು ಹೇಳುತ್ತಾ ಮೆರವಣಿಗೆ ಹೊರಡಲು ಸಿದ್ಧತೆ ಮಾಡಿಕೊಂಡೆವು. ''ನಮ್ಮ ಮಗಳು ಜಗದ ಬೆಳಕು, ನಮ್ಮದೇಹ ನಮ್ಮ ಹಕ್ಕು'' ಎಂಬ ಘೋಷ ವಾಕ್ಯ ಜಿಲ್ಲೆಯಾದ್ಯಂತ ನಮ್ಮ ''ಕೈಗೆ ಕೈ ಜೋಡಿಸೋಣ'' ತಂಡದಿಂದ ಮಾರ್ದನಿಸಿತು.

**ಹಬ್ಬದ ಸಂಭ್ರಮ**

ಮಾರ್ಚ್ 9 ರಂದು ಸಮಾವೇಶದ ದಿನ ಮೆರವಣಿಗೆ ಹೊರಡುವ ಸಮಯ ಹತ್ತಿರ ಬಂದಂತೆ ನಮ್ಮ ಕೆಲಸ ಮತ್ತು ಜವಾಬ್ದಾರಿಗಳು ಹೆಚ್ಚಾಗತೊಡಗಿದವು. ಕೊಪ್ಪಳದಲ್ಲಿ ಹಬ್ಬದ ಸಡಗರ ಶುರುವಾಗಿತ್ತು, ಬೇರೆ-ಬೇರೆ ಜಿಲ್ಲೆಗಳು ಮತ್ತು ರಾಜ್ಯಗಳಿಂದ ಸಮಾನ ಮನಸ್ಕರು ಮತ್ತು ಮಹಿಳೆಯರ ಬಗ್ಗೆ ಕಾಳಜಿ ಉಳ್ಳವರು ಆಗಮಿಸತೊಡಗಿದರು. ಕೈಗೆ ಕೈ ಜೋಡಿಸೋಣ ತಂಡದೊಂದಿಗೆ ಬೇರೆಬೇರೆ ಕಡೆಗಳಿಂದ ಕಾರ್ಯಕರ್ತರು ಬಂದು ಸೇರಿಕೊಳ್ಳುತ್ತ ಹಗಲು ರಾತ್ರಿ ಎನ್ನದೆ ಸಮಾವೇಶದ ತಯಾರಿಯಲ್ಲಿ ತೊಡಗಿದೆವು.

ಹಾಗೆಯೇ ಜಿಲ್ಲೆಯಾದ್ಯಂತ ಮಹಿಳೆಯರು ಮತ್ತು ಸಮಾನತೆಯ ಮನಸುಳ್ಳವರು ''ಹೆಣ್ಣೆಂದರೆ ದೀಪವೋ, ಬೆಂಕಿಯಲ್ಲ ಬೆಳಕೊ'' ಎಂದು ಹೇಳುತ್ತಾ ಕೊಪ್ಪಳ ಕಡೆಗೆ ಮೆರವಣಿಗೆ ಬರುತ್ತಾ, ಹಾಗೆಯೇ ಸಮಾವೇಶದಲ್ಲಿ ಸಾವಿರಾರು ಮಹಿಳೆಯರು ''ಆಕಾಶದ ಅರ್ಧ ನಕ್ಷತ್ರಗಳು ನಾವು'' ಎಂದು ಕೂಗಿ ಹೇಳಿದರು.

ಒಟ್ಟಾರೆ ಈ ಪ್ರಕ್ರಿಯೆಯಲ್ಲಿ ನಾವು ಸಾಕಷ್ಟು ಕಲಿತೆವು. ತಾಯ್ತನ ಮತ್ತು ಮಮತೆಯ ಪ್ರೀತಿಯನ್ನು ಪಡೆದೆವು. ಮಾರ್ಚ್ 08ರ ವಿಚಾರಗೋಷ್ಠಿ ಮತ್ತು ಮಾರ್ಚ್ 09ರ ಸಮಾವೇಶ ಎಲ್ಲರ ಪ್ರಯತ್ನದಿಂದ ಯಶಸ್ಸು ಕಂಡಿತು. ಇದು ನಮಗೆ ಸಾರ್ಥಕತೆಯ ಭಾವನೆಯನ್ನು ಮೂಡಿಸಿ ಮತ್ತಷ್ಟು ಹುಮ್ಮಸ್ಸು ಮತ್ತು ಬದ್ಧತೆಯಿಂದ ಕೆಲಸ ಮಾಡಲು ಸ್ಪೂರ್ತಿ ನೀಡಿತು. ಈ ಮಹಿಳಾ ದಿನಾಚರಣೆಯ ಪ್ರಕ್ರಿಯೆಯಲ್ಲಿ ನಾವು ಪಾಲ್ಗೊಳ್ಳಲು ಅವಕಾಶ ಸಿಕ್ಕಿದ್ದಕ್ಕೆ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟಕ್ಕೆ ನಾನು ಕೃತಜ್ಞನಾಗಿರುತ್ತೇನೆ.

## ಕೊಪ್ಪಳ ಮಹಿಳಾ ಜಾಗೃತಿ ಸಮಾವೇಶದ ಸಂದೇಶ

– ವಿಠ್ಠಪ್ಪ ಗೋರಂಟ್ಲಿ

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಮಾರ್ಚ್ 8 ಮತ್ತು 9ರಂದು ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದಿಂದ ಕೊಪ್ಪಳದಲ್ಲಿ ರಾಜ್ಯಮಟ್ಟದ ಮಹಿಳಾ ಸಮಾವೇಶ ನಡೆಯಿತು. ಇದು ಅಪರೂಪವಾದ ಸಮಾವೇಶ. ಅಪೂರ್ವ ಹಾಗೂ ಅರ್ಥಪೂರ್ಣವಾಗಿ ಆಚರಿಸುವ ಮೂಲಕ ಸಮಾಜಕ್ಕೆ ಒಂದು ಉತ್ತಮವಾದ ಸಂದೇಶ ನೀಡಿದೆ. ಆ ಕಾರಣಕ್ಕಾಗಿ ಅದನ್ನು ಕುರಿತು ಬರೆಯಬೇಕಾದ ಅಗತ್ಯವಿದೆ.

ಪ್ರಪಂಚದಲ್ಲಿಯೇ ಮಹಿಳೆ ಎರಡನೆಯ ದರ್ಜೆಯ ಪ್ರಜೆಯಾಗಿಯೇ ಗುರುತಿಸಲ್ಪಟ್ಟಿದ್ದಾಳೆ. ಎಷ್ಟೋ ಮುಂದುವರಿದ ರಾಷ್ಟ್ರಗಳಲ್ಲಿಯೂ ಸಹಿತ ಇತ್ತೀಚಿನವರೆಗೆ ಮತದಾನದ ಹಕ್ಕನ್ನೇ ನೀಡಿರಲಿಲ್ಲ ಎನ್ನುವುದು ಇದಕ್ಕೆ ನಿದರ್ಶನ ಒದಗಿಸುತ್ತದೆ. ನಮ್ಮ ದೇಶದಲ್ಲಿ ಮೊಟ್ಟ ಮೊದಲಿಗೆ ಮಹಿಳೆಯರಿಗೆ ಶಿಕ್ಷಣ ನೀಡಲು ಮುಂದಾದ ಸಾವಿತ್ರಿಬಾಯಿ ಫುಲೆ ದಂಪತಿಗಳು ಅನುಭವಿಸಿದ ಕಷ್ಟ ಅಷ್ಟಿಷ್ಟಲ್ಲ. ಡಾ.ಬಿ.ಆರ್ ಅಂಬೇಡ್ಕರ್ ಅಂಥವರು ಸಂವಿಧಾನದಲ್ಲಿ ಮಹಿಳೆಯರಿಗೆ ಸಮಾನವಾದ ಹಕ್ಕನ್ನು ನೀಡಿರದಿದ್ದರೆ ಅಥವಾ ಆಗಿನ ಸರ್ಕಾರ ಅದಕ್ಕೆ ಅವಕಾಶ ನೀಡದಿದ್ದರೆ ನಮ್ಮ ಮಹಿಳೆಯರ ಪರಿಸ್ಥಿತಿ ಇನ್ನೂ ಗಂಭೀರವಾಗಿರುತ್ತಿತ್ತು, ವಿಚಿತ್ರವೆಂದರೆ ಪ್ರಕೃತಿ ಜಗತ್ತಿನ ಮಟ್ಟದಲ್ಲಿ ಹೆಣ್ಣು ಗಂಡಿನ ಸಂಖ್ಯೆಯನ್ನು ಸಮ ಸಮವಾಗಿಯೆ ಕಾಯ್ದುಕೊಂಡು ಬಂದಿದೆ ಆದರೆ ಮನುಷ್ಯನ ಇತ್ತೀಚಿನ ದುಷ್ಟತನದಿಂದಾಗಿ ಹೆಣ್ಣು ಭ್ರೂಣ ಹತ್ಯೆಯ ಕುಕೃತ್ಯದ ಕಾರಣ ಜಾಗತಿಕ ಮಟ್ಟದಲ್ಲಿ ಹಾಗೆಯೆ ನಮ್ಮ ದೇಶ, ನಾಡು ಮತ್ತು ನಮ್ಮ ಜಿಲ್ಲೆಯಲ್ಲಿಯೆ ಹೆಣ್ಣಿನ ಸಂಖ್ಯೆ ಕಡಿಮೆಯಾಗಿರುವುದು ಮುಂದಿನ ದುರಂತದ ಲಕ್ಷಣವಾಗಿದೆ.

ಕೆಲವರಿಗೆ ಕೇವಲ ಹೆಣ್ಣು ಮಕ್ಕಳಾದರೆ ಮತ್ತೆ ಕೆಲವರಿಗೆ ಹೆಣ್ಣು ಬೇಕೆಂದರೂ ಹುಟ್ಟದೆ ಗಂಡನ್ನೇ ಹಡೆಯುತ್ತಾ ಹೋಗಿರುವ ನಿದರ್ಶನ ನಮ್ಮ ಕಣ್ಣಿನ ಮುಂದಿವೆ. ಆದರೆ ಪ್ರಕೃತಿ ಜಾಗತಿಕವಾಗಿ ಅದರ ಸಮತೋಲನವನ್ನೆ ಕಾಯ್ದುಕೊಂಡು ಬಂದಿದೆಯೆಂದರೆ ಅದರ ರಹಸ್ಯವನ್ನು ನಾವು ಅರ್ಥ ಮಾಡಿಕೊಳ್ಳಬೇಕಿದೆ. ಆದರೆ ಹೆಣ್ಣನ್ನು ನಿಕೃಷ್ಟವಾಗಿ ಕಾಣುತ್ತ ಪ್ರಕೃತಿಗೆ ವಿರುದ್ಧವಾಗಿ ವರ್ತಿಸುವ

ಮನುಷ್ಯ ಅದರ ದುಷ್ಪರಿಣಾಮ ಅನುಭವಿಸಲೇಬೇಕಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಹೆಣ್ಣಿನ ಮೇಲೆ ಅತ್ಯಾಚಾರ, ದೌರ್ಜನ್ಯ, ಜೀವಂತ ಸುಡುವ ಪ್ರಕರಣಗಳು ಹೆಚ್ಚಾಗಿವೆ. ಈ ಎಲ್ಲದರ ಬಗ್ಗೆ ಸಮರ್ಥವಾಗಿ ಗಟ್ಟಿಯಾಗಿ ಧ್ವನಿ ಎತ್ತುವ ಮೂಲಕ ಎಚ್ಚರಿಸಬೇಕಾದದ್ದು ಪ್ರಸ್ತುತ ತುಂಬಾ ಜರೂರಿನದಾಗಿದೆ. ಇದನ್ನು ಗಮನಿಸಿ ಲೇಖಕಿಯರು, ಚಿಂತಕರು ಮತ್ತು ಹೋರಾಟ ಮನೋಭಾವದ ಡಾ. ಅನುಪಮಾ, ವಾಣಿ ಪೆರಿಯೋಡಿ, ದು. ಸರಸ್ವತಿ, ಮಲ್ಲಿಗೆ, ಜ್ಯೋತಿ ಮುಂತಾದ ಮಹಿಳೆಯರು ರಾಜ್ಯ ಮಟ್ಟದ ನೂರಾರು ಮಹಿಳಾಪರವಾದ ಪ್ರಗತಿಪರ ಸಂಘಟನೆಗಳನ್ನು ಒಟ್ಟುಗೂಡಿಸಿಕೊಂಡು ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವನ್ನು ರಚಿಸಿ, ಪ್ರತಿವರ್ಷ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಬೇರೆ ಬೇರೆ ಜಿಲ್ಲೆಗಳನ್ನು ಆಯ್ದುಕೊಂಡು ಈ ರೀತಿಯ ಸಮಾವೇಶ ಆಚರಿಸುತ್ತಾ ಬಂದಿದ್ದಾರೆ.

ಮೊದಲಿಗೆ ಮಂಗಳೂರಿನಲ್ಲಿ ಸಮಾವೇಶ ಮಾಡಿ ನಂತರ ಮೈಸೂರು, ಬೆಂಗಳೂರು, ಬಿಜಾಪುರ, ಹೀಗೆ ನಾಲ್ಕು ಸಮಾವೇಶ ನಡೆಸಿ ಈ ಬಾರಿ ಐದನೆಯದಕ್ಕಾಗಿ ಕೊಪ್ಪಳವನ್ನು ಆಯ್ದುಕೊಂಡಿದ್ದರಿಂದ ಇಲ್ಲಿ ಮೂರ್‍ನಾಲ್ಕು ತಿಂಗಳಿಂದ ಅದರ ಸಿದ್ಧತೆ ನಡೆಸುತ್ತಾ ಅತ್ಯಂತ ಯಶಸ್ವಿಯಾಗಿ ಆಚರಿಸುವ ಮೂಲಕ ಮಹಿಳಾ ಧ್ವನಿ ಮುಗಿಲಿನವರೆಗೆ ಮೊಳಗುವಂತೆ ಮಾಡಲಾಯಿತು.

ಕೊಪ್ಪಳವನ್ನು ಆಯ್ದುಕೊಳ್ಳಲಿಕ್ಕೆ ಕಾರಣವಿದೆ: ಈ ಜಿಲ್ಲೆಯಲ್ಲಿ ದೇವದಾಸಿ ಪದ್ಧತಿ ಹೆಚ್ಚಾಗಿದೆ. ಆ ಮೂಲಕ ಅವ್ಯಾಹತವಾಗಿ ಹೆಣ್ಣಿನ ಶೋಷಣೆ ನಡೆಯುತ್ತಿದೆ. ಅಲ್ಲದೆ ಶಿಶುಮರಣ, ಹೆರಿಗೆ ಸಂದರ್ಭದಲ್ಲಿ ಬಾಣಂತಿಯರ ಸಾವು. ಮಹಿಳಾ ದೌರ್ಜನ್ಯ ಅತ್ಯಂತ ಅಧಿಕ ಪ್ರಮಾಣದಲ್ಲಿರುವ ಕಾರಣ ಇಲ್ಲಿ ಈ ರೀತಿಯ ಜಾಗೃತಿ ಅಗತ್ಯವಿದೆ. ಇಲ್ಲಿಯ ಕುದರಿಮೋತಿಯಲ್ಲಿ 1986 ರಲ್ಲಿ ಪಾರ್ವತಮ್ಮ ಮತ್ತು ಹುಸೇನಬಿ ಎನ್ನುವ ಹೆಣ್ಣು ಮಕ್ಕಳನ್ನು ಬೆತ್ತಲೆಗೊಳಿಸಿ ಅತ್ಯಂತ ಅಮಾನವೀಯ ದೌರ್ಜನ್ಯ ಹಿಂಸೆಯೊಂದಿಗೆ ಮೆರವಣಿಗೆ ಮಾಡಿದ ಪ್ರಕರಣ, ಕರ್ನಾಟಕವಷ್ಟೇ ಅಲ್ಲ ದೇಶವಿದೇಶಗಳಲ್ಲಿಯೂ ಸುದ್ದಿಯಾಗಿತ್ತು. ಮೊನ್ನೆ ಮೊನ್ನೆ ಶೈಲಜಾ ಎನ್ನುವ ನರ್ಸ್ ಮೇಲೆ ಮೆಡಿಕಲ್ ಕಾಲೇಜಿನ ಅಧಿಕಾರಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಲ್ಲೆ ಮಾಡಿದ್ದರಿಂದ ಆ ಮಹಿಳೆ ಈಗ ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ. ಇನ್ನೂ ತನಕ ಆ ಅಧಿಕಾರಿಗೆ ಶಿಕ್ಷೆಯಾಗಿಲ್ಲ ಮತ್ತು ಆ ಮಹಿಳೆಗೆ ಪರಿಹಾರ ಸಿಕ್ಕಿಲ್ಲ. ಇದೇ ರೀತಿ ಇಲ್ಲಿ ಎಷ್ಟೋ ಮಹಿಳೆಯರ ಮೇಲೆ ನಡೆದ ದೌರ್ಜನ್ಯ ಪ್ರಕರಣಗಳು ಕೊಲೆಗಳು ಬೆಳಕಿಗೆ ಬಾರದೆ ಮುಚ್ಚಿಹೋಗಿವೆ. ಅಂಥವರಿಗೆಲ್ಲಾ ಮಹಿಳೆಯರು ಎಚ್ಚರಗೊಂಡಿದ್ದಾರೆ ಮತ್ತು ಒಗ್ಗಟ್ಟಿನಿಂದ ಹೋರಾಟಕ್ಕೆ ಮುಂದಾಗಿದ್ದಾರೆ ಎನ್ನುವ ಎಚ್ಚರಿಕೆಯ ಸಂದೇಶವನ್ನು ದೌರ್ಜನ್ಯ ಮಾಡುವವರಿಗೆ ನೀಡುವಲ್ಲಿ ಇಂಥ ಸಮಾವೇಶಗಳು ಸಾರ್ಥಕವಾಗುತ್ತವೆ ಎನ್ನುವುದರಲ್ಲಿ ಸಂದೇಹವಿಲ್ಲ.

ಮಹಿಳಾ ಸಮಾವೇಶದ ವಿಶೇಷವೆಂದರೆ ಸಮಾವೇಶ ನಡೆಯುವ ಜಿಲ್ಲೆಯ ಎಲ್ಲಾ ಭಾಗಕ್ಕೂ ಕಾರ್ಯಕರ್ತರು, ಕಾಲೇಜುಗಳಿಗೆ ಮತ್ತು ಸಂಘ ಸಂಸ್ಥೆಗಳಿಗೆ, ಸಂಘಟನೆಯವರಿಗೆ ಭೇಟಿ ಮಾಡಿ ಮಾಹಿತಿ ನೀಡಿ ಸಮಾವೇಶಕ್ಕೆ ಆಹ್ವಾನಿಸುವುದು ಮತ್ತು ನಿಧಿ ಸಂಗ್ರಹ ಮಾಡುವುದು, ಮೇಣದ ಬತ್ತಿ ಹಚ್ಚಿಕೊಂಡು ಸಂಜೆಯ ಹೊತ್ತು ಮೌನ ಪ್ರತಿಭಟನೆ ನಡೆಸುವುದು, ಹಾಡು ಮತ್ತು ಬೀದಿ ನಾಟಕಗಳ ಮೂಲಕ ಪ್ರಚಾರ ಮಾಡುವುದು ಮುಂತಾದ ಕಾರ್ಯಕ್ರಮಗಳಿರುತ್ತವೆ.

ಮೊದಲ ದಿನ ವಿಚಾರ ಸಂಕಿರಣ ಮತ್ತು ಸಂಜೆ ಮೌನ ಜಾಗೃತಿ ಬಿಳಿ ಉಡುಪಿನಲ್ಲಿ ನಾವು ಎನ್ನುವ

ಕಾರ್ಯಕ್ರಮದಲ್ಲಿ ಮೇಣದ ಬತ್ತಿ ಹಚ್ಚಿಕೊಂಡು ನೂರಾರು ಮಹಿಳೆಯರು ಮೌನವಾಗಿ ನಿಲ್ಲುವ ದೃಶ್ಯ ಸಾರ್ವಜನಿಕರ ವಿಶೇಷ ಗಮನವನ್ನು ಸೆಳೆಯುತ್ತದೆ. ಎರಡನೆಯ ದಿನ ಜಾಥಾ ಮೆರವಣಿಗೆಯ ಮೂಲಕ ಆಯ್ದ ಘೋಷಣೆ ಕೂಗುತ್ತಾ ಹಾಡುತ್ತಾ ಶಿಸ್ತಿನಿಂದ ಸಾಲಾಗಿ ಹೊರಟು ಬಹಿರಂಗ ಸಮಾವೇಶದ ಸ್ಥಳಕ್ಕೆ ಆಗಮಿಸಿ ವಿಶಿಷ್ಟವಾಗಿ ಕಾರ್ಯಕ್ರಮ ಉದ್ಘಾಟಿಸಿ ಖ್ಯಾತ ಲೇಖಕರನ್ನು ಹಾಗೂ ಚಿಂತಕರನ್ನು ಆಹ್ವಾನಿಸಿ ಭಾಷಣ, ನಾಟಕ, ಘೋಷಣೆಗಳ ಮೂಲಕ ಸಮಾವೇಶ ನಡೆಸಿ ಕೊನೆಗೆ ನಿರ್ಣಯ ಮಂಡಿಸಲಾಗುತ್ತದೆ. ರಾಜ್ಯದ ಬೇರೆ ಬೇರೆ ಭಾಗಗಳಿಂದ ಮತ್ತು ಬೇರೆ ರಾಜ್ಯಗಳಿಂದಲೂ ಈ ಸಮಾವೇಶಕ್ಕೆ ಮಹಿಳಾ ಪ್ರತಿನಿಧಿಗಳು ಆಗಮಿಸುತ್ತಾರೆ.

ಕೊಪ್ಪಳದಲ್ಲಿ ರೇಲ್ವೇ ಸ್ಟೇಷನ್ ಪಕ್ಕದ ಭಾಗ್ಯನಗರ ರಸ್ತೆಯಲ್ಲಿರುವ ಬಾಲಾಜಿ ಫಂಕ್ಷನ್ ಹಾಲ್‌ನಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಅಂದಾಜು ಆರೇಳು ನೂರು ಜನ ಪ್ರತಿನಿಧಿಗಳು ಭಾಗವಹಿಸಿದ್ದು ವಿಶೇಷವಾಗಿತ್ತು. ಈ ಕಾರ್ಯಕ್ರಮ ಉದ್ಘಾಟಿಸಿ ಒರಿಸ್ಸಾದ ಪ್ರಸ್ತುತ ದೆಹಲಿಯಲ್ಲಿ ವಾಸವಾಗಿರುವ ರಂಜನಾ ಪಾಡಿ ಆಡಿದ ದಿಕ್ಸೂಚಿ ಮಾತುಗಳು ಪ್ರಸ್ತುತ ನಮ್ಮ ದೇಶದ ಅದರಲ್ಲೂ ರೈತ ಮಹಿಳೆಯರ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವಂತಿದ್ದವು. ನಿರರ್ಗಳವಾಗಿ ಬೇರೆ ಬೇರೆ ರಾಜ್ಯಗಳಲ್ಲಿರುವ ಮಹಿಳೆಯರ ಜ್ವಲಂತ ಪರಿಸ್ಥಿತಿಯನ್ನು ಉದಾಹರಣೆ ಸಹಿತ ಉಲ್ಲೇಖಿಸುತ್ತಾ ಮಹಿಳೆಯನ್ನು ಕೇವಲ ಭೋಗದ ವಸ್ತುವಾಗಿ ಪರಿಗಣಿಸುವ ಪುರುಷ ಸಮಾಜದ ಮುಖವಾಡವನ್ನು ಕಳಚಿಟ್ಟರು. ಇದರ ಅಧ್ಯಕ್ಷತೆ ವಹಿಸಿದ್ದ ಶಾಂತಾದೇವಿ ಹಿರೇಮಠ ತಮ್ಮ ಎದ್ದು ಬನ್ನಿ ಗೆದ್ದು ಬನ್ನಿ ಎನ್ನುವ ಕವನದ ಮೂಲಕ ಮಹಿಳೆಯರಲ್ಲಿ ಉತ್ಸಾಹ ತುಂಬಿದರು. ಸಾವಿತ್ರಿ ಮುಜುಂದಾರ ಸ್ಥಳೀಯ ಮಹಿಳೆಯರ ಸಮಸ್ಯೆ ಕುರಿತು ವಿವರಿಸಿದರು.

ನಂತರ ನಡೆದ ವಿಚಾರಗೋಷ್ಠಿಯಲ್ಲಿ ದೇವದಾಸಿ ಪದ್ಧತಿ ಒಂದು ವಾಸ್ತವ ಎಂಬ ವಿಷಯ ಕುರಿತು ಬಳ್ಳಾರಿಯ ಬಿ. ಮಾಳಮ್ಮ ಮತ್ತು ಶೋಭಾ ಗಸ್ತಿ; ಸ್ತ್ರೀ ಭ್ರೂಣ ಹತ್ಯೆ, ಶಿಶು ಮರಣ ಕುರಿತು ನಂದಿನಿ, ಡಾ. ಸೋಮಕ್ಕ; ಬಾಲ್ಯ ವಿವಾಹ ಕಳೆದ ಕನಸುಗಳ ಬಗ್ಗೆ ಶೀಲಾ ರಾಮನಾಥನ್ ಪಣಜಿ ಮತ್ತು ಸಿಂಧನೂರಿನ ಮೋಕ್ಷಮ್ಮ ಇವರೆಲ್ಲಾ ಹಲವಾರು ಒಳನೋಟಗಳ ಮೂಲಕ ಸಮಸ್ಯೆ ಗಂಭೀರತೆಯನ್ನು ಹಾಗೂ ಅದಕ್ಕೆ ಪರಿಹಾರ ಸೂತ್ರಗಳನ್ನು ಸಭೆಯ ಮುಂದಿಟ್ಟರು. ಸಂಜೆ ಅಶೋಕ ಸರ್ಕಲ್‌ನಲ್ಲಿ ನಡೆದ ಮೌನಜಾಗೃತಿ ಕಾರ್ಯಕ್ರಮದಲ್ಲಿ ನಾಲ್ಕೈದು ನೂರು ಜನ ಮಹಿಳೆಯರು ಶಿಸ್ತಿನಿಂದ ಉರಿವ ಮೇಣದ ಬತ್ತಿ ಹಿಡಿದು ನಡೆಸಿದ ಪ್ರದರ್ಶನ ಕೊಪ್ಪಳದಲ್ಲಿಯೇ ಅಪರೂಪ ಎನ್ನಿಸಿತು.

ಮರುದಿನದ ಗವಿಮಠದ ಆವರಣದಲ್ಲಿ ರಾಜ್ಯದ ಎಲ್ಲ ಕಡೆಯಿಂದ ಆಗಮಿಸಿದ ಮಹಿಳೆಯರು ಮತ್ತೊಂದು ಗವಿಸಿದ್ದಪ್ಪನ ಜಾತ್ರೆಯ ನೆನಪು ತರಿಸಿತು. ಇದರ ಉದ್ಘಾಟನೆ ನೆರವೇರಿಸಿ ಮಾತನಾಡಿದ ಆಂಧ್ರದ ಖ್ಯಾತ ಲೇಖಕಿ ಗೋಗು ಶ್ಯಾಮಲಾ ಮಹಿಳೆಯರ ಮೇಲೆ ಪಿತೃಪ್ರಧಾನ ಸಂಸ್ಕೃತಿಯಿಂದ ಮತ್ತು ಮನುವಿನ ಕಟ್ಟಸೂತ್ರ ಅಳವಡಿಸಿಕೊಂಡಿರುವ ಸಂಸ್ಕೃತಿಯಿಂದ ಆಗುತ್ತಿರುವ ಶೋಷಣೆಯನ್ನು ಅನಾವರಣಗೊಳಿಸಿ ಘೋಷಣೆ ಹಾಕುವ ಮೂಲಕ ಮೆರವಣಿಗೆ ಜಾಥಕ್ಕೆ ಚಾಲನೆ ನೀಡಿದರು.

ನೂರಾರು ಮಹಿಳೆಯರು ಸೇರಿದರೇನೇ ಅವರನ್ನು ನಿಯಂತ್ರಿಸುವುದು ಕಷ್ಟ ಸಾಧ್ಯ ಎನ್ನುವಂತಿರುವಾಗ ಐದು ಸಾವಿರಕ್ಕೂ ಹೆಚ್ಚು ಜನ ಎರಡು ಸಾಲಿನಲ್ಲಿ ಹೊರಟಾಗ ಅದು ಒಂದು ಕಿಲೋಮೀಟರಿಗೂ ಉದ್ದವಾಗಿ ಕೊಪ್ಪಳ ನಗರದ ಜನರನ್ನೇ ಅಚ್ಚರಿಗೊಳಿಸಿತು. ಅದು ನಗರದ ಪ್ರಮುಖ ಜವಾಹರ ಬೀದಿಗುಂಟ ಅಶೋಕ ಸರ್ಕಲ್‌ನಿಂದ ನಗರದ ಹೃದಯಭಾಗವಾದ ಬಯಲು

ರಂಗಮಂದಿರದ ಆವರಣಕ್ಕೆ ಒಂದು ವೇದಿಕೆಯಲ್ಲಿ ಸಿದ್ದಪಡಿಸಿದ ಐದು ಸಾವಿರ ಆಸನಗಳೂ ತುಂಬಿ ನಿಂತು ನೋಡುವಂತಾಯಿತು.

ಸಾರ್ವಜನಿಕ ಬಹಿರಂಗ ಸಭೆಯನ್ನು ಮಹಿಳೆಯರೇ ನೇಯ್ದ ಬಟ್ಟೆಯಲ್ಲಿ ಕಿನ್ನಾಳಿನ ಚಿತ್ರಗಾರ ಮನೆತನದ ಮಹಿಳೆ ಚಿತ್ರ ಬಿಡಿಸುವುದರ ಮೂಲಕ ಉದ್ಘಾಟಿಸಿದರು. ನಂತರ ಮಾತನಾಡಿದ ದೆಹಲಿಯ ಕವಿತಾ ಕೃಷ್ಣನ್ ಮಾತನಾಡಿದ ಹಿಂದಿ ಭಾಷಣ ಸಭಿಕರನ್ನು ಮಂತ್ರ ಮುಗ್ದಗೊಳಿಸಿತು. ಲವ್ ಜಿಹಾದ್ ಎನ್ನುವುದನ್ನು ಟೀಕಿಸುತ್ತಿರುವ ಮಂತ್ರಿ ಮೇನಕಾ ಗಾಂಧಿಯ ಇತಿಹಾಸವನ್ನೇ ಜಾಲಾಡಿ ಟ್ರಂಪ್ ವಿರುದ್ಧ ಮಹಿಳೆಯರು ಮಾಡಿದ ಹೋರಾಟವನ್ನೇ ಹಿಡಿದುಕೊಂಡು ಮಹಿಳೆ ಎಲ್ಲ ಬಂಧನದಿಂದ ಕಳಚಿಕೊಳ್ಳುವ ಅಗತ್ಯವಿದೆ ಎಂದರು. ಆರಂಭದಲ್ಲಿ ಭಾರದ್ವಾಜ ಬರಮಾಡಿಕೊಂಡರು, ವಕೀಲೆ ಸಂಧ್ಯಾ ಮಾದಿನೂರು ಕೊಪ್ಪಳದಲ್ಲಿ ಇಂಥ ಅಪರೂಪದ ಕಾರ್ಯಕ್ರಮ ನಡೆದದ್ದು ಅಭಿಮಾನದ ಸಂಗತಿ ಎಂದರು. ಡಾ.ಎಚ್. ಎಸ್. ಅನುಪಮಾ ಆಜಾದಿ ಘೋಷಣೆಯನ್ನು ಇಡೀ ಸಭೆಯನ್ನೇ ಚಾಲನೆಗೊಳಿಸಿ ಮುಗಿಲು ಮುಟ್ಟುವಂತೆ ಮಾಡಿದರು. ನಗರದ ವಿಮಲಾ ಇನಾಂದಾರ, ನಿರ್ಮಲ ಬಳ್ಳೊಳ್ಳಿ, ಕೋಮಲಾ ಕುದರಿಮೋತಿ, ವಿಜಯಲಕ್ಷೀ, ಅರುಣ ನರೇಂದ್ರ ಸರೋಜಾ ಬಾಕಳೆ, ವಿದ್ಯಾ ಪಾಟೀಲ, ಮುಮ್ತಾಜ ಬೇಗಂ, ಪುಷ್ಪಾ ಮೇಸ್ತ್ರಿ ಮಂಜಮ್ಮ ಜೋಗತಿ ಹೀಗೆ ಹೆಸರಿನ ಪಟ್ಟಿ ದೊಡ್ಡದಿದೆ. ಎಲ್ಲರೂ ಭಾಗವಹಿಸಿ ಯಶಸ್ವಿಗೊಳಿಸಿದರು.

## ''ಆದರೆ ಒಂದು ಮರ, ಹೋದರೆ ಒಂದು ಬೀಜ''

– ಆನಂದ ಎನ್. ಹಳ್ಳಿಗುಡಿ

ಸೋದರತ್ವ, ಸಮಾನತೆ ವೈವಿಧ್ಯತೆಯನ್ನು ನಂಬುವ ಮಹಿಳಾ ಚಳುವಳಿಯು ಮಹಿಳೆಯರ ಆತ್ಮ ಘನತೆ ಮತ್ತು ಮಾನವ ಹಕ್ಕುಗಳಿಗಾಗಿ ದನಿಯೆತ್ತುತ್ತಲೇ ಬಂದಿದೆ. ಆ ದನಿಯ ಒಂದು ಭಾಗವಾಗಿ 2017 ರ ಮಾರ್ಚ್ 8 ಮತ್ತು 9 ಕೊಪ್ಪಳದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ತಂಡದ ಒಬ್ಬ ಸಣ್ಣ (ದೇಹಾಕಾರದಲ್ಲಿ....!?) ಮತ್ತು ಚಿಕ್ಕ (ವಯಸ್ಸಿನಲ್ಲಿ....!?) ಸ್ವಯಂ ಸೇವಕ ಸದಸ್ಯನಾಗಿ ''ಸಂಘಟನಾ ಸಮಿತಿಯ ಸದಸ್ಯ'' ನಾಗಿ ಮಹಿಳಾ ಲೋಕದ ಮಹಿಳಾ ಮಣಿಗಳೊಂದಿಗೆ ಮೆರವಣಿಗೆ ಹೊರಟಿದ್ದೇವೆ.... ಎಂಬ ಉತ್ಸಾಹಭರಿತ ಚಿಲುಮೆಗಳ ಹಾಡುಗಳೊಂದಿಗೆ ಸ್ತ್ರೀಮನಕ್ಕೆ ಮಿಡಿಯುವ ಸ್ತ್ರೀ ಸಮಾನತೆಗೆ ದುಡಿಯುವ ಮನಸ್ಸುಗಳೊಂದಿಗೆ ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ತಂಡದ ಪುರುಷ ಸದಸ್ಯನಾಗಿ ಸೇವೆಗೆ ನುಗ್ಗಿದ ಆ ದಿನ ಆ ಕ್ಷಣ ನನ್ನ ಜೀವನದ ಕಲಿಕಾ ಅನುಭವಗಳ ಬಹುದೊಡ್ಡ ಹೂರಣವೇ ಆಯಿತು.

ನಾವು ಆ ದಿನ ನಡೆದ ದಾರಿ, ಪಡೆದ ಅನುಭವ, ಎದುರಿಸಿದ ಸವಾಲುಗಳು, ಮಾತುಗಳು ಎಲ್ಲಿಂದಲೋ ಬಂದ ಜ್ಞಾನದ ಚಿಲುಮೆ ಅನುಭವಗಳಿಂದ ಮಾಡಿದ ಸಾಹಸ ಕಾರ್ಯಗಳು, ಸಾರ್ಥಕ ರೂಪ ಪಡೆದು ಕಣ್ಮುಂದೆ ಸಾರ್ಥಕ ಅನುಭವ ಪಡೆದವು. ವಿಚಾರ ಸಂಕಿರಣದಲ್ಲಿ ಬೆರೆತ, ಕಲೆತ ಮನಸ್ಸುಗಳ ಹಾಗೂ ರ್‍ಯಾಲಿಯಲ್ಲಿ ಅನುರಣನಗೊಂಡ ಆ ಚಪ್ಪಾಳೆ ನನ್ನನ್ನು ಮೂಕ ವಿಸ್ಮಿತಗೊಳಿಸಿದವು.

ಕಾಣದೇ ಬೆರೆತ ಮನಸ್ಸುಗಳು, ಅರಿಯದೆ ಬೆರೆತ ಅನುಭವ ಸಾರಗಳು ಒಟ್ಟಾರೆಯಾಗಿ ನನ್ನಲ್ಲಿ ಸ್ಫೂರ್ತಿ ಚಿಲುಮೆ ಉಕ್ಕಿಸಿ ಸಮ ಸಮಾಜದ ಆಶಯದತ್ತ ನಡೆಯಲು ಕೊಡುಗೆಯನ್ನು ನೀಡಲು ಹಾಗೂ ಅನ್ಯಾಯ, ಅಸಮಾನತೆ, ಮಹಿಳಾ ದೌರ್ಜನ್ಯದ ವಿರುದ್ಧ ಪ್ರಬಲವಾದ ಪ್ರತಿರೋಧ ಒಡ್ಡಲು

ಮನಸ್ಸನ್ನು ಗಟ್ಟಿಗೊಳಿಸಿದ ಬಹು ಅಮೂಲ್ಯ ಸಮಯವಾಗಿತ್ತು.

ನನ್ನ ಪ್ರೇರೇಪಿಸಿದ ಮಾತೊಂದು ಇದೆ: ''ಆದರೆ ಒಂದು ಮರ, ಹೋದರೆ ಒಂದು ಬೀಜ'' ಇದೇ ಪ್ರೇರಣೆ ನನ್ನ ಸಣ್ಣ ಜವಾಬ್ದಾರಿಯುತ ನಡಿಗೆ ಪ್ರಯತ್ನ ಸಾರ್ಥಕವಾಗಿ ಒಂದು ಪ್ರಬಲ ಸಂಘಟನೆಯ ಜವಾಬ್ದಾರಿಯ ಕೆಲಸ ವಹಿಸಿಕೊಳ್ಳುವಂತೆ ಮಾಡಿತು. ಸಂಘಟನಾ ಸಮಿತಿ ಮುಖ್ಯಸ್ಥನಾಗಿ ಕೆಲಸ ನಿರ್ವಹಿಸಿ, ಕೊಪ್ಪಳ ಜಿಲ್ಲೆ ಮತ್ತು ತಾಲ್ಲೂಕಿನ 52 ಸಂಘಟನೆಗಳ ಪ್ರಮುಖರ ಭೇಟಿ ಮಾತುಕತೆ ಪರಿಚಯ ಫಲ ನೀಡಿ, ಸಂಘಟನೆಗೆ ಆನೆ ಬಲ ತುಂಬಿದ ತೃಪ್ತಿ ಭಾವ ಈಗಲೂ ನನ್ನನ್ನು ಆವರಿಸಿದೆ. ಆ ಬಲದ ಹಿಂದಿನ ತಾಯಿ ಹೃದಯಗಳಿಗೆ ಸ್ತ್ರೀ ಮನಗಳಿಗೆ ಇದೋ ನನ್ನ ಕೋಟಿ ನಮನ.

## ಅಕ್ಷರಗಳಲ್ಲಿ ನಿಲುಕದು

– ಸರೋಜಾ ಬಾಕಳೆ

ಮಹಿಳಾ ದಿನಾಚರಣೆಯ ಸಂಭ್ರಮ ಸಡಗರ ಹಂಚಿಕೊಳ್ಳುವ ಸಂಭ್ರಮ ಅನುಭವಿಸಿದರೆ ಮಾತ್ರ ಬರೆಯಲು, ಹೇಳಲು ಸಾಧ್ಯ. ಮುಜುಗರದಿಂದ ಒಂದು ಶಬ್ಧ ನಾನಿಲ್ಲಿ ಅನಿವಾರ್ಯವಾಗಿ ಬರೆಯುತ್ತಿದ್ದೇನೆ. ಈ ಸಂಭ್ರಮ ಹೇಗೆಂದರೆ ಹಕ್ಕಿಗಳೆರಡು ಪರಸ್ಪರ ಪ್ರೀತಿ ಹಂಚಿಕೊಂಡು ತಮ್ಮ ಜೀವನದ ಗಾಲಿಗಳೆರಡು ಸುಗಮವಾಗಿ ಸಾಗಲು ಬೆಸೆದುಕೊಳ್ಳುವ ಮಧುಚಂದ್ರನ ಮೊದಲ ದಿನದ ಸವಿನೆನಪು ಮರೆಯಲು ಹೇಗೆ ಅಸಾಧ್ಯವೋ ಈ ನಮ್ಮೆಲ್ಲ ಸಹೋದರ ಸಹೋದರಿಯರ ಜೊತೆ ಕಳೆದು ಆ ಕ್ಷಣ ಮಧುಚಂದ್ರನ ಸವಿ ನೆನಪಿಗಿಂತ ಸಾವಿರಾರು ಪಟ್ಟು ಹೆಚ್ಚು ದೊಡ್ಡದು, ಮುಗಿಲೆತ್ತರಕ್ಕೆ ಒಯ್ಯುವ ಪ್ಯಾರಾಶುಟ್. ಇನ್ನು ಯಾವ ಅಕ್ಷರ ಹೇಳಲಿ, ಬರೆಯಲಿ? ಆ ಸವಿ ಸಮಯ ಬಣ್ಣಿಸಲು ನನ್ನ ಮಟ್ಟಕ್ಕೆ ನಿಲುಕುವ ಅಕ್ಷರಗಳೇ ಇಲ್ಲಾ ಎಂದು ನನಗೆ ಭಾಸವಾಗುತ್ತಿದೆ, ಎಲ್ಲಿ ಹುಡುಕಲಿ ಆ ಅಕ್ಷರಗಳನು?

ಕೊಪ್ಪಳದಲ್ಲಿ ನಮ್ಮ ಮಹಿಳೆಯರೆಲ್ಲರ ಒಕ್ಕೊರಳಿನ ಕೂಗು ''ಸಮತೆಯೆಡೆಗೆ ನಮ್ಮ ನಡಿಗೆ''. ಈ ದಿನ ಮಹಿಳೆಯರು, ಪುರುಷರು, ಪ್ರೀತಿಯ ಉತ್ತುಂಗ ತುದಿಯಲ್ಲಿರುವ ತ್ರಿಲಿಂಗಿ ಸಹೋದರಿಯರು, ವಯಸ್ಕರು, ಮಕ್ಕಳು, ಪತ್ರಿಕಾ ಮಾಧ್ಯಮದ ಸಹೋದರರು ಎಲ್ಲ ಮಾಧ್ಯಮದ ಬಂಧುಗಳು ಇದ್ದರು. ಹೇಗೆ ವರ್ಣಿಸಲಿ ಈ ಚಿತ್ತಾರವ? ಇಲ್ಲಿ ಪ್ರತಿಯೊಂದು ಹೆಣ್ಣಿಗಾಗುವ ಅನ್ಯಾಯವನ್ನು ಮೆಟ್ಟಿನಿಲ್ಲುವುದು ಮಾತ್ರವಲ್ಲ, ನಾವು ಇನ್ನು ಮುಂದೆ ಮಾಡಬೇಕಾದ ಕಾರ್ಯಗಳ ಚಿಂತನ ಮಂಥನ, ರೂಪುರೇಷೆ ಕೇವಲ ನಮ್ಮ ರಾಜ್ಯಕ್ಕೆ ಮಾತ್ರ ಸೀಮಿತವಾಗಿರದೇ ದೆಹಲಿ, ತಮಿಳು ನಾಡು, ಆಂಧ್ರ ಪ್ರದೇಶ, ಹೀಗೆ ಎಲ್ಲಾ ರಾಜ್ಯದ ಮಹಿಳಾ ಪರ ಧ್ವನಿಗಳು ತಮ್ಮ ಸ್ವಂತ ಅನುಭವ ಹಂಚಿ ಮೂಲೆ ಹಿಡಿದು ಮೂಲೆ ಗುಂಪಾಗಿ ಕಸದಂತೆ ಬಿದ್ದ ನಮ್ಮ ಸಮಾನ ಹೃದಯಗಳನ್ನು ಎಬ್ಬಿಸಿ ಕೈ ಹಿಡಿದು ನಡೆಯಲು ಕಲಿಸಲು ಮುಂದಾಗಿ ಬಂದು ಕಂಕಣ ಕಟ್ಟಿ ರಾತ್ರಿ ಹಗಲೆನ್ನದೆ ದುಡಿಯುವ ಹೃದಯಗಳ ನೋಡಿ ಕೊಪ್ಪಳದ ಮಹಿಳೆಯರು ಅವರೊಂದಿಗೆ ಓಡಿ ಬಂದು ತಬ್ಬಿಕೊಂಡರು. ನಾನು ಹೆಣ್ಣು ಅನ್ನುವ ಪದದ ಅರ್ಥ ತಿಳಿಸಿದ ವಾಣಿ ಪೆರಿಯೋಡಿ, ಮಲ್ಲಿಗೆ, ಅನುಪಮಾ, ಸರಸ್ವತಿ, ಗುಲಾಬಿ, ಜ್ಯೋತಿ ಹೀಗೆ ಸಾಂದರ್ಭಿಕವಾಗಿ ಕೆಲವು ಹೆಸರು ಮಾತ್ರ ಹೇಳಿದ್ದೇನೆ ಇದರಲ್ಲಿ ಒಂದು ಹೆಸರು ಒಂದು ಲಕ್ಷ ಹೆಸರುಗಳಿಗೆ ಸರಿ ಎಂದು ನನ್ನ ಭರವಸೆಯ ಅನಿಸಿಕೆ.

ಈ ಒಕ್ಕೂಟದ ಗುರಿ, ಉದ್ದೇಶ, ನಡೆ, ಧ್ಯೇಯ, ಒಗ್ಗಟ್ಟು, ಸಾಂತ್ವನ, ಸ್ಪಂದನೆ ಇದೆಲ್ಲ ಹೀಗೇ ಮುಂದುವರೆದರೆ ಗಾಂಧೀಜಿಯವರ ಕನಸು ನನಸಾಗಲು ಹೆಚ್ಚು ಸಮಯ ಬೇಕಾಗಿಲ್ಲ. ''ಏನೆಂದು

ಬರೆಯಲಿ ಈ ಬಿಳೀ ಹಾಳೆಯಲ್ಲಿ. ಮತ್ತೆ ಅಳಿಸಿಹೋದೀತು ಎನ್ನುವ ಭಯ ಹೃದಯದಲ್ಲಿ ಬಚ್ಚಿಡಲೇ ನೆನಪುಗಳನ್ನು ಜೋಡಿಸಿದ ಅಕ್ಷರಗಳಲ್ಲಿ?''

## ಕೊಪ್ಪಳ ಸಮಾವೇಶ ಲೋಕಾಂತಗೊಂಡುದು ಹೀಗೆ..

–ಗುಲಾಬಿ ಬಿಳಿಮಲೆ

ಮಂಗಳೂರಿನಲ್ಲಿ 2013 ರಲ್ಲಿ 'ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ' ಮತ್ತು 'ಮಹಿಳಾ ಸಂಘಗಳ ಜಾಲ'ದ ಆಶ್ರಯದಲ್ಲಿ ನಡೆದ 'ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ'ಯ ಐತಿಹಾಸಿಕ ಸಮಾವೇಶದಲ್ಲಿ ಅತೀವ ಆಸಕ್ತಿ ಹಾಗೂ ಲವಲವಿಕೆಯಿಂದ ಭಾಗವಹಿಸಿದ್ದವಳು ನಾನು (ಆ ಸಮಾವೇಶದ ಚಪ್ಪರದಡಿಯಲ್ಲಿ ಅಂಕುರಿಸಿದ್ದು 'ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ'). ಮಂಗಳೂರು ಸಮಾವೇಶದ ಮಾಧ್ಯಮ ನಿರ್ವಹಣೆಯ ಜವಾಬ್ದಾರಿ ನನ್ನದಾಗಿತ್ತು. ದಕ್ಷಿಣ ಕನ್ನಡವು ಹೇಳಿಕೇಳಿ ಕೋಮು ಸಂಘರ್ಷಕ್ಕೆ ಕುಖ್ಯಾತಿಯನ್ನು ಹೊಂದಿರುವಂಥದ್ದು. ಇಲ್ಲಿಯ ಬಹುತೇಕ ಮಾಧ್ಯಮಗಳು 'ಬಣ್ಣ' ಬಳಿದುಕೊಂಡಿರುವುದನ್ನು ಗಮನಿಸುತ್ತಲೇ ಇರುವವರು ನಾವು. ಹಾಗಾಗಿ ಜಾತಿ, ಧರ್ಮ, ವರ್ಗ, ಕೋಮು ಹೀಗೆ ಮಹಿಳೆಯರ ವಿರುದ್ಧ ಕಾರ್ಯಾಚರಿಸುವ ಎಲ್ಲ ಶಕ್ತಿಗಳ ವಿರುದ್ಧದ ಕಾರ್ಯಕ್ರಮವೊಂದಕ್ಕೆ ಇಲ್ಲಿಯ ಮಾಧ್ಯಮಗಳು ಸ್ಪಂದಿಸಲಾರವು ಎಂಬ ಪೂರ್ವ ತೀರ್ಮಾನ ನಮ್ಮದಾಗಿತ್ತು. ಹಾಗೆಂದು ಮಾಧ್ಯಮಗಳು ನಮ್ಮನ್ನು ಬೆಂಬಲಿಸದಿದ್ದರೆ 'ಏನೀವಾಗ?...' ಎಂಬ ಉಡಾಫೆ ನಮ್ಮದಾಗಿರಲಿಲ್ಲ. ಹಾಗಾಗಿ ವಿಶೇಷ ಆಸ್ಥೆ, ಶ್ರಮ, ಸಮಯ ಬಸಿದು ಮಾಧ್ಯಮ ಕೆಲಸವನ್ನು ನಿರ್ವಹಿಸಬೇಕಾಯಿತು. ಅದರ ಪರಿಣಾಮ ನಮ್ಮ ಪೂರ್ವತೀರ್ಮಾನವನ್ನು ತಲೆಕೆಳಗಾಗಿಸಿತು. ಸ್ಥಳೀಯ ವಾಹಿನಿಗಳು ಸೇರಿದಂತೆ ಬಹುತೇಕ ಎಲ್ಲ ಮುದ್ರಣ ಮಾಧ್ಯಮಗಳು ನಮ್ಮ ನಿರೀಕ್ಷೆಗೆ ಮೀರಿ ಅತ್ಯುತ್ತಮ ವರದಿಯನ್ನು ಕಟ್ಟಿಕೊಟ್ಟಿದ್ದವು. ರಾಜ್ಯ ಪುಟಗಳಲ್ಲಿ ಸಮಾವೇಶವು ಸುದ್ದಿ ಮಾಡಿತು. ಆದರೆ, ಆನಂತರದ ಒಕ್ಕೂಟದ ಸಮಾವೇಶದ ಸುದ್ದಿಗಳು ದೂರದಲ್ಲಿದ್ದಂತಹ ನಮ್ಮಂಥವರಿಗೆ ತಲುಪಲೇ ಇಲ್ಲ. ಇದೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿಕೊಂಡುಬಂದಿದ್ದ ನಾನು ಕೊಪ್ಪಳ ಸಮಾವೇಶಕ್ಕೆ ವ್ಯಾಪಕ ಪ್ರಚಾರ ನೀಡಬೇಕೆಂದು ಮನದಲ್ಲೇ ಲೆಕ್ಕಾಚಾರ ಹಾಕಿ ಆ ಜವಾಬ್ದಾರಿಯನ್ನು ಕೊಂಚ ಅಳುಕಿನಿಂದಲೇ ಕೈಗೆತ್ತಿಕೊಂಡೆ.

ಮುಖ್ಯ ವಾಹಿನಿಯ ಮಾಧ್ಯಮಗಳು ಮಹಿಳಾ ಕಾಳಜಿಯನ್ನು ಹೊಂದಿಲ್ಲವಾದರೆ ಹೋಗಲಿ, ಸಾಮಾಜಿಕ ಮಾಧ್ಯಮವು ನಮ್ಮ ಕೈಯೊಳಗೇ ಇದೆಯಲ್ಲ. ಅದನ್ನು ನಮಗೆ ಬೇಕಾದಂತೆ ಬಳಸಬಹುದಲ್ಲ ಎಂಬ ಆಲೋಚನೆಯ ಬೆನ್ನಲ್ಲೇ ಈ ಕ್ಷೇತ್ರದಲ್ಲಿ ನನ್ನ ಪರಿಣತಿ ಕಡಿಮೆ ಇರುವುದು ನನ್ನನ್ನು ಕೊಂಚ ಅಧೀರಳನ್ನಾಗಿಸಿತು. ಒಂದಷ್ಟು ಮಂದಿಯನ್ನು ಸಂಪರ್ಕಿಸಿ ಸಹಾಯ ಯಾಚಿಸಿದರೂ ನೀವೇ ನಿರ್ವಹಿಸಿ, ನಾವು ಬೇಕಾದರೆ ಸಹಾಯ ಮಾಡುತ್ತೇವೆ ಎಂಬ ಉತ್ತರ ಕೇಳಿಬಂತು.

ಗೆಳತಿ ಒಬ್ಬಳು ಕೊಪ್ಪಳ ಸಮಾವೇಶದ ಮುಂಚೂಣಿಯ ಸಂಘಟಕರಲ್ಲಿ ಒಬ್ಬಳಾಗಿದ್ದುದರಿಂದ ಆಕೆ ಬೇಕಾದ ಹಾಗೆ ಸಂಪರ್ಕಕ್ಕೆ ಸಿಗಬಲ್ಲಳೆಂದು ಗೊತ್ತಿದ್ದುದರಿಂದಲೇ ಆಕೆಯೊಂದಿಗೆ ಮಾತನಾಡುತ್ತಾ ಒಂದು ವಾಟ್ಸಪ್ ಗುಂಪನ್ನು ರಚಿಸುವಂತೆ ತಿಳಿಸಿದೆ. ಸಾಮಾಜಿಕ ಮಾಧ್ಯಮ ಕ್ಷೇತ್ರಕ್ಕೆ ಇದು ಒಕ್ಕೂಟದ ಮೊದಲ ಪಾದಾರ್ಪಣೆಯಾದುದರಿಂದ ಸ್ವಲ್ಪ ಹೆಚ್ಚು ಶ್ರಮ ಹಾಕಬೇಕಾಯಿತು. ನಮ್ಮ ನಡುವಿನ ದಣಿವರಿಯದ ಎವರ್ ಗ್ರೀನ್ ಜ್ಯೋತಿ ಹಿಟ್ನಾಳ್ 'ಸಮತೆಯೆಡೆಗೆ ನಮ್ಮ ನಡಿಗೆ' ಎಂಬ ವಾಟ್ಸಪ್

ಗುಂಪು ರಚಿಸಿದಳು. ನನ್ನ ಕಚೇರಿ ಕೆಲಸಗಳನ್ನು ಒಂದು ಹಂತಕ್ಕೆ ಮುಗಿಸದೆ ನಾನು ಅಲ್ಲಿ ಕ್ರಿಯಾಶೀಲಳಾಗುವುದು ಸಾಧ್ಯವಿರಲಿಲ್ಲ. ಹಾಗಾಗಿ ಕೊಂಚ ತಡವಾಗಿ ನಾನು ಗುಂಪಿನಲ್ಲಿ ಸಕ್ರಿಯಳಾಗಬೇಕಾಯಿತು.

ಗುಂಪಿನ ಒಳಹೋಗಿ ನೋಡುವುದೇನು?! ಜಗತ್ತಿನ ಎಲ್ಲ ಬೇಕು ಬೇಡದ ಸುದ್ದಿ ಸೂರುಗಳನ್ನು ಎಲ್ಲೆಲ್ಲಿಂದಲೋ ಎತ್ತಿ ತಂದು ಸುರಿದು ಗುಂಪನ್ನು ಕೊಚ್ಚೆಗುಂಡಿಯಾಗಿರಿಸಿದ್ದರು. ಗುಂಪಿನ ಆಶಯವೇ ಮರೆಯಾಗಿತ್ತು. ದು. ಸರಸ್ವತಿ ಅಕಸ್ಮಾತ್ ಗುಂಪನ್ನು ನೋಡಿದವಳೇ 'ಏ ನಿಲ್ಲಿಸ್ರೇ.. ಇದನ್ನು... ಗಲೀಜು' ಎಂದು ಬಯ್ಯುತ್ತಿದ್ದಾಗಲೇ ನಾನು ಪ್ರವೇಶಿಸಿದೆ ಎಂದು ಆ ನಂತರ ಆಕೆ ಹೇಳಿಕೊಂಡಿದ್ದಳು. ಇಲ್ಲಿ ನಾವು ಮಾಡಿದ ಮೊದಲ ಕೆಲಸವೆಂದರೆ, ಗುಂಪಿಗೆ ಸಮಾವೇಶದ ಆಶಯವನ್ನು ಸ್ಪಷ್ಟಪಡಿಸುವ ಪಾಠ ಮಾಡಿದ್ದು. ನಿಧಾನವಾಗಿ ಗುಂಪು ನಮ್ಮ ಆಶಯಗಳೊಂದಿಗೆ ಹೊಂದಿಕೊಂಡಿತು, ಸಹಕರಿಸಿತು. ಆದರೂ ಗುಂಪನ್ನು ನಿಭಾಯಿಸುವುದು ಬಲು ಸವಾಲಿನ ಕೆಲಸ. ನಾವು ಮಹಿಳೆಯರು ಕಚೇರಿ, ಮನೆ ಕೆಲಸಗಳನ್ನು ಮುಗಿಸಿ ಇತ್ತ ತಿರುಗುವವರು. ಅಷ್ಟೊತ್ತಿಗಾಗಲೇ ಏನಾದರೊಂದು ಎಡವಟ್ಟು ನಡೆದುಹೋಗಿರುತ್ತಿತ್ತು. ಅಂತೂ ಅದು ಹೇಗೋ ಅಚ್ಚುಕಟ್ಟಾಗಿ ನಿಭಾಯಿಸಿಬಿಟ್ಟೆವು.

ಆನಂತರದ್ದು ಫೇಸ್‌ಬುಕ್ ಪ್ರವೇಶ. ಒಕ್ಕೂಟದ ಹೆಸರಿನಲ್ಲಿ ಒಂದು ಖಾತೆ ತೆರೆಯಲು ಯೋಚಿಸಿದೆವು... ತೆರೆದೂ ಆಯಿತು. ಅದನ್ನು ಯಾರು ತೆರೆದರೋ, ಅದರ ಆಡ್ಮಿನ್‌ಗಳು ಯಾರೋ, ಯಾವ ಹೆಸರಿನಲ್ಲಿದೆಯೋ ಎಂಬುದನ್ನು ಕೊನೆಯವರೆಗೂ ನನಗೆ ಪತ್ತೆ ಹಚ್ಚಲಾಗಲಿಲ್ಲ. ಆ ಖಾತೆ ಹೇಳಹೆಸರಿಲ್ಲದಂತೆ ಮರೆಗೆ ಸಂದಿತು.

ಜೀವಪರ ಮನಸುಗಳೆಲ್ಲವೂ ಒಂದೇ ವೇದಿಕೆಯಡಿ ಬರಬೇಕಾದ ಆವಶ್ಯಕತೆಯ ಹಿನ್ನೆಲೆಯಲ್ಲಿ ಅಂಥವರ ಹೇಳಿಕೆಗಳನ್ನು ಪಡೆದು ಚಿಕ್ಕ ಚಿಕ್ಕ ಪೋಸ್ಟರ್‌ಗಳ ಮೂಲಕ ಜಾಲ ತಾಣಗಳಲ್ಲಿ ಹರಿಯಬಿಡುವುದು ಒಳ್ಳೆಯ ಪ್ರಚಾರ ತಂತ್ರ ಎಂಬುದನ್ನು ಆದಾಗಲೇ ಕೆಲವು ಕಾರ್ಯಕ್ರಮಗಳು ತೋರಿಸಿಕೊಟ್ಟಿದ್ದವು. ನಾವು ಕೂಡಾ ಪೋಸ್ಟರ್ ಪ್ರಚಾರದ ಹಿಂದೆ ಬಿದ್ದೆವು. ನಮಗೊಬ್ಬ ಒಳ್ಳೆಯ ಪೋಸ್ಟರ್ ವಿನ್ಯಾಸಕಾರ ಬೇಕಿತ್ತು. ಆದಾಗಲೇ ಪೋಸ್ಟರ್ ಲೋಕಕ್ಕೆ ಪಾದಾರ್ಪಣೆ ಮಾಡಿದ್ದ ಎಳೆಯ ಪ್ರಗತಿಪರ ಗೆಳೆಯ ಸುನೈಫ್ ವಿಟ್ಲನನ್ನು ಸಂಪರ್ಕಿಸಿ ನಮ್ಮ ಜತೆಗೆ ನಿಲ್ಲುವೆಯಾ ಎಂದು ಕೇಳಿದೆ. ಖಂಡಿತ, ಎಂದು ಹುರಿದುಂಬಿಸಿದ್ದಷ್ಟೇ ಅಲ್ಲದೆ, ಚಕ ಚಕನೆ ಲೋಗೋ ಸಹಿತವಾಗಿ ಆಕರ್ಷಕ ಚೌಕಟ್ಟೊಂದನ್ನು ಸಿದ್ದಪಡಿಸಿಯೇ ಬಿಟ್ಟ.

ಆರಂಭದಲ್ಲಿ ಕೆಲ ಹಿರಿಯರನ್ನು ಸಂಪರ್ಕಿಸಿ ಅವರ ಮೌಲಿಕ ಮಾತುಗಳನ್ನು ಪಡೆದುಕೊಂಡೆವು. ನಾನು, ಸುನೈಫ್, ಜ್ಯೋತಿ ಬಿಟ್ಟರೆ ಈ ಕೆಲಸದಲ್ಲಿ ತೊಡಗಿಕೊಳ್ಳಲು ಯಾರೂ ಸಿಗಲಿಲ್ಲ. ಜ್ಯೋತಿ ಸಮಾವೇಶದ ಕೆಲಸಗಳಲ್ಲಿ ವ್ಯಸ್ತಳಾಗಿದ್ದುದರಿಂದ ಆಕೆಗೆ ಸಮಯ ನೀಡುವುದು ಕಷ್ಟವಾಯಿತು. ಆಶಯ ನುಡಿಗಳನ್ನು ಕೇಳಿದ ತಕ್ಷಣ ಕೊಟ್ಟವರು ಬೆರಳೆಣಿಕೆಯ ಮಂದಿ ಮಾತ್ರ. ಮತ್ತೆ ಮತ್ತೆ ಸಂಪರ್ಕಿಸಿ ಪಡೆದುಕೊಳ್ಳುವುದು ಪ್ರಯಾಸದ ಕೆಲಸವಾಗಿತ್ತು. ಅಪಾರ ಸಮಯ, ಶ್ರಮ, ತಾಳ್ಮೆ ಬೇಡುವಂತಹ ಕೆಲಸವಿದು. ಕೆಲಸ ಕಷ್ಟವಾದಾಗ ನಿಮ್ಮ ಆಶಯವನ್ನು ಬರೆದು ಕಳುಹಿಸಿ ಎಂದು ಗುಂಪಿನಲ್ಲಿ ಕೇಳಿಕೊಂಡೆವು. ದುಡುದುಡು ಅಂತ ಹೇಳಿಕೆಗಳು ಬಂದು ಬೀಳಲು ಆರಂಭಿಸಿದವು. ಎಷ್ಟೆಂದರೆ ನಾವು ದಣಿದು ಸಾಕಪ್ಪಾ ಎನಿಸುವಷ್ಟು.

ಇಲ್ಲಿಯ ಅನುಭವಗಳು ರೋಚಕವಾಗಿದ್ದವು. ಐದು ಆರು ಸಾಲುಗಳಲ್ಲಿ ಬರೆದುಕೊಡಿ ಎಂದರೆ

ಹದಿನೈದು ಇಪ್ಪತ್ತು ಸಾಲುಗಳಲ್ಲಿ ಮುಗಿಸಿದವರೇ ಹೆಚ್ಚು. ಅಸಾಧ್ಯ ಬೆರಳಚ್ಚು ತಪ್ಪುಗಳು ಬೇರೆ. ಎರಡು ಸಾಲು ಬರೆದು ಉಳಿದದ್ದನ್ನು 'ನೀವೇ ತುಂಬಿಕೊಳ್ಳಿ ಮೇಡಂ' ಎಂದು ಆದೇಶ ನೀಡಿದವರು, ತಮ್ಮ ಭಾವಚಿತ್ರವನ್ನಷ್ಟೇ ಕಳುಹಿಸಿ ನೀವೇ ನಾಲ್ಕು ಸಾಲು ಬರೆದುಬಿಡಿ ಎಂದು ಕೇಳಿಕೊಂಡವರೂ ಇದ್ದರು. ಬರೆದದ್ದೆಲ್ಲವನ್ನೂ ಪೋಸ್ಟರ್ ಒಳಗೆ ಹಿಡಿಸುವುದು ಸಾಧ್ಯವಿಲ್ಲವಾದ್ದರಿಂದ ಎಡಿಟ್ ಮಾಡಲೇಬೇಕಾಗುತ್ತಿತ್ತು (ಕೆಲವರು ಸರಿಯಾಗಿಯೇ ಕೊಟ್ಟಿದ್ದರು). ಈ ಕೆಲಸಗಳೆಲ್ಲವನ್ನೂ ನಿರ್ವಹಿಸಿ ಸುನೈಫ್‌ಗೆ ರವಾನಿಸಿ ನಾನು ಮಲಗುವಾಗ ಪ್ರತಿದಿನವೂ ನಡುರಾತ್ರಿಯ ಗಂಟೆ ಒಂದನ್ನು ಮೀರುತ್ತಿತ್ತು. ಕೆಲವೊಮ್ಮೆ ಎಂಟು ಹತ್ತು ಮ್ಯಾಟರ್‌ಗಳನ್ನು ಒಟ್ಟಿಗೆ ಕಳುಹಿಸಿದಾಗ ಎಡವಟ್ಟಾಗುತ್ತಿತ್ತು. ಪಾಪ ಸುನೈಫ್‌ಗೆ ಗೊಂದಲವಾಗಿ ಯಾರದೋ ಹೇಳಿಕೆಗೆ ಯಾರದೋ ಭಾವಚಿತ್ರ ಅಂಟಿಸಿಬಿಡುತ್ತಿದ್ದ. ಕೆಲವೊಮ್ಮೆ ಒತ್ತಡದಲ್ಲಿ ಆತನಿಂದಲೂ ಚಿಕ್ಕಪುಟ್ಟ ಅಕ್ಷರ ತಪ್ಪುಗಳಾಗುತ್ತಿದ್ದವು. ಅದೆಲ್ಲವನ್ನೂ ಗಮನಿಸಿ ಸರಿಪಡಿಸಿಕೊಡಲು ಹೇಳಿದಾಗ ಒಂದಿಷ್ಟೂ ಸಿಡುಕದೆ ಸಮಾಧಾನದಿಂದ ನಿರ್ವಹಿಸಿ ತನ್ನೊಳಗಿನ ಮಹಿಳಾ ಸಂವೇದನೆಯನ್ನು ತೆರೆದಿಟ್ಟಿದ್ದ. ತನ್ನ ಕಚೇರಿ ಕೆಲಸಗಳನ್ನು ನಿರ್ವಹಿಸುತ್ತಲೇ 100 ಪೋಸ್ಟರ್‌ಗಳನ್ನು ಆತ ಸಕಾಲದಲ್ಲಿ ವಿನ್ಯಾಸ ಮಾಡಿಕೊಟ್ಟದ್ದನ್ನು ಮರೆಯುವುದಾದರೂ ಹೇಗೆ?

ನಾವು ಮಾಡಿದ ಪೋಸ್ಟರ್‌ಗಳು ಗುಂಪಿನಿಂದ ಗುಂಪಿಗೆ ಹಾರಿದವು. ಫೇಸ್‌ಬುಕ್ ಗೋಡೆಗಳಲ್ಲಿ ವಿರಾಜಿಸಿದವು. ಮೆಸೆಂಜರ್‌ಗಳಲ್ಲಿ ಓಡಾಡಿದವು. ಮಿಂಚಂಚೆಗಳಲ್ಲಿ ಮಿಂಚಿದವು. ಆ ಮೂಲಕ ಬರೆಹಗಾರರು, ವಾಚಕರು, ವಿದ್ಯಾರ್ಥಿಗಳು, ಚಳುವಳಿಗಾರರು, ಪೌರ ಕಾರ್ಮಿಕರು, ದಿನಗೂಲಿಗಳು, ಬೀದಿಬದಿ ವ್ಯಾಪಾರಿಗಳು, ವಿದ್ವಜ್ಜನರು ಹೀಗೆ ಸಮಸ್ತರು ಸಮಾವೇಶದ ಆಶಯಗಳೊಂದಿಗೆ ಒಳಗೊಂಡರು. ಹೀಗೆ ಎಲ್ಲೆಂದರಲ್ಲಿ ಕೊಪ್ಪಳ ಮಹಿಳಾ ಸಮಾವೇಶವು ಪ್ರಚಾರ ಪಡೆಯುವಂತಾಯಿತು.

ಸಮಾವೇಶದ ದಿನಗಳು ಸಮೀಪಿಸುತ್ತಿದ್ದಂತೆ ಒಂದು ಮಾಧ್ಯಮ ಗುಂಪನ್ನು ರಚಿಸಿಕೊಂಡೆವು. ಇದರ ಜವಾಬ್ದಾರಿಯನ್ನು ನಮ್ಮ ಭರವಸೆಯ ಯುವಕ ಮುತ್ತುರಾಜ್ ವಹಿಸಿಕೊಂಡು ಅಚ್ಚುಕಟ್ಟಾಗಿ ನಿರ್ವಹಿಸಿದರು. ಕನ್ನಡ ದೃಶ್ಯ ವಾಹಿನಿಗಳು ಉತ್ತಮವಾಗಿ ಸ್ಪಂದಿಸಿದ್ದರೆ ಬಹುತೇಕ ಮುದ್ರಣ ಮಾಧ್ಯಮಗಳು ಸ್ಥಳೀಯ ಸುದ್ದಿಗಷ್ಟೇ (ಲೋಕಲ್ ಎಡಿಷನ್) ಇಡೀ ಸಮಾವೇಶವನ್ನು ಸೀಮಿತವಾಗಿರಿಸಿ ನಿರಾಶೆ ಮೂಡಿಸಿದವು.

ಹೀಗೆ 'ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ'ದ ಕೊಪ್ಪಳ ಸಮಾವೇಶವು ಲೋಕಾಂತಗೊಂಡು ಎಲ್ಲರ ಗಮನ ಸೆಳೆಯುವಂತಾಯಿತು. ಮುಂದಿನ ಜವಾಬ್ದಾರಿಯನ್ನು ಯುವ ತಲೆಮಾರು ನಿರ್ವಹಿಸಬೇಕು ಎಂಬ ಆಶಯ ನಮ್ಮದು.

## ಒಂದಲ್ಲ ಒಂದು ದಿನ

– ಸಿರಾಜ್ ಬಿಸರಳ್ಳಿ.

ಒಂದಲ್ಲ ಒಂದು ದಿನ ಈ ನೆಲದ ಹೆಣ್ಣುಗಳು

ಮೆರವಣಿಗೆ ಹೊರಡುತ್ತಾರೆ..

ನಿರಂತರವಾಗಿ ಹಾಡು ಕೇಳಿದ್ದ ನನಗೆ ಮೊದಲ ಎರಡು ಸಾಲುಗಳು ಕಂಠಪಾಠವಾಗಿದ್ದವು. ಮನೆಯಲ್ಲಿ ಕಂಪ್ಯೂಟರ್ ಮುಂದೆ ಕುಳಿತು ನಾನು ಅದನ್ನೇ ಗುನುಗುನಿಸುತ್ತಿದ್ದೆ. ನಾಲ್ಕು ಸಾಲುಗಳ ನಂತರವೇನು? ಮಕ್ಕಳನ್ನು ರೆಡಿ ಮಾಡುತ್ತಿದ್ದ ನನ್ನ ಶ್ರೀಮತಿ ಆ ಹಾಡನ್ನು ಮಕ್ಕಳಿಗೆ ಕಲಿಸಿ ಅವರೂ

ಹಾಡುತ್ತಾರೆ ಎಂದಾಗ ಪೂರ್ಣ ಕವಿತೆಗಾಗಿ ನಾನು ಫೋನ್ ಮಾಡಿದ್ದೆ ವಾಣಿ ಪೆರಿಯೋಡಿಯವರಿಗೆ.

ಮುಂದೊಂದು ದಿನ ಕಾರಿನಲ್ಲಿ ಹೋಗುತ್ತಿದ್ದಾಗ ನನ್ನ ಮಕ್ಕಳಿಬ್ಬರೂ ನನ್ನ ಜೊತೆ ಇದ್ದರು ಅಲ್ಲದೆ ಬಸವರಾಜ್ ಸೂಳಿಬಾವಿ, ವಾಣಿ ಪೆರಿಯೋಡಿ ಸಹ ಇದ್ದರು. ಆಗ ನನ್ನ ದೊಡ್ಡ ಮಗಳು ಗುನುಗುಟ್ಟುವುದು ಕೇಳಿ, ನಿನಗೆ ಈ ಹಾಡು ಬರುತ್ತಾ ಅಂತ ಬಸೂ ಅವರು ಕೇಳಿದಾದ ಹೌದು ಎಂದ ಜೇಬಾ ಪೂರ್ಣ ಹಾಡನ್ನೇ ಹಾಡಿದಳು. ಈ ಹಾಡು ನನ್ನಿಬ್ಬರು ಮಕ್ಕಳು ಜೇಬಾ ಮತ್ತು ಶಮಾಗೆ ಇಷ್ಟವಾಗುವುದಕ್ಕೂ ಒಂದು ಕಾರಣವಿತ್ತು.

ಒಂದಲ್ಲ ಒಂದು ದಿನ.. ನಾನು ಹಾಡುತ್ತಿದ್ದಾಗ ನನ್ನ ತುಂಟ ಮಗಳು ಶಮಾ ಅದಕ್ಕೆ ಮತ್ತಷ್ಟು ಸೇರಿಸಿದ್ದಳು.

ಒಂದಲ್ಲ ಎರಡು ದಿನ

ಎರಡಲ್ಲ ಮೂರು ದಿನ

ಮೂರಲ್ಲ ನಾಲ್ಕು ದಿನ..

ಇದು ಅವರಿಗೆ ಇಷ್ಟವಾದ ಹಾಡಾಗಿತ್ತು. ತಮಾಷೆಯ ಈ ಹಾಡನ್ನು ಕೇಳಿ ನಾನು, ರಾಜಾಬಕ್ಷಿ, ವಾಣಿಪೆರಿಯೋಡಿ ಮೇಡಂ ಎಲ್ಲರೂ ನಕ್ಕಿದ್ವಿ. ಮತ್ತೊಮ್ಮೆ ಹಾಡಿ ಎಂದು ಹೇಳಿ ಹಾಡಿಸಿದ್ವಿ. ನಂತರ ಪೂರ್ಣವಾದ ಹಾಡು ಅವರಿಗೆ ಸಿಕ್ಕಾಗ ಅದನ್ನು ಕಲಿತಿದ್ದರು.

ಹೌದು ಸತ್ಯವಾದ ಮಾತು, ಮಕ್ಕಳು ತಮಗರಿವಿಲ್ಲದಂತೆ ಹಾಡಿದ್ದರು. ಒಂದಲ್ಲ ಒಂದು ದಿನ ಎನ್ನುವ ನಿರೀಕ್ಷೆಯೊಂದಿಗೆ ಆರಂಭವಾಗುವ ಬದುಕು ಎರಡು ದಿನ, ಮೂರು ದಿನ ನಾಲ್ಕನೆಯ ದಿನವಾದರೂ ತಮ್ಮದಾಗಬಹುದು ಎಂಬ ನಿರೀಕ್ಷೆ ಹೆಣ್ಣು ಹುಟ್ಟಿದ ದಿನದಿಂದಲೇ ಆರಂಭವಾಗುತ್ತದೆ. ಆ ನಿರೀಕ್ಷೆಯಲ್ಲಿಯೇ ಬದುಕು ಕಳೆದುಹೋಗುತ್ತದೆ. ತಾವು ಬಯಸಿದ್ದನ್ನು ಪಡೆವ ಅದೃಷ್ಟವಂತ ಹೆಣ್ಣುಮಕ್ಕಳ ಸಂಖ್ಯೆ ಕಡಿಮೆ ಎಂದೇ ಹೇಳಬಹುದು. ಹೆಣ್ಣುಮಕ್ಕಳಿಗೆ ಬಹಳ ಆಸಕ್ತಿ ಎಂದರೆ ಕುಸುರಿ ಹಾಕುವ ಕೆಲಸ. ಯಾವುದೇ ರೀತಿಯ ಕುಸುರಿತನ ತೋರಿಸುವ ಕೆಲಸವಿರಲಿ ಅಲ್ಲಿ ಅದೇ ನಿರಾಳತೆಯಿಂದ, ಮೌನವಾಗಿ, ಅದರಲ್ಲೇ ಬೆರೆತುಹೋಗಿ ಕೆಲಸದಲ್ಲಿ ತೊಡಗುತ್ತಾರೆ. ಬಾಸ್ಕೆಟ್ ಹೆಣೆಯುತ್ತಿದ್ದ, ಉಲ್ಲನ್ ಸ್ವೆಟರ್ ಹಾಕುತ್ತಿದ್ದ ನನ್ನ ಹೆಂಡತಿಗೆ ಹೇಳುತ್ತಿದ್ದೆ, ಮಾರುಕಟ್ಟೆಯಲ್ಲಿ ನೀನು ಖರ್ಚುಮಾಡಿದ ದುಡ್ಡಿಗೆ ಇನ್ನೂ 50 ಅಥವಾ 100 ರೂಪಾಯಿ ಜಾಸ್ತಿ ಕೊಟ್ಟರೆ ರೆಡಿಮೇಡ್ ಸಿಗುತ್ತೆ, ಇದ್ಯಾಕೆ ಇಷ್ಟು ಕಷ್ಟಪಡುತ್ತೀಯಾ ಅಂತ.. ಅವಳು ಕೇಳಬೇಕಲ್ಲ, ನನಗೆ ಈ ಕೆಲಸ ಇಷ್ಟವಾಗುತ್ತೆ, ನಾನಿಷ್ಟಪಟ್ಟಂತೆ ಡಿಜೈನ್ ಮಾಡಿ ಹೆಣೆಯುತ್ತೇನೆ; ಅದೂ ನನ್ನಿಷ್ಟದ ಬಣ್ಣ ಬಳಸಿಕೊಂಡು ಎಂದಿದ್ದಳು. ಅವಳಿಷ್ಟಕ್ಕೆ ಅವಳ ಖುಶಿಗೆ ನಾನ್ಯಾಕೆ ಅಡ್ಡಿ ಮಾಡಲಿ.

ಈ ಹೆಣಿಗೆ, ಕುಸುರಿ, ತಿದ್ದಿ ತೀಡುವಿಕೆಯ ಹಿಂದೆ ಹೆಣ್ಣುಮಕ್ಕಳು ತೋರುವ ತಾದ್ಯಾತ್ಮ, ಮೌನ, ಸಮರ್ಪಣೆಯ ಹಿಂದಿನ ನೋವು ನಲಿವಾದರೂ ಏನು? ತಾನು ತನ್ನ ಕುಟುಂಬ, ಸಮಯ ಸಿಕ್ಕಾಗ ಈ ಕುಸುರಿ ಕೆಲಸ. ಬೆಚ್ಚನೆಯ ಕೌದಿ ಹೊಲೆಯುವುದಕ್ಕೂ ಒಂದು ತಾಳ್ಮೆ ಬೇಕು, ಶ್ರದ್ಧೆ ಬೇಕು. ಕೌದಿ ಹೊಲಿಯುವಾಗ ತುಂಡುಗಳನ್ನು ಜೋಡಿಸುವ ರೀತಿ, ಬೆರಳಿಗೆ ಸೂಜಿ ಚುಚ್ಚಿಸಿಕೊಳ್ಳುತ್ತಲೇ ಆ ನೋವನ್ನು ಅಲ್ಲಿಯೇ ಬಿಟ್ಟು ಹೊಸ ತುಂಡು ಹುಡುಕುವ ಪ್ರೀತಿ. ಬಾಸ್ಕೆಟ್, ಸ್ವೆಟರ್‌ನ ದಾರ, ಉಲನ್ನಿನ ಹೆಣಿಗೆಗಳು.. ಹೆಣ್ಣು ತಾನು ಹೆಣೆಯುತ್ತಲೇ ಇದ್ದಾಳೆ. ಅವಳಿಗರಿವಿಲ್ಲದಂತೆಯೇ ಅವಳ ಸುತ್ತ ಹಳೆಯ ಹೆಣಿಗೆಗಳು ಹೊಸ ರೂಪ ತೊಟ್ಟು ಬಿಗಿಯಾಗುತ್ತಲೇ ಇವೆ. ಅವಳಿಗೆ ಅರಿವಿದೆ ತಾನು ಹೆಣೆಯುತ್ತಿರುವು

ದರ ಬಗ್ಗೆ ಮತ್ತು ತನ್ನ ಸುತ್ತ ಹೆಣೆಯಲಾಗುತ್ತಿರುವ ಬಲೆ, ಬಂಧನಗಳ ಬಗ್ಗೆ. ಆದರೂ ಅವಳದು ಅದೇ ಮೌನ, ಮುಗುಳ್ನಗು. ಇರುವ ಬದುಕನ್ನು ಸ್ವೀಕರಿಸುವ ನಿರಾಳ ಮೌನದ ಹಿಂದೆ ಅದುಮಿಟ್ಟುಕೊಂಡ ಸಾವಿರಾರು ಕನಸುಗಳು ಇರಬಹುದೇನೋ? ಜಗಳಕ್ಕೆ ಸಿದ್ಧಳಾದ ಹೆಣ್ಣಿನೊಂದಿಗೆ ಗಂಡು ಜಗಳ ಮಾಡುವುದಕ್ಕೂ ಸಿದ್ಧನಾಗುತ್ತಾನೆ. ಆದರೆ ಅವಳ ಮೌನದ ಮುಂದೆ ತತ್ತರಿಸಿ ಹೋಗುತ್ತಾನೆ. ಕಣ್ಣಲ್ಲಿ ಕಣ್ಣಿಟ್ಟು ನೋಡುವ ಧೈರ್ಯ ಕಳೆದುಕೊಳ್ಳುತ್ತಾನೆ. ಆಗ ಅವಳನ್ನು ಹಿಡಿತದಲ್ಲಿ ಇಟ್ಟುಕೊಳ್ಳಲು ಏನೆಲ್ಲಾ ಸಾಧ್ಯವೋ ಅದನ್ನು ಪ್ರಯತ್ನಿಸುತ್ತಾನೆ.

ಬರೀ ಮೌನದಲ್ಲಿ, ಕಣ್ಣಂಚಿನ ನೀರಿನಲ್ಲಿ, ತುಟಿ ಕಚ್ಚಿ ಹಿಡಿದು ಅಳುನುಂಗಿ ಮುಗುಳ್ನಗೆಯಲ್ಲಿಯೇ ತನ್ನ ಮೀರಿಹೊರಟ ಹೆಣ್ಣನ್ನು ನಿಭಾಯಿಸಲು ಸೋತ ಗಂಡಸು ಅವಳನ್ನು ಬಂಧಿಸಲು ನೆಪಗಳನ್ನು ಹುಡುಕುತ್ತಾನೆ. ಕುಡಿದು ಬಂದ ಗಂಡ ಹೆಂಡತಿಗೆ ಹೊಡೆಯುತ್ತಿದ್ದರೆ ಪ್ರತಿರೋಧ ತೋರುತ್ತಲೇ ಅವಡುಗಚ್ಚಿ ನೋವು ಸಹಿಸಿಕೊಳ್ಳುತ್ತಾ ಗುಡಿಸಲ ಹೊರಗೆ ಬಂದು, ಇವತ್ತು ಜಾಸ್ತಿಯಾಗ್ಯೆತಿ, ಮಾಡಕ್ಕತ್ತಾನ ಎನ್ನುತ್ತಾ ನಗುತ್ತಲೇ ಕಣ್ಣೀರು ಒರೆಸಿಕೊಳ್ಳುತ್ತಾಳೆ. ಅವಳ ನಗು ಕಂಡ ಕ್ಷುದ್ರ ಗಂಡ ಮತ್ತಷ್ಟು ಎಗರಾಡುತ್ತಾನೆ.

ನಾನು ಮತ್ತು ಗೆಳೆಯ ರಾಜಾಬಕ್ಷಿ ಚರ್ಚೆ ಮಾಡುವಾಗ ಒಂದು ವಿಷಯ ನಾನು ಹೇಳಿದೆ. ಸಣ್ಣ ಸಣ್ಣ ಸಂಗತಿಗಳಲ್ಲೂ ಖುಶಿಪಡುವ, ಅದನ್ನೇ ದೊಡ್ಡ ಗೆಲುವು ಎಂದು ಸಂಭ್ರಮಿಸುವ ಮತ್ತು ಸಿಕ್ಕಿರುವ ಹಿಡಿಯಷ್ಟು ಸ್ವಾತಂತ್ರ್ಯದಲ್ಲೇ ಇಡೀ ಜಗತ್ತನ್ನೇ ಗೆಲ್ಲುವ ಹೆಣ್ಣಿನ ಆತ್ಮವಿಶ್ವಾಸವೇ ಗಂಡಿನಲ್ಲಿ ಅಭದ್ರತೆ ಸೃಷ್ಟಿಸುತ್ತೆ. ಸಣ್ಣಪುಟ್ಟ ವಿಷಯಗಳಲ್ಲೇ ಖುಶಿಪಡುವ ರೀತಿ ಗಂಡಿನಲ್ಲಿ ಅಸೂಯೆ ಹುಟ್ಟಿಸುತ್ತೆ, ಏನೂ ಇಲ್ಲದಿದ್ದರೂ, ಖುಶಿಯಾಗಿರುವ, ಗೆಲ್ಲುವ ಭರವಸೆಯ ಇಟ್ಟುಕೊಂಡ ಮತ್ತು ಗೆಲ್ಲುವ ಹೆಣ್ಣನ್ನು ಕಂಡು ಗಂಡು ಭಯಬೀಳುತ್ತಾನೆ. ತನ್ನ ಹಿಡಿತ ತಪ್ಪಿ ಹೋಗುತ್ತೆ ಎಂದರಿವಾದಾಗ ಹೊಸ ಹೊಸ ಬಲೆಗಳನ್ನು ಹೆಣೆಯುತ್ತಾನೆ. ಹೆಣ್ಣಿನ ಶಕ್ತಿ, ಪ್ರೀತಿ, ಸಾಧ್ಯತೆಗಳ ಮುಂದೆ ಅಸಹಾಯಕನಾದ ಗಂಡು ಅವಳನ್ನು ಹಿಡಿತದಲ್ಲಿಟುಕೊಳ್ಳಲು ಧರ್ಮಗಳ ಸೃಷ್ಟಿಸಿದ. ಎಲ್ಲಾ ಧರ್ಮಗಳ ರೀತಿ ರಿವಾಜುಗಳು, ಕಟ್ಟುಪಾಡುಗಳು ಹೆಣೆದಿರುವುದು ಹೆಣ್ಣಿನ ಸುತ್ತಲೆ. ಮನುಷ್ಯ ಹುಟ್ಟಿದ ದಿನದಿಂದ ಈಗಿನ ತನಕ ಯಾವೆಲ್ಲಾ ಧರ್ಮಗಳು ಹುಟ್ಟಿವೆಯೋ, ಯಾವೆಲ್ಲಾ ಚೌಕಟ್ಟುಗಳು ಹಾಕಲಾಗಿವೆಯೋ ಅವೆಲ್ಲದರ ಮುಖ್ಯ ಗುರಿ ಹೆಣ್ಣು. ತ್ಯಾಗ ಬಲಿದಾನಗಳ ಹೆಸರಿನಲ್ಲಿ ಬಲಿ ನೀಡಲಾಗಿದ್ದು ನೀಡಲಾಗುತ್ತಿರುವುದು ಹೆಣ್ಣನ್ನೆ. ಸತಿ ಪದ್ಧತಿಯ ಬಗ್ಗೆ ಇತಿಹಾಸದಲ್ಲಿ ಕೇಳಿದ್ದೇವೆ, ಪತಿಪದ್ಧತಿ ಎನ್ನುವುದು ಇದೆಯಾ?

ಮಹಿಳಾ ದಿನದ ಕಾರ್ಯಕ್ರಮಗಳ ತಯಾರಿಗಾಗಿ ಕಚೇರಿಯೊಂದು ಬೇಕಿತ್ತು. ಗೆಳೆಯ ರಾಜಾಬಕ್ಷಿ ತನ್ನ ಆಫೀಸಿನ ಕಚೇರಿಯನ್ನೇ ಬಿಟ್ಟುಕೊಟ್ಟಿದ್ದ. ಸಮಾವೇಶದ ಮುನ್ನಾದಿನ ಮನೆಯ ಕಂಪೌಂಡ್‌ನೊಳಗೆ ಹೋಗಬೇಕಾದರೆ ವಾಣಿ ಪೆರಿಯೋಡಿಯವರ ಕಾಲಿಗೆ ಚೂಪು ಕಲ್ಲು ಬಡಿದಿತ್ತು. ಕಾಲ್ಬೆರಳಿನಿಂದ ರಕ್ತ ಸುರಿದಿತ್ತು. ಯಾವುದೇ ಕೆಲಸಕ್ಕು ಮುನ್ನ ಶಾಂತಿ ಮಾಡಬೇಕು, ಅದಕ್ಕೇ ರಕ್ತ ಬೇಕಿತ್ತು, ಈಗ ಸರಿಹೋಯಿತು, ಅಂತ ನಾನು ತಮಾಷೆ ಮಾಡಿದೆ. ನಗುತ್ತಲೇ ಕಾಲ್ ಬೆರಳಿಗೆ ಪಟ್ಟಿಕಟ್ಟಿಕೊಂಡು ಕಾರ್ಯಕ್ರಮಗಳ ತಯಾರಿಯಲ್ಲಿ ತೊಡಗಿಕೊಂಡರು.

ಕಾರ್ಯಕ್ರಮಗಳ ಸಿದ್ಧತೆ, ಮೀಟಿಂಗ್, ತಿರುಗಾಡುವುದೂ ಅದೂ ಇದೂ ಸಾಗಿಯೇ ಇತ್ತು. ಅದರ ನಡುವೆಯೂ ಈ ಹೆಣ್ಣು ಮಕ್ಕಳು ತಮ್ಮಿಷ್ಟದ ಕೆಲಸದಲ್ಲಿ ತೊಡಗಿದ್ದರು. ಪಕ್ಕದ ಭಾಗ್ಯನಗರ ಕೈಮಗ್ಗ ಮತ್ತು ಪವರ್ ಲೂಮ್ ಸೀರೆಗಳಿಗೆ ಫೇಮಸ್. ಇಲ್ಲಿಯ ಸೀರೆಗಳು ರಾಜ್ಯ ಅಷ್ಟೇ ಅಲ್ಲ ಹೊರ ರಾಜ್ಯ

ಗಳಲ್ಲೂ ಖ್ಯಾತಿ ಪಡೆದಿವೆ. ಹೀಗಿರುವಾಗ ಕೊಪ್ಪಳಕ್ಕೆ ಬಂದವರು ಭಾಗ್ಯನಗರಕ್ಕೆ ಬಾರದಿರುತ್ತಾರೆಯೇ? ಭಾಗ್ಯನಗರಕ್ಕೆ ಬಂದವರು ಸೀರೆ ಖರೀದಿ ಮಾಡದಿರುತ್ತಾರೆಯೇ? ಹೊಸ ಗಾದೆ ಮಾತು ಸೃಷ್ಟಿಯಾಯಿತು. ಅದರಂತೆಯೇ ಈ ಹೆಣ್ಣುಮಕ್ಕಳೂ ನಡೆದುಕೊಂಡರು. ಸಂಘಟನೆಯಲ್ಲಿ ಮುಖ್ಯವಾಗಿ ಬೆರೆತವರೆಲ್ಲಾ ಸೀರೆ ಖರೀದಿಸಿದರು. ಸೀರೆ ಗಂಟು ಕಚೇರಿಗೆ ತಂದು ಯಾರಿಗೆ ಯಾವ ಸೀರೆ ಬೇಕು, ಯಾವ ಸೀರೆ ಯಾರಿಗೆ ಕೊಡಬೇಕು ಎನ್ನುವುದರ ಬಗ್ಗೆ ದೀರ್ಘ ಚರ್ಚೆಯೂ ನಡೆಯಿತು. ನಂತರ ಯಥಾಪ್ರಕಾರ ಮೀಟಿಂಗ್‌ಗಳು, ಕೆಲಸಗಳು. ಇದನ್ನು ನೋಡ್ತಾ ಇದ್ದ ನಾನು, ಈ ಹೆಣ್ಣುಮಕ್ಕಳು ತಮಗಿಷ್ಟವಾದ ಸೀರೆ, ಅವುಗಳ ಕಲರ್, ಡಿಜೈನ್ ರೇಟುಗಳ ಬಗ್ಗೆ ಮಾತನಾಡಿಕೊಳ್ಳುತ್ತಾ, ಜೊತೆಜೊತೆಯಲ್ಲಿಯೇ ಹೆಣ್ಣಿನ ಅಸ್ಮಿತೆಗಾಗಿ ನಡೆಸುತ್ತಿರುವ ಹೋರಾಟ ಸಂಘಟನೆ ಅದ್ಭುತವಲ್ಲವೇ ಎಂದೆ ರಾಜಾಬಕ್ಷಿಗೆ. ಬದುಕಿನ ಕನಿಷ್ಟ ಆಸೆಗಳನ್ನು ಪೂರೈಸಿಕೊಳ್ಳುತ್ತಲೇ, ತಮ್ಮಿಂದ ಸಾಧ್ಯವಿರುವ ಎಲ್ಲಾ ಹೋರಾಟ, ಸಂಘಟನೆಗಳನ್ನು ಮಾಡುತ್ತಿರುವ ಈ ಮಹಿಳೆಯರು ನಿಜವಾದ ಸಂಘಟನೆಗಳನ್ನು ಕಟ್ಟಬಲ್ಲರು; ಅಸ್ತಿತ್ವಕ್ಕೆ ಹೋರಾಡಬಲ್ಲರು. ಭ್ರಮಾಲೋಕದಲ್ಲಿಲ್ಲದ ನೇರ ನೆಲಮೂಲದ ಜೊತೆ ಸಂಪರ್ಕವಿರುವ ಮಹಿಳೆಯರ ಹೋರಾಟಗಳು, ಸಂಘಟನೆಗಳು ಏನನ್ನಾದರೂ ಸಾಧಿಸಬಹುದು ಎನ್ನುವುದು ರಾಜಾಬಕ್ಷಿ ಅಭಿಪ್ರಾಯವಾಗಿತ್ತು.

ಕೊನೆಗೊಂದು ದಿನ ಬಂತು. ವೇದಿಕೆಯ ಮೇಲೆ ಆಜಾದಿಯ ಹಾಡು, ''ಹಂ ಲೇಕೆ ರಹೇಂಗೇ ಆಜಾದಿ, ಬೇಟಿ ಮಾಂಗೆ ಆಜಾದಿ, ಮಾ ಮಾಂಗೆ ಆಜಾದಿ.. ಆಜಾದಿ ಆಜಾದಿ..' ಆಜಾದಿಯ ಹಾಡಿಗೆ ಘೋಷಣೆಗೆ ಇಡೀ ವೇದಿಕೆಯ ಮೇಲಿದ್ದವರೆಲ್ಲಾ ಹೆಜ್ಜೆ ಹಾಕುತ್ತಿದ್ದರೆ, ಎದುರಿಗೆ ಕುಳಿತವರಿಗೂ ಕುಣಿಯುವ ಹುಮ್ಮಸ್ಸು.. ಸುಮಾರು ಅರ್ಧ ಗಂಟೆ ಕಾಲ ನಿರಂತರವಾಗಿ ನಡೆದಿತ್ತು. ಆಜಾದಿಯ ಹಾಡು ಕುಣಿತ, ಹಮ್ಮು ಬಿಮ್ಮು ಮರೆತು ಒಂದಾಗಿ ಹೆಜ್ಜೆ ಹಾಕಿದ ಹೆಣ್ಣುಮಕ್ಕಳು ಜೊತೆಗೆ ಖುಶಿಯಿಂದ ಹಾಡಿದ ಗಂಡಸರು.. ಕಾರ್ಯಕ್ರಮದ ಯಶಸ್ಸು ಅವರ ಹಾಡಿನಲ್ಲಿ ಇತ್ತು.. ಆ ಕುಣಿತದಲ್ಲಿ ಇತ್ತು.

ವೇದಿಕೆಯ ಮೇಲಿದ್ದ ಹೆಣ್ಣುಮಕ್ಕಳ ಮೊಗದಲ್ಲಿ ಇದ್ದ ಆತ್ಮವಿಶ್ವಾಸ, ಗೆಲುವಿನ ನಗೆ ಕಂಡು ನಾನು ವಾಣಿ ಪೆರಿಯೋಡಿಯವರಿಗೆ ಹೇಳಿದೆ, ಈ ನಗು, ಈ ಯಶಸ್ಸು, ಸಂಭ್ರಮ, ಖುಶಿಯನ್ನು ಕಂಡೇ ಪುರುಷ ಪ್ರಪಂಚ ಹೆದರುತ್ತೆ ಮೇಡಂ, ಅಂತ. ಅವರು ಮತ್ತೊಮ್ಮೆ ನಕ್ಕು ಸುಮ್ಮನಾದರು. ಅವರಿಗೂ ನನಗೂ ಗೊತ್ತಿತ್ತು ಈ ಯಶಸ್ವೀ ಕಾರ್ಯಕ್ರಮದ ಹಿಂದೆ ಇದ್ದ ಆರೆಂಟು ತಿಂಗಳುಗಳ ಸತತ ಪರಿಶ್ರಮ, ಒದ್ದಾಟ.

ಮೊಬೈಲಿನಲ್ಲಿ ಸೆರೆಯಾಗಿದ್ದ ಕ್ಯಾಂಡಲ್ ಲೈಟ್ ಕಾರ್ಯಕ್ರಮದ ವೀಡಿಯೋದಲ್ಲಿ ಮಕ್ಕಳು ಹಾಡುತ್ತಿದ್ದರು..

ಒಂದಲ್ಲ ಒಂದು ದಿನ ಈ ನೆಲದ ಹೆಣ್ಣುಗಳು
ಮೆರವಣಿಗೆ ಹೊರಡುತ್ತಾರೆ..
ಮೆರವಣಿಗೆ ಹೊರಡುತ್ತಾರೆ.

# ಕೊಪ್ಪಳದ ಮಹಿಳಾ ದಿನಾಚರಣೆಗೆ ಕೈ ಜೋಡಿಸೋಣ ಬನ್ನಿ

– ನಸ್ರೀನ್ ಮಿಠಾಯಿ

ಕರ್ನಾಟಕದ ಒಂದಿಷ್ಟು ಸಮಾನ ಮನಸ್ಕ ಮಹಿಳೆಯರು ಒಗ್ಗೂಡಿ 2012 ರಲ್ಲಿ 'ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ'' ವನ್ನು ಹುಟ್ಟುಹಾಕಿದರು. ಈ ಒಕ್ಕೂಟ ಜೀವಪರ, ಮಹಿಳಾಪರ, ಹಿಂಸೆಮುಕ್ತ, ಶಾಂತಿ–ನೆಮ್ಮದಿ, ಸಮಾನತೆಯ ಆಶಯಗಳನ್ನು ಹೊತ್ತು ಮುನ್ನಡೆದಿದೆ. ಈಗಾಗಲೇ ಕರ್ನಾಟಕದ ಸಾವಿರಾರು ಸಮಾನ ಮನಸ್ಕ ಮಹಿಳೆಯರನ್ನು ಒಳಗೊಳ್ಳಿಸಿಕೊಂಡು ಕಳೆದ 4 ವರ್ಷಗಳಲ್ಲಿ ಮಂಗಳೂರು, ಮೈಸೂರು, ಬೆಂಗಳೂರು ಮತ್ತು ಬಿಜಾಪುರದಲ್ಲಿ ಮಹಿಳಾ ಹಕ್ಕೊತ್ತಾಯಗಳೊಂದಿಗೆ ಸಮಾವೇಶಗಳನ್ನು ಯಶಸ್ವಿಯಾಗಿ ಮುನ್ನಡೆಸಿದೆ. ಈ ಸಮಾವೇಶಗಳಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಮಹಿಳಾ ನ್ಯಾಯಕ್ಕಾಗಿ ಧ್ವನಿಯಾಗಿ ನಿಂತ ಮಹಿಳಾ ನಾಯಕಿಯರಾದ ಭಾಂವ್ರಿದೇವಿ, ರಶೀದಾಬೀ, ಚಂಪಾದೇವಿ, ಮೇಧಾಪಾಟ್ಕರ್ ಅವರು ಜೊತೆಯಾಗಿ ನಿಂತಿದ್ದರು. ಹೀಗಾಗಿ ಈ ಸಮಾವೇಶಗಳು ಮಹಿಳಾ ಚಳುವಳಿಯ ಮೈಲುಗಲ್ಲಾಗಿವೆ.

ಈ ವರ್ಷ ಮಾರ್ಚ್ 8 ಮತ್ತು 9 ರಂದು ಕೊಪ್ಪಳದಲ್ಲಿ ರಾಜ್ಯಮಟ್ಟದ ಮಹಿಳಾ ದಿನಾಚರಣೆ ನಡೆಯಲಿದೆ. ಈ ವರ್ಷದ ಮಹಿಳಾ ಸಮಾವೇಶದ ಘೋಷ ವಾಕ್ಯ ''ಸಮತೆಯೆಡೆಗೆ ನಮ್ಮ ನಡಿಗೆ– ನಮ್ಮ ದೇಹ ನಮ್ಮ ಹಕ್ಕು'' ಆಗಿದೆ. ಸ್ಥಳೀಯ ಎಲ್ಲಾ ಪ್ರಗತಿಪರ ಸಂಘಟನೆಗಳು ಸಮಾವೇಶ ಯಶಸ್ವಿಗೊಳಿಸಲು ಕೈ ಜೋಡಿಸಿವೆ. ಈ ಸಮಾವೇಶಕ್ಕೆ ನಮ್ಮ ಜೊತೆಗೆ ಮಹಿಳಾ ನ್ಯಾಯಕ್ಕಾಗಿ ಜೊತೆ ನಿಂತು ದುಡಿಯುತ್ತಿರುವ ಮಹಿಳೆಯರಾದ ದೆಹಲಿಯ ಕವಿತಾ ಕೃಷ್ಣನ್, ಹೈದರಾಬಾದ್‌ನ ಲೇಖಕಿ ಗೋಗು ಶ್ಯಾಮಲ, ಒರಿಸ್ಸಾದ ಆಕ್ಟಿವಿಸ್ಟ್–ಬರಹಗಾರ್ತಿ ರಂಜನಾ ಪಾಡಿ ಪಾಲ್ಗೊಳ್ಳಲಿದ್ದಾರೆ. ಜೊತೆಗೆ ನಮ್ಮ ರಾಜ್ಯದ ಮಹಿಳಾಪರ ಚಿಂತಕಿಯರು ಜೊತೆಗಿದ್ದಾರೆ. ಸ್ಥಳೀಯ ಸಮಸ್ಯೆಗಳನ್ನು ಕುರಿತ ವಿಚಾರ ಸಂಕಿರಣ, ಹಕ್ಕೊತ್ತಾಯ ಜಾಥಾ ಮತ್ತು ಸಾರ್ವಜನಿಕ ಸಭೆಗಳನ್ನು ಆಯೋಜಿಸಲಾಗಿದೆ. ಮುಖ್ಯವಾಗಿ ಬಾಲ್ಯವಿವಾಹ, ಹೆಣ್ಣುಭ್ರೂಣಹತ್ಯೆ, ತಾಯಿ–ಶಿಶು ಮರಣ, ದೇವದಾಸಿ ಪದ್ಧತಿ, ಲೈಂಗಿಕ ದೌರ್ಜನ್ಯ, ಅಪೌಷ್ಟಿಕತೆ, ಬಯಲು ಶೌಚಾಲಯ, ಮದ್ಯಪಾನದಂತಹ ಸಮಸ್ಯೆಗಳ ಅರಿವು ಮೂಡಿಸಲು ಮಾಹಿತಿ ಪತ್ರಗಳನ್ನು ಮಾಡಿ ಶಾಲೆ, ಕಾಲೇಜು ಮತ್ತು ಸಮುದಾಯದಲ್ಲಿ ಹಂಚಲಾಗಿದೆ. ಕೇವಲ ಎರಡು ದಿನದ ಸಮಾವೇಶದಲ್ಲಿ ಮಹಿಳಾ ದಿನಾಚರಣೆ ಮುಗಿಯುವುದು ಬೇಡ ಎಂದು ಕೊಪ್ಪಳ ಜಿಲ್ಲೆಯ 4 ತಾಲ್ಲೂಕುಗಳಲ್ಲಿ ಅರಿವನ್ನು ಬಿತ್ತುವ ಕೆಲಸ ಆಗುತ್ತಿದೆ. ಸಾಂಸ್ಕೃತಿಕ ತಂಡದ ಯುವಜನರು ಹಾಡು, ನಾಟಕದ ಮೂಲಕ ಎಲ್ಲಾ ತಾಲ್ಲೂಕುಗಳ ಶಾಲೆ, ಕಾಲೇಜು, ಹಾಸ್ಟೆಲ್ ಮತ್ತು ಸಮುದಾಯಗಳಲ್ಲಿ ಸಮಾನತೆಯ ಆಶಯಗಳನ್ನು ತಲುಪಿಸುತ್ತಿದ್ದಾರೆ. ಜೊತೆಗೆ ಮಾಹಿತಿ ಪತ್ರ, ಗೋಡೆಬರಹಗಳ ಮೂಲಕವೂ ಜಾಗೃತಿ ಮೂಡಿಸಲಾಗುತ್ತಿದೆ.

ಮಾರ್ಚ್ 8 ಮತ್ತು 9 ರ ಮೊದಲಿನ 4 ಬುಧವಾರಗಳಲ್ಲಿ ಕೊಪ್ಪಳ ಜಿಲ್ಲೆಯ 4 ತಾಲ್ಲೂಕುಗಳಲ್ಲಿ – ಕುಷ್ಟಗಿ, ಯಲಬುರ್ಗಾ, ಕಾರಟಗಿ ಮತ್ತು ಗಂಗಾವತಿ – ಹಾಗೂ ಸಿಂಧನೂರಿನಲ್ಲಿ ''ಮೌನ ಜಾಗೃತಿ – ಬಿಳಿ ಉಡುಪಿನಲ್ಲಿ ಶಾಂತಿಗಾಗಿ ನಾವು'' ಎಂಬ ಕಾರ್ಯಕ್ರಮ ಏರ್ಪಡಿಸಲಾಯಿತು. ಈ ಕಾರ್ಯಕ್ರಮದ ಮುಂಚೆ ಸ್ಥಳೀಯ ಸಮಾನ ಮನಸ್ಕ ಸಂಘಟನೆಗಳು ವ್ಯಕ್ತಿಗಳೊಂದಿಗೆ ಚರ್ಚೆ, ಶಾಲಾ–ಕಾಲೇಜು–ಹಾಸ್ಟೆಲ್‌ಗಳಲ್ಲಿಯೂ ಸಮಾವೇಶದ ಆಶಯಗಳನ್ನು ಮುಟ್ಟಿಸಲಾಗಿದೆ, ಯಶಸ್ವಿಯಾಗಿ ಮೌನಜಾಗೃತಿ ಕಾರ್ಯಕ್ರಮ ನಡೆದಿದೆ. ಈ ಮೂಲಕ ಈ ತಾಲ್ಲೂಕುಗಳ

ಸಮಾನಮನಸ್ಕರು ಜೊತೆಯಾಗಿ ಕೈ ಜೋಡಿಸುವ ಭರವಸೆಯೂ ಸಿಕ್ಕಿದೆ. ಕೊಪ್ಪಳದಲ್ಲಿ ಒಕ್ಕೂಟದ ಸದಸ್ಯೆಯಾದ ನನ್ನ ಗೆಳತಿ ಜ್ಯೋತಿ ಹಿಟ್ನಾಳ್, ಮಂಗಳೂರಿನ ವಾಣಿ ಪೆರಿಯೋಡಿ ಅಕ್ಕ ಕಳೆದ 2 ತಿಂಗಳಿಂದ ಸಮಾವೇಶದ ತಯಾರಿಗಾಗಿ ಕೊಪ್ಪಳದಲ್ಲಿ ಜೊತೆ ನಿಂತಿದ್ದಾರೆ. ಹಗಲಿರುಳು ಎರಡು ಮಹಿಳಾಪರ ಜೀವಗಳು ಈ ಸಮಾವೇಶಕ್ಕಾಗಿ ಅಲ್ಲೇ ಇದ್ದು ದುಡಿಯುತ್ತಿವೆ. ಇವರ ಶ್ರಮಕ್ಕೆ ಜೊತೆಯಾಗಿ ಕೊಪ್ಪಳದ ಬಹಳಷ್ಟು ಪುರುಷ ಸ್ನೇಹಿತರು ಇರುವುದು ಖುಷಿಯ ಸಂಗತಿಯಾಗಿದೆ. ಮುಖ್ಯವಾಗಿ ಕೊಪ್ಪಳದ ಸಂಘಸಂಸ್ಥೆಗಳು, ಸಂಘಟನೆಗಳು, ಸಾಹಿತಿಗಳು, ಸಮಾನಮನಸ್ಕರು ಸಮಾವೇಶವನ್ನು ಯಶಸ್ವಿಯಾಗಿ ಮುನ್ನಡೆಸಲು ಸಹಕರಿಸುತ್ತಿದ್ದಾರೆ.

ಮುಖ್ಯವಾಗಿ ಹಣಸಂಗ್ರಹವನ್ನು ಸಮಾನ ಮನಸ್ಕರ ಹತ್ತಿರ ಹೋಗಿ ಪಡೆಯಲಾಗುತ್ತಿದೆ. ಜೊತೆಗೆ ಮಾಹಿತಿಪತ್ರಗಳ ಮಾರಾಟ ಮಾಡುವ ಮೂಲಕ ಒಂದಿಷ್ಟು ಹಣ ಸಂಗ್ರಹ ಆಗುತ್ತಿದೆ. ಜೊತೆಗೆ ಈ ಸಮಾವೇಶಕ್ಕೆ ಮಹಿಳೆಯರು ಕರವಸ್ತ್ರಗಳನ್ನು ಹೊಲಿದು ಕೊಟ್ಟಿದ್ದಾರೆ, ಕರವಸ್ತ್ರಗಳ ಮಾರಾಟದಿಂದಲೂ ಒಂದಿಷ್ಟು ಹಣ ಸಂಗ್ರಹಿಸಲಾಗಿದೆ. ಸ್ಥಳೀಯ ಸಂಘಟಣೆಗಳು ನಿಧಿ ಸಂಗ್ರಹ ಮಾಡುವಲ್ಲಿ ನಮ್ಮೊಂದಿಗೆ ಓಡಾಡಿ ಸಹಕರಿಸುತ್ತಿದ್ದಾರೆ. ಸ್ಥಳೀಯರು ವಸ್ತುಗಳ ರೂಪದಲ್ಲಿಯೂ ದೇಣಿಗೆಯನ್ನು ಕೊಡುತ್ತಿದ್ದಾರೆ.

ನನಗೆ ಹೆಣ್ತನವನ್ನು ಘನತೆಯಿಂದ ಸಂಭ್ರಮಿಸೋಕೆ ಕಾರಣ ಆಗಿ ಅರಿವನ್ನು ವಿಸ್ತರಿಸಿದ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ನಾನು ಮತ್ತು ನಮ್ಮ ಎಲ್ಲಾ ಒಕ್ಕೂಟದ ಮಹಿಳೆಯರು ನಿಮ್ಮೆಲ್ಲರನ್ನು ಕೊಪ್ಪಳದ ಸಮಾವೇಶಕ್ಕೆ ತುಂಬಾ ಪ್ರೀತಿಯಿಂದ ಆಹ್ವಾನಿಸುತ್ತಿದ್ದೇವೆ. ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಸಾಮೂಹಿಕ ನಾಯಕತ್ವದಲ್ಲಿ ನಂಬಿಕೆಯನ್ನು ಇಡುತ್ತದೆ. ಈ ವರ್ಷ ಹೆಚ್ಚಾಗಿ ಯುವಪೀಳಿಗೆಯವರು ಒಕ್ಕೂಟದ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಪ್ರತಿವರ್ಷ ಸಾವಿರಾರು ಮಹಿಳೆಯರು ಒಂದು ಕಡೆ ಸೇರಿ ಮಹಿಳಾ ಹಕ್ಕೊತ್ತಾಯಗಳಿಗೆ ಧ್ವನಿ ಸೇರಿಸಿರುವುದು ಮುಖ್ಯ ಆಗಿದೆ. ಜೊತೆಗೆ ನಮ್ಮೆಲ್ಲರ ಹೆಣ್ತನವನ್ನು ಸಂಭ್ರಮಿಸುವುದು ಮುಖ್ಯವಾಗಿದೆ. ಮತ್ತೆಮತ್ತೆ ಮಹಿಳೆಯ ದೇಹ ಕೆಟ್ಟ ರಾಜಕೀಯಕ್ಕೆ ಬಳಕೆಯಾಗುತ್ತಿದೆ. ದೌರ್ಜನ್ಯದ ವಿರುದ್ಧ ಧ್ವನಿ ಎತ್ತಿದ ಮಹಿಳೆಯರ ದೇಹದ ಮೇಲೆ ಆಕ್ರಮಣ ಮಾಡಿ ಅವಳ ಹೆಣ್ತನಕ್ಕೆ ಸವಾಲನ್ನು ಈ ವ್ಯವಸ್ಥೆ ಒಡ್ಡಿದೆ. ಮಹಿಳೆಯರು ತಮ್ಮ ಹೆಣ್ತನವನ್ನು ಕೂಡ ಅನುಭವಿಸಲು ಆಗದ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಮಹಿಳೆಯಾಗಿ ಯಾವ ಉಡುಪು ಧರಿಸಬೇಕು? ಯಾವಾಗ ಮದುವೆ ಆಗಬೇಕು? ಎಷ್ಟು ಮಕ್ಕಳನ್ನು ಹೆರಬೇಕು? ಎಲ್ಲಿಗೆ ಎಷ್ಟು ಹೊತ್ತಿಗೆ ಹೋಗಬೇಕು? ಎಲ್ಲಿಗೆ ಎಷ್ಟು ಹೊತ್ತಿಗೆ ಹೋಗಬಾರದು? ಎಲ್ಲಾ ಬೇಡಗಳು–ಬೇಕುಗಳು ಮಹಿಳೆಯರ ನಿರ್ಧಾರ ಆಗದೆ ಅವು ಕುಟುಂಬ, ಸಮಾಜ ಮತ್ತು ರಾಜಕೀಯ ಪಕ್ಷ ಮತ್ತು ಸರ್ಕಾರಗಳು ನಿರ್ಧರಿಸುತ್ತಿವೆ. ಎಲ್ಲಾ ಯುದ್ದಗಳು, ಕೋಮುವಾದ, ಕಾರ್ಪೊರೇಟ್–ಬಂಡವಾಳಶಾಹಿ ಜಗತ್ತಿನ ಅವಾಂತರಗಳಿಗೆ ಇವತ್ತು ಮಹಿಳೆ ಬಲಿಯಾಗುವ ಪರಿಸ್ಥಿತಿ ನಮ್ಮ ಮುಂದಿದೆ. ಇಂತಹ ಸಂಕಟದ ಕಾಲದಲ್ಲಿ ನಾವು ಮತ್ತೆಮತ್ತೆ ಜೊತೆ ಸೇರಿ ಧ್ವನಿಯನ್ನು ಎತ್ತಬೇಕಾಗಿದೆ. ಮಹಿಳೆಯರ ಅಸ್ತಿತ್ವಕ್ಕಾಗಿ ಪುರುಷರು ಜೊತೆಗೂಡಬೇಕಾಗಿದೆ, ಯಾಕೆಂದರೆ ಪುರುಷರ ಅಸ್ತಿತ್ವಕ್ಕೆ ಮಹಿಳೆಯರ ಅಸ್ತಿತ್ವ ಮುಖ್ಯ. ಒಂದು ಲಿಂಗವಿಲ್ಲದೆ ಮತ್ತೊಂದು ಲಿಂಗದ ಇರುವಿಕೆ ಈ ಪ್ರಕೃತಿಯಲ್ಲಿ ಸಾಧ್ಯವಿಲ್ಲ. ಸಮಾನತೆಯ ಆಶಯಗಳನ್ನು ಹೊತ್ತು ಮಹಿಳೆಯರು ಮತ್ತು ಪುರುಷರು ಒಟ್ಟಿಗೆ ಸಾಗಬೇಕಿದೆ. ಈ ಆಶಯವನ್ನು ಹೊತ್ತು ಸಾಗುತ್ತಿರುವ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಜೊತೆಯಾಗಿ ನಾನು ಮತ್ತು ನನ್ನಂತಹ ಬಹಳಷ್ಟು ಜನ

ಯುವಪೀಳಿಗೆಯವರು ಜೊತೆಸೇರಿದ್ದೇವೆ. ಹೊಸಪೇಟೆಯ ಮುಸ್ಲಿಂ ಮಹಿಳೆಯರು ಈ ಸಮಾವೇಶಕ್ಕೆ ಕರವಸ್ತ್ರಗಳನ್ನು ಹೊಲಿದು ಕೊಟ್ಟಿದ್ದಾರೆ ಮತ್ತು ಗೋಡೆಬರಹಕ್ಕಾಗಿ ಹೊಸಪೇಟೆಯ ಯುವತಿ ಟಬು ಜೊತೆ ನಿಂತು ಕೆಲಸ ಮಾಡಿದಾಳೆ. ನನ್ನಂತಹ ನೂರಾರು ಜನರಿಗೆ ಈ ಒಕ್ಕೂಟದ ಸದಸ್ಯರು ಪ್ರೀತಿಯನ್ನು ಕೊಡುತ್ತ ನಮ್ಮಲ್ಲಿ ಆತ್ಮವಿಶ್ವಾಸ ತುಂಬುತ್ತ ನಮ್ಮ ಜೊತೆಗೆ ಬಹಳಷ್ಟು ಜನರು ಧ್ವನಿಯಾಗಿ ನಿಂತಿದ್ದಾರೆ ಎಂಬ ಆಶಾಭಾವನೆ ಕೊಡುತ್ತಾ ಸಾಗಿದ್ದಾರೆ. ಸಾವಿರಾರು ಕೈಗಳು ಜೊತೆಗೂಡುತ್ತಿವೆ, ಧ್ವನಿ ಸೇರಿಸುತ್ತಿವೆ. ಬನ್ನಿ ಎಲ್ಲರೂ ಕೊಪ್ಪಳದ ಸಮಾವೇಶದಲ್ಲಿ ಭಾಗವಹಿಸಿ ನೀವು ಕೈಜೋಡಿಸಿ ಜೊತೆ ಜೊತೆಯಾಗಿ ಧ್ವನಿಯಾಗೋಣ.

## ಕರವಸ್ತ್ರಮಾರಿ ಹಣ ಸಂಗ್ರಹಿಸುವುದು ಸ್ವಾಭಿಮಾನದ ನಡೆ ಎನಿಸಿತು

– ಚಿದು, ಯುವಸಂಚಲನ, ದೊಡ್ಡಬಳ್ಳಾಪುರ

ಕೊಪ್ಪಳ ಎಂದು ಕೇಳುತ್ತಿದ್ದಂತೆಯೇ ನನಗೆ ನೆನಪಿಗೆ ಬರುವುದು ಅಲ್ಲಿನ ಬಾಲ್ಯವಿವಾಹ ಪದ್ದತಿ, ದೇವದಾಸಿ ಪದ್ಧತಿಗಳು. ಈ ಅನಿಷ್ಟ ಪದ್ದತಿಗಳು ಅಲ್ಲಿ ಇಂದಿಗೂ ವಾಸ್ತವವಾಗಿವೆ.

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು 2017ರ ಮಹಿಳಾ ಸಮಾವೇಶವನ್ನು ಕೊಪ್ಪಳದಲ್ಲಿ ಹಮ್ಮಿಕೊಂಡಿದೆ ಎಂದು ತಿಳಿದ ಕೂಡಲೇ ಇದು ಈ ಸಮಾವೇಶಕ್ಕೆ ಸೂಕ್ತ ಸ್ಥಳವೆನಿಸಿತು. ಏಕೆಂದರೆ ಸಮಸ್ಯೆ ಇರುವ ಸ್ಥಳದಲ್ಲಿ ಹೋರಾಟದ ಮಂತ್ರ ಬದಲಾವಣೆಯ ತಂತ್ರ ಬೇಕು. ಆ ಸಲುವಾಗಿ ಈ ಸಮಾವೇಶದ ಬೆಂಬಲಕ್ಕಾಗಿ ಜ್ಯೋತಿ ಅಕ್ಕ ನನಗೆ ಕರೆ ಮಾಡಿ ತಿಳಿಸಿದಾಗ ತುಂಬಾ ಖುಷಿ ಪಟ್ಟೆ, ಅಳಿಲು ಸೇವೆ ಮಾಡಲು ಒಂದು ಅವಕಾಶ ಸಿಕ್ಕಿತು ಎಂದು ಹಾಗೂ ನಮ್ಮ ಯುವಸಂಚಲನ ತಂಡ ಇದಕ್ಕೆ ಕೈ ಜೋಡಿಸುತ್ತದೆ ಎಂಬ ಜ್ಯೋತಿ ಅಕ್ಕಾಳ ಬಲವಾದ ನಂಬಿಕೆ ನನಗೆ ಇನ್ನೂ ಹೆಚ್ಚಿನ ಧೈರ್ಯ ತುಂಬಿತ್ತು. ಮಾಹಿತಿ ಪತ್ರ ಹಾಗೂ ಕರವಸ್ತ್ರಮಾರಿ ಸಮಾವೇಶಕ್ಕೆ ದೇಣಿಗೆ ಪಡೆದ ವಿಚಾರ ಸ್ವಾಭಿಮಾನದ ನಡೆ ಎನಿಸಿತು. ಜ್ಯೋತಿ ಅಕ್ಕಾಗೆ ಖಂಡಿತ ಬೆಂಬಲಿಸುತ್ತೇನೆ ಎಂದು ಮಾತು ಕೊಟ್ಟುಬಿಟ್ಟೆ, ಆದರೆ 300 ಮಾಹಿತಿ ಪತ್ರ ಹಾಗೂ 100 ಕರವಸ್ತ್ರಗಳನ್ನು ಮಾರಲು ಜ್ಯೋತಿ ಅಕ್ಕ ದೊಡ್ಡಬಳ್ಳಾಪುರಕ್ಕೆ ಕಳುಹಿಸಿ ಕೊಡುವುದಾಗಿ ಹೇಳಿದಾಗ ನನಗೆ ಅವುಗಳನ್ನು ಮಾರಲು ಆಗುತ್ತದೆಯೇ ಇಲ್ಲವೋ ಎಂಬ ಸಂಶಯ ಕಾಡಿತ್ತು. ಈ ವಿಷಯವನ್ನು ನಾನು ನಮ್ಮ ತಂಡದ ಹೆಣ್ಣುಮಕ್ಕಳ ಜೊತೆ ಪ್ರಸ್ತಾಪಿಸಿದೆ. ಇದಕ್ಕೆ ಉತ್ತರಿಸಿದ ಅವರು, ಅಣ್ಣಾ 300 ಅಲ್ಲ 500 ಪುಸ್ತಕಗಳನ್ನು ನಮ್ಮ ಒಂದು ಕಾಲೇಜಿನಲ್ಲಿಯೇ ನಾವು ಮಾರುತ್ತೇವೆ, ನೀವು ಸಾವಿರ ಪುಸ್ತಕಗಳನ್ನು ತರಿಸಿಬಿಡಿ ಎಂದರು. ಇವರ ಈ ಮಾತುಗಳು ನನ್ನಲ್ಲಿ ಇನ್ನೂ ರೋಮಾಂಚನವನ್ನುಂಟುಮಾಡಿತ್ತು. ಇವರುಗಳು ಹೇಳಿದಂತೆ ಸಾವಿರ ಮಾಹಿತಿ ಪತ್ರ ಹಾಗೂ ಇನ್ನೂರು ಕರವಸ್ತ್ರಗಳನ್ನು ತರಿಸಿದ ದಿನದಂದೆ ಕೊಂಡುಕೊಂಡು ಓದಿ ಮಾಹಿತಿ ಪತ್ರದ ವಿಚಾರವಾಗಿ ನನ್ನ ಜೊತೆ ತುಂಬಾ ಚರ್ಚೆಯನ್ನು ಮಾಡಿದರು. ಮಾಹಿತಿ ಪತ್ರ ಹತ್ತೊಂಬತ್ತು ಪುಟವೇ ಆಗಿದ್ದರೂ ಅದರಲ್ಲಿದ್ದ ಎಂಟು ವಿಚಾರಗಳು ತುಂಬಾ ತೂಕವಾಗಿದ್ದವು. ಈ ಎಂಟು ವಿಚಾರಗಳನ್ನು ಓದಿದ ನಂತರ ಅವರ ಪ್ರಶ್ನೆ ನಾವು ಇದರ ಜೊತೆ ಬೇರೆ ಏನಾದರೂ ಮಾಡಬಹುದೆ ಎಂದು. ಇದಕ್ಕೆ ಪೂರಕವಾಗಿ ನಮ್ಮ ಯುವಸಂಚಲನ ತಂಡದಿಂದ ಮೂರು ವರ್ಷಗಳಿಂದ ನಿರಂತರವಾಗಿ ನಡೆಸುತ್ತಿದ್ದ ತಡೆ ನಡೆ ಅಭಿಯಾನವನ್ನು ಸಹ ಜೊತೆಗೂಡಿಸಿಕೊಳ್ಳೋಣ ಎಂದು ತೀರ್ಮಾನಿಸಿದೆವು.

ತಡೆ ನಡೆ ಅಭಿಯಾನದ ಉದ್ದೇಶ ಕಾಲೇಜುಗಳಲ್ಲಿ ಕಡ್ಡಾಯವಾಗಿ ಲೈಂಗಿಕ ಕಿರುಕುಳ ದೂರು

ಸಮಿತಿ ರಚಿಸಬೇಕು ಹಾಗೂ ಈ ಸಮಿತಿಯನ್ನು ನಿರಂತರವಾಗಿ ಚಟುವಟಿಕೆಯಿಂದ ಇರಿಸಬೇಕು ಎಂಬುವುದು. ಮಹಿಳಾ ಸಮಾವೇಶ ಹಾಗೂ ತಡೆ ನಡೆ ಅಭಿಯಾನ ಈ ಎರಡೂ ವಿಚಾರಗಳನ್ನು ಇಟ್ಟುಕೊಂಡು ನಮ್ಮ ತಂಡವು ಮೊದಲು ಕೊಂಗಾಡಿಯಪ್ಪ ಪದವಿ ಕಾಲೇಜಿನಲ್ಲಿ ಕಾರ್ಯಕ್ರಮವನ್ನು ಪ್ರಾರಂಭಿಸಿದೆವು. ಕಾಲೇಜಿನ ಪ್ರಾಂಶುಪಾಲರು ಹಾಗೂ ಪ್ರೊಫೆಸರ್‌ಗಳು ಒಳಗೊಂಡಂತೆ ಎಲ್ಲಾ ಶಿಕ್ಷಕ ವೃಂದದವರು ನಮ್ಮ ವಿಚಾರಗಳನ್ನು ತುಂಬಾ ಹೆಮ್ಮೆಯಿಂದ ಗೌರವಿಸಿ, ಪ್ರತಿ ಕ್ಲಾಸ್‌ಗಳಲ್ಲಿಯೂ ಈ ವಿಚಾರದ ಬಗ್ಗೆ ಮಾತನಾಡಿ, ವಿದ್ಯಾರ್ಥಿನಿಯರ ಮುಂದೆ ಮಾಹಿತಿ ಪತ್ರವನ್ನು ಕೊಂಡುಕೊಂಡರು. ಎಲ್ಲರೂ ಈ ಕಾರ್ಯಕ್ರಮವನ್ನು ಬೆಂಬಲಿಸಬೇಕೆಂದು ಅವರು ಹೇಳಿದ್ದು ನನಗೆ ತುಂಬಾ ಖುಷಿ ನೀಡಿತ್ತು. ದೊಡ್ಡಬಳ್ಳಾಪುರದಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಮಹಿಳಾ ಸಮಾವೇಶದ ಬಗ್ಗೆ ಪ್ರಸ್ತಾಪಿಸಿದ್ದು ಹಾಗೂ ಮಾಹಿತಿ ಪತ್ರವನ್ನು ತರಿಸಿಕೊಟ್ಟು ಕಾರ್ಯಕ್ರಮದ ರೂಪುರೇಷೆಗಳನ್ನು ನಾನು ಮಾಡಿಕೊಟ್ಟಿದ್ದು ಬಿಟ್ಟರೆ ಇದನ್ನು ಪ್ರತಿ ಕಾಲೇಜುಗಳಿಗೂ, ತರಗತಿಗಳಿಗೂ ಪ್ರತಿಯೊಬ್ಬ ವಿದ್ಯಾರ್ಥಿನಿಯರ ಬಳಿಗೆ ತೆಗೆದುಕೊಂಡು ಹೋಗಿದ್ದು ನಮ್ಮ ತಂಡದ ಹೆಣ್ಣುಮಕ್ಕಳು. ಎಷ್ಟರಮಟ್ಟಿಗೆ ಎಂದರೆ ಮಾಹಿತಿ ಪತ್ರದ ವಿಚಾರಗಳನ್ನು

ಸಹ ಎಲ್ಲರ ಮುಂದೆ ತೆರೆದಿಟ್ಟು ಲೈಂಗಿಕ ಕಿರುಕುಳ ದೂರು ಸಮಿತಿಯ ಅನಿವಾರ್ಯತೆಯನ್ನು ಹೇಳಿ ಈ ಹೋರಾಟಕ್ಕೆ ನಾವು ಬೆಂಬಲಿಸಲೇಬೇಕು ಎನ್ನುವಷ್ಟರ ಮಟ್ಟಿಗೆ ಅವರು ಮಾತನಾಡುತ್ತಿದ್ದರು.

ಇನ್ನು ಮಾಧ್ಯಮ ಮಿತ್ರರನ್ನು ನೆನಸಿಕೊಳ್ಳಲೇಬೇಕು. ತಮ್ಮ ಬರಹಗಳ ಮೂಲಕವೇ ನಮ್ಮನ್ನು ಬೆಂಬಲಿಸಿದವರು ಇವರು. ದೊಡ್ಡಬಳ್ಳಾಪುರದ ಎಲ್ಲಾ ಜನರಿಗೂ ವಿಚಾರ ಮುಟ್ಟುವಂತೆ ಲೇಖನಗಳನ್ನು ಬರೆದು ನಮ್ಮ ಕಾರ್ಯಕ್ರಮದ ಭಾಗವಾದರು. ಆದರೆ ಜೊತೆಜೊತೆಗೆ ಈ ವಿಚಾರಗಳನ್ನು ವಿರೋಧಿಸಿ ನಮ್ಮನ್ನು ಅನುಮಾನದಿಂದ ನೋಡಿ ನಿಮಗೆ ಮಾಡಲು ಕೆಲಸವಿಲ್ಲ ಎಂದವರು ಸಹ ಇದ್ದಾರೆ. ಆದರೆ ಇವರ ಸಂಖ್ಯೆಗಿಂತ ನೂರುಪಟ್ಟು ಹೆಚ್ಚು ಬೆಂಬಲಿಸುವವರಿದ್ದಾರೆ ಎಂಬುದೇ ಖುಷಿಯ ವಿಚಾರ. ನಾವು ಕೊಪ್ಪಳದಲ್ಲಿ ನಡೆಯುವ ಮಹಿಳಾ ಸಮಾವೇಶವನ್ನು ಬೆಂಬಲಿಸುವ ಸಲುವಾಗಿ ಕಾರ್ಯಕ್ರಮ ಮಾಡಲು ಮುಂದಾಗಿದ್ದೆವು. ಆದರೆ ದೊಡ್ಡಬಳ್ಳಾಪುರದಲ್ಲಿ ಒಂದು ದೊಡ್ಡ ಅಭಿಯಾನವನ್ನೇ ಮಾಡಿಬಿಟ್ಟೆವು ಮಾರ್ಚ್ 8, ಅಥಾವ 9ರಲ್ಲಿ ನಡೆದ ಸಮಾವೇಶದಲ್ಲಿ ನಾವು ಸಹ ಭಾಹವಹಿಸಿ ಅಲ್ಲಿ ಸೇರಿದ್ದ ಮಹಿಳಾ ದಂಡನ್ನು ಕಂಡಿದ್ದು ನಾವು ಎಂದೂ ಮರೆಯುವುದಿಲ್ಲ.

## ಪ್ರೀತಿಯ ರಾಜಕಾರಣದ ಸಂದೇಶ ಬೀರಿದ ಮಹಿಳಾ ದಿನ

– ಎನ್. ಗಾಯತ್ರಿ

ಕಳೆದ ನಾಲ್ಕು ವರ್ಷಗಳಿಂದ ರಾಜ್ಯ ಮಟ್ಟದಲ್ಲಿ ಮಹಿಳಾ ದಿನಾಚರಣೆಯನ್ನು ಆಚರಿಸಲೆಂದೇ ಒಗ್ಗೂಡಿ ಕಾರ್ಯನಿರ್ವಹಿಸುತ್ತಾ ಬಂದಿರುವ ಕರ್ನಾಟಕದ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಈ ಬಾರಿ ಕೊಪ್ಪಳದಲ್ಲಿ ಮಾರ್ಚ್ 8 ಮತ್ತು 9ರಂದು ಮಹಿಳಾ ಸಮಾವೇಶ ನಡೆಸಿತ್ತು. ದೆಹಲಿಯ ರಂಜನಾ ಪಡಿ ಮತ್ತು ಕವಿತಾ ಕೃಷ್ಣನ್ ಹಾಗೂ ತೆಲಂಗಾಣದ ದಲಿತ ಲೇಖಕಿ ಶ್ಯಾಮಲಾ ಗೋಗು ಕಾರ್ಯಕ್ರಮಕ್ಕೆ ವಿಶೇಷ ಮೆರುಗು ಮತ್ತು ಅರ್ಥವಂತಿಕೆಯನ್ನು ತಂದರು. ಕೊಪ್ಪಳ ಜಿಲ್ಲೆಯ ಜನರ ಕ್ರಿಯಾತ್ಮಕ ಭಾಗವಹಿಸುವಿಕೆಯಲ್ಲದೆ, ರಾಜ್ಯಾದಂತ ಮಹಿಳೆಯರು ಬಂದು ಭಾಗವಹಿಸಿದ್ದು ಈ ಕಾರ್ಯಕ್ರಮದ ವಿಶೇಷ. ಇಂದಿನ ಯುವಮನಸ್ಸುಗಳ ಸ್ಪಂದನೆಯ ಅಭಿವ್ಯಕ್ತಿಯಾದ ಮತ್ತು ಭವಿಷ್ಯದ

ಬಗ್ಗೆ ಭರವಸೆಯ ಕಾಮನಬಿಲ್ಲನ್ನು ಮೂಡಿಸಿದ ಈ ಸಮಾವೇಶದಲ್ಲಿ ಕಂಡು, ಕೇಳಿದ ಸ್ವಾರಸ್ಯಕರ ಸಂಗತಿಗಳ ಕೆಲವೊಂದು ತುಣುಕುಗಳು ಇಲ್ಲಿವೆ.

**ನಾವು ಪ್ರೀತಿಯ ಸಂಘರ್ಷ ನಡೆಸುತ್ತೇವೆ**

ಕೋಮು ದ್ವೇಷ, ಅಸಹಿಷ್ಣುತೆ, ಮಹಿಳಾ ದೌರ್ಜನ್ಯಗಳೇ ವಿಜೃಂಭಿಸುತ್ತಿರುವ ಕಾಲಘಟ್ಟದಲ್ಲಿ ಪ್ರೀತಿಯ ರಾಜಕಾರಣದ ಅಮೂಲ್ಯ ಸಂದೇಶವನ್ನು ಸಾರುವುದೇ ನಮ್ಮ ಗುರಿ ಎಂದ ಒಕ್ಕೂಟ ನಾವು ಪ್ರೀತಿಯ ಸಂಘರ್ಷಕ್ಕೆ ಸಿದ್ಧ ಎಂದಿತು. ಸಮಾಜದ ಎಲ್ಲ ಜನವಿಭಾಗಕ್ಕೆ ಸೇರಿದ್ದ ಸ್ತ್ರೀಪುರುಷರು ಒಟ್ಟಾಗಿ ಸೇರಿ ವಯಸ್ಸಿನ ಬೇಧವಿಲ್ಲದೆ, ಜಾತಿ, ಧರ್ಮ, ವರ್ಗ ಹಾಗೂ ಲಿಂಗ ಬೇಧವಿಲ್ಲದೆ ಒಟ್ಟಾಗಿ ಸೇರಿ ನಡೆಸಿದ ಚರ್ಚೆ, ಹಾಡು, ಕುಣಿತ, ಮೆರವಣಿಗೆ ಎಲ್ಲವೂ ಮಹಿಳಾ ದಿನಾಚರಣೆಯನ್ನು ಸಾರ್ಥಕಗೊಳಿಸಿತು. ಕಳೆದ ಮೂರು ತಿಂಗಳಿನಿಂದ ಜಿಲ್ಲೆಯ ಎಲ್ಲಾ ತಾಲ್ಲೂಕಿನಲ್ಲೂ ಸಂಚರಿಸಿ, ಸಂಘಟಿಸಿ, ಜಾಗೃತಿಯ ಚಳುವಳಿಯೊಂದಿಗೆ ಒಟ್ಟು ಮಾಡಿದ ಶಕ್ತಿಯ ಅಭಿವ್ಯಕ್ತಿ ಈ ಸಮಾವೇಶದಲ್ಲಿ ನಿಚ್ಚಳವಾಗಿ ಎದ್ದು ಕಾಣುತ್ತಿತ್ತು.

**ಎದ್ದು ಕಾಣುತ್ತಿದ್ದ ಯುವ ಚೈತನ್ಯ**

ಈ ಸಮಾವೇಶದ ವೈಶಿಷ್ಟ್ಯವೆಂದರೆ ಅರ್ಧಕ್ಕಿಂತ ಹೆಚ್ಚು ಜನ ಯುವಕ, ಯುವತಿಯರ ಭಾಗವಹಿಸುವಿಕೆ. ಚರ್ಚೆ, ಮಾತುಕತೆ, ಹಾಡು, ನಾಟಕ, ಊಟ, ಉಪಚಾರ, ಘೋಷಣೆ ಯಾವುದೇ ಇರಲಿ, ಅತ್ಯುತ್ಸಾಹದಿಂದ ಭಾಗವಹಿಸುತ್ತಿದ್ದ ಯುವಶಕ್ತಿಯ ಬತ್ತದ ಉತ್ಸಾಹ ಎಲ್ಲರನ್ನೂ ನಿಬ್ಬೆರಗೊಳಿಸುತ್ತಿತ್ತು. ಭಾಷಣಕಾರರು ಭಾಷಣ ಮುಗಿಸಿ ಕೆಳಗಿಳಿಯುವಷ್ಟರಲ್ಲಿ ಅವರ ಮಾತು ಮತ್ತು ಚಿತ್ರ ಕೂಡಲೇ ಫೇಸ್‌ಬುಕ್/ ವಾಟ್ಸಾಪ್‌ನಲ್ಲಿ ಲಭ್ಯವಾಗುವಂತೆ ಎಚ್ಚರ ವಹಿಸಿದ ಯುವತಂಡದ ಕಾರ್ಯಕ್ಷಮತೆ ಬೆರಗಾಗುವಂತಿತ್ತು.

**ಆಜಾದಿ ಘೋಷಣೆ**

ದೆಹಲಿಯ ಜವಹರಲಾಲ್ ವಿಶ್ವವಿದ್ಯಾಲಯದ ಕನ್ನಯ್ಯ ಪ್ರಸಿದ್ಧಿಗೆ ತಂದ ಆಜಾದಿ ಘೋಷಣೆಯು ಸಭೆಯಲ್ಲೆಲ್ಲಾ ಮೊಳಗಿತ್ತು. ಘೋಷಣೆ ಕೂಗುವವರ ಕಲ್ಪನೆಗೆ ತಕ್ಕಂತೆ ಹೊಸ ಹೊಸ ರೂಪದಲ್ಲಿ ಮೊಳಗಿದ ಘೋಷಣೆ ಸಮಾವೇಶದ ಮುಖ್ಯ ಆಕರ್ಷಣೆಯಾಗಿತ್ತು. 'ಆಜಾದಿ ಘೋಷಣೆ ಕೂಗುವುದೂ ದೇಶದ್ರೋಹವಾಗುತ್ತದೆ' ಎಂದ ಕೇಂದ್ರ ಸಚಿವರ ಮಾತನ್ನು ಅಣಕಿಸುವಂತೆ ಅಬ್ಬರದ ಸ್ವರದಲ್ಲಿ ಈ ಸಮಾವೇಶದಲ್ಲಿ ಮೊಳಗಿದ ಘೋಷಣೆ ಮಹಿಳೆಯರ ಸ್ವತಂತ್ರ ಅಭಿವ್ಯಕ್ತಿಗೆ ಯಾರ ಹೆದರಿಕೆಯೂ ಇಲ್ಲ ಎಂಬುದನ್ನು ಸಾರುತ್ತಿತ್ತು.

**ಸುಹಾನಾ ಸಯ್ಯದ್‌ಳಿಗೆ ಬೆಂಬಲ**

ಮೆರವಣಿಗೆಗೆ ಸಿದ್ಧರಾಗುತ್ತಾ ನಿಂತಿದ್ದೆವು. ವಾಟ್ಸಾಪ್‌ನಲ್ಲಿ ಹರಿದು ಬಂದ ಹತ್ತಾರು ವಿಷಯಗಳ ಬಗ್ಗೆ ಚರ್ಚೆ ಬಿರುಸಿನಿಂದ ನಡೆದಿತ್ತು. ನಮ್ಮ ನಡುವೆ ಸಾಗರದಿಂದ ಬಂದ ಮಹಿಳೆಯರು ಮಾತಾಡುತ್ತಿದ್ದರು. ಅವರಲ್ಲಿ ಕೆಲವರು ಟಿ.ವಿ. ಚಾನೆಲ್‌ನ ಸಾರೆಗಮಾಪ ಕಾರ್ಯಕ್ರಮದಲ್ಲಿ ಸುಶ್ರಾವ್ಯವಾಗಿ ಹಾಡಿ ಕಿಡಿಗೇಡಿಗಳ ವಿವಾದಕ್ಕೆ ಸಿಲುಕಿದ ಸುಹಾನ ಸಯ್ಯದ್ ಅವರ ಹಾಡಿಗೆ ಸಂಬಂಧಿಸಿದಂತೆ ಮಾತುಕತೆ ನಡೆದಿತ್ತು. ಸುಹಾನಳ ಸಾಗರದ ಕಾಲೇಜಿನಿಂದಲೂ ಕೆಲವು ಹುಡುಗಿಯರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಕೂಡಲೇ ಅಲ್ಲಿ ಬುರ್ಕಾ ಧರಿಸಿದ್ದ ಮಧ್ಯಮ ವಯಸ್ಸಿನ ಮಹಿಳೆ ಮುಂದೆ ಬಂದು ನಮ್ಮೆಲ್ಲರನ್ನು ಉದ್ದೇಶಿಸಿ ''ನೀವು ಸುಹಾನಳಿಗೆ ತೋರಿಸುತ್ತಿರುವ ಬೆಂಬಲ ನೋಡಿ

ನನಗೆ ತುಂಬಾ ಖುಷಿಯಾಗುತ್ತಿದೆ. ನನಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ನನ್ನ ಮಗಳ ಹೆಸರು ಕೂಡ ಸುಹಾನ. ನಾನು ನಮ್ಮಲ್ಲಿ ಮುಸ್ಲಿಂ ಹೆಣ್ಣು ಮಕ್ಕಳ ಸಂಘವೊಂದನ್ನು ಕಟ್ಟಿ ಅವರ ಹಕ್ಕಿಗಾಗಿ ಹೋರಾಟ ಮಾಡುತ್ತಿದ್ದೇನೆ' ಎಂದು ಹೇಳಿ ತಮ್ಮನ್ನು ಪರಿಚಯಿಸಿಕೊಂಡರು. ಅವರ ಹೆಸರು ಸಾಬೆರಾ ಬೇಗಂ. ಗಂಗಾವತಿ ತಾಲ್ಲೂಕಿನ ಮಾನವ ಹಕ್ಕು ಸಮಿತಿಯ ಅಧ್ಯಕ್ಷೆ ಆಕೆ. ಅವರ ಸಂಘಟನೆಯ ಹಲವಾರು ಹೆಣ್ಣು ಮಕ್ಕಳನ್ನು ಕರೆದುಕೊಂಡು ಬಂದು ಮೆರವಣಿಗೆಯಲ್ಲಿ ಭಾಗವಹಿಸಿದ ಆಕೆಯ ಉತ್ಸಾಹ ಮೆಚ್ಚುವಂತಿತ್ತು.

**ನಮ್ಮ ದೇಹ ನಮ್ಮ ಹಕ್ಕು**

ಸಮಾವೇಶದ ಅತಿ ಮುಖ್ಯ ಘೋಷಣೆಯಾದ ನಮ್ಮ ದೇಹ ನಮ್ಮ ಹಕ್ಕು ಎಂಬ ಮಾತು ಅಲ್ಲಿ ಭಾಗವಹಿಸಿದವರ ಮನದಾಳದ ಮಾತೂ ಆಗಿತ್ತು. ಕೊಪ್ಪಳ ಜಿಲ್ಲೆಯಲ್ಲಿ ವ್ಯಾಪಕವಾಗಿ ನೆಲೆಸಿರುವ ದೇವದಾಸಿ ಪದ್ಧತಿ, ಬಾಲ್ಯ ವಿವಾಹ, ಪೌಷ್ಟಿಕತೆ ಕೊರತೆ, ಶಿಶು ಮರಣ ಹಾಗೂ ಬಾಣಂತಿ ಸಾವುಗಳೇ ಹೆಚ್ಚಿರುವ ಈ ಜಿಲ್ಲೆಯಲ್ಲಿ ಮಹಿಳೆಯರು ನಮ್ಮ ದೇಹ ನಮ್ಮ ಹಕ್ಕು ಎಂದು ಹಕ್ಕೊತ್ತಾಯ ಮಾಡಿ ಘೋಷಿಸಿದ್ದು ಅತ್ಯಂತ ಮೌಲಿಕವಾಗಿತ್ತು.

ದೇವದಾಸಿ ಪದ್ಧತಿ ಕುರಿತು ಮಾತನಾಡಿದ ಶೋಭಾ ಗಸ್ತಿಯವರ ಮನದಾಳದ ಮಾತು ನೆರೆದಿದ್ದವರ ಕಣ್ಣು ತೆರೆಸುವಂತಿತ್ತು. ಶಾಲೆಗೆ ಹೋಗುವ ವಯಸ್ಸಿನಲ್ಲೇ ಅವಳಿಗೆ ಮುತ್ತು ಕಟ್ಟಿದ್ದರಿಂದ ಶಾಲೆಗೆ ಹೋಗುತ್ತಲೇ ರಾತ್ರಿಯ ಹೊತ್ತಿನಲ್ಲಿ ಅವಳು ಭಾವನಿಗೆ ಮೈ ಒಪ್ಪಿಸಬೇಕಾಗಿ ಬಂದ ಅನಿವಾರ್ಯತೆಯನ್ನು ಸಭಿಕರ ಮುಂದೆ ಬಿಚ್ಚಿಟ್ಟಳು. ಈಗ ಬಂದಿರುವ ಫೋಕ್ಸೋ ಕಾಯಿದೆ ಮುಂಚೆಯೇ ಬಂದಿದ್ದರೆ, ಎಷ್ಟೋ ಹೆಂಗಸರು ತಮ್ಮ ದೇಹವನ್ನು ರಕ್ಷಿಸಿಕೊಳ್ಳಬಹುದಿತ್ತು ಎನ್ನುವ ಶೋಭಾ ಎಸ್.ಎಸ್.ಎಲ್.ಸಿ ಮುಗಿಸಿದ ನಂತರ ಮಹಿಳಾ ಅಭಿವೃದ್ಧಿ ಮತ್ತು ಸಂರಕ್ಷಣಾ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿಕೊಂಡು ದೇವದಾಸಿಪದ್ಧತಿಯ ವಿರುದ್ಧ ಹೋರಾಡಿದವರು. ಪುರುಷಾಧಿಪತ್ಯದ ಸಂಕೇತವಾದ ದೇವದಾಸಿ ಪದ್ಧತಿಯನ್ನು ಕೊನೆಗಾಣಿಸಲು ನಾವೆಲ್ಲಾ ಒಟ್ಟಾಗಿ ಸೇರಿ ಹೋರಾಡಬೇಕಿದೆ. ನಮ್ಮ ದೇಹ ನಮ್ಮ ಹಕ್ಕು ಎಂಬುದನ್ನು ಜಗತ್ತಿಗೆ ಸಾರೋಣ. ಆಗ ಮಾತ್ರ ನಮ್ಮ ಮಗಳು ಜಗದ ಬೆಳಕಾಗಬಲ್ಲಳು ಮತ್ತು ಆಗ ನಮ್ಮ ನಡಿಗೆ ಸಮತೆಯೆಡೆಗೆ ಸಾಗುತ್ತದೆ, ಎನ್ನುವುದು ಅವಳ ಮನದಾಳದ ಮಾತಾಗಿತ್ತು.

**ಮೆರವಣಿಗೆ ಹೊರಡುತ್ತೇವೆ**

ಮಹಿಳಾ ದಿನದ ಬಹುಮುಖ್ಯ ಆಕರ್ಷಣೆ ಮೆರವಣಿಗೆ. ಮಹಿಳೆಯರು ಬಹಿರಂಗವಾಗಿ ತಮ್ಮ ಶಕ್ತಿಯನ್ನು ಪ್ರದರ್ಶಿಸುವ ಕ್ರಿಯೆ. ಹಾಗೆಯೇ ಅವರ ಬಗೆಗಿನ ಕಾಳಜಿಗೆ ಬೆಂಬಲದ ನೀರೆರೆಯುವವರು ತಮ್ಮ ಕಾಳಜಿಯನ್ನು ತೋರಿಸಲೊಂದು ಅವಕಾಶ. ಮೊದಲ ದಿನದ ಬಿಳಿಯುಡುಪಿನ ಮೌನ ಪ್ರದರ್ಶನದ ನಂತರ ಎರಡನೆಯ ದಿನದ ಬೃಹತ್ ಮೆರವಣಿಗೆ ಕೊಪ್ಪಳದ ಜನತೆಗೂ ಮಿಂಚಿನ ಸಂಚಾರವಾದಂತಿತ್ತು. ಕೊಪ್ಪಳದ ಬಿರುಬೇಸಿಗೆಯಲ್ಲೂ ಬಿಸಿಲಿನ ಝಳವನ್ನು ಲೆಕ್ಕಿಸದೆ ನಾಲ್ಕು ಸಾವಿರಕ್ಕೂ ಹೆಚ್ಚು ಸ್ತ್ರೀಪುರುಷರು ಸಮಾಜದ ಎಲ್ಲ ಜನವಿಭಾಗಗಳನ್ನು ಸಂಕೇತಿಸಿ ಮೆರವಣಿಗೆಯಲ್ಲಿ ಭಾಗವಹಿಸಿ ಪ್ರೀತಿಯ ಸಂದೇಶ ಸಾರಿದರು.



# ಭಾಗ 3

## ಗೌರಿ ಸ್ಮರಣೆ

## ನಾನೂ ಗೌರಿ - ಗೌರಿ ಎಂಬ ಚೇತನ

2017ರ ಸೆಪ್ಟೆಂಬರ್ 5ನೇ ತಾರೀಖು ರಾತ್ರಿ ತಮ್ಮ ಮನೆ ಬಾಗಿಲಿನಲ್ಲೇ ಹಂತಕರಿಂದ ಹತ್ಯೆಗೊಳಗಾದವರು ದಿಟ್ಟ ಪತ್ರಕರ್ತೆ, ಹೋರಾಟಗಾರರ ಒಡನಾಡಿ ಗೌರಿ ಲಂಕೇಶ್. ಆ ದುರ್ಘಟನೆ ತಂದ ಆಘಾತದಿಂದ ನೊಂದು, ದೇಶಾದ್ಯಂತ ಅವರ ಒಡನಾಡಿಗಳು, ಸಮಾನ ಮನಸ್ಕರು, ಸಾಹಿತಿ-ಹೋರಾಟಗಾರರು, ವಿದ್ಯಾರ್ಥಿ ನಾಯಕರು ಅನ್ಯಾಯದ ಹತ್ಯೆಯ ವಿರುದ್ಧ ನಿರಂತರ ಪ್ರತಿಭಟನೆ ನಡೆಸಿದ್ದಾರೆ. ಹೊರದೇಶಗಳಲ್ಲೂ ಅವರ ಸಾವಿಗೆ ಸಂತಾಪ, ಆಕ್ರೋಶ ವ್ಯಕ್ತವಾಗಿದೆ. ಗೌರಿಯಕ್ಕನ ಪರಿಚಿತರು, ಪರಿಚಯವಿಲ್ಲದವರು ಅವರ ಹತ್ಯೆ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಹಲ್ಲೆ ಎಂದು ಖಂಡಿಸುತ್ತಿದ್ದಾರೆ. ಆದರೆ ಸಾವು ಸಂಭವಿಸಿ ತಿಂಗಳ ಮೇಲಾದರೂ ಹಂತಕರ ಪತ್ತೆಯಾಗದಿರುವುದು ಅದು ಎಷ್ಟು ಯೋಜಿತ ಕುಕೃತ್ಯವಾಗಿತ್ತೆನ್ನುವುದನ್ನು ತಿಳಿಸಿಕೊಡುತ್ತದೆ.

ಅವರ ಸಾವು ವರ್ತಮಾನದ ಕಟುವಾಸ್ತವವನ್ನು ಅರಗಿಸಿಕೊಂಡಿರುವವರಲ್ಲಿ, ಸಮಾಜದ ಬದಲಾವಣೆಗಾಗಿ ಕ್ರಿಯಾಶೀಲ ಹೋರಾಟ ಕಟ್ಟುತ್ತಿರುವ ಮನಸುಗಳಲ್ಲಿ ಒಂದು ತೆರನ ಕೆಚ್ಚನ್ನೂ, ಅಗಣಿತ ಪ್ರಶ್ನೆಗಳನ್ನೂ, ಕಣ್ತುಂಬ ದುಃಖವನ್ನೂ, ಸಿಟ್ಟು- ಹತಾಶೆಯನ್ನೂ ತುಂಬಿದೆ. ನಾನಿರುವ ಸಮಾಜದಲ್ಲಿ ಎಂಥ ಹಂತಕರು ಸೃಷ್ಟಿಯಾದರೆಂದರೆ ಸಮಾಜದಲ್ಲಿ ನನ್ನ ಪಾತ್ರವೇನು ಎಂದು ಎಲ್ಲ ಮನಸುಗಳೂ ಕೇಳಿಕೊಳ್ಳತೊಡಗಿವೆ. ಮುಕ್ತವಾಗಿ ಮಾತನಾಡಿದರೆಂದು, ಬರೆದರೆಂದು ಎಷ್ಟೆಷ್ಟು ಅನನ್ಯ ಜೀವಗಳ ಕಳೆದುಕೊಂಡೆವು? ಇನ್ನೂ ಎಷ್ಟು ಕಾಲ ಹೀಗೆ ಮುಂದುವರೆಯಬೇಕು ಇದು, ಎಂಬಂಥ ಜಿಜ್ಞಾಸೆಗಳು ಹರಿದಾಡತೊಡಗಿವೆ. ಜೊತೆಗೆ ಗೌರಿಯ ಆಶಯಗಳನ್ನು ಬದುಕಾಗಿಸಿಕೊಳ್ಳಬೇಕೆನ್ನುವ ಛಲವೂ ಸೂಕ್ಷ್ಮಜ್ಞರಲ್ಲಿ ಮೂಡತೊಡಗಿದೆ.

ವಿದ್ಯಾರ್ಥಿ ಸಂಘಟನೆ, ಮಹಿಳಾ-ದಲಿತ-ರೈತ-ಪರಿಸರ-ಆದಿವಾಸಿ ಸಂಘಟನೆ, ಲಿಂಗತ್ವ ಅಲ್ಪಸಂಖ್ಯಾತರ ಹೋರಾಟ, ಹಿಂದೂತ್ವವಾದಿಗಳ ಅತಿಗಳಿಗೆ ಸಿಲುಕಿ ನೊಂದ ಸಮುದಾಯಗಳ ಹೋರಾಟಗಳಲ್ಲಿ ಸಕ್ರಿಯವಾಗಿದ್ದವರೆಲ್ಲರಿಗು ಗೌರಿ ಅಕ್ಕನಂತಿದ್ದರು. ಅವರ ನೇರ, ನಿಜ, ನಿರ್ಭೀತಿಯ ಬರಹಕ್ಕೆ ಸೋಗಿನ ಸ್ವಾಮಿಗಳು, ದುಷ್ಟ ಬಂಡವಾಳಿಗರು, ಭ್ರಷ್ಟ ರಾಜಕಾರಣಿಗಳು, ಧರ್ಮ-ಜಾತಿ ಹೆಸರಿನಲ್ಲಿ ಸಮಾಜ ಒಡೆಯುವ ಅನಾಹುತಕಾರಿಗಳು ಎಷ್ಟು ಭಯಗೊಂಡಿದ್ದರೆಂದರೆ, ಗೌರಿಯ ಮೇಲೆ ಅನೇಕ ಕೋರ್ಟ್ ಕೇಸುಗಳನ್ನು ದಾಖಲಿಸಿದ್ದರು. ಆದರೂ ಹೆದರದ ಗೌರಿ, ಯಾರಾದರೂ ಕಷ್ಟದಲ್ಲಿದ್ದರೆ ಹಿಂದೆಮುಂದೆ ನೋಡದೆ ನೆರವಿಗೆ ಧಾವಿಸುತ್ತಿದ್ದರು. ಎಲ್ಲ ಸವಾಲುಗಳ ನಡುವೆ ಲಾಭನಷ್ಟದ ಪ್ರಶ್ನೆಯಿಲ್ಲದೆ, ಜಾಹೀರಾತಿಲ್ಲದೆ 'ಗೌರಿ ಲಂಕೇಶ್ ಪತ್ರಿಕೆ'ಯನ್ನು ಮುನ್ನಡೆಸಿದ್ದರು.

ಹೊಸಪೀಳಿಗೆಯ ಹೋರಾಟಗಾರರನ್ನು ಅತ್ಯಂತ ಭರವಸೆ, ಪ್ರೀತಿಯಿಂದ ಅಪ್ಪಿಕೊಳ್ಳುತ್ತಿದ್ದ ಗೌರಿಯಕ್ಕನ ಕುಟುಂಬ ಬೆಳೆಬೆಳೆದು ಎಷ್ಟು ವಿಸ್ತಾರವಾಗಿತ್ತು ಎಂದರೆ ದೂರದ ರಾಜ್ಯಗಳ ದಿಟ್ಟ ಹೋರಾಟಗಾರ ಹುಡುಗ-ಹುಡುಗಿಯರನ್ನು ತಮ್ಮ ಮಕ್ಕಳೆಂದು ಭಾವಿಸಿದ್ದರು. ಕೆಂಪು, ನೀಲಿ ಬಿಳಿ

ಎಂದು ಬಣ್ಣಗಳಲ್ಲಿ; ಅದರ ಶೇಡ್‌ಗಳಲ್ಲಿ ಜನಪರ ಚಳುವಳಿಗಳು ಹಂಚಿಹೋಗಿರುವುದನ್ನು ಕೊನೆಗೊಳಿಸಲು; ಐಕ್ಯ ಹೋರಾಟವನ್ನು ವಾಸ್ತವಗೊಳಿಸಲು ನಿರಂತರ ಪ್ರಯತ್ನ ನಡೆಸಿದ್ದರು. ಸೈದ್ಧಾಂತಿಕ ಗೋಡೆಗಳನ್ನೆಲ್ಲ ಮೀರಿ ಮಾನವತ್ವದ ಕಡೆಗೆ ಚಲಿಸಲು ಯತ್ನಿಸುತ್ತಿದ್ದರು.

ಗೌರಿಯಕ್ಕನ ಉದಾತ್ತ ವಿಚಾರಗಳನ್ನು ಸಹಿಸದ, ಎದುರಿಸಲಾರದ ಅವಿಚಾರಿಗಳ ಹೇಡಿತನದ ಕೃತ್ಯ. ಅವರ ಹತ್ಯೆ ಆದರೇನು? ಪತ್ರಕರ್ತರು, ಹೋರಾಟಗಾರರು, ಸಾಹಿತಿಗಳು, ಸೂಕ್ಷ್ಮಜ್ಞ ರಾಜಕಾರಣಿಗಳ ಸಂಗಾತಿಯಾಗಿದ್ದ ಗೌರಿ, ಸಾವಿರಾರು ತರುಣ ತರುಣಿಯರ ಸೂಕ್ಷ್ಮ ಮನಸುಗಳಲ್ಲಿ ದಾಖಲಾಗಿದ್ದಾರೆ. ಅವರ ಹತ್ಯೆ ಖಂಡಿಸಿ ಲೆಕ್ಕವಿರದಷ್ಟು ಪ್ರತಿಭಟನೆ, ಸಮಾವೇಶ ನಡೆದಿದೆ, ನಡೆಯುತ್ತಲೇ ಇವೆ. ಸೂಕ್ಷ್ಮ ಮನಸುಗಳೆಲ್ಲ, 'ನಾನೂ ಗೌರಿ, ನಾನೂ ಗೌರಿ' ಎನ್ನುತ್ತ ಭೌತಿಕ ದೇಹವನ್ನು ಕೊನೆಗೊಳಿಸಿದಷ್ಟು ಸುಲಭವಾಗಿ ವಿಚಾರವನ್ನು ಕೊನೆಗೊಳಿಸಲಾಗದೆಂದು ಕೂಗಿ ಹೇಳುತ್ತಿವೆ.

ಈ ಸಂದರ್ಭದಲ್ಲಿ ತನಗೆ ಅನ್ಯಾಯವೆಂದು ಕಂಡದ್ದರ ವಿರುದ್ಧ ಕಂಡಹಾಗೆಯೇ ಬರೆದ, ಹೋರಾಟಗಾರರ ಒಡನಾಡಿಯಾಗಿದ್ದ ಗೌರಿ ಅಕ್ಕನ ನೆನೆಯುತ್ತ ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಹೋರಾಟದ ನೆಲವಾದ ಕೊಪ್ಪಳದಲ್ಲಿ ಸ್ಥಳೀಯ ಸಂಘಟನೆಗಳು ಮತ್ತು ಸಮಾನ ಮನಸ್ಕರ ಜೊತೆಗೂಡಿ ಒಂದು ಕಾರ್ಯಕ್ರಮ ಏರ್ಪಡಿಸಿದೆ. ಗೌರಿ ಅಕ್ಕನ ಜೊತೆಯ ಒಡನಾಟ ನೆನೆಯುತ್ತಲೆ ಅವರ ವ್ಯಕ್ತಿತ್ವದ ವಿಭಿನ್ನ ಮಗ್ಗುಲುಗಳನ್ನು, ಕಾಲದ ಅವಶ್ಯಕತೆಗೆ ಸರಿಯಾಗಿ ರೂಪುಗೊಳ್ಳುತ್ತ ಹೋದ ಗೌರಿ ಎಂಬ ಚೇತನವನ್ನು ಒಳಗಿಳಿಸಿಕೊಳ್ಳುವ ಪ್ರಯತ್ನದಿಂದ ಒಕ್ಕೂಟವು ತಾ. 15-10-17ರಂದು ಗೌರಿ ಸ್ಮರಣೆ-ಸಂವಾದ ಕಾರ್ಯಕ್ರಮವನ್ನು ಕೊಪ್ಪಳದಲ್ಲಿ ಏರ್ಪಡಿಸಿದೆ.

# ತಾಯ್ತನಕ್ಕೆ ಹೊಸ ವ್ಯಾಖ್ಯೆ -ಗೌರಿ

**- ದು ಸರಸ್ವತಿ**

ತಾಯ್ತನ ಎಂಬುವುದನ್ನು ಒಂದು ನಿರ್ದಿಷ್ಟ ಲಿಂಗಕ್ಕೆ ಮಾತ್ರ ಅನ್ವಯಿಸಿ ನೋಡುವುದು ವ್ಯಾಪಕವಾಗಿ ಪ್ರಚಲಿತವಾಗಿರುವದರಿಂದ ನಾನಿಲ್ಲಿ ಮಾತನಾಡಬೇಕಾಗಿರುವ ತಾಯ್ತನ ಕುರಿತಂತೆ ವಿವರಣೆ ಕೊಡುವುದು ಸೂಕ್ತವೆನಿಸುತ್ತದೆ. ತಾಯ್ತನವನ್ನು ಜೈವಿಕವಾಗಿ ಮತ್ತು ಒಂದು ಮೌಲ್ಯವಾಗಿ ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ಇಲ್ಲಿ ಮಾಡಿದ್ದೇನೆ.

**ಜೈವಿಕವಾಗಿ ತಾಯ್ತನ :**

ಸಂತಾನವನ್ನು ಮುಂದುವರೆಸುವುದು ಪ್ರಕೃತಿಯ ಬಹುಮುಖ್ಯ ಆದ್ಯತೆಯಾಗಿರುವುದರಿಂದ ಜೀವಲೋಕದಲ್ಲಿ ಜೀವ ಸೃಷ್ಟಿ ಎಂಬುದು ಪ್ರಬಲವಾದ ಇನ್‌ಸ್ಟಿಂಕ್ಟ್ ಆಗಿದೆ. ಹಾಗಾಗಿ ಮತ್ತೊಂದು ಜೀವದ ಸೃಷ್ಟಿಕ್ರಿಯೆಗೆ ತಕ್ಕ ಹಾಗೆಯೇ ದೇಹ ರಚನೆಗೊಂಡಿರುವುದಲ್ಲದೆ ಇಡಿ ದೇಹದ ಅಣು ಅಣುವು ಆ ಕ್ರಿಯೆಯಲ್ಲಿ ಪಾಲ್ಗೊಳ್ಳುತ್ತದೆ. ಈ ಇನಸ್ಟಿಂಕ್ಟ್ ಪ್ರಬಲವಾಗಿರುವಂತೆ ಕುರುಡಾಗಿಯೂ ಇದೆ. ಸುಖದ ಮಿಲನವೋ ಬಲಾತ್ಕಾರದ ಮಿಲನವೋ ಗರ್ಭಧಾರಣೆಗೆ ಮುಖ್ಯವಾಗುವುದಿಲ್ಲ. ಇಂತಹ ಪ್ರಬಲ ಇನ್‌ಸ್ಟಿಂಕ್ಟ್‌ನ ಜೊತೆಗೆ ಹೂ ಬಿಡದ ಮರವೋ, ಗಬ್ಬಾಗದ ದನವೊ, ಬಸಿರಾಗದ ಹೆಣ್ಣೊ, ಮಗುವನ್ನು ಹುಟ್ಟಿಸಲಾಗದ ಗಂಡೋ, ಗಂಡಿನ ದೇಹದೊಳಗೆ ಮಿಡಿಯುವ ಹೆಣ್ಣೋ, ಹೆಣ್ಣಿನ ದೇಹದೊಳಗೆ ಸಿಡಿಯುವ ಗಂಡೋ ಇರುವುದು ಸಹ ಪ್ರಕೃತಿಯಲ್ಲಿ ಸಹಜವೇ ಆಗಿದೆಯಲ್ಲದೆ ಬದುಕುಳಿಯುವ ಅವಕಾಶವನ್ನೂ ಪ್ರಕೃತಿ ನೀಡಿರುತ್ತದೆ. ಆದರೆ ಸಮಾಜ ಮಾತ್ರ ಎಲ್ಲರಿಗೂ ಅವಕಾಶ ನೀಡುವಂತಹ ಪ್ರಕೃತಿಯ ಹಾಗೆ ಸಹಜವಾಗಿಲ್ಲ. ಗಂಡು ಹೆಣ್ಣು ಎಂಬುದನ್ನು ಕಪ್ಪು-ಬಿಳುಪಾಗಿ ಗೆರೆ ಕುಯ್ದಂತೆ ವಿಭಜಿಸಿ ಸಾಮಾಜಿಕವಾದ ಲಿಂಗತ್ವದ ಪಾತ್ರಗಳನ್ನು ಸೃಷ್ಟಿಸಿದೆ. ಸಾಮಾಜಿಕವಾಗಿ ಸೃಷ್ಟಿಯಾದ ಲಿಂಗತ್ವದ ಪಾತ್ರಗಳಲ್ಲಿಯೂ ಜೈವಿಕ ಅಂಶವು ಪ್ರಧಾನ ಮಾನದಂಡವಾಗಿ ಹೆಣ್ಣಿನ ಅಸ್ತಿತ್ವವನ್ನೇ ನಿಯಂತ್ರಿಸುತ್ತದೆ. ಮಕ್ಕಳನ್ನು ಹೆತ್ತರಷ್ಟೆ ಹೆಣ್ಣಿನ್ನು ಹೆಣ್ಣೆಂದು ಪರಿಗಣಿಸಲಾಗುತ್ತದೆ. ಅದರಲ್ಲಿಯೂ ಗಂಡು ಮಗುವನ್ನು ಹೆತ್ತರೆ ಸೂಕ್ತವಾದ ಸ್ಥಾನಮಾನಕ್ಕೆ ಹೆಣ್ಣು ಅರ್ಹಳಾಗುತ್ತಾಳೆ.

ಪ್ರಕೃತಿಯಲ್ಲಿ ಹೂ ಬಿಡದ ಮರಗಳು ಒಂದು ಭಿನ್ನತೆಯಾಗಿ ಇವೆಯಷ್ಟೇ ಹೊರತು ಐಬಾಗಿ ಅಲ್ಲ. ಆದರೆ ಸಮಾಜದಲ್ಲಿ ಸಂತತಿಯನ್ನು ಸೃಷ್ಟಿಸಲಾಗದ ಗಂಡು-ಹೆಣ್ಣುಗಳನ್ನು ಐಬು, ಊನವೆಂದೇ ಭಾವಿಸಲಾಗುತ್ತದೆ. ಅದರಲ್ಲಿಯೂ ಹೆಣ್ಣು ಮಕ್ಕಳನ್ನಂತೂ ಪ್ರಯೋಜನಕ್ಕೆ ಬಾರದ ವಸ್ತುಗಳಂತೆ ಪರಿಗಣಿಸುವುದಕ್ಕೆ 'ಬಂಜೆ', 'ಗೊಡ್ಡು' ಎಂಬ ಬೈಗುಳಗಳು, 'ಬಾಲಾಕರಿಲ್ಲದ ಬಾಲೆದ್ಯಾತರ ಜನ್ಮ ಬಾಳೆಲೆಯಲುಂಡು ಬಿಸುಟಂತೆ' ಎಂಬ ಹಾಡುಗಳೇ ಇದಕ್ಕೆ ಸಾಕ್ಷಿ. ಷಂಡ, ಬಂಜೆ ಎಂಬ ಪರಿಕಲ್ಪನೆಗಳು ವ್ಯಕ್ತಿತ್ವನ್ನೇ ಮುರುಟಿಸಬಲ್ಲಷ್ಟು ಬಲವಾಗಿವೆ. ಸಂತತಿ ಎಂಬುದು ಪ್ರಕೃತಿಯಲ್ಲಿ ಮುಂದುವರಿಕೆಯಾಗಿದೆ. ಹುಟ್ಟಿಸಿ, ಪೋಷಿಸಿ ಬದುಕುವ ಸಾಮರ್ಥ್ಯ ಕಲಿಸಿ ಬದುಕಲು ಬಿಡುವುದು

ಪ್ರಕೃತಿ ಧರ್ಮವಾಗಿದೆ. ಆದರೆ ಸಮಾಜದಲ್ಲಿ ಮಕ್ಕಳೆಂದರೆ ನಮ್ಮ ಆಸೆಗಳನ್ನು ಪೂರೈಸುವ, ಆಸ್ತಿಯ ವಾರಸುದಾರಿಕೆಯನ್ನು ಮುಂದುವರೆಸುವ, ವಯಸ್ಸಾದ ಕಾಲದ ಫಿಕ್ಸೆಡ್ ಡೆಪಾಸಿಟ್‌ಗಳಾಗಿವೆ.

**ಜೀವಪರ ಮೌಲ್ಯವಾಗಿ ತಾಯ್ತನ :**

ಪೋಷಿಸುವುದು, ಕಾಪಾಡುವುದು, ಜೋಪಾನ ಮಾಡುವುದು, ಬೆಳೆಸುತ್ತ ಬೆಳೆಯುವುದು, ಬೆಳೆಯುವುದಕ್ಕೆ ಗೊಬ್ಬರವಾಗುವುದನ್ನು, ಜೀವಪರವಾದುದನ್ನು ತಾಯ್ತನವೆಂಬ ಮೌಲ್ಯವಾಗಿ ನೋಡಬಹುದು. ಇಂತಹ ಮೌಲ್ಯವನ್ನು ತಳ್ಳಿಹಾಕಲು ಸಾಧ್ಯವಾಗದ ಕಾರಣಕ್ಕೆ ಮದರ್ ತೆರೆಸಾ, ಯಶೋಧರೆಯಂತಹವರಿಗೂ ಮಾನ್ಯತೆ ಸಿಕ್ಕಿದೆ. ತಾಯ್ತನವನ್ನು ಮೌಲ್ಯವಾಗಿ ನೋಡುವಾಗ ಕೇವಲ ಉಣಿಸುವುದಕಷ್ಟೇ, ಎಲ್ಲವನ್ನೂ ನುಂಗಿಕೊಂಡು ಸಹಿಸಿಕೊಳ್ಳುವುದಕ್ಕೆ ಸೀಮಿತವಾಗುವುದಿಲ್ಲ. ನುಂಗಿದ್ದನ್ನು ಸೂಕ್ತವಾಗಿ ಅರೆದು ಶಕ್ತಿಯಾಗಿ ಪರಿವರ್ತಿಸಿ ಉಳಿವ ತ್ಯಾಜ್ಯವನ್ನು ಬೆಳೆಯುವ ಗೊಬ್ಬರವಾಗಿ ಮಾಡುವುದು. ಈ ಅರ್ಥದಲ್ಲಿ ಜೀವ ಪರವಾಗಿರುವುದೆಂದರೆ ಜೀವವಿರೋಧಿ ಯಾದುದರ ಬಗ್ಗೆ ಕಡು ಎಚ್ಚರಿಕೆಯಿಂದ ಇರುವುದು ಆಗಿದೆ.

ತಾಯ್ತನವೆಂಬುದನ್ನು ಜೀವಪರ ಮೌಲ್ಯವಾಗಿ ಪರಿಗಣಿಸಿದಾಗ ನಮ್ಮ ಸಾಮಾಜಿಕ ಮತ್ತು ರಾಜಕೀಯ ವಿಷಯಗಳನ್ನು ಭಿನ್ನವಾಗಿ ನೋಡಲು ಸಾಧ್ಯ. ಭಿನ್ನವಾಗಿ ನೋಡುವ ಪ್ರಕ್ರಿಯೆಯಲ್ಲಿಯೇ ಆಗಬೇಕಾದ ಬದಲಾವಣೆಗಳು ಗೋಚರಿಸುತ್ತವೆ.

**ಮದುವೆ ಮತ್ತು ಕುಟುಂಬ ವ್ಯವಸ್ಥೆ :**

ನಮ್ಮ ಸಮಾಜ ಮತ್ತು ರಾಜಕೀಯ ವ್ಯವಸ್ಥೆ ಪುರುಷ ಪ್ರಧಾನವಾಗಿದೆ. ಪುರುಷನಷ್ಟೇ ಶ್ರೇಷ್ಠ ಅವನಷ್ಟೇ ಅಧಿಕಾರ ನಡೆಸಲು ಅರ್ಹ ಅವನ ಮೂಲಕವೇ ಆಸ್ತಿ, ಅಧಿಕಾರ ಮತ್ತು ಸಂತತಿ ಮುಂದುವರೆಯಬೇಕೆಂಬ ವ್ಯವಸ್ಥೆಯನ್ನು ಪುರುಷಪ್ರಧಾನತೆ ಎಂದು ಕರೆಯಲಾಗುತ್ತದೆ. ಲಾಭವೇ ಮುಖ್ಯವಾಗಿರುವ, ಏಕಸ್ವಾಮ್ಯತೆಯನ್ನು ಪೋಷಿಸುವ ಬಂಡವಾಳಶಾಹಿಯೊಂದಿಗೆ ಪುರುಷ ಪ್ರಧಾನತೆಯದು ಅವಿನಾಭಾವ ಸಂಬಂಧ. ಸಮಾಜದ ಮೂಲ ಘಟಕವಾದ ಕುಟುಂಬವು ಸಹ ಪುರುಷ ಪ್ರಧಾನವಾಗಿರುವುದರಿಂದ ಅಸಮಾನತೆಯಿಂದ ಕೂಡಿದೆ. ಪುರುಷಪ್ರಧಾನತೆಯು ಹೆಣ್ಣನ್ನು ನಿಯಂತ್ರಿಸುವುದೇ ಅವಳ ಲೈಂಗಿಕತೆ ಮತ್ತು ದುಡಿಮೆಯನ್ನು ಬಳಸಿಕೊಳ್ಳಲು. ಕುಟುಂಬದ ಹಿರಿಯ ಎನಿಸಿಕೊಳ್ಳುವವರು ದುಡಿದು ಹಿರಿಯರಾಗುವುದಿಲ್ಲ, ನಿಯಂತ್ರಿಸುವ ಅಧಿಕಾರದಿಂದ ಹಿರಿತನ ಬರುತ್ತದೆ. ಕುಟುಂಬದ ಹೊರಗಿನ ಸಮಾಜದಲ್ಲಿಯೂ ಅಸಮಾನತೆ ಇದ್ದು ಅಲ್ಲಿಯೂ ನಿಯಂತ್ರಿಸುವ ಅಧಿಕಾರವಿದ್ದವರೇ ಆಳುವವರಾಗಿರುತ್ತಾರೆ. ಈ ಅರ್ಥದಲ್ಲಿ ಕುಟುಂಬ ಮತ್ತು ಸಮಾಜವು ಪರಸ್ಪರ ಪ್ರತಿಫಲಿಸುತ್ತವೆ ಎಂದು ಹೇಳಬಹುದು. ತಾಯ್ತನದ ಮೌಲ್ಯದ ಬೆಳಕಲ್ಲಿ ನೋಡುವಾಗ ನಮ್ಮ ಪ್ರಜಾತಂತ್ರದ ಸಮಾನತೆಯು ಮೊದಲಿಗೆ ಜಾರಿಯಾಗಬೇಕಾಗಿರುವುದು ನಮ್ಮ ಕುಟುಂಬಗಳಲ್ಲಿ. ಹೆಣ್ಣಿಗೊಂದು ಗಂಡಿಗೊಂದು, ಪ್ರಬಲರಿಗೊಂದು ಅಬಲರಿಗೊಂದು ನ್ಯಾಯವನ್ನು ಉಸಿರಾಡುವ ನಮ್ಮ ಸಮಾಜದ ಮೂಲಭೂತ ಘಟಕವಾದ ಕುಟುಂಬವು ಸಮಾನತೆಯ ಗಾಳಿಯನ್ನು ಉಸಿರಾಡಬೇಕಿದೆ. ವಿವಾಹ ಸಂಸ್ಥೆಯು ಕುಟುಂಬ ಸಂಸ್ಥೆಗೆ ಆಧಾರವಾಗಿದೆ. ಇಂದಿನ ಬಂಡವಾಳಶಾಹಿ ಕೊಳ್ಳುಬಾಕ ಸಂಸ್ಕೃತಿಯಲ್ಲಿ ವ್ಯಾಪಾರವಾಗಿರುವ ಮದುವೆಯು ಸಮಾನತೆಯ ಗಾಳಿಯನ್ನು ಉಸಿರಾಡಬೇಕಿದೆ.

**ಬದಲಾಗಬೇಕಿರುವ ಶಕ್ತಿ ಮತ್ತು ಅಧಿಕಾರದ ಕಲ್ಪನೆಗಳು :**

ಪುರುಷಪ್ರಧಾನವಾದ ಸಮಾಜದಲ್ಲಿ ಸ್ಥಾನಮಾನಗಳು, ಅಂತಸ್ತು, ಅಧಿಕಾರಗಳು ನಿರ್ಧಾರವಾಗುವುದು ಜಾತಿ, ಲಿಂಗ, ಆಸ್ತಿ, ಹಣದ ಮೂಲಕ. ಅಗತ್ಯಕ್ಕೆ ತಕ್ಕ ಹಾಗೆ ಉಣ್ಣಬೇಕು, ಸಾಮರ್ಥ್ಯಕ್ಕೆ ತಕ್ಕ ಹಾಗೆ ದುಡಿಯಬೇಕು ಎಂಬ ಸಮಾನತೆಯನ್ನು ಆಧರಿಸಿ ಹೇಳುವುದಾದರೆ ಪ್ರತಿಯೊಬ್ಬರಿಗೂ ತಮ್ಮ ಸಾಮರ್ಥ್ಯವನ್ನು ಬಳಸಿಕೊಳ್ಳುವ ಸಮಾನ ಅವಕಾಶಗಳು ಮತ್ತು ಆಯ್ಕೆ ಸ್ವಾತಂತ್ರ್ಯಗಳು ಇರಬೇಕು. ಸಮಾನತೆ ಎಂಬುದು ಯೂನಿಫಾರ್ಮಿಟಿ ಅಲ್ಲ. ಎಲ್ಲರ ಮತ್ತು ಎಲ್ಲತರದ ಶಕ್ತಿ ಸಾಮರ್ಥ್ಯಗಳಿಂದ ಸಮಾಜ ನಡೆಯುವುದರಿಂದ ಎಲ್ಲ ಶಕ್ತಿ ಸಾಮರ್ಥ್ಯಗಳಿಗೂ ಬೆಲೆ, ಗೌರವಗಳಿರಬೇಕು. ಹಾಗಾದಾಗ ಮಾತ್ರ ಕಸಗುಡಿಸುವವರು ಮತ್ತು ಪ್ರಧಾನಮಂತ್ರಿಗಳು, ಹೆಂಗಸರು ಮತ್ತು ಗಂಡಸರು ಮನುಷ್ಯರಾಗಿ ಪ್ರಜೆಗಳಾಗಿ ಸಮಾನರಾಗಲು ಸಾಧ್ಯ.

ಪರಿವರ್ತನೆಗಾಗಿ ಹೋರಾಡುತ್ತಿರುವ ಎಲ್ಲ ಜನಪರ ಚಳವಳಿಗಳು ಒಗ್ಗೂಡಿ ಹೋರಾಟ ಮಾಡಬೇಕಾದ ಸಂದರ್ಭದಲ್ಲಿ ನಾವಿದ್ದೇವೆ. ಒಗ್ಗೂಡುವುದರ ಅಗತ್ಯವೇನು? ಯಾವ ಕಾರಣಕ್ಕಾಗಿ ಮತ್ತು ಹೇಗೆ ಒಗ್ಗೂಡುತ್ತೇವೆ ಎಂಬುದರ ಬಗ್ಗೆ ನಾವುಗಳು ಸ್ಪಷ್ಟವಾಗಿರಬೇಕಾಗುತ್ತದೆ.

ಒಗ್ಗೂಡುವುದರಿಂದ ನಾವು ಶಕ್ತಿಯನ್ನು ಪಡೆದುಕೊಳ್ಳುತ್ತೇವೆ, ಭದ್ರತೆಯ ಭಾವವನ್ನು ಅನುಭವಿಸುತ್ತೇವೆ. ಈ ಶಕ್ತಿ ಮತ್ತು ಭದ್ರತೆ ನಮ್ಮ ಸೌಖ್ಯಕ್ಕಾಗಷ್ಟೇ ಬಳಕೆಯಾಗಬೇಕೆಂಬ ಎಚ್ಚರ ನಮಗಿರಬೇಕು. ಕಾರಣ ಈ ಶಕ್ತಿ ನಮ್ಮನ್ನು ಅಹಂಕಾರಿಗಳನ್ನಾಗಿಯೂ ಮಾಡಬಹುದು. ಅಹಂಕಾರ ನಮ್ಮನ್ನು ಸುಮ್ಮನೆ ಕೂರಲು ಬಿಡುವುದಿಲ್ಲ ಅದು ಯಾವಾಗಲು ತನ್ನ ಪರಾಕ್ರಮವನ್ನು ತೋರಿಸಲು ಕಾಯುತ್ತಿರುತ್ತದೆ. ಅದು ಪರಾಕ್ರಮವನ್ನು ತೋರುವುದು ಯಾವಾಗಲೂ ಅಶಕ್ತರ ಮೇಲೆ, ಸಮಾನರಲ್ಲದವರ ಮೇಲೆ. ಪರಾಕ್ರಮವನ್ನು ತೋರಿಸಬೇಕೆಂಬುವುದೇ ತನ್ನ ಸಾಮರ್ಥ್ಯದ ಮೇಲೆ ತನಗೆ ನಂಬಿಕೆ ಇಲ್ಲದಾಗ. ನಂಬಿಕೆ ಇದ್ದಾಗ ಅದು ಪರೀಕ್ಷೆ ಮಾಡಿಕೊಳ್ಳಲು ಹೋಗುವುದಿಲ್ಲ.

ಒಗ್ಗೂಡುವುದಕ್ಕೆ ನಾವು ಯಾವಾಗಲೂ ಹೊರಗಿನ ಒಬ್ಬ ಶತ್ರುವನ್ನು ಹುಡುಕುತ್ತಿರುತ್ತೇವೆ. ಸಿಕ್ಕ ಕೂಡಲೇ ಪೆಪ್ಪರ್‌ಮೆಂಟಿನಂತೆ ಚೀಪಿಕೊಂಡು ಉತ್ತೇಜಿತರಾಗುತ್ತೇವೆ. ಕನ್ನಡಿಗರು ತಮಿಳರನ್ನು, ಭಾರತದವರು ಪಾಕಿಸ್ತಾನದವರನ್ನು, ಪೂರ್ವದವರು ಪಶ್ಚಿಮದವರನ್ನು, ಕರಿಯರು ಬಿಳಿಯರನ್ನು ಕಂಡಕೂಡಲೇ ಉದ್ರೇಕಗೊಂಡು ಒಂದಾಗುತ್ತೇವೆ. ಉದ್ರೇಕಗೊಂಡು ಒಗ್ಗೂಡುವುದು ಯಾವ ಸಮಾನತೆಯತ್ತಲೂ ನಮ್ಮನ್ನು ಒಯ್ಯುವುದಿಲ್ಲ. ಪೆಡಗಾಗಿ ಆಫ್ ದಿ ಅಪ್ರೆಸ್ಡ್ ಕೃತಿಯಲ್ಲಿ ಪುಸ್ತಕದ ಲೇಖಕರಾದ ಪೌಲೋ ಫ್ರೇರಿಯವರು ಹೇಳುವ ಮಾತುಗಳು ಇಲ್ಲಿ ಪ್ರಸ್ತುತ. ''ಅಮಾನವೀಕರಣವೆಂಬುದು ಐತಿಹಾಸಿಕ ಸತ್ಯವಾಗಿದ್ದು ದಮನಕಾರರಲ್ಲಿ ಹಿಂಸೆಯನ್ನು ಹುಟ್ಟುಹಾಕುವ ಮೂಲಕ ದಮನಿತರನ್ನು ಅಮಾನವೀಯಗೊಳಿಸುವ ಅನ್ಯಾಯದ ವ್ಯವಸ್ಥೆಯ ಪರಿಣಾಮವಾಗಿದೆ. ಮಾನವೀಯಗೊಳ್ಳುವ ಸಲುವಾಗಿ ತಮ್ಮನ್ನು ಅಮಾನವೀಯಗೊಳಿಸಿದವರ ವಿರುದ್ಧ ಮಾಡುವ ಹೋರಾಟಕ್ಕೆ ಅರ್ಥಸಿಗುವುದು ತಮ್ಮ ಮಾನವೀಯತೆಯನ್ನು ಮತ್ತೆ ಕಟ್ಟುವಾಗ, ತಾವೇ ದಮನಕಾರರ ದಮನಕಾರರಾಗದಿದ್ದಾಗ. ಬದಲಿಗೆ ಅದು ಇಬ್ಬರ ಮಾನವೀಯತೆಯನ್ನು ಮರುಸ್ಥಾಪಿಸಬೇಕು. ಅಧಿಕಾರವಿದೆ ಎಂದು ದಮನ ಮಾಡುವ, ಶೋಷಿಸುವ ಮತ್ತು ಅತ್ಯಾಚಾರಮಾಡುವ ದಮನಕಾರನ ಅಧಿಕಾರದಲ್ಲಿ ತನ್ನನ್ನು ಮತ್ತು ತಾನು ದಮನ ಮಾಡಿದವರನ್ನು ಬಿಡುಗಡೆಗೊಳಿಸುವ ಶಕ್ತಿ ಇಲ್ಲ. ಅಂತಹ ಶಕ್ತಿ ಇರುವುದು ದಮನಕ್ಕೆ ಒಳಗಾದವರು ಕಟ್ಟುವ ಹೋರಾಟದಲ್ಲಿ. ಇದು ದಮನಿತರು ಮಾಡಬೇಕಾಗಿರುವ ಮಹಾನ್ ಮಾನವೀಯ ಮತ್ತು ಐತಿಹಾಸಿಕ

ಜವಾಬ್ದಾರಿಯಾಗಿದೆ'' ಎಂದು ಹೇಳುತ್ತಾರೆ. ಒಗ್ಗೂಡಲು ಶತ್ರುವೇ ಬೇಕಾದರೆ ನಮ್ಮೊಳಗಿನ ಶತ್ರುವಿನತ್ತಲು ತಿರುಗಿ ಬೀಳಬೇಕಾಗುತ್ತದೆ. ಬದಲಾವಣೆ, ಪರಿವರ್ತನೆಯಾಗುವುದೆಂದರೆ ತಾನೂ ಬದಲಾಗುತ್ತಲೆ ಬದಲಾವಣೆಗೆ ದುಡಿಯುವುದು.

ಸರ್ವರಿಗೂ ಸಮಪಾಲು, ಸಮಬಾಳು ಎಂಬ ಉದ್ದೇಶಕ್ಕಾಗಿ ಒಗ್ಗೂಡುವುದರಲ್ಲೇ ಒಗ್ಗೂಡುವುದರ ಸಾರ್ಥಕತೆಯಿದೆ. ವಂಚಿತರೆಲ್ಲರೂ, ದಮನಿತರೆಲ್ಲರೂ ಒಗ್ಗೂಡಬೇಕಾಗಿದೆ. ತಾವೇ ವಂಚಕರು, ದಮನಿತರು ಆಗುವುದಕ್ಕಲ್ಲ. ಅನ್ಯಾಯ, ವಂಚನೆ, ದಮನವನ್ನು ವಿರೋಧಿಸುವ ಸಲುವಾಗಿ. ಈ ನಾಡಿನ ದಮನಿತರನ್ನ ನಾವು ಕಾಣಬೇಕಾಗಿರುವುದು ಅವರು ಸದಾ ಕೈಯೊಡ್ಡಿ ನಿಂತು, ಉದ್ಧಾರಕ್ಕಾಗಿ ಕಾದಿರುವ ದಡ್ಡರೆಂದಲ್ಲ, ಕಡೆಗಣಿಸಿರುವ ಅವರ ಜ್ಞಾನ, ತಿಳುವಳಿಕೆ, ವಿವೇಕ, ಕೌಶಲ್ಯಗಳಿಗೆ ಮಾನ್ಯತೆ ನೀಡಬೇಕು ಎಂಬ ದೃಷ್ಟಿಯಲ್ಲಿ.

**ತಾಯ್ತನದ ಬೆಳಕಲ್ಲಿ ಮಾಡಿಕೊಳ್ಳಬೇಕಾಗಿರುವ ನಿಷ್ಪಕ್ಷಪಾತ ಅವಲೋಕನ :**

ಜನಪರ ಚಳವಳಿಗಳು ನಡೆದು ಬಂದ ದಾರಿಯನ್ನು ಮತ್ತು ಕಾರ್ಯತಂತ್ರಗಳನ್ನು ಅವಲೋಕನ ಮಾಡಿಕೊಳ್ಳಬೇಕಾದ ಜರೂರಿದೆ. ಅವಲೋಕನ ಪ್ರಕ್ರಿಯೆಯು ಮಿತಿಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಬೇಕೇ ಹೊರತು ಮಿತಿಗಳ ಬಗ್ಗೆ ಲೇವಡಿ ಮಾಡಿಕೊಳ್ಳಲು ಅಲ್ಲ. ಒಡಕುಗಳಿಗೆ ಅಥವಾ ಪ್ರತ್ಯೇಕತೆಗೆ ನಾಯಕತ್ವದಲ್ಲಿನ ಅಹಂಗಳು ಕಾರಣವೋ ಅಥವಾ ನಿಜವಾದ ಭಿನ್ನಮತವೋ ಎಂಬುದನ್ನು ಸ್ಪಷ್ಟವಾಗಿ ಅರಿಯವ ಪ್ರಯತ್ನಮಾಡಬೇಕಾಗಿದೆ. ಬದಲಾವಣೆಯ ಬಗ್ಗೆ ಸಮಾನತೆಯ ಬಗ್ಗೆ ಕೆಲಸಮಾಡುವಂತಹ ಚಳವಳಿಗಳಲ್ಲಿಯೂ ಸುಳಿಯುವ ಅಧಿಕಾರದ ಕೇಂದ್ರೀಕರಣವನ್ನು ಎಚ್ಚರಿಕೆಯಿಂದ ಪರಿಶೀಲಿಸುವ ಅಗತ್ಯವಿದೆ. ಹೆಣ್ಣುಮಕ್ಕಳ ಜ್ಞಾನ, ಕೌಶಲ್ಯ, ಶಕ್ತಿಯನ್ನು ಚಳವಳಿಗಳು ಸೂಕ್ತವಾಗಿ ಒಳಗೊಳ್ಳಬೇಕು. ತಾಯ್ತನದ ಹಿನ್ನೆಲೆಯಲ್ಲಿ ಚಳುವಳಿಯ ಕಾರ್ಯಾಚರಣೆಗಳು ಮತ್ತು ನೋಟ ಬದಲಾದಾಗ ಮಾತ್ರ ಹೆಣ್ಣುಮಕ್ಕಳನ್ನು ಒಳಗೊಳ್ಳಲು ಸಾಧ್ಯ.

**ಗೌರಿ ತಾಯ್ತನದ ಹೊಸ ವ್ಯಾಖ್ಯೆ :**

ತಾಯಿ ಎಂದರೆ ಬದುಕಿಸುವವಳು, ನಾಶಮಾಡುವವಳಲ್ಲ. ಪ್ರೀತಿ ಇರುವವಳು, ದ್ವೇಷವಿರುವವಳಲ್ಲ. ಸರ್ವರ ಸೌಖ್ಯ ಬಯಸುವವಳು, ಪಕ್ಷಪಾತಿಯಲ್ಲ. ಅಗತ್ಯ ಬಿದ್ದಾಗ ನಿಷ್ಠೂರಿಯು ಹೌದು, ಕೆಟ್ಟಾಗ ನಾಲ್ಕು ಬಾರಿಸಿ ಸರಿಪಡಿಸುವವಳೂ ಹೌದು. ತಾಯಿ ಬರಿ ಹೆಣ್ಣಲ್ಲ, ಗಂಡಸೂ ತಾಯಿಯಾಗಬಹುದು. ತಾಯ್ತನವೆಂಬುದು ಲಿಂಗ ಮತ್ತು ಲಿಂಗತ್ವವನ್ನು ಮೀರಿದ್ದು.

ಪೊಳ್ಳು ವಿಜೃಂಭಣೆಯ ತಾಯ್ತನದ ಚೌಕಟ್ಟುಗಳನ್ನು ಮುರಿಯುವ ಮೂಲಕ ಗೌರಿ ತಾಯ್ತನಕ್ಕೆ ಹೊಸ ವ್ಯಾಖ್ಯೆ ಬರೆದಿದ್ದಾಳೆ ಎಂದು ನಾನು ಭಾವಿಸುತ್ತೇನೆ. ಮದುವೆ, ಕುಟುಂಬ ಎಂಬ ಸಂಸ್ಥೆಗಳು ಬೆಳೆಸಿರುವ ಸಂಕುಚಿತ ಮೌಲ್ಯಗಳು ಗಂಡ, ಹೆಂಡತಿ ಮಕ್ಕಳನ್ನು ಖಾಸಗಿ ಆಸ್ತಿಯಂತೆ ಮಾಡಿಬಿಟ್ಟಿವೆ. ಹಾಗಾಗಿ ಮಕ್ಕಳು ಗಂಡ ಹೆಂಡತಿ ಸಂಬಂಧಗಳು ವಿಪರೀತ ಪೊಸೆಸಿವ್ ಸಂಬಂಧಗಳಾಗಿವೆ. ಅದೆಂತಹ ಪೊಸೆಸಿವ್ ಸಂಬಂಧವೆಂದರೆ ಸಂತೋಷವಾಗಿರಬೇಕೆಂದರೆ ತನ್ನೊಂದಿಗೆ ಮಾತ್ರ, ಬೇರೆಯವರೊಂದಿಗೆ ಅಣುಮಾತ್ರ ಸಂತೋಷವಾಗಿದ್ದರೂ ಅದು ಮಹಾನ್ ಅಪರಾಧವಾಗಿಬಿಡುತ್ತದೆ. ಇಡಿ ಜೀವಮಾನವೇ ನಂಜು ಸಾಧಿಸಲು ಬೇಕಾಗುವಷ್ಟು ಆಯಾರವನ್ನು ನೀಡುತ್ತದೆ. ಅದರಲ್ಲಿಯೇ ಕೊರಗಿ ನವೆದುಹೋಗುತ್ತಾರೆ. ಅಂತಹ ನಂಜಿಗೊ ಅಥವಾ ಕೊರಗಿಗೋ ಸಮಾಜವೂ ಮಾನ್ಯತೆ, ಸಮ್ಮತಿ ನೀಡುತ್ತದೆ. ಒಟ್ಟಿಗೆ ಬದುಕಲು ಸಾಧ್ಯವಾಗದಾಗಲೂ ಬದುಕುವುದಕ್ಕಿಂತಲೂ ಸಹಿಸಿಕೊಂಡು

ಒಳಗೊಳಗೆ ದಹಿಸಿಕೊಂಡು ಬದುಕುವುದಕ್ಕೂ ಮಾನ್ಯತೆ ಸಿಗುತ್ತದೆ.

ಘನತೆಯಿಂದ ಬೇರೆಯಾಗಿ ಪರಸ್ಪರರನ್ನು ಗೌರವಿಸಿಕೊಂಡು ಬದುಕುವುದನ್ನು ವಿಶೇಷವಾಗಿ ಹೆಣ್ಣುಮಕ್ಕಳನ್ನು ಅವಹೇಳನ ಮಾಡುತ್ತಾರೆ. ಅಷ್ಟಕ್ಕೆ ಸುಮ್ಮನಾಗದೆ ಅವಳ ಇಡಿ ವ್ಯಕ್ತಿತ್ವವನ್ನೇ ಗಂಡನ/ಗಂಡಸಿನ ಸಂಬಂಧದೊಂದಿಗೆ ತಳುಕುಹಾಕಿ ಅಳೆಯಲಾಗುತ್ತದೆ. ಆದರೆ ಪುರುಷನ ಪ್ರತಿಭೆ, ಸೃಜನಶೀಲತೆ, ಸಾಮರ್ಥ್ಯದೊಂದಿಗೆ ಅವನ ಖಾಸಗಿ ಸಂಬಂಧಗಳನ್ನು, ಕುಡಿತ, ಜೂಜು, ತಿಕ್ಕಲುತನ ಇತ್ಯಾದಿಗಳನ್ನು ತಳುಕುಹಾಕುವುದಿಲ್ಲ. ಪುರುಷನೇ ಆಗಿರಲಿ ಮಹಿಳೆಯರೇ ಆಗಿರಲಿ ತಮ್ಮ ಖಾಸಗಿ ಸಂಬಂಧಗಳೊಂದಿಗೆ ಎಷ್ಟು ಘನತೆ ಮತ್ತು ಗೌರವಗಳಿಂದ ನಡೆದುಕೊಳ್ಳುತ್ತಾರೆ ಎಂಬುದು ವ್ಯಕ್ತಿತ್ವವನ್ನು ಅಳೆಯುವ ಮಾನದಂಡವಾಗಬೇಕು. ಈ ಅರ್ಥದಲ್ಲಿ ಗೌರಿ ದೊಡ್ಡವಳು. ದಾಂಪತ್ಯವೆಂಬುದು ಅತ್ಯಂತ ಸಂಕೀರ್ಣವಾದ ಸಂಬಂಧವಾಗಿದೆ. ಗಂಡ-ಹೆಂಡರು ಭಾವನಾತ್ಮಕವಾಗಿ, ಮಾನಸಿಕವಾಗಿ ಪರಸ್ಪರ ಅದೆಷ್ಟು ಕೊಟ್ಟುಕೊಂಡಿರುತ್ತೇವೆಂದರೆ ಆ ಸಂಬಂಧ ಹಲಸಿನಂಟಿನಷ್ಟು ಜಿಗುಟಾಗಿರುತ್ತದೆ. ಹಾಗೆ ಅಂಟಿಕೊಂಡು ಸುಖವಾಗಿದ್ದೇವಾ ಅಂದ್ರೆ ಪರಸ್ಪರರನ್ನು ಕಂಡರೆ ಸಾಕು ಸಿಡಿಯುತ್ತಿರುತ್ತೇವೆ. ಅದರ ಜೊತೆಗೆ ಕಾಮದ ನಂಟೂ ಸೇರಿಕೊಂಡು ಪರಸ್ಪರರ ಸ್ವತ್ತಾಗಿ ಬಿಡುತ್ತೇವೆ. ಪುರುಷನಾಗಿರುವ ಕಾರಣಕ್ಕೆ ಪಡೆದುಕೊಳ್ಳುವ ಗೌರವ, ಅಂತಸ್ತು, ಸವಲತ್ತುಗಳಿಂದಾಗಿ ಗಂಡಸಿನ ಬದುಕು ಹೆಣ್ಣಿನ ಬದುಕಿನಂತೆ ಸಂಕಟ, ಯಾತನಾಮಯವಾಗುವುದಿಲ್ಲ. ಹೆಣ್ಣಿನ ಇಡೀ ಅಸ್ತಿತ್ವವನ್ನೇ, ಬದುಕನ್ನೆ ಕಟ್ಟಿಹಾಕುವಷ್ಟು ವಿವಾಹ ಸಂಸ್ಥೆ ಪ್ರಬಲವಾಗಿದೆ. ಸಾರ್ವಜನಿಕ ಜೀವನದಲ್ಲಿ ತೊಡಗಿಕೊಂಡಿರುವ, ಧೈರ್ಯವಂತ, ಸ್ವಾಭಿಮಾನಿ ಮಹಿಳೆಯರೂ ಸಹ ವೈವಾಹಿಕ ಸಂಬಂಧದಲ್ಲಿ ತೊಡಕಿದ್ದರೆ ತತ್ತರಿಸುವಂತಾಗುತ್ತದೆ. ಪರಸ್ಪರರ ನಡುವೆ ವ್ಯಕ್ತಿಗಳಾಗಿ ಸ್ನೇಹ, ಗೌರವಗಳಿದ್ದರೆ ಇಂತಹ ಜಟಿಲವಾದ ಸಂಬಂಧವನ್ನು ಅರ್ಥಪೂರ್ಣಮಾಡಿಕೊಳ್ಳಬಹುದು ಇಲ್ಲವಾದರೆ ಘನತೆಯಿಂದ ದೂರವಾಗಿಯೂ ಪರಸ್ಪರರ ಬಗ್ಗೆ ಗೌರವನ್ನಿಟ್ಟುಕೊಳ್ಳಬಹುದು. ಇದಷ್ಟು ಸುಲಭವಲ್ಲ. ಉದಾರ ಮನಸ್ಸು, ಹೃದಯವಂತಿಕೆಯ ಜೊತೆಗೆ ಪ್ರಜ್ಞಾಪೂರ್ವಕ ಪ್ರಯತ್ನಹಾಕಬೇಕು. ಇನ್ನೊಬ್ಬರ ಹಿತವನ್ನು ತನ್ನದೆಂದು ಭಾವಿಸುವ ತಾಯ್ತನದ ಗುಣವಿರಬೇಕು. ಈ ಗುಣ ಹೆಣ್ಣೆಂಬ ಕಾರಣಕ್ಕೆ ಮೂಡುವ ಮೊಲೆ, ಯೋನಿ, ಗರ್ಭದಂತಲ್ಲ. ನಿರಂತರವಾಗಿ ಬೆಳೆಸಿಕೊಂಡು ಬೇರಿಳಿಸುವಂತದ್ದು.

ಒಟ್ಟಿಗಿರಲು ಸಾಧ್ಯವಾಗದಾಗ ಬೇರೆಯಾಗಿಯೂ ಗಂಡನೊಂದಿಗೆ ಮಾನವೀಯ ಸಂಬಂಧವನ್ನು ಉಳಿಸಿಕೊಂಡ; ಹೆಣ್ಣನ್ನು ಹೆಣ್ಣು ಶತ್ರುವಾಗಲು ಪ್ರೇರೇಪಿಸುವ ಪುರುಷಾಧಿಪತ್ಯದ ಸಂಕುಚಿತ ಮೌಲ್ಯವನ್ನು ಮೀರಿ ತನ್ನ ಮಾಜಿ ಪತಿಯ ಹಾಲಿ ಹೆಂಡತಿಯಲ್ಲಿ ಗೆಳತಿಯನ್ನು ಗುರುತಿಸಿದ ಗೌರಿಯ ತಾಯ್ತನಕ್ಕೆ ಸಲಾಂ. ತಂಗಿ, ತಮ್ಮನ ಮಕ್ಕಳನ್ನು, ಮಾಜಿ ಗಂಡನ ಮಕ್ಕಳನ್ನು ಪ್ರೀತಿಸಿ ಮುದ್ದಾಡುತ್ತಿದ್ದ ಬಸಿರು, ಬಾಣಂತನಗಳ ಮೀರಿದ ಗೌರಿ ಎಂಬ ತಾಯಿಗೆ ಸಲಾಂ. ಗೌರಿ ಸತ್ತರೆ ಪಟಾಕಿ ಹೊಡೆದು, ಸಿಹಿ ತಿಂದು ಸಂಭ್ರಮಿಸುತ್ತೇನೆಂದ ಹುಡುಗನಿಗೆ 'ತಾಯಿಯಾದವಳು ಮಕ್ಕಳ ಆಸೆ ನೆರವೇರಿಸಬೇಕು, ನಿನ್ನ ಅಕೌಂಟ್ ನಂಬರ್ ಕೊಡು ಪಟಾಕಿಗೆ, ಸಿಹಿಗೆ ದುಡ್ಡುಹಾಕುತ್ತೇನೆ' ಎಂದ ಗೌರಿತಾಯಿಗೆ ಸಲಾಂ. ಕ್ರಾಂತಿ/ಆಕ್ಟಿವಿಸಂ ಎಂದರೆ ಬರಡು ವೈಚಾರಿಕತೆ, ಸಂಭ್ರಮ, ಸಂತಸಗಳಿಲ್ಲದ ಕರ್ಮಠತೆ ಎಂಬ ಬೇರಿಗೆ ಬೆಚ್ಚನೆಯ ಆರ್ದ್ರತೆ ಹರಿಸಿ ಜೀವ ತುಂಬಿದವಳಿಗೆ ಶರಣು; ದ್ವೇಷದ ರಾಜಕಾರಣದ ವಿರುದ್ಧ ಪ್ರೀತಿಯ ರಾಜಕಾರಣದ ಗುರಾಣಿ ಹಿಡಿದ, ಭಿನ್ನಾಭಿಪ್ರಾಯಗಳನ್ನು ಗೌರವಿಸಿಕೊಂಡೆ ಒಂದಾಗಿ ನಡೆಯೋಣವೆಂದು ಪರದಾಡಿದ ಕರಡಿಯಂತ ತಾಯಿಗೆ ಸಲಾಂ; ನಮ್ಮ ಕಿರಿಯ ಗೆಳೆಯರು ಸರಳವಿವಾಹ ಮಾಡಿಕೊಂಡಾಗ ಸರಳವೆಂದರೆ ಸಂಭ್ರಮವಿರಬಾರದೆಂದಲ್ಲ ಎಂದು ಗದರಿ ಹೊಸಬಟ್ಟೆಯನ್ನು

ಮದುಮಕ್ಕಳಿಗೆ ತಂದು ಸಂಭ್ರಮಿಸುತ್ತಿದ್ದ ತಾಯಿಗೆ ವಂದನೆ; ಖಾಸಗಿ ಬದುಕು ಮತ್ತು ಸಾರ್ವಜನಿಕ ಬದುಕು ಎರಡರಲ್ಲೂ ಅಂದಂತೆ ನಡೆದು ಪಾರದರ್ಶಕವಾಗಿದ್ದ ತಾಯಿಗೆ ಸಲಾಂ. ಗೌರಿ ನೆನಪಿನ ಕಾರ್ಯಕ್ರಮದಲ್ಲಿ ಅವರೊಟ್ಟಿಗೆ ಕೆಲಸ ಮಾಡುತ್ತಿದ್ದವರು 'ಗೌರಿ ನನ್ನೊಳಗಿನ ಹೆಣ್ಣನ್ನು ಗುರುತಿಸಿಕೊಳ್ಳಲು ಸಹಾಯ ಮಾಡಿದರು' ಎಂದು ಹೇಳಿದರು. ಮಾತನಾಡಿದವ ಗಂಡಸು. ಇಂಥ ಗುಣಗಳಿಂದ ತಾಯ್ತನಕ್ಕೆ ಹೊಸ ವ್ಯಾಖ್ಯೆಯನ್ನು ಅಚ್ಚೊತ್ತಿದ ಗೌರಿ ನನಗೆ ಮಾದರಿ. ಉಳಿದ ಓರೆಕೋರೆಗಳನ್ನು ಹೇನು ಕೂರೆಗಳಂತೆ ಕುಕ್ಕಬಹುದು.

ತಾಯಿ ಎಂದರೆ
ಗಂಡನ ಹೆಂಡತಿಯಲ್ಲ
ಪ್ರಿಯನ ಪ್ರೇಯಸಿ ಅಲ್ಲ
ಬಸಿರಿನ ತಾಯಲ್ಲ
ಉಸಿರೆಂಬ ಪ್ರೀತಿ
ತಬ್ಬಲಿಗಳ ಜೋಗುಳ

## ''ನಾನು, ನಿಮ್ಮಪ್ಪ''

**- ಬಿ.ಚಂದ್ರೇಗೌಡ**

ಕರ್ನಾಟಕದ ಸಾಂಸ್ಕೃತಿಕ ಲೋಕದ ಈವರೆಗಿನ ಇತಿಹಾಸದಲ್ಲಿ ಗೌರಿಯಂತಹ ಪತ್ರಕರ್ತೆ ಇಲ್ಲಿಯವರೆಗೂ ಬಂದಿಲ್ಲ. ಮುಂದೆ ಕೂಡಾ ಬರುವುದಿಲ್ಲ.

ಲಂಕೇಶರ ಹಠಾತ್ ನಿರ್ಗಮನದಿಂದ ತೆರವಾದ ಪತ್ರಿಕೆಯ ಸಂಪಾದಕತ್ವದ ಜವಾಬ್ದಾರಿಯನ್ನ ಗೌರಿ ವಹಿಸಿಕೊಂಡಾಗ ನಮ್ಮೆಲ್ಲರಿಗೂ ಅನುಮಾನಗಳಿದ್ದುದು ಸಹಜ. ಆದರೆ ಕೆಲವೇ ದಿನಗಳಲ್ಲಿ ಪತ್ರಿಕೆಯ ಜವಾಬ್ದಾರಿ ನಿರ್ವಹಿಸುವ ಶಕ್ತಿ ಇರುವುದನ್ನ ಗೌರಿ ತೋರಿಸಿ ಕೊಟ್ಟರು. ಲಂಕೇಶರಂತೆ ಮತೀಯವಾದಿಗಳನ್ನ ವಿರೋಧಿಸುತ್ತಾ ಆಕೆ ಅದರ ಅತಿಗೆ ಹೋದದ್ದು ಇದೆ. ಆದರೆ ಲಂಕೇಶರಿಗಿದ್ದ ಸಮಯೋಚಿತ ಪುಕ್ಕಲುತನ ಅವಳಲ್ಲಿ ಇರಲೇ ಇಲ್ಲ. ಈ ಜಗತ್ತಿನಲ್ಲಿ ಅವಳನ್ನ ಹೆದರಿಸುವ ಸಂಗತಿಗಳೇ ಇರಲಿಲ್ಲ. ಅಷ್ಟರ ಮಟ್ಟಿಗೆ ಸಾವಿನ ಭೀತಿ ತೊರೆದಿದ್ದಳು. ಆ ಕಾರಣಕ್ಕೆ ತನ್ನ ಮನೆಯನ್ನು ರಾತ್ರಿ ಒಂದು ಗಂಟೆಯಾದರೂ ಒಬ್ಬಳೇ ತಲುಪುತ್ತಿದ್ದಳು.

ಇಂತಹ ಸಮಯ ಕಾದಿದ್ದ ಕೊಲೆಗಡುಕರು ನಿರಾಯುಧಳಾಗಿದ್ದ ಹೆಣ್ಣುಮಗಳ ಮೇಲೆ ಗುಂಡು ಹಾರಿಸಿ ಹತ್ಯೆಗೈದು ಆಕೆಯ ದೇಹ ವೀರಯೋಧನ ದೇಹದಂತೆ ತನ್ನ ಮನೆ ಬಾಗಿಲಲ್ಲಿ ಬಿದ್ದಿದ್ದು ನಮಗೆ ಸಹಿಸಲಾರದ ಘಟನೆಯಾಗಿ ಕಾಡುತ್ತಿದೆ. ಇಡೀ ಜಗತ್ತು ಈ ಹತ್ಯೆಯಿಂದ ದಿಗ್ಭ್ರಮೆಗೊಂಡಿದೆ. ಅಂತಹ ಸಮಯದಲ್ಲಿ ನಮ್ಮ ನಡುವಿನ ಜೀವ ವಿರೋಧಿಗಳು ಪಟಾಕಿ ಹೊಡೆದು ಸಂಭ್ರಮಿಸಿವೆ. ಇದರ ವಿರುದ್ಧ ನಾವು ಸೇಡು ತೀರಿಸಿಕೊಳ್ಳದಷ್ಟು ಹೇಡಿಗಳಲ್ಲ. ಆದರೆ ನಮಗೆ ಹಿಂಸೆಯಲ್ಲಿ ನಂಬಿಕೆ ಇಲ್ಲ. ಎಂದೂ ಸತ್ತೇ ಸಾಯುವ ನಿಮ್ಮಂತಹ ಕ್ಷುದ್ರ ಜೀವಿಗಳನ್ನು ಸಾಯಿಸುವುದರ ಬದಲು ನಿಮ್ಮ ಮನ ಪರಿವರ್ತಿಸುತ್ತೇವೆ. ಗೌರಿ ಆಶಯ ಕೂಡಾ ಇದೇ ಆಗಿತ್ತು. ಆಕೆಗೆ ವಲ್ಗರಾಗಿ ಬರುವ ಮೆಸೇಜಿಗೆ, ತಿಳುವಳಿಕೆ ಹೇಳುವ ಮೆಸೇಜ್ ಕೊಟ್ಟುತ್ತಿದ್ದಳು. ''ನಿನ್ನ ಕೊನೆಯ ಗಂಡ ಯಾರು,'' ಎಂದು ಕೇಳಿದ ಭಾರತ ಮಾತೆಯ ಪುತ್ರನೊಬ್ಬನಿಗೆ, ''ಆತ ನನ್ನ ಬಿಟ್ಟು ಹೋದ ಮೇಲೆ, ನಿನ್ನ ತಾಯಿ ಜೊತೆ ಒಂದು ವರ್ಷ ಇದ್ದ, ಆಗಲೇ ನೀನು ಹುಟ್ಟಿದೆ. ನೀನು ಕೂಡಾ ನನ್ನ ಮಗನ ಸಮಾನ'' ಎಂದು ಉತ್ತರಿಸಿ ಅದನ್ನು ತೋರಿಸಿ ನಕ್ಕಿದ್ದಳು.

ಆಕೆಯ ಪುಟ್ಟ ಹೃದಯ ಜಗತ್ತಿನಗಲ ವಿಶಾಲವಾಗಿತ್ತು. ಲಂಕೇಶರ ಅವ್ವ ಎಂಬ ಕವನ ತುಂಬ ಪ್ರಖ್ಯಾತಿ ಪಡೆದ ಗ್ರಾಮೀಣ ಭಾಗದ ಅವ್ವಂದಿರ ಬದುಕನ್ನು ಅನಾವರಣಗೊಳಿಸುವ ಕವನ. ಆದರೆ ಗೌರಿ ಪಟ್ಟಣದ ತಾಯಿ. ಆಕೆ ಎಂದೂ ಬಳೆ, ಕುಂಕುಮ, ಒಳ್ಳೆ ಸೀರೆ, ಒಡವೆ ಧರಿಸದೆ ಹದಿನೆಂಟು ವರುಷ ತನ್ನ ಪತ್ರಿಕೆಗಾಗಿ ಜೀವ ತೇಯ್ದಳು. ಆ ಕಾರಣಕ್ಕೆ ಒಂದು ಸಂಚಿಕೆಯನ್ನೂ ತಡವಾಗಿ ತರಲಿಲ್ಲ. ಲಂಕೇಶರ ಅಷ್ಟೂ ಬರವಣಿಗೆಯನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದಳು. ಇಷ್ಟಲ್ಲದೆ ಕರ್ನಾಟಕದ ಎಲ್ಲಾ ಜನಪರ ಚಳುವಳಿಗಳಲ್ಲೂ ಭಾಗವಹಿಸಿದಳು. ಬಾಬಾಬುಡನ್ ಗಿರಿಯ ಪರ ಚಳುವಳಿಯಲ್ಲಿ,

ಚಿಕ್ಕಮಗಳೂರು ಜೈಲನ್ನು ಉದ್ಘಾಟಿಸಿದ್ದು ಗೌರಿಯೇ. ಚಳುವಳಿಗಳಲ್ಲಿ ಆಕೆ ಮೈಮರೆತು ಭಾಗವಹಿಸಿದ್ದಳು. ಈಚೆಗೆ ಹುಟ್ಟಿದ ವೀರಶೈವ ಲಿಂಗಾಯತ ಚಳುವಳಿಯಲ್ಲಿ ಆಕೆ ಮುಂಚೂಣಿ ನಾಯಕಿ ಆಗಿದ್ದಳು. ಅದಕ್ಕೇ ಕಲಬುರ್ಗಿ ಹತ್ಯೆಯಂತೆ ಆಕೆಯದು ನಡೆದುಹೋಯಿತು. ಆಕೆಯ ಹತ್ಯೆಯ ಪ್ರತಿಭಟನೆಗೆ ಅಂದು ಬೆಂಗಳೂರಲ್ಲಿ ಸೇರಿದ್ದ ಜನಸ್ತೋಮ ನೋಡಿದಾಗ ನಮ್ಮ ಜೊತೆಯಿದ್ದ ಗೌರಿ ಇಷ್ಟೊಂದು ದೊಡ್ಡ ನಾಯಕಿಯೇ ಎಂದು ಅಚ್ಚರಿಯಾಯಿತು.

ಆ ಸಭೆಯನ್ನು ನೋಡಿ ಸಹಿಸಲಾರದ ಬಿ.ಜೆ.ಪಿಗಳು ಇದು ಕಾಂಗ್ರೆಸ್ ಪಾರ್ಟಿಯ ಸ್ಪಾನ್ಸರ್ ಸಮಾರಂಭ ಎಂದರು. ಬಿ.ಜೆ.ಪಿ.ಯ ಸುರೇಶ್ ಕುಮಾರ್ ಎಂಬ ರಾಜಕಾರಣಿ, ಕನಿಷ್ಟ ಜ್ಞಾನವೂ ಇಲ್ಲದೆ ಇಂತಹ ಆರೋಪ ಮಾಡಿದರು. ಇದನ್ನೇ ನಾವು ಆತನಿಗೆ ತಿರುಗಿ ಕೇಳುವುದಾದರೆ, ಹಾಗಾದರೆ ಗೌರಿ ಹತ್ಯೆಗೆ ನೀವು ಸ್ಪಾನ್ಸರ್ ಮಾಡಿದ್ದೀರಿ. ಆಕೆ ತೀರಿಕೊಂಡಾಗ ಪಟಾಕಿ ಹೊಡೆದವರಿಗೆ ನೀವೇ ಸ್ಪಾನ್ಸರ್ ಮಾಡಿದ್ದೀರಿ ಎನ್ನಬೇಕಾಗುತ್ತದೆ. ಒಬ್ಬ ಹೆಣ್ಣುಮಗಳ ದಾರುಣ ಹತ್ಯೆಗೂ ಕರಗದ ಈ ಬಿ.ಜೆ.ಪಿಗಳ ಮನಸ್ಸು ಇನ್ನೆಂತಹ ಮೃಗೀಯ ಸ್ವರೂಪದ್ದು ಎಂದು ಅರ್ಥವಾಗುತ್ತದೆ.

ಆಕೆ ಕ್ರಮೇಣ ಎಲ್ಲರಿಗೂ ತಾಯಿಯಾಗ ತೊಡಗಿದಳು. ದೊಡ್ಡ ದೊಡ್ಡ ರಾಜಕಾರಣಿಗಳನ್ನ ಮಕ್ಕಳಂತೆ ಮಾತಾಡಿಸುತ್ತಿದ್ದಳು. ಅವಳೊಮ್ಮೆ ಫೋನ್ ಮಾಡಿದಾಗ ''ಹಲೋ, ಯಾರು'' ಎಂದೆ. ''ನಿಮ್ಮಪ್ಪ'' ಎಂದಳು. ನನ್ನನ್ನು ಈ ಚಿಕ್ಕ ವಯಸ್ಸಿನ ತಾಯಿ ಮಗನಂತೆ ಪೊರೆದಳು, ಅಡುಗೆ ಮಾಡಿ ಹಾಕಿದಳು. ನಾನು ಬೆಂಗಳೂರಿಗೆ ಹೋದಾಗ ಲಾಡ್ಜಿನಲ್ಲಿ ಉಳಿದುಕೊಳ್ಳುತ್ತಿದ್ದೆ. ನನ್ನನ್ನ ತನ್ನ ಮನೆಗೆ ಕರೆದು ಮೇಲ್ಗಡೆ ರೂಮಿನಲ್ಲಿ ಇದ್ದು ಹೋಗುವಂತೆ ಮಾಡಿದಳು. ನಾನು ಮಲಗುವ ರೂಮಿಗೆ ಹೋದ ಕೂಡಲೆ ಬಂದು ಚಿಕ್‌ಪೇಟೆ ಬದಲಿಗೆ ಬೇರೆ ರಗ್ಗು ಹೊದೆಸಿ ಮಗನನ್ನು ಮಲಗಿಸಿ ಹೋದಂತೆ ಬಾಯ್ ಹೇಳಿ ಹೋಗುತ್ತಿದ್ದ ಆ ತಾಯಿಯ ದನಿ ನನ್ನ ಮನಸಿನಲ್ಲಿ ನಿಂತು ಬಿಟ್ಟಿದೆ. ಗೌರಿ ನನಗೆಂದೂ ಸಂಪಾದಕಿಯಾಗಿರಲಿಲ್ಲ, ನಾನು ಎಂತಹ ಮಾತನಾಡಲು ಆಕೆಯ ಎದುರು ಅಂಜಲಿಲ್ಲ, ಆಕೆಯನ್ನು ಆಕೆಯ ಎದುರೇ ಆಡಿಕೊಂಡರೂ ಬೇಸರಗೊಳ್ಳಲಿಲ್ಲ, ನಾನು ಕಂಡ ಕೂಡಲೇ ನಕ್ಕು ಹಗುರವಾಗಲು ತಯಾರಾಗುತ್ತಿದ್ದಳು. ನನ್ನೆಲ್ಲಾ ಪರಿಚಿತರನ್ನು ಆಕೆಯ ಮನೆಗೆ ಕರೆದುಕೊಂಡು ಹೋಗಿದ್ದೇನೆ. ಹಾಗೆಯೇ ನನ್ನೆಲ್ಲಾ ಸಂಬಂಧಿಗಳ ಮನೆಗೂ ಕರೆದೊಯ್ದಿದ್ದೇನೆ. ಕರೆದ ಕೂಡಲೇ ಅಲ್ಲಿನ ಊಟ, ವಸತಿ, ವಿಷಯ, ವಿಚಾರಿಸದೆ ಬಂದು ಬಿಡುತ್ತಿದ್ದಳು. ನನ್ನೂರಾದ ಬನದ ಕೆರೆ, ನನ್ನ ಹೆಂಡತಿಯ ಊರಾದ ಜೋಳ ಸಂದ್ರ, ಶಿವಮೊಗ್ಗ, ಜೋಗ್ ಫಾಲ್ಸ್ ಇಲ್ಲಿಗೆಲ್ಲಾ ಹತ್ತಾರು ಬಾರಿ ಬಂದು ನನ್ನ ಬಳಗದ ಯಜಮಾನಿಯಾಗಿದ್ದಳು. ಆದ್ದರಿಂದ ಆಕೆಯ ಸಾವು ನಮ್ಮ ಕುಟುಂಬದ ಯಜಮಾನತಿಯ ಸಾವು ಕೂಡಾ ಆಗಿಹೋಗಿದೆ.

ಗಾಂಧಿ ಕೊಂದವರ ಕೈಗೆ ಈ ದೇಶ ಸಿಕ್ಕಿದಾಗಲೇ ನಾವು ಎಚ್ಚರದಿಂದ ಇರಬೇಕಾಗಿತ್ತು. ಆ ಅಜಾಗರೂಕತೆಗೇ ಈ ಬಲಿ. ಆದರೆ ಗೌರಿ ನಮ್ಮನ್ನು ನಿರಂತರ ಹೋರಾಟಕ್ಕೆ ಹಚ್ಚಿ ಹೋಗಿದ್ದಾಳೆ. ಆಕೆ ಹೇಗೆ ತನ್ನ ಬದುಕಿನುದ್ದಕ್ಕೂ ಚೈತನ್ಯಶೀಲಳಾಗಿ ತನ್ನ ವೈರಿಗಳನ್ನು ಗುರುತಿಸಿ ಹೋರಾಡಿದ್ದಾಳೋ ನಾವೆಲ್ಲಾ ಹಾಗೇ ಹೋರಾಡಬೇಕಾಗಿದೆ. ನಮ್ಮ ಎದುರಿಗಿರುವ ಶಕ್ತಿಯ ವಿಶೇಷವೆಂದರೆ ಅದೆಂದೂ ರಿಪೇರಿ ಆಗುವಂತಹುದಲ್ಲ, ಬದಲಿಗೆ, ಅದಕ್ಕಿಂತಲೂ ಬಲಿಷ್ಟವಾದ ಶಕ್ತಿಗಷ್ಟೇ ಅದು ಬಗ್ಗುವಂತಹುದು. ಆದ್ದರಿಂದ ಗೌರಿಯ ಚೇತನ ನಮ್ಮನ್ನ ನಿರಂತರ ಹೋರಾಟಕ್ಕೆ ಹಚ್ಚುವಂತಾಗಲಿ. ಆಕೆಯನ್ನ ಬಲಿ ಪಡೆದ ಕರಾಳ ಮುಖಗಳನ್ನು ಅನಾವರಣ ಮಾಡೋಣ. ನಮ್ಮ ಮಹಿಳೆಯರಲ್ಲಿ ಇರಬಹುದಾದ ಅದಮ್ಯ

ಶಕ್ತಿಯನ್ನು ಅನಾವರಣಗೊಳಿಸಿ, ವಿಜೃಂಭಿಸಿ, ಹೋಗಿರುವ ಗೌರಿ, ಎಲ್ಲೂ ಹೋಗಿಲ್ಲ. ನೆನಪಿಸಿಕೊಂಡ ಕೂಡಲೇ ಬಂದು, ''ಏನು ಮರೀ ಹೆಂಗಿದೀಯಾ, ಎನ್ನುತ್ತಾಳೆ. ಅದೊಂದು ವೀರೋಚಿತ ಬದುಕು ಮತ್ತು ಸಾವು.

# ಗೌರಿ ಲಂಕೇಶ್ ವ್ಯಕ್ತಿತ್ವದ ಭಿನ್ನ ಆಯಾಮಗಳು

**- ಹುಲಿಕುಂಟೆ ಮೂರ್ತಿ**

ಗೌರಿ ಲಂಕೇಶ್ ಅವರು ನನಗೆ ಪರಿಚಯ ಆದ ಎರಡು ವರ್ಷಗಳ ನಂತರ ಅವರೊಂದಿಗೆ ನನ್ನ ಒಡನಾಟ ಶುರುವಾಯಿತು. ಅಂದರೆ, 2006ರಿಂದ ನಾನು ಅವರಿಗೂ ಪರಿಚಯವಾದೆ; ಹತ್ತಿರವಾದೆ. ಅವರ ಪತ್ರಿಕೆಯಲ್ಲಿ ನಾನು ಕೆಲಸ ಮಾಡುತ್ತಿದ್ದ ಹನ್ನೊಂದು ತಿಂಗಳುಗಳಲ್ಲಿ ಅವರ ವ್ಯಕ್ತಿತ್ವವನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಲಿಲ್ಲ. ಅಥವಾ ಆ ಅಗತ್ಯ ಬರಲಿಲ್ಲ ಅಥವಾ ಸಮಯ ಇರಲಿಲ್ಲ. ಆದರೆ, ಆ ನಂತರ ನಾನು ಅವರಲ್ಲಿ ಕೆಲಸ ಬಿಟ್ಟಾಗಿನಿಂದ ಅವರು ನನ್ನೊಂದಿಗೆ ಮಾಡುತ್ತಿದ್ದ ಚರ್ಚೆಗಳು, ಬರೆಯಲು ಕೊಡುತ್ತಿದ್ದ ವಿಷಯಗಳು ಮತ್ತು ನಾಡಿನ ಭಿನ್ನ ಆಲೋಚನಾ ಕ್ರಮಗಳನ್ನು ಅವರು ಗ್ರಹಿಸುತ್ತಿದ್ದ ರೀತಿಯಿಂದಾಗಿ ಅವರ ವ್ಯಕ್ತಿತ್ವದ ಭಿನ್ನ ಆಯಾಮಗಳನ್ನು ಗ್ರಹಿಸಲು ಸಾಧ್ಯವಾಯಿತು.

**ಪತ್ರಕರ್ತೆಯಾಗಿ ಗೌರಿ ಲಂಕೇಶ್ :**

ಗೌರಿ ಮೇಡಂ ಲಂಕೇಶ್ ವಾರ ಪತ್ರಿಕೆ ಜವಾಬ್ದಾರಿ ವಹಿಸಿಕೊಳ್ಳುವ ಮೊದಲು ಕೆಲಸ ಮಾಡುತ್ತಿದ್ದ ಇಂಗ್ಲಿಷ್ ಪತ್ರಿಕೆಗಳನ್ನು ನಾನು ಗಮನಿಸಿಲ್ಲ; ನಾಡಿನ ದೊಡ್ಡ ಪತ್ರಿಕೆಯೊಂದರ ಸಂಪಾದಕರ ಮಗಳಾದ ಗೌರಿ ಅನುಭವಿಸಿರಬಹುದಾದ ಬದುಕಿನ ಐಶಾರಾಮದ ಬಗ್ಗೆ ಹತ್ತಿರದವರಿಂದ ಕೇಳಿದ್ದೆ. ಅವರು ಮದುವೆಯಾಗಿದ್ದ ಚಿದಾನಂದ್ ನಮ್ಮ ತಾಲೂಕಿನವರು ಎಂಬುದನ್ನು ಗೌರಿ ಮೇಡಮ್ಮೇ ಹೇಳಿದ್ದರು. ವಾರಕ್ಕೊಂದು ಸಾರಿಯಾದರೂ ಅವರ ಮತ್ತು ಚಿದಾನಂದ್ ನಡುವಿನ ಸ್ನೇಹದ ಬಗ್ಗೆ ಮಾತಾಡುತ್ತಿದ್ದರು. 'ಚಿದು ಕೊಡಿಸಿದ ಡ್ರೆಸ್ಸು, ಚಿದು ಕೊಡಿಸಿದ ಲ್ಯಾಪ್‌ಟಾಪು..' ಹೀಗೆ. ವಿಚ್ಛೇದನದ ನಂತರ ದಂಪತಿಗಳು ಇಷ್ಟು ಅನ್ಯೋನ್ಯ ಸ್ನೇಹವಿಟ್ಟುಕೊಂಡಿದ್ದನ್ನು ನಾನು ಆವರೆಗೆ ಕಂಡಿರಲಿಲ್ಲ. ಸಂಪಾದಕಿಯಾದ ಮೇಲೆ ಅವರ ಬದುಕು ಪೂರ್ತಿ ಬದಲಾಯಿತು ಅನ್ನುವುದನ್ನು ಹತ್ತಿರದಿಂದ ಬಲ್ಲವರು ಅನುಮೋದಿಸುತ್ತಾರೆ. ಈ ಬದಲಾವಣೆಗೆ ಲಂಕೇಶ್ ಪತ್ರಿಕೆಯ ವಾರಸುದಾರಿಕೆ ಎಷ್ಟು ಮುಖ್ಯವೋ, ಚಿದಾನಂದ್ ಅವರ ಪತ್ರಿಕಾ ಲೋಕದ ಗ್ರಹಿಕೆ ಕೂಡ ಅಷ್ಟೇ ಮುಖ್ಯ. ಗೌರಿ ಮೇಡಂ ಹೆಚ್ಚಿನ ಸಮಯ ಈ ಕುರಿತು ಅವರೊಂದಿಗೆ ಚರ್ಚಿಸುತ್ತಿದ್ದರು. ಆ ಮೊದಲಿನ ಅವರ ಜರ್ನಲಿಸಂ ಬಗೆಗಿನ ಗ್ರಹಿಕೆ ಸಂಪಾದಕಿಯಾದ ಮೇಲೆ ಸಂಪೂರ್ಣ ಬದಲಾಯಿತು.

ಪ್ರಭುತ್ವ ಕುರಿತ ನಿಷ್ಠುರ ವರದಿಗಾರಿಕೆಗೆ ಅವರು ರೇಷ್ಮೆ ಮತ್ತು ಸೋಮನಾಥ್ ಅವರನ್ನು ಆಶ್ರಯಿಸಿದ್ದರು. ರವೀಂದ್ರ ರೇಷ್ಮೆಯವರಿಗೆ ಅಪಘಾತವಾಗಿ ಆಸ್ಪತ್ರೆ ಸೇರಿದ ಮೇಲೆ ಅವರು ಪತ್ರಿಕೆ ಕಡೆ ಸುಳಿಯಲಿಲ್ಲ ಮತ್ತು ಗೌರಿ ಮೇಡಂ ನಿಲುವುಗಳ ಮೇಲೆ ಅವರಿಗಿದ್ದ ಗುಮಾನಿಗಳು ದೂರ ಹೋಗುವಂತೆ ಮಾಡಿದವು. ರೇಷ್ಮೆ ಶ್ರೀರಾಮುಲು ಪಕ್ಕದಲ್ಲಿ ಓಡಾಟ ಶುರುಮಾಡುವ ಹೊತ್ತಿಗೆ ಗೌರಿ ಅವರು ಕರ್ನಾಟಕ ರಾಜಕಾರಣದ ಆಳ ಅಗಲಗಳನ್ನು ಚೆನ್ನಾಗಿಯೇ ಗ್ರಹಿಸಿದ್ದರು. ಈ ಕಾರಣಕ್ಕೆ ಮತ್ತೆ ರೇಷ್ಮೆಯವರನ್ನು ಹತ್ತಿರಕ್ಕೆ ಸೇರಿಸಲಿಲ್ಲ. ಪ್ರತಿ ಭಾನುವಾರ ಪ್ರಿಂಟಿಗೆ ಹೋಗುತ್ತಿದ್ದ ಪತ್ರಿಕೆಯನ್ನು ಇಡೀ

ವಾರ ಕುಳಿತು ಎಡಿಟ್ ಮಾಡುತ್ತಿದ್ದರು. ಜಿಲ್ಲಾ ವರದಿಗಾರರ ವರದಿಗಳನ್ನು ಸಂಪೂರ್ಣ ಅಕ್ಷರಕ್ಷರ ಓದಿ ತಿದ್ದುತ್ತಿದ್ದರು. ಕೆಲವೊಮ್ಮೆ ಇಡೀ ವರದಿಯನ್ನು ತಿರಸ್ಕರಿಸುತ್ತಿದ್ದರು. ಪಕ್ಕದಲ್ಲಿ ಇಂಗ್ಲಿಷ್ ಮತ್ತು ಕನ್ನಡ ನಿಘಂಟುಗಳನ್ನು ಇಟ್ಟುಕೊಂಡು ಭಾಷೆಯ ಆಯಾಮಗಳನ್ನು ಗ್ರಹಿಸಲು ಶ್ರಮಿಸುತ್ತಿದ್ದರು. ಇಡೀ ಪತ್ರಿಕೆಯಲ್ಲಿ ಒಂದೇ ಒಂದು ಪದ ಅವರಿಗೆ ಅರ್ಥವಾಗದಿದ್ದರೆ ಅರ್ಥ ಮಾಡಿಕೊಳ್ಳುವವರೆಗೆ ಅಥವಾ ಬದಲಿಸುವವರೆಗೆ ಬಿಡುತ್ತಿರಲಿಲ್ಲ. ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ ಸರ್ಕಾರ ಬಂದಾಗ 'ಕೋಜಾ' (ಕೋಮುವಾದಿ ಜಾತ್ಯತೀತ) ಸರ್ಕಾರ ಎಂದು ಬರೆದರು. (ಅವರಿಗೆ ಈ ಪದ ಕೊಟಿದ್ದು ನಾನೇ, ಗೆಳೆಯ ಮಂಜು ತಮಾಷೆಗೆ ಈ ಪದವನ್ನು ಲಾಂಚ್ ಮಾಡಿದರು. ನಾನು ಗೌರಿ ಮೇಡಂ ಗಮನಕ್ಕೆ ತಂದೆ. ಅವರು ಬಳಸಿದರು. ಆ ಪದ ಬಳಸಿದ್ದರ ಬಗ್ಗೆ ನನಗೀಗಲೂ ಗಿಲ್ಟ್ ಇದೆ) ಕುಮಾರಸ್ವಾಮಿ ದಲಿತರ ಮನೆಗಳಲ್ಲಿ ವಾಸ್ತವ್ಯ ಹೂಡಿದಾಗ ನನ್ನಿಂದಲೇ ನಾಡಿನ ಹಿರಿಯರ ಅಭಿಪ್ರಾಯ ಸಂಗ್ರಹಿಸಿ ಪ್ರಕಟಿಸಿದರು. ಜಾತಿ ಕಾರಣಕ್ಕೆ ಯಡಿಯೂರಪ್ಪನವರ ಪಟಾಲಂ ಇವರನ್ನು ಬಳಸಿಕೊಳ್ಳುವ ಪ್ಲಾನ್ ಹಾಕಿದಾಗ ಕೇರ್ ಮಾಡದೆ ಜಾಡಿಸಿದರು. ನಿರ್ಭೀತ ಪತ್ರಿಕೋದ್ಯಮದ ಮಾದರಿಯೊಂದನ್ನು ಕನ್ನಡಕ್ಕೆ ನೀಡಿದ ಲಂಕೇಶರ ವಾರಸುದಾರಿಕೆಯನ್ನು ಗೌರಿ ಮೇಡಂ ಸಮರ್ಥವಾಗಿ ನಿಭಾಯಿಸಿದರು ಹಾಗು ಲಂಕೇಶರಂತೆಯೇ ತಿಂಗಳ ಕೊನೆಯ ದಿನ ಪತ್ರಿಕಾ ಸಿಬ್ಬಂದಿಗೆ ತಪ್ಪದೆ ಸಂಬಳ ನೀಡುತ್ತಿದ್ದರು.

ತಮ್ಮ ಪ್ರಕಾಶನದಿಂದ 'ಗೈಡ್' ಎಂಬ ಸ್ಪರ್ಧಾ ಮಾರ್ಗದರ್ಶಿ ಮಾಸ ಪತ್ರಿಕೆಯನ್ನು ಅವರು ಪ್ರಾರಂಭಿಸಿದಾಗ ಲಂಕೇಶ್ ಪತ್ರಿಕೆಗಿಂತ ಹೆಚ್ಚಿನ ಹಣ ಬರಲು ಶುರುವಾಯಿತು. ಅದರಲ್ಲೂ ವಿದ್ಯಾರ್ಥಿಗಳಿಗೆ ಸತ್ಯವನ್ನು ಹೇಳುವ ಕೆಲಸ ಮುಂದುವರಿಸಿದರು. ಬಿ.ಚಂದ್ರೇಗೌಡ ಮತ್ತು ಎಚ್.ಎಲ್.ಕೇಶವಮೂರ್ತಿ ಅವರ ಕಾಲಮ್ಮುಗಳನ್ನು ಆಫೀಸಿನಲ್ಲಿ ಜೋರಾಗಿ ಓದಿ ಖುಷಿ ಪಡುತ್ತಿದ್ದ ಗೌರಿ ಮೇಡಂ ವಾರಕ್ಕೊಂದು ಕತೆ, ಕವಿತೆ ಪತ್ರಿಕೆಯಲ್ಲಿರುವಂತೆ ನೋಡಿಕೊಳ್ಳುತ್ತಿದ್ದರು. ಕವಿತಾ ಮೇಡಂ ಕಾರಣಕ್ಕೆ ಸಿನಿಮಾ ಬಗ್ಗೆಯೂ ಆಗಾಗ ಮಾತಾಡಲು ಶುರು ಮಾಡಿದ್ದರು.

ಭಾರತದಂತಹ ತಾರತಮ್ಯದ ನೆಲದಲ್ಲಿ ಪತ್ರಕರ್ತರಾದವರ ಕೆಲಸ ಏನು ಎಂಬುದನ್ನು ಗೌರಿ ಲಂಕೇಶ್ ಸರಿಯಾಗಿ ಅರಿತಿದ್ದರು. ಅವರು ಇತರೆ ಇಂಗ್ಲಿಷ್ ಪತ್ರಿಕೆಗಳಿಗೆ ಬರೆಯುತ್ತಿದ್ದ ಲೇಖನಗಳಲ್ಲಿಯೂ ನಾವಿದನ್ನು ಕಾಣಬಹುದಾಗಿದೆ. ಲಂಕೇಶ್ ಪತ್ರಿಕೆ 'ಗೌರಿ ಲಂಕೇಶ್ ವಾರಪತ್ರಿಕೆ' ಆದಮೇಲೆ ಕರ್ನಾಟಕದ ಕೋಮು ಸೌಹಾರ್ದ ಚಟುವಟಿಕೆಗಳಿಗೆ ಹೆಚ್ಚು ಆದ್ಯತೆ ನೀಡಲಾಯಿತು. 'ಕರ್ನಾಟಕ ಕೋಮು ಸೌಹಾರ್ದ ವೇದಿಕೆ'ಯ ಸಕ್ರಿಯ ಕಾರ್ಯಕರ್ತೆಯಾಗಿದ್ದ ಅವರು, ತಮ್ಮ ಸಂಪಾದಕತ್ವದ ಪತ್ರಿಕೆಯ ಹೆಚ್ಚು ಪುಟಗಳನ್ನು ಅದಕ್ಕೆ ಮೀಸಲಿಟ್ಟಿದ್ದರು. ಈ ಕಾರಣಕ್ಕೆ ಕರ್ನಾಟಕದ ಕೋಮು ಸೌಹಾರ್ದ ಚಳವಳಿ ಹೆಚ್ಚು ಬಲ ಪಡೆಯಿತು ಮತ್ತು ರಾಜ್ಯದ ತುಂಬಾ ಕೋಮುವಾದದ ವಿರುದ್ಧ ಹೋರಾಡುತ್ತಿದ್ದವರೆಲ್ಲ ಗೌರಿ ಅವರಿಗೆ ಹತ್ತಿರವಾದರು.

**ಹೋರಾಟಗಾರ್ತಿಯಾಗಿ ಗೌರಿ:**

ಗೌರಿ ಲಂಕೇಶರಿಗೆ ಪತ್ರಿಕೆ ಮತ್ತು ಹೋರಾಟ ಬೇರೆ ಬೇರೆಯಾಗಿರಲಿಲ್ಲ. ಉತ್ತರಹಳ್ಳಿಯ ಮನೆಯಲ್ಲಿ ಒಬ್ಬರೇ ಬದುಕುತ್ತಿದ್ದುದರಿಂದ ದಿನದ ಹೆಚ್ಚು ಸಮಯ ಪತ್ರಿಕಾ ಕಚೇರಿ ಅಥವಾ ಪ್ರತಿಭಟನೆಗಳು ಅಥವಾ ಕೋರ್ಟು ಕೇಸುಗಳಲ್ಲಿ ಬ್ಯುಸಿಯಾಗಿರುತ್ತಿದ್ದರು. ಮೊದಮೊದಲು ವೇದಿಕೆಗಳ ಮೇಲೆ ಮಾತಾಡಲು ಹೆದರುತ್ತಿದ್ದವರು ವಾರದ ಎರಡು ಮೂರು ದಿನಗಳು ರಾಜ್ಯದ ಯಾವುದೋ ಊರಿನ ಯಾವುದಾದರೂ ಕಾರ್ಯಕ್ರಮದ ಅತಿಥಿಯಾಗಿರುತ್ತಿದ್ದರು. ನಗರಿ ಬಾಬಯ್ಯ, ನಗರಗೆರೆ ರಮೇಶ್, ಶಿವಸುಂದರ್,

ವಿ.ಎಸ್.ಶ್ರೀಧರ್ ಥರದ ಹಿರಿಯ ಹೋರಾಟಗಾರರ ಸಲಹೆಗಳನ್ನು ಮುಕ್ತವಾಗಿ ಸ್ವೀಕರಿಸುತ್ತಿದ್ದ ಗೌರಿ ಮೇಡಂ ಕುದುರೆಮುಖ ರಾಷ್ಟ್ರೀಯ ಉದ್ಯಾನದ ಆದಿವಾಸಿಗಳ ಹೋರಾಟ ಮತ್ತು ನಕ್ಸಲೀಯ ಹೋರಾಟಗಳ ಕಡೆ ಹೆಚ್ಚು ಗಮನ ಕೊಟ್ಟರು. ಇದರ ಪರಿಣಾಮವಾಗಿ ಸಾಕೇತ್ ರಾಜನ್ ಸಂದರ್ಶನವನ್ನೂ ಮಾಡಿ ಬಂದರು. ಅಲ್ಲಿಂದ ಮುಂದಕ್ಕೆ ಕೋಮುವಾದಿಗಳ ಉಗ್ರ ಟೀಕೆಗೆ, ವಿರೋಧಕ್ಕೆ ತುತ್ತಾದರು. ನೂರ್ ಶ್ರೀಧರ್ ಮತ್ತು ಸಿರಿಮನೆ ನಾಗರಾಜ್ ಅವರನ್ನು ನಕ್ಸಲೀಯ ಚಟುವಟಿಕೆಯಿಂದ ಹೊರತರಲು ಶ್ರಮಿಸಿದಂತೆಯೇ ಮಿಕ್ಕೆಲ್ಲಾ ಗೆಳೆಯ ಗೆಳತಿಯರನ್ನು ಮುಖ್ಯವಾಹಿನಿಗೆ ತರುವುದು ಅವರ ಗುರಿಯಾಗಿತ್ತು. ಈ ಸಂಬಂಧ ಮುಖ್ಯಮಂತ್ರಿ ಸಿದ್ಧರಾಮಯ್ಯ ಮತ್ತು ಹಿರಿಯ ಪೋಲೀಸ್ ಅಧಿಕಾರಗಳ ಜೊತೆ ನಿರಂತರ ಸಂಪರ್ಕದಲ್ಲಿದ್ದರು.

ಶಿವಮೊಗ್ಗದಲ್ಲಿ ಚಂಪಾ ಮುಂದಾಳತ್ವದಲ್ಲಿ ನಡೆದ 'ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ' ದಲ್ಲಿ ವಿಷಯವೊಂದಕ್ಕೆ ಸಂಬಂಧಿಸಿದಂತೆ ಮುಖ್ಯ ಭಾಷಣಕಾರರಾಗಿ ಆಹ್ವಾನಿತರಾದ ಗೌರಿ ಅವರಿಗೆ ಕೋಮುವಾದಿಗಳಿಂದ ದೊಡ್ಡ ವಿರೋಧ ವ್ಯಕ್ತವಾಯಿತು. ತವರು ಜಿಲ್ಲೆಯಾದ ಶಿವಮೊಗ್ಗಕ್ಕೆ ಹೋಗಿ ಭಾಷಣ ಮಾಡಲೇಬೇಕೆಂಬ ಅವರ ಹಠ ಫಲಿಸಿತು ಮತ್ತು ಅಲ್ಲಿನ ಪ್ರಗತಿಪರ ಚಿಂತಕರು, ಹೋರಾಟಗಾರರ ಅಭೂತಪೂರ್ವ ಬೆಂಬಲ ಅವರಿಗೆ ದಕ್ಕಿತು. ಕರ್ನಾಟಕದಲ್ಲಿ ಕೋಮುವಾದಿಗಳ ಬಹಿರಂಗ ಸೋಲು ಅಲ್ಲಿಂದ ಶುರುವಾಗಲು ಗೌರಿ ಕಾರಣರಾದರು.

ಆ ನಂತರದಲ್ಲಿ ನಡೆದ ಬಹುತೇಕ ದಲಿತ, ಪ್ರಗತಿಪರ ಹೋರಾಟಗಳಲ್ಲಿ ಮುಖ್ಯ ಪಾತ್ರ ವಹಿಸಿದ ಗೌರಿ ಮೇಡಂ ಸಿದ್ಧರಾಮಯ್ಯ ನೇತೃತ್ವದ ಸರ್ಕಾರ ಬಂದಿದ್ದರಿಂದ ಕೊಂಚ ನಿರಾಳವಾದರು ಮತ್ತು ಸಿದ್ಧರಾಮಯ್ಯನವರನ್ನು ನಂಬಿದರು. ಕಳೆದ ವರ್ಷ ನಡೆದ 'ಚಲೋ ಉಡುಪಿ' ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು ಮತ್ತು ಅವರ ಪತ್ರಿಕೆಯನ್ನು ಇದಕ್ಕೆ ಹೆಚ್ಚು ತೊಡಗಿಸಿ ಪ್ರಚಾರ ಮಾಡಿದರು. ಈ ನಿಟ್ಟಿನಲ್ಲಿ ಭಾರತದಂತಹ ಶ್ರೇಣೀಕೃತ ಸಮಾಜದ ಸುಧಾರಣೆಗೆ ಏಕಮುಖಿ ಆಲೋಚನಾ ಕ್ರಮದ ಬದಲಾಗಿ ಬಹುತ್ವದ ಮತ್ತು ಒಳಗೊಳ್ಳುವ ಆಲೋಚನಾ ಕ್ರಮಗಳು ಎಷ್ಟು ಪರಿಣಾಮಕಾರಿ ಎಂಬುದನ್ನು ಸ್ವತಃ ಬದುಕಿ ತೋರಿಸಿದವರು ಗೌರಿ ಲಂಕೇಶ್. ಕಳೆದ ಹತ್ತು ಹನ್ನೆರಡು ವರ್ಷಗಳಲ್ಲಿ ಅವರು ವೈಯಕ್ತಿಕ ಬದುಕನ್ನು ಬದುಕಲೇ ಇಲ್ಲ. ಅರವತ್ತಕ್ಕೂ ಹೆಚ್ಚು ಕೋರ್ಟ್ ಕೇಸುಗಳನ್ನು ಎದುರಿಸುತ್ತಿದ್ದ ಅವರು ತಲೆಕೆಡಿಸಿಕೊಳ್ಳದೆ ಅದನ್ನೂ ಹೋರಾಟದ ಭಾಗವೆಂಬಂತೆ ನಡೆಸಿಕೊಂಡು ಬಂದರು. ಹೆಚ್ಚುಹೆಚ್ಚು ಓದುತ್ತಾ ಸಮಾಜ, ಸಂಸ್ಕೃತಿಯನ್ನು ಅರ್ಥೈಸಿಕೊಳ್ಳುತ್ತಾ, ಬಹುತ್ವದ ನೆಲೆಗಳನ್ನು ಶೋಧಿಸುತ್ತಾ ಕನ್ನಡದ ನೆಲಮೂಲೀಯ ವೈಚಾರಿಕತೆಯ ಒಳಕ್ಕೆ ನಿಧಾನ ಪ್ರವೇಶ ಪಡೆದರು. ಅವರ ಈ ಮಾರ್ಗದರ್ಶಿ ಜೀವನ ವಿಧಾನ ಮುಂದಿನ ತಲೆಮಾರಿಗೆ ಹೆಚ್ಚಿನ ಸತ್ವವನ್ನು ಉಳಿಸಿತು.

**ಗೌರಿ ಲಂಕೇಶರ ಸೈದ್ಧಾಂತಿಕ ಅರಿವು :**

ಕೋಮುವಾದವನ್ನು ಹತ್ತಿರದಿಂದ ಕಂಡು, ಅದನ್ನು ಇಲ್ಲವಾಗಿಸಲು ಹೋರಾಡಲು ಪ್ರಾರಂಭಿಸಿದ ಗೌರಿ ಲಂಕೇಶರಿಗೆ ಪತ್ರಿಕೆಯಿದ್ದ ಕಾರಣಕ್ಕೇ ಕನ್ನಡ ನಾಡಿನ ದಲಿತ– ಮಹಿಳಾ ಚಳವಳಿ ತಕ್ಷಣದ ಪ್ರತಿಕ್ರಿಯಾತ್ಮಕ ಹೋರಾಟದಂತೆಯೇ ಕಂಡಿದ್ದರಲ್ಲಿ ಆಶ್ಚರ್ಯವಿಲ್ಲ. ಸಮಕಾಲೀನ ತಲ್ಲಣಗಳಿಗೆ ಪತ್ರಿಕೆ ಮೂಲಕ ಪ್ರತಿಕ್ರಿಯೆ ನೀಡುವ ತುರ್ತು ಅವರನ್ನು ಕೊಂಚ ಆತುರಕ್ಕೆ ದೂಡಿತ್ತು. ಕೋಮುವಾದವನ್ನು ತಡೆಗಟ್ಟಲು ಕಾಂಗ್ರೆಸ್ಸನ್ನು ಅಪ್ಪಿಕೊಳ್ಳುವ ಅಪಾಯವನ್ನು ಅವರು ಇನ್ನೂ ಅರ್ಥ ಮಾಡಿಕೊಳ್ಳುವ ದಾರಿಯಲ್ಲಿದ್ದರು. ಎಲ್ಲ ಪ್ರಭುತ್ವದ ಶೋಷಕ ಪ್ರವೃತ್ತಿಯನ್ನು ವಿರೋಧಿಸುತ್ತಿದ್ದ ದಲಿತ ಮತ್ತು ಮಹಿಳಾ

ಚಳವಳಿಯನ್ನು ಗೌರಿ ಮೇಡಂ ಆದ್ಯತೆಯ ವಿಷಯವಾಗಿ ಪರಿಗಣಿಸದೆ ಅಂತರ ಕಾಯ್ದುಕೊಂಡರು ಅಥವಾ ಅವುಗಳ ಸೂಕ್ಷ್ಮತೆಯನ್ನು ಅರಿಯುವ ಸಮಯವಿರಲಿಲ್ಲ ಅವರಿಗೆ. ಎಲ್ಲರಂತೆ ಅವರೂ ದಲಿತ ಸಂಘಟನೆಯ ವಿಘಟನೆಯ ಬಗ್ಗೆ ಮಹಿಳಾ ಚಳವಳಿಯ ಗಂಡು ವಿರೋಧಿ ಗ್ರಹಿಕೆಯ ಬಗ್ಗೆ ತೆಳುವಾಗಿ ಮಾತನಾಡುತ್ತಿದ್ದರು. ಆದರೆ ಅವರ ಗ್ರಹಿಕೆಯಲ್ಲಿದ್ದ ದೋಷಗಳನ್ನು ಪರಿಹರಿಸಿಕೊಳ್ಳಲು ಅವರು ಸಿದ್ಧರಿದ್ದರು. ದಲಿತರ ಮೀಸಲಾತಿ ಕುರಿತು ಇಂಗ್ಲಿಷ್ ಪತ್ರಕರ್ತರಂತೆ ಉದಾಸೀನವಾಗಿ ಮಾತನಾಡುತ್ತಿದ್ದ ಅವರು ಆನಂತರದ ದಿನಗಳಲ್ಲಿ ಬದಲಾದಂತೆ, ಬಡ್ತಿ ಮೀಸಲಾತಿ ವಿಷಯದಲ್ಲಿ ಆತುರ ತೋರಿದರು. ಅಲ್ಲಿಯೂ ದಲಿತರ ಏಳಿಗೆಗೆ ಪ್ರಾಮಾಣಿಕ ಕಾಳಜಿಯನ್ನು ತೋರಿಸಿದರೇ ಹೊರತು ಸಾಂವಿಧಾನಿಕ ಹಕ್ಕಿನ ಕುರಿತು ಅವರಿಗೆ ಯಾರಾದರೂ ಅರ್ಥ ಮಾಡಿಸುವ ಅಗತ್ಯವಿತ್ತು; ಮತ್ತದನ್ನು ಅವರು ನಿರೀಕ್ಷಿಸಿದ್ದರು.

ಅವರ ಪ್ರತಿಕ್ರಿಯಾತ್ಮಕ ಹೋರಾಟದ ಮಾದರಿ ದಲಿತ ಸಂಘಟನೆ ಮತ್ತು ಮಹಿಳಾ ಸಂಘಟನೆಗಳ ಮುಂದಾಳುಗಳೊಂದಿಗೆ ಅವರ ವಾಗ್ವಾದವನ್ನು ಮೊಟಕುಗೊಳಿಸಿತು. ಟ್ಯಾಬ್ಲಾಯ್ಡ್ ಭಾಷೆ ಮತ್ತು ತಕ್ಷಣದ ಪ್ರತಿಕ್ರಿಯಾತ್ಮಕ ಸೈದ್ಧಾಂತಿಕ ನಂಬಿಕೆಗಳು ಅವರನ್ನು ಆವರಿಸಿದ್ದ ಕಾರಣದಿಂದ ಸೀಮಿತಗೊಳ್ಳುವಂತಾಯಿತು. ಅಂಬೇಡ್ಕರ್ ಚಿಂತನೆಗಳನ್ನು ಮೇಲ್ನೋಟಕ್ಕೆ ಒಪ್ಪಿಕೊಂಡಿದ್ದ ಗೌರಿ ಲಂಕೇಶರು ಒಳಕ್ಕೆ ಇಳಿಯುವ ಸಮಯಕ್ಕೆ ಕಾಯುತ್ತಿದ್ದರು. ಮತ್ತು ಅಂಬೇಡ್ಕರ್ ಆಲೋಚನಾ ಕ್ರಮದಿಂದ ಲೋಕವನ್ನು ಗ್ರಹಿಸುವ ತುರ್ತನ್ನು ಇನ್ನೂ ಅವರು ಕಂಡುಕೊಳ್ಳಬೇಕಿತ್ತು. ಗಾಂಧಿ, ಲೋಹಿಯಾ ಚಿಂತನೆಗಳು ಅವರಿಗೆ ಅಷ್ಟು ಆಪ್ತವಾಗಿರದಿದ್ದರೂ ಅವರ ಸುತ್ತಲೂ ಇದ್ದ ಪ್ರಗತಿಪರ ಚಿಂತಕರ ಕಾರಣಕ್ಕೆ ಅನಿವಾರ್ಯದಂತೆ ಅವುಗಳನ್ನು ಒಪ್ಪಿದ್ದರು. ಆ ವಿಷಯದಲ್ಲಿ ಇನ್ನೂ ಅವರು ಗಟ್ಟಿಗೊಳ್ಳಬೇಕಾಗಿತ್ತು.

ಕನ್ನಡದ ಪ್ರಗತಿಪರತೆಯನ್ನು ರೂಪಿಸಿದ ಸಾಹಿತ್ಯಕ ಚಿಂತನಾ ಕ್ರಮವನ್ನು ಗೌರಿ ಮೇಡಂ ಇದೀಗ ಪ್ರವೇಶಿಸಿದ್ದರು. ವಚನ ಚಳವಳಿ ಮತ್ತು ತಳ ಸಮುದಾಯಗಳ ಜಾನಪದ ಮಹಾಕಾವ್ಯಗಳನ್ನು ಅವರು ಪೂರ್ತಿ ಅರಿಯದಿದ್ದರೂ ಅವು ಜನಮುಖಿ ಆಲೋಚನಾ ಮಾದರಿಗಳನ್ನು ನಿರ್ದೇಶಿಸುವ ಬೀಜರೂಪಿ ಅರಿವುಗಳು ಎಂಬುದನ್ನು ಮನಗಂಡಿದ್ದರು. ಅವರು ಕೊಲೆಯಾಗುವ ಒಂದೇ ತಿಂಗಳು ಹಿಂದೆ ಹಿರಿಯ ದಲಿತ ನಾಯಕರೊಬ್ಬರನ್ನು 'ಯಾರಿವರು..?' ಎಂದು ಕೇಳಿದ್ದರು; ಮತ್ತವರ ಜೊತೆ ಮಾತಿಗಿಳಿದಾಗ ಇಪ್ಪತ್ತು ಮೂವತ್ತು ವರ್ಷಗಳಿಂದ ಪರಿಚಯವಿದೆಯೇನೋ ಎಂಬಷ್ಟರಮಟ್ಟಿಗೆ ಆಪ್ತವಾದರು. ಇನ್ನೂ ಅವರಿಗೆ ಹತ್ತಿರವಾಗಬೇಕಿದ್ದ ಹಲವು ವಿಷಯಗಳು, ವ್ಯಕ್ತಿಗಳು, ಆಲೋಚನಾ ಕ್ರಮಗಳು ಇದ್ದವು. ಸಿನಿಮಾ ಭಾಷೆ ಅವರಿಗೆ ಅರ್ಥವಾಗುತ್ತಿರಲಿಲ್ಲ; ಪ್ರತಿಕ್ರಿಯಾತ್ಮಕ ಕವಿತೆಯನ್ನು ಇಷ್ಟಪಡುತ್ತಿದ್ದರು. ಎದುರಿಗೆ ಸಿಕ್ಕ ಎಲ್ಲರ ಮಾತುಗಳನ್ನೂ ಸೀರಿಯಸ್ಸಾಗಿ ತೆಗೆದುಕೊಳ್ಳುತ್ತಿದ್ದುದರಿಂದ ಕೆಲವೊಮ್ಮೆ ಪೂರ್ವಗ್ರಹಕ್ಕೆ ಒಳಗಾಗುತ್ತಿದ್ದರು. ಮತ್ತು ಹತ್ತಿರದವರ ಬಗ್ಗೆ ಅನುಮಾನ ಬಂದರೆ ಶೀಘ್ರ ಬಗೆಹರಿಸಿಕೊಳ್ಳುತ್ತಿದ್ದರು.

ಗೌರಿ ಲಂಕೇಶ್ ಸಮಸಮಾಜದ ನಿರ್ಮಾಣಕ್ಕಾಗಿ ದೇಶಾದ್ಯಂತ ನಡೆಯುತ್ತಿರುವ ಜನಮುಖಿ ಚಳವಳಿಗಳೆಲ್ಲದರ ಭಾಗವಾಗಿದ್ದರು. ಆದರೆ, ಈ ಆಂದೋಲನಕ್ಕಿರುವ ಪ್ರಾಚೀನ ತಾತ್ವಿಕ ಬದ್ಧತೆಯನ್ನೂ, ಅಂತರ್ಮುಖಿ ಒಳಹರಿವನ್ನು ಕಾಣುವ ವಿಷಯದಲ್ಲಿ ಕೊಂಚ ಆಲಸ್ಯ ಮಾಡಿದರು. ಕೋಮುವಾದದ ರುದ್ರ ನರ್ತನ, ಸಹಮಾನವರ ಮೇಲಿನ ಹಲ್ಲೆ, ಅಮಾನವೀಯತೆಯನ್ನೇ

ಸೈದ್ಧಾಂತಿಕತೆಯಂತೆ ನಂಬಿ ನಡೆಯುವ ಅಪಾಯಕಾರಿ ಬೆಳವಣಿಗೆ ಅವರನ್ನು ಹೀಗೆ ಪ್ರತಿಕ್ರಿಯಾತ್ಮಕ ಹೋರಾಟಕ್ಕೆ ಪ್ರೇರೇಪಿಸಿತ್ತು. ಅವರು ನಂಬಿದ್ದ ಮಾತೆಂಬ ಆಯುಧ ಅವರ ಆಯಸ್ಸನ್ನು ಕಡಿಮೆ ಮಾಡಿತು. ಕ್ರಿಯೆಗೆ ಇಳಿಯುವ ಮೊದಲೇ ಪ್ರತಿಕ್ರಿಯೆಗೆ ಒಳಗಾದ ಗೌರಿ ಸಾವಿನ ನಂತರ ಭಾರತದ ಜನಮುಖಿ ಚಳವಳಿ ಗರಿಗಟ್ಟುತ್ತಿದೆ.

ಗೌರಿ ಬದುಕಿದ್ದಾರೆ; ನಮ್ಮನ್ನೂ ಬದುಕಿಸಿದ್ದಾರೆ.

## ಗೌರಿ ಸ್ಮರಣೆಯಂದು (15-10-17) ಕೊಪ್ಪಳದ ಅಶೋಕ ವೃತ್ತದಲ್ಲಿ ನಡೆದ ಬೀದಿ ಕವಿಗೋಷ್ಠಿಯಲ್ಲಿ ಓದಿದ ಕವನಗಳು

## ಗೌರಿಯರು

– ಡಾ. ಕೆ. ಷರೀಫಾ

ತಲೆಗೆ ಗುಂಡಿಟ್ಟರೇನು
ಮಿದುಳು ಮಾತಾಡುತ್ತದೆ
ಒಬ್ಬ ಗೌರಿ
ಜಗವೆಲ್ಲಾ ಗೌರಿಯಾದ ಸೋಜಿಗ
ಅನ್ಯಾಯಕೆ ಕೊನೆ ಎಂದು

ನ್ಯಾಯ ಕಟಕಟೆಯ ಮುಂದೆ
'...ಬೇಟಿ ಬಚಾವೋ ದನಿ'
ಗುಂಡುಗಳ ಚೆಂಡುಗಳಾಗಿ ಆಡಲು
ಪುಸ್ತಕದ ಬೇಟಿಯರ ರಣದಂಡು
ಬಿಗಿದ ಮುಷ್ಟಿಗಳ ಎತ್ತಿ.

ನವ ಹಿಟ್ಲರನ ಮಾತಿನ ಮಾರ್ಕೆಟ್ಟಿನಲ್ಲಿ
ಜೀವ ತುಂಬಾ ಅಗ್ಗ
ಮಗಳು ಓದಿ ವಿಚಾರವಾದಿಯಾದರೆ
'ಬೇಟೀಕೊ ಗೋಲೀಸೆ ಉಡಾದೋ'
ವಿಚಾರಗಳ ಎದುರಿಸಲಾಗದ
ಹೇಡಿ ಹಿಟ್ಲರನ ಸಂತತಿ
ಸಾವು ಸಂಭ್ರಮಿಸುವ ನವೋದ್ಯಮ

ಢಂ ಢಂ ಫ್ರೀಡಂ ಇದು ಹಿಟ್ಲರನ ವಾಕ್ಯ
ಗೌರಿಯನು ಕೊಂದವರು ನಮಗೆ ಗೊತ್ತಿಲ್ಲ
ಈ ಸಾವನ್ನು ಸಂಭ್ರಮಿಸುವವರು
ಯಾರೆಂದು ಲೋಕಕ್ಕೇ ತಿಳಿದಿದೆ
ಅವಳ ಸಾವಿನ ಪ್ರಾಯೋಜಕರು

ಪಾತಾಳದಲ್ಲಿಯೇ ಅಡಗಿರಲಿ ಹುಡುಕಿ ತರುತ್ತಾರೆ,
ಅನ್ಯಾಯಕೆ ಅಂತ್ಯ ಹಾಡುತ್ತಾರೆ
ನ್ಯಾಯ ಪಡೆದೇ ತೀರುವ ದೀಕ್ಷೆ ತೊಟ್ಟಿದ್ದಾರೆ
ಸಾಗರದಂತೆ ಹರಿದು ಬರುತ್ತಿದ್ದಾರೆ
ಅಸಂಖ್ಯ ಗೌರಿಯರ ದಂಡು ಧಾಂಗುಡಿಯಿಟ್ಟು
ಅಹಿಂಸೆಯನ್ನು ಹಿಂಸೆ ಕೊಲ್ಲುತ್ತಿದೆ
ಕತ್ತಲಲ್ಲಿ ಅವಿತು
ಅಹಿಂಸೆಯ ಗೌರಿಯ ವಾರಸುದಾರರು
ಬೆಳಕ ಮುಖವಿಲ್ಲದವರ ಹುಡುಕಿ
ದೀವಟಿಗೆಗಳ ಹಿಡಿದು ಸಂಪು ಹೂಡಿದ್ದಾರೆ
ಬುಲೆಟ್ಟು ಬಂದೂಕಿನ ಲೆಕ್ಕ ಕೇಳುತ್ತಾ
ಒಕ್ಕೊರಲಿನಲಿ ಹೇಳುತ್ತಿದ್ದಾರೆ: ನಾವು ಗೌರಿಯರು

## ಸಾವಿರಾರು ಗೌರಿ

– ಸಾವಿತ್ರಿ ಮುಜುಂದಾರ್

ನಾನು ಗೌರಿ ನಾನು ಗೌರಿ
ಎಲ್ಲರೆದೆಯಲ್ಲಿ ಬೆಂಕಿ
ಹೋರಾಟಕೆ ಪಂಜು ಹಿಡಿದು
ಗೋಡೆಗಳನು ನೂಕಿ

ಅಭಿವ್ಯಕ್ತಿಯ ಬಾಯ್ ಮುಚ್ಚಲು
ಅಕ್ಕನೆಡೆಗೆ ಧಾಳಿ
ಭಿನ್ನ ಮತವ ಸಹಿಸದವರ
ಹೀನ ಕೃತ್ಯ ಕೇಳಿ

ಕ್ರೌರ್ಯ ಕಪಟ ಕುಟಿಲತೆಯನು
ಮೆಟ್ಟಿನಿಂತ ಮಾರಿ
ದೇಹವಿಲ್ಲದಿಟ್ಟ ನಿಲುವು
ಸಾವಿರಾರು ಗೌರಿ

ಖಾಕಿ, ಕಾವಿ, ಖಾದಿ, ಲೇಖಿ
ಯಾವುದಾದರೇನು?
ಭ್ರಷ್ಟತೆಯನು ಬುಡಮಟ್ಟದಿ

ಕೇಳುತಿದ್ದೆ ನೀನು

ನೊಂದ ಎದೆಯ ಮನದ ತಾಯಿ
ನಮ್ಮ ದಿಟ್ಟ ಗೌರಿ
ನಿನ್ನ ಹೆಜ್ಜೆ, ನಿನ್ನ ನಡಿಗೆ
ನಮಗೆ ಹೊಸತು ದಾರಿ

ಚಿಂತನೆಗಿದು ಪಕ್ವ ಕಾಲ
ಎಲ್ಲರೊಂದೆ ಕೂಗು
ನಾನು ಗೌರಿ ನಾನು ಗೌರಿ
ಹೋರಾಟದಿ ಸಾಗು

## ವಿ.ವಿ.ಐ.ಪಿ

– ಸರೋಜಾ ಬಾಕಳೆ

ಸತ್ಯ, ನ್ಯಾಯ, ನಿಷ್ಠೆಗೆ
ಇಲ್ಲಿ ಕುರ್ಚಿಗಳು ಖಾಲಿ ಇಲ್ಲ
ಸುಳ್ಳು, ಮೋಸ, ವಂಚನೆ, ಕೊಲೆ, ಸುಲಿಗೆ
ಸರ್ ನೀವು ವಿ.ವಿ.ಐ.ಪಿ ಮುಂದೆ ಬನ್ನಿ

ದಕ್ಷರಿಗೆ ಕೊಚ್ಚಿಹಾರಿಸಿ
ತಾವೇ, ಕೊಚ್ಚಿದವರಿಗಾಗಿ ಹುಡುಕುವ
ಸೋಗಲಾಡಿತನ, ಯಾರಿಗಾಗಿ?!
ನೀವಿಲ್ಲಿ ಅಮರರಾ? ಅಜರಾಮರರಾ?

ಗಂಡು ಹೆಣ್ಣೆಂಬ
ಭೇದ ಭಾವವಿಲ್ಲ ಸೋಗಲಾಡಿಗಳಿಗೆ
ಅವರ ಚಾಳಿಸು ನೋಡಿ
ಕಣ್ಣೆಗಲ್ಲಾ ತಲೆಗೆ

ಇಂತಹವರಿಗೆ ತಲೆಯಲ್ಲಿ ಕಣ್ಣು
ಕಣ್ಣಲ್ಲಿ ಮಣ್ಣು
ಇವರು ಮಣ್ಣಾಗುವುದಿಲ್ಲ, ರಸ್ತೆಯ ಕೆಂಬಣ್ಣದಲ್ಲಿ
ಕಣ್ಮುಚ್ಚುವವರು ಇವರ್‍ಯಾರು ಗೊತ್ತಾ?

ನಮ್ಮನ್ನೆಲ್ಲಾ ಉದ್ಧರಿಸುವವರು

ಬಡವರ ಜೀವ ಹಿಂಡುವ
ರಾಕ್ಷಸರು, ನಾಯಕರು
ನಾಯಿ ಕೊಡೆಯಂತೆ ಎದ್ದಿಹರು ವಿ.ವಿ.ಐ.ಪಿ ಹೌದಾ?

## ತನ್ನದಲ್ಲದ ತಪ್ಪಿನಿಂದ

– ಪುಷ್ಪಲತಾ ಏಳುಬಾವಿ

ತನ್ನದಲ್ಲದ ತಪ್ಪಿನಿಂದ
ಯುಗ ಯುಗಗಳಲ್ಲಿ ಬಲಿಯಾದವಳು
ಈ ಸಮಾಜದ ಕ್ರೌರ್ಯದ ಕಣ್ಣಿಗೆ
ನಿಗಿ ನಿಗಿ ಕೆಂಡವಾಗಿ ಉರಿದವಳು

ತನ್ನದಲ್ಲದ ತಪ್ಪಿನಿಂದಾಗಿ ಅಹಲ್ಯೆ
ದೇವೇಂದ್ರ ಕಾಮಕ್ಕೆ ತುತ್ತಾದಳು
ಗೌತಮನ ಶಾಪದಿ ಹೆಬ್ಬಂಡೆಯಾದಳು
ರಾಮನ ದಿವ್ಯ ಸ್ಪರ್ಶದಿ ಹೆಣ್ಣಾದವಳು

ತನ್ನದಲ್ಲದ ತಪ್ಪಿನಿಂದ ಸೀತೆ
ರಾವಣ ಸೇಡಿಗೆ ಲಂಕೆಯಲ್ಲಿ ಪರಿತಪಿಸಿದಳು
ಅಗಸನ ಮೂದಲಿಕೆಯಿಂದ
ತುಂಬಿದ ಬಸುರಿ ಕಾಡಪಾಲಾದವಳು

ಕುಂತಿಯ ಕಿವುಡುತನಕ್ಕೆ ಪಂಚ ಪಾಂಡವರಿಗೆ
ಪತ್ನಿಯಾಗಿ ದ್ರೌಪದಿಯು ಪಡಬಾರದ ಕಷ್ಟಕ್ಕೆ ಸಿಲುಕಿದಳು
ಧರ್ಮರಾಯನ ಜೂಜಾಟದಿಂದ ಅರೆಬತ್ತಲೆಯಾದಳು
ಶ್ರೀಕೃಷ್ಣನ ದಯೆಯಿಂದ ಮಾನವಂತೆಯಾಗಿ ಬದುಕಿದವಳು
ಕಾಡುಮೇಡು ಅಲೆದವಳು ದಾಸಿಯಾಗಿ
ಕೀಚಕನ ಕಾಮನ ಗೊಂಬೆಯಾದವಳು

ಯುಗಯುಗದಿ ಹೆಣ್ಣು ಕುಲವು
ಕಾಮದ ದಳ್ಳುರಿಯಲ್ಲಿ ಬೇಯುತ್ತಿರುವಳು
ಕನ್ಯೆಯರ ಹರಿದು ತಿಂದವರು
ಮುಗ್ಧ ಮಕ್ಕಳನ್ನು ಹರಿದು ಮುಕ್ಕಿದವರು
ಮುದುಕಿಯರನ್ನು ಮತಿಭ್ರಮಣೆ ಮಾಡಿದರು

ಯುಗಯುಗದಿ ಹೆಣ್ಣು ಕುಲಕ್ಕೆ
ಅವಳ ಅಂದವೇ ಮಾರಕ
ಹೆಣ್ಣಿನ ಅವಸಾನವೇ
ಮಾನವರ ಪ್ರಳಯಕ್ಕೆ ಮುನ್ನುಡಿಯಾದವಳು

ತನ್ನದಲ್ಲದ ತಪ್ಪಿನಿಂದ
ಯುಗ ಯುಗಗಳಲ್ಲಿ ಬಲಿಯಾದವಳು
ಈ ಸಮಾಜದ ಕ್ರೌರ್ಯದ ಕಣ್ಣಿಗೆ
ನಿಗಿ ನಿಗಿ ಕೆಂಡವಾಗಿ ಉರಿದವಳು

## ಸಾಕಿನ್ನು ಸಾಕು

– ವಿಜಯಲಕ್ಷ್ಮಿ ಕೊಟಗಿ

ಹೆಣ್ಣಾಗಿ ಹುಟ್ಟಿದ್ದು ನಮ್ಮ ತಪ್ಪೇ?
ಹಡೆದ ಅವ್ವನ ತಪ್ಪೇ?
ಮಗುವೊಂದು ಜೀವ ಅದೊಂದು ಆತ್ಮ
ಹಾಗೆ ಬೆಳೆಸಿದರೆ ಸಾಕಿತ್ತು ಈ ಭೇದವೇಕೆ?
ತಾವೂ ಹೆಣ್ಣೆಂಬುದ ಮರೆತವರಿಂದ ತಿವಿಸಿಕೊಂಡಿದ್ದು
ನಮ್ಮ ತಪ್ಪೇ.. ಸಾಕಿನ್ನು ಸಾಕು

ಅಜ್ಜಿ ತಾಯಿ ಹೆಂಡತಿ ಮಗಳು
ಯಾವ್ಯಾವೋ ಪಾತ್ರದಲ್ಲಿ ಮಲಮೂತ್ರ ತೊಳೆದು
ಒಳ ಹೊರಗೂ ನಿಮ್ಮ ಸಮಕ್ಕೂ ದುಡಿದು
ನಗುತ್ತಲೇ ಗುಲಾಮಿತನಕ್ಕೆ ಬಗ್ಗಿಕೊಂಡಿದ್ದು
ನಮ್ಮ ತಪ್ಪೇ? ಸಾಕಿನ್ನು ಸಾಕು

ಹೆಣ್ಣೆಂಬುದಕ್ಕೆ ಸಮನಾರ್ಥಕ ಪದ ''ತಪ್ಪು''
ನಮ್ಮ ವಿಚಾರಗಳಲ್ಲಿ ನೀವು ಹುಡುಕಿದ್ದು ''ತಪ್ಪು''
ಸಬಲೆಯೆಂದವರ ಎದುರು ಅಖಾಡಕ್ಕಿಳಿಯದೇ
ಬೆನ್ನಿಗಿರಿದ ರಣಹೇಡಿಯ ಕೇಕೆಗೆ
ಅವಡುಗಚ್ಚುತ್ತಲೇ ಜೀವಬಿಟ್ಟಿದ್ದು
ನಮ್ಮ ತಪ್ಪೇ.. ಸಾಕಿನ್ನು ಸಾಕು

ಧಿಕ್ಕಾರವಾಗಲಿ ಸಹಜೀವಿಯ ಮಾನಭಂಗಕ್ಕೆ

ತಿರಸ್ಕಾರವಿರಲಿ ವಿಚಾರಗಳ ಅತ್ಯಾಚಾರಕ್ಕೆ
ನಮ್ಮ ದೇಹ ನಮ್ಮ ಬದುಕು ನಮ್ಮ ಹಕ್ಕಿಗಾಗಿ
ಹೋರಾಡದೇ, ಬೇಡಿಕೊಳ್ಳುವಷ್ಟು ಅಸಹಾಯಕರಾಗಿದ್ದು
ನಮ್ಮ ತಪ್ಪೇ.. ಸಾಕಿನ್ನು ಸಾಕು

ಭಾವ ಭಾಷಣ ಚಿಂತನ ಮಂಥನದಲ್ಲಿ
ಮೂರಕ್ಕೆ ಆರಾಗಿ, ನೂರಕ್ಕೆ ಸಾವಿರವಾಗಿ
ಈ ಜಗದ ಹೆಣ್ಣುಗಳ ರಣ ಕಹಳೆಯಾಗಿ
ಹನಿಹನಿ ರಕ್ತಕ್ಕೂ ಹುಟ್ಟಿ ಬರುವೆವು ನಾವು
ಗೌರಿಯಾಗಿ, ಹುಟ್ಟುತ್ತಲೇ ಇರುವೆವು..
ಆಗ ನೀವೇ ಹೇಳುವಿರಿ ಸಾಕಿನ್ನು ಸಾಕು..

## ಕಿಚ್ಚಿನ ಹಾಡು

– ಶ್ರೀನಿವಾಸ ಚಿತ್ರಗಾರ

'ಬೇ ಯವ್ವಾ ಇಲ್ಲಿ ಯಾವ್ದೂ ನೆಟ್ಟಗಿಲ್ಲ ಬೇ'

ಅಂತಾ ಆ ಕಾಲ್ದಾಗ ಮನು ಬರ್ದಾನಂತ
''ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ'' ಆಗಿಂದಾಂಗ
ಅವರವ್ವನೋ ಅಕ್ಕಂದಿರೋ ತಿದ್ದಿ ಸರಿಮಾಡಿ
'ಸ್ತ್ರೀ ಸದಾ ಸ್ವಾತಂತ್ರ್ಯ ಅರ್ಹತಿ' ಅಂತ ಹೇಳಿದ್ರ
ಇವತ್ತು ಈ ಪರಿಸ್ಥಿತಿ ಬರ್ತಿರ್ಲಿಲ್ಲೇನೋ..

ಆಮೇಲೆ – ರಾಮಾಯಣದಾಗ ಸೀತೆಮಾತೆನ್ನ,
ಆಲೆ ಹಬ್ಬದಾಗ ಕೊಂಡ ಹಾಯ್ಸಂಗ ಹಾಯ್ಸಿದ್ರು
ತುಂಬಿದ ಬಸುರೀನ್ನ ಅಡವ್ಯಾಗ ಬಿಟ್ಬಂದ್ರು
ಆ ದಿನಾನ ಆಕೆ ಪ್ರತಿಭಟನ ಮಾಡಿದ್ದಿದ್ರ
ಇವತ್ತು ಈ ಪರಿಸ್ಥಿತಿ ಬರ್ತಿರ್ಲಿಲ್ಲೇನೋ..

ಅದೂ ಹೋಗ್ಲಿ – ಮಹಾಭಾರತದಾಗ ಕಿವುಡಿ ಕುಂತೀನ ಕುಂತು
ಐದು ಮಂದೀನ ಹಂಚ್ಗಳ್ರೀ ಅಂದ್ರು ಆಕೇನೂ ತುಟಿಪಿಟ್ ಅನ್ಲಿಲ್ಲ
ಆಕಿನ್ನ ಜೂಜಿಗಿಟ್ಟು ಸೀರಿ ಎಳ್ದಾಗ ಆವಾಗರ ಆಕಿ ಹೊಳ್ಳಿ ನಿಂತು
ಯಾಕ ಹೆಂಗ ಕಾಣುತ್ತೇ ಅಲ್ಗೀ ಅನ್ನಕಿ ತಾಯಿ ಸಮಾನ ಅಂತಂದಾ
ತಿರುಗಿ ನಿಂತ್ರ ಇವತ್ತು ಈ ಪರಿಸ್ಥಿತಿ ಬರ್ತಿರ್ಲಿಲ್ಲೇನೋ..

ಇದನ್ನು ಬಿಡು – ವೇದಗಳ ಕಾಲ್ದಾಗ ಭಲೋ ಇತ್ತ ನೋಡು
ಆದ್ರ ಈ ಗಂಡ್ಸು ಅನ್ನೋ ದುರಹಂಕಾರಿ ತನಗ
ಹೆಂಗ ಬೇಕು ಹಂಗ ವ್ಯವಸ್ಥೆನ್ನ ಕೆಡಿಸಿ ಇಟ್ಟುಬಿಟ್ಟ
ಆವಾಗಾದ್ರೂ ಆ ತಾಯಂದ್ರು ಹಿಂಗಲ್ಲ ಮಾಡಬ್ಯಾಡ್ರೀ ಅಂದಿದ್ರ
ಇವತ್ತು ಈ ಪರಿಸ್ಥಿತಿ ಬರ್ತಿರ್ಲಿಲ್ಲೇನೋ..

ಕೇಳಿಲ್ಲಿ, ಪ್ರತಿಯೊಬ್ಬಾಕೀನೂ ಲಕ್ಷ್ಮೀಬಾಯಿ, ಚೆನ್ನಮ್ಮ
ಓಬವ್ವ, ಅಬ್ಬಕ್ಕ, ರಜಿಯಾ ಸುಲ್ತಾನಾ, ಚಾಂದ್ ಬೀಬಿ ಆಗ್ಬೇಕು
ಇಲ್ಲಾಂದ್ರ ಮೊನ್ನೆ ರೂಪಾ ಕನ್ವರ್ ನಿನ್ನೆ ನಿರ್ಭಯಾ
ಇವತ್ತು ಗೌರಿ ಲಂಕೇಶ್, ನಾಳೆ ನೀನೋ ನಾನೋ ಅನ್ನೋ
ಹೆದ್ರಿಕ್ಯಾಗ ಈಗ್ಲಾದ್ರೂ ಒಗ್ಗಟ್ಟಾಗಲಿಲ್ಲಾಂದ್ರ
ಇವತ್ತು ಈ ಪರಿಸ್ಥಿತಿ ಬರ್ತಿರ್ಲಿಲ್ಲೇನೋ..

ಮತ್ತಾ ಅಂತಾರ – ತಾಯಿಯೇ ದೇವರು ಭೂಮಿ, ತಾಯಿ,
ನೀರು, ಗಂಗವ್ವ, ರೊಕ್ಕಲಕ್ಷ್ಮಿ, ವಿದ್ಯೆ ಸರಸ್ವತಿ ಬೇ
ಇದೆಲ್ಲ ಹೇಳಾಕ, ಕೇಳಾಕ, ನೋಡಾಕ ಅಷ್ಟ ಚಂದ, ಅವರಿವ್ರನ್ನ
ನಂಬದಕ್ಕಿಂತ ನೀವ ಚಂಡಿ ಚಾಮುಂಡಿ ಮಾರೆವ್ವ ದುರ್ಗವ್ವ
ಭದ್ರಕಾಳವ್ವ ಆದ್ರ ಈ ವ್ಯವಸ್ಥ ಒಂದು ಹಂತಕ್ಕೆ ಬರ್ತೈತಿ
ಎಳ್ರೀ ಎದ್ದೇಳ್ರೀ ದೌರ್ಜನ್ಯ ನಿಲ್ಲೋವರ್ಗೂ ಹೋರಾಡ್ರಿ.. ಹೋರಾಡ್ರಿ..

## ಕೊರಳಿನ ದನಿ

– ಶಾಂತಾದೇವಿ ಹಿರೇಮಠ

ಗೌರಿ ನೀನಲ್ಲ ಅಬಲೆ
ನೀನಲ್ಲ ಅಸಹಾಯಕಿ
ಹೆಣ್ಣು–ಗಂಡನ್ನು ಮೀರಿದ
ಆತ್ಮಸ್ಥೈರ್ಯದ
ಜ್ಯೋತಿಯ ಬಲೆ ನೀನು

ಯಾರೋ ಸಿಡಿಸಿದ ಕಿಚ್ಚಿಗೆ
ಬಲಿಯಾದೆ ನೀನು
ಕೆಚ್ಚೆದೆಯ ಲಂಕೇಶರ
ಮೆಚ್ಚುಗೆಯ ಕುವರಿಯಾಗಿ
ಪತ್ರಿಕೆಯ ಸ್ವಾಭಿಮಾನದ

ಅಭಿವ್ಯಕ್ತಿ ಸ್ವಾತಂತ್ರ್ಯಕೆ
ನೀ ನಿನ್ನ ಅರ್ಪಿಸಿಕೊಂಡೆ
ಮಹಿಳೆಯರ ಶೋಷಣೆಯ
ವಿರುದ್ಧದ ದನಿಯಾದೆ
ಬರಸಿಡಿಲಾಗಿ ಎದ್ದುನಿಂತೆ
ಗಾಂಧೀಜಿಯವರ ಕನಸಿನ
ರಾಮರಾಜ್ಯಕೆ ಪ್ರಶ್ನೆಯಾಗಿ ಉಳಿದೆ..
ಗೌರಿ ನೀನು
ಈಗ ಒಬ್ಬಳಾಗಿ ಉಳಿದಿಲ್ಲ
ನೀನೀಗ ಲಕ್ಷಾಂತರ
ಜನರ ಕೊರಳಿನ
ದನಿಯಾಗಿರುವೆ
ಪ್ರತಿಭಟನೆಯ ಅಸ್ತ್ರವಾಗಿರುವೆ..

## ಗೌರಿ..ಗೌರಿ..

– ಅಂಜನಾದೇವಿ ಎಚ್.

ಗೌರಿ..ಗೌರಿ..ನೀ ಮತ್ತೇ ಹುಟ್ಟಿ ಬಾ
ಪತ್ರಿಕೋದ್ಯಮಿಯ ರಂಗ ನೀ ಬೆಳಗು ಬಾ
ಜ್ಞಾನ – ತಂತ್ರಜ್ಞಾನದ ಅರಿವು ನೀ ಅರುಹು ಬಾ
ಮತಿ ಹೀನರಿಗೆ ನೀ ಬುದ್ಧಿ ಹೇಳು ಬಾ
ಗೌರಿ..ಗೌರಿ..ನೀ ಮತ್ತೇ ಹುಟ್ಟಿ ಬಾ

ದುರುಳರಿಗೆ ನಿನ್ನ ಕಂಡು ಏನೋ ನಡುಕಾ
ನಿನ್ನಿರುವು ಅವರ ಎದೆಯ ಗಟ್ಟಿಸಿತು
ನಿಮ್ಮೀ ದಿಟ್ಟತನ, ಅವರನು ದಿಗ್ಭ್ರಾಂತರನ್ನಾಗಿಸಿತು
ಗೌರಿ..ಗೌರಿ..ನೀ ಮತ್ತೇ ಹುಟ್ಟಿ ಬಾ

ಪತ್ರಿಕೆಯೆಂಬ ಪ್ರಭಾವಿ ಮಾಧ್ಯಮಕೆ ನೀವು ಬೇಕೇ ಬೇಕು
ನಗ್ನ ಸತ್ಯ ಬಯಲಾಗಲು, ಗೋಸುಂಬೆಗಳ ಬಣ್ಣ ಬಿಚ್ಚಲು
ನಿಮ್ಮ ಬರಹ ಬೇಕೇ ಬೇಕು
ಲೇಖನಿಯ ಖಡ್ಗದಿಂ, ಅಸತ್ಯ, ಅನ್ಯಾಯ ಸತತವಾಗಲು
ಶಾಂತಿ, ಸಹನೆಯ, ಪಾರದರ್ಶಕವ ಪಾರಮಾರ್ಥ್ಯ ತಿಳಿಸಲು

ಗೌರಿ..ಗೌರಿ..ನೀ ಮತ್ತೇ ಹುಟ್ಟಿಬಾ

ಬಿರಿ ಬಿಸಿಲಲ್ಲಿ ನೀವು ಬೆಳದಿಂಗಳಾಗಿ ಬನ್ನಿ
ವಿಷದ ಬೀಜಗಳನು ನೀವು ಕಿತ್ತು ಎಸೆಯಲು ಬನ್ನಿ
ಚಾಡಿ ಹೇಳುವ ನಾಲಿಗೆಗೆ ಚಾಟಿ ಏಟಿನ ರುಚಿ ತೋರಲು ಬನ್ನಿ
ನಿಮ್ಮ ಬರಹದಿಂದ ವಂಚಿತರಾದ ಪತ್ರಿಕೆಗೆ ಜೀವ ತುಂಬ ಬನ್ನಿ
ಗೌರಿ..ಗೌರಿ..ನೀ ಮತ್ತೇ ಹುಟ್ಟಿಬನ್ನಿ..

## ಕಳ್ಳು ಬಳ್ಳಿ ಸಂಬಂಧ ಬೆಳೆಸುವ ದಾರಿಯಲ್ಲಿ ಯೂತ್ ಶಿಬಿರಗಳು

''ನೀನು ನನ್ನ ಮುನ್ನಡೆಸಬೇಡ ನಾನು ನಿನ್ನನ್ನು ಅನುಸರಿಸುವುದಿಲ್ಲ
ನೀನು ನನ್ನನ್ನು ಅನುಸರಿಸಬೇಡ ನಾನು ನಿನ್ನನ್ನು ಮುನ್ನಡೆಸುವುದಿಲ್ಲ
ಕೈಹಿಡಿ, ಜೊತೆಯಾಗಿ ನಡೆಯೋಣ''

**– ಆಲ್ಬರ್ಟ್ ಕಾಮೂ**

ಈ ಮಾತುಗಳ ಆಶಯ ಸದಾ ಜೊತೆಗಿಟ್ಟುಕೊಂಡೇ ಕಳ್ಳು ಬಳ್ಳಿ ಸಂಬಂಧ ಬೆಳೆಸುವ ಪ್ರಕ್ರಿಯೆಯನ್ನು ನಡೆಸುವ ಪ್ರಯತ್ನ ಒಕ್ಕೂಟ ನಡೆಸಿದ ಯೂತ್ ಶಿಬಿರಗಳು.

''ಸಿದ್ಧಾಂತಗಳನ್ನು ನಮ್ಮೊಳಗೆ ಕೊರೆಯುವುದಲ್ಲ, ಬಾಂಧವ್ಯ ಬೆಳಸಿಕೊಳ್ಳುವುದೇ ನಮ್ಮ ಸಿದ್ಧಾಂತ. ಕಳ್ಳು ಬಳ್ಳಿ ಸಂಬಂಧ ಕಟ್ಟೋದೇ ಇದರ ಉದ್ದೇಶ'' – ಶಿಬಿರದ ಮೊದಲ ನುಡಿಗಳೇ ಇವು.

ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಅವಲೋಕನ ಸಭೆ ಮಂಗಳೂರಿನಲ್ಲಿ ನಡೆದಾಗ ಒಂದು ನಿರ್ಣಯ ತೆಗೆದುಕೊಳ್ಳಲಾಗಿತ್ತು. ನಮ್ಮ ಗುಂಪಿನ ಯುವ ಸ್ನೇಹಿತೆಯರಿಗೆ, ನಮ್ಮ ಮಹಿಳಾ ಚಳುವಳಿ ನಡೆದು ಬಂದ ದಾರಿ ಅರ್ಥವಾಗಬೇಕು. ಈ ಕಾಲಕ್ಕೆ ತಕ್ಕಂತೆ ಚಳವಳಿಯನ್ನು ಮುಂದುವರಿಸಿಕೊಂಡು ಹೋಗುವಲ್ಲಿ ಅವರೂ ಸಕ್ರಿಯ ಪಾತ್ರ ವಹಿಸುವಂತಾಗಬೇಕು. ವರ್ತಮಾನದ ವಿಷಯಗಳಿಗೆ ಮಹಿಳಾ ದೃಷ್ಟಿಕೋನದಿಂದ ಚರ್ಚಿಸುವುದು ಸಾಧ್ಯವಾಗಬೇಕು. ಅದಕ್ಕಾಗಿ ಶಿಬಿರ ನಡೆಸುವ ಜವಾಬ್ದಾರಿ ದು.ಸರಸ್ವತಿ ವಹಿಸಿಕೊಂಡರು, ಅಂತೆಯೇ 2016 ಆಗಸ್ಟ್ 13, 14, 15 ರಂದು ಕವಲಕ್ಕಿಯಲ್ಲಿ ಗೆಳತಿ ಅನುಪಮಾ ಮನೆಯಲ್ಲಿ, ಹಾಗೂ 2017 ಆಗಸ್ಟ್ 25, 26, 27ರಂದು ಶಿವಮೊಗ್ಗ ಜಿಲ್ಲೆ ಕುಪ್ಪಳಿಯಲ್ಲಿ ಶಿಬಿರಗಳು ನಡೆದವು. ಮಂಗಳೂರು, ಮೈಸೂರು, ಬಿಜಾಪುರ, ಹೊಸಪೇಟೆ, ಕೊಪ್ಪಳ, ಬೆಂಗಳೂರುಗಳಿಂದ ಸುಮಾರು 20 ರಿಂದ 25 ಜನ ಶಿಬಿರದಲ್ಲಿ ಭಾಗವಹಿಸಿದ್ದರು.

2016ರಲ್ಲಿ ಕವಲಕ್ಕಿಯಲ್ಲಿ ನಡೆದ ಶಿಬಿರದಲ್ಲಿ ಪ್ರತಿದಿನ ದೀಪಹಚ್ಚುವುದರೊಂದಿಗೆ ಶುರುವಾಗುತ್ತಿತ್ತು. ಮೊದಲ ದಿನ ನಡೆದ ನಮ್ಮೆಲ್ಲರ ವಿವರವಾದ ಪರಿಚಯವೇ ಶಿಬಿರದ ಆಪ್ತ ಭಾಗವಾಗಿತ್ತು. ಪ್ರತಿಯೊಬ್ಬರ ಹಿಂದೆ ಒಂದು ಹೋರಾಟದ ಕತೆ ಇತ್ತು, ಎಲ್ಲಾ ಸಂಘರ್ಷಗಳ ನಡುವೆ ಭರವಸೆಯ ಒಂದು ಹಾಡಿತ್ತು. ಪರಸ್ಪರರ ನೋವು ನಲಿವು ಕೇಳಿಸಿಕೊಳ್ಳುವುದೇ ಒಂದು ಖುಶಿಕೊಟ್ಟಿತ್ತು. ಎಲ್ಲರ ಶಕ್ತಿಗಳು ಜೊತೆಸೇರಿ ಪರಸ್ಪರ ಪ್ರೇರಣೆಯ ಒಂದು ಹಂದರ ಹೆಣೆದಂತೆ ಆಗಿತ್ತು.

ಮೊದಲ ದಿನ ಸರಸ್ವತಿ ಮಹಿಳಾ ಚಳವಳಿಯ ಸೈದ್ಧಾಂತಿಕ ತಳಹದಿ ಬಗ್ಗೆ ವಿವರ ನೀಡಿದರು. ಒಂದು ಚೌಕಟ್ಟು ಹಾಕಿ ಅದರೊಳಗೆ ಅನುಭವಗಳನ್ನು ಹೊಂದಿಸುವುದು ಒಂದು ರೀತಿ – ಇದು ಬೋಂಡಾದಂತೆ,

ಅನುಭವಗಳನ್ನು ತೆಕ್ಕೆಗೆ ಹಾಕಿಕೊಳ್ಳುತ್ತಾ ಅದರಿಂದ ಸಿದ್ಧಾಂತಗಳನ್ನು ರೂಪಿಸಿಕೊಳ್ಳುವುದು ಇನ್ನೊಂದು ರೀತಿ – ಇದು ಪಕೋಡಾದ ಹಾಗೆ ಬೇರೆ ಬೇರೆ ರೂಪ ಪಡೆದುಕೊಳ್ಳುತ್ತದೆ. ಒಂದಂತೂ ನಿಜ, ಆಯಾಯ ಕಾಲಘಟ್ಟದ ದರ್ದಿನಿಂದ ಚಳವಳಿ ಹುಟ್ಟಿಕೊಳ್ಳುತ್ತದೆ. ಲಿಂಗತ್ವ ಮತ್ತು ಲೈಂಗಿಕತೆಯ ರಾಜಕೀಯ, ಧರ್ಮ, ಅಧಿಕಾರ– ರಾಜಕೀಯ ಪ್ರಾತಿನಿಧ್ಯ, ಸಾಮಾಜಿಕ ನ್ಯಾಯ, ಅಭಿವೃದ್ಧಿ – ಈ ಐದು ಆಯಾಮಗಳಲ್ಲಿ ಮಹಿಳಾ ಚಳುವಳಿಯ ಸಿದ್ಧಾಂತವನ್ನು ಅವರು ವಿವರಿಸಿದರು. ಮಹಿಳೆಯರ ಇಶ್ಯೂಗಳು ಕಾಲಕಾಲಕ್ಕೆ ಹೇಗೆ ತೆರೆದುಕೊಳ್ಳುತ್ತಾ ಬಂದವು – ಆರೋಗ್ಯ, ಉದ್ಯೋಗ, ಶಿಕ್ಷಣದಿಂದ ಹಿಡಿದು ಅತ್ಯಾಚಾರ, ಕೌಟುಂಬಿಕ ದೌರ್ಜನ್ಯ, ಲೈಂಗಿಕ ಪ್ರವೃತ್ತಿ, ಪರಿಸರದ ಪ್ರಶ್ನೆಗಳು, ಮೀಸಲಾತಿ, ಜಾತಿಯೊಳಗಣ ಅಗತ್ಯಗಳು, ಅಣ್ವಸ್ತ್ರದ ದುರಂತ – ಪ್ರತಿಯೊಂದನ್ನೂ ಮಹಿಳೆಯರ ನೋಟದಿಂದ ನೋಡುತ್ತಾ ಹೋರಾಟ ಬೆಳೆದ ರೀತಿಯ ಚಿತ್ರಣ ಸಿಕ್ಕಿತು.

ಕವಲಕ್ಕಿ ಶಿಬಿರದ ಎರಡನೆಯ ದಿನ, ವಿಮೋಚನಾದಲ್ಲಿ ದೀರ್ಘ ಕಾಲ ಕೆಲಸ ಮಾಡಿದ ಮಧು ಭೂಷಣ್ ಅವರು ಕೌಟುಂಬಿಕ ದೌರ್ಜನ್ಯದ ಕೇಸುಗಳನ್ನು ನಿಭಾಯಿಸಿದ, ಮಹಿಳೆಯರನ್ನು ಸಂಘಟಿಸಿದ ಅಪರೂಪದ ಅನುಭವಗಳನ್ನು ಹಂಚಿಕೊಂಡರು. ಎನ್. ಗಾಯತ್ರಿಯವರು ಮಾರ್ಕ್ಸ್‌ವಾದಿ ಸ್ತ್ರೀವಾದದ ಅನುಭವ ಮುಂದಿಟ್ಟರು. ವಿಶ್ವ ಮಹಿಳಾ ದಿನ ರೂಪುಗೊಂಡ ಬಗೆಯಿಂದ ಹಿಡಿದು, ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾತ್ರ, ವಿವಿಧ ರೀತಿಯ ಮಹಿಳಾ ಒಕ್ಕೂಟಗಳ, ಸಮಿತಿಗಳ ರಚನೆ ಮತ್ತು ಕೆಲಸಗಳ ಬಗ್ಗೆ ವಿವರಿಸಿದರು.

ವಾಣಿಯವರು ಸುಮಾರು ವರುಷಗಳ ಹಿಂದೆ ತಯಾರಿಸಿದ, ''ಬಾಕಿ ಇತಿಹಾಸ'' ಎಂಬ ಮಹಿಳಾ ಸಶಕ್ತತೆಯ ಸೂಕ್ಷ್ಮ ಪ್ರತೀಕಗಳನ್ನು ಮುಂದಿಡುವ ನಾಟಕವನ್ನು ಕವಲಕ್ಕಿಯಲ್ಲಿ ಮಾಡಿದರು. ಮಂಜುಳಾ ಸುನಿಲ್ ಅಭಿನಯ ಗೀತೆಗಳ ಮೂಲಕ ಮನ ಸೆಳೆದರು. ಇದರ ಜೊತೆಗೆ ಎಲ್ಲರಿಗು ಡ್ರಾಯಿಂಗ್ ಶೀಪ್, ಪೆನ್ನು, ಪೆನ್ಸಿಲ್ ನೀಡಲಾಯಿತು. ಚಿತ್ರಗಳ ಮೂಲಕ ಮಹಿಳಾ ಚಿಂತನೆಯ ತಮ್ಮ ತಮ್ಮ ನೋಟಕ್ರಮವನ್ನು ವ್ಯಕ್ತಪಡಿಸಲಾಯಿತು. ಹಲವರಿಗೆ ಇದು ಒಂದು ಹೊಸ ಅನುಭವ.

ಪ್ರತಿ ದಿನದ ಕೊನೆಗೆ ಆರೋಗ್ಯ, ದೇಹ ರಚನೆ, ಲೈಂಗಿಕತೆ, ಕುಟುಂಬ ಯೋಜನೆ ಮುಂತಾದ ಆರೋಗ್ಯ ವಿಷಯಗಳ ಕುರಿತೂ ಮಾಹಿತಿ ದೊರಕಿತು. ಕವಲಕ್ಕಿ ಆಸುಪಾಸಿನ ಗುಡ್ಡ, ಕಡಲು, ಕೋಟೆ, ಕಾಡುಗಳಲ್ಲಿ ಪ್ರಕೃತಿಯ ಶಬ್ದ, ನಿಶ್ಶಬ್ದಗಳನ್ನು ಅರಿಯಲು ಸಹಾಯವಾಯಿತು. ಕರಿಕಾನಮ್ಮನ ಬೆಟ್ಟ ಹಾಗೂ ಮಿರ್ಜಾನ್ ಕೋಟೆ, ಕಾಸರಕೋಡ್ ಬೀಚ್ ಭೇಟಿಗಳು ಅವಿಸ್ಮರಣೀಯವೆನಿಸಿದವು.

2017ರಲ್ಲಿ ಕುಪ್ಪಳ್ಳಿಯಲ್ಲಿ ನಡೆದ ಶಿಬಿರದಲ್ಲಿಯೂ ಮೊದಲ ಮಾತುಕತೆ ಪರಸ್ಪರ ಪರಿಚಯದ್ದು. ಕುಪ್ಪಳ್ಳಿಯ ರಮ್ಯ ನಿಸರ್ಗದಲ್ಲಿ ವೃತ್ತಾಕಾರವಾಗಿ ಕುಳಿತು ಆಪ್ತವಾಗಿ ನಂನಮ್ಮ ಬಗ್ಗೆ ಹೇಳಿಕೊಳ್ಳುವ ಪ್ರಕ್ರಿಯೆ ಮುಂದುವರಿದಿತ್ತು. ನಂತರ ಪುಣೆಯ ಸ್ತ್ರೀವಾದಿ ಚಿಂತಕಿ, ಬರಹಗಾರ್ತಿ, ರಂಗಕರ್ಮಿ ಆಗಿರುವ ಲತಾ ಎಂ. ವಿ. ನಮ್ಮೊಡನಿದ್ದು ಮಹಿಳಾ ಚಳವಳಿಯ ಆಯಾಮಗಳನ್ನು ಹಂಚಿಕೊಂಡರು. ಹಾಡು ಹೇಳಿಕೊಟ್ಟರು. ತಮ್ಮ ಅನುಭವಗಳನ್ನು ಹಂಚಿಕೊಂಡರು. ಕರ್ನಾಟಕ ಕಂಡ ಸಾಮಾಜಿಕ ಹೋರಾಟ–ಚಳುವಳಿಗಳ ಕುರಿತು ಪ್ರೊ. ರಾಜೇಂದ್ರ ಚೆನ್ನಿಯವರು ಸಂವಾದ ನಡೆಸಿಕೊಟ್ಟರು. ಬೆಂಗಳೂರಿನ ಸ್ನೇಹಿತ ದೀಪಕ್ ರಂಗಭೂಮಿ ಚಟುವಟಿಕೆಗಳನ್ನು ಮಾಡಿಸಿದರು. ರಂಗ ಚಟುವಟಿಕೆಗಳು ದೇಹ ಮನಸ್ಸುಗಳಿಗೆ ನಿರಾಳವಾಗುವ, ಪ್ರಫುಲ್ಲಗೊಳ್ಳುವ ಅನುಭವ ಕೊಟ್ಟವು. ಲವಲವಿಕೆ ತುಂಬಿದವು. ಪರಸ್ಪರ ಸಂಬಂಧಗಳನ್ನು ಇನ್ನೂ ಹತ್ತಿರಗೊಳಿಸಿದವು.

ವಾಣಿ ಕುಪ್ಪಳ್ಳಿಯಲ್ಲಿ ತಮ್ಮ ಹೊಸ ನಾಟಕ ''ಕೌದಿ'' ಮಾಡಿ ತೋರಿಸಿದರೆ, ದು. ಸರಸ್ವತಿ ಸಣ್ತಿಮ್ಮಿ ಬುದ್ಧಾಯಣ ಅಭಿನಯಿಸಿ ತೋರಿಸಿದರು. ಕವಿಮನೆ, ಕವಿಶೈಲ ಮತ್ತು ಆಸುಪಾಸಿನ ಸ್ಥಳಭೇಟಿಗಳು ಅನುಭವಗಳ ತೆಕ್ಕೆಗೆ ಮತ್ತೊಂದು ಬೋನಸ್‌ನಂತಿದ್ದವು. ಮುಟ್ಟಿನ ಸಂದರ್ಭ, ಮೆನ್ಸ್ಟ್ರುವಲ್ ಕಪ್, ತಾಯ್ತನ–ಬಸುರು–ಬಾಣಂತನಗಳ ಬಗ್ಗೆಯೂ ಮಾಹಿತಿ ನೀಡಲಾಯಿತು.

ಇವೆಲ್ಲದರ ಜೊತೆಗೆ ಒಕ್ಕೂಟದ ಬಗ್ಗೆ, ಶಿವಮೊಗ್ಗ ಸಮಾವೇಶದ ಬಗೆಗೆ ಶಿವಮೊಗ್ಗ, ತೀರ್ಥಹಳ್ಳಿ, ಸಾಗರ, ಭದ್ರಾವತಿಯ ಸಂಗಾತಿಗಳು ಬಂದು ಚರ್ಚಿಸಿದರು. ಬರಲಿರುವ ಸಮಾವೇಶದ ಕುರಿತು, ಸ್ವರೂಪದ ಕುರಿತು ಮಾತುಕತೆಗಳಾದವು.

ಮನಸಾರೆ ಮಾತಾಡುವುದು, ಮನಸಾರೆ ಕೇಳಿಸಿಕೊಳ್ಳುವುದು, ಮನಸಾರೆ ಉಂಡುತಿಂದು ಮಾಡುವುದು, ಮನಸಾರೆ ಕನಸು ಕಂಡು, ಪ್ರೀತಿ ಹಂಚಿಕೊಂಡು ಮತ್ತಷ್ಟು ಹಂಚಲು ಮರಳುವುದು ಈ ಶಿಬಿರಗಳ ಸೊಗಸಾಗಿ ನೆನಪಿನಲ್ಲುಳಿದವು.

## ಕುಪ್ಪಳಿ ಯುತ್ ಕ್ಯಾಂಪ್ ಕುರಿತು ಕೆಲವು ಅನಿಸಿಕೆಗಳು:

*ಕುಪ್ಪಳ್ಳಿ ಶಿಬಿರದ ನಂತರ ಶಿಬಿರದಲ್ಲಿ ಭಾಗವಹಿಸಿದ ಯುವ ಸಂಗಾತಿಗಳಿಗೆ ಸ್ತ್ರೀವಾದ ಅಂದರೇನು, ಯೂತ್ ಕ್ಯಾಂಪ್ ಅನುಭವ ಕುರಿತಂತೆ ಅನಿಸಿಕೆ ಬರೆವಂತೆ ಹೇಳಲಾಗಿತ್ತು. ಕೆಲವು ಸಂಗಾತಿಗಳು ಬರೆದಿದ್ದು ಹೀಗಿದೆ.*

**ಹಮೀದಾ ಬಾನು ಅಥಣಿ,** ಸಂಶೋಧನಾ ವಿದ್ಯಾರ್ಥಿನಿ, ಮಹಿಳಾ ಅಧ್ಯಯನ ವಿಭಾಗ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ.

ಸ್ತ್ರೀವಾದ ಎಂದರೆ : ಆರೋಗ್ಯಕರ ಸಮಾಜದ ಕನಸು. ಇದು ಸಮಾನತೆಗಾಗಿ ಒಟ್ಟಾರೆ ಸಮಾಜದ ದಮನಿತ ವರ್ಗದ ಧ್ವನಿಯಾಗಿದೆ. ಜೀವವಾದ, ಸಮಾನತಾವಾದವನ್ನು ತಿಳಿಸಿಕೊಡುತ್ತದೆ. ಇಡೀ ಲೋಕವನ್ನು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಮತ್ತು ರಾಜಕೀಯವಾಗಿ ಅಭಿವೃದ್ಧಿ ಹೊಂದಲು ಮಹಿಳಾ ದೃಷ್ಟಿಕೋನದಿಂದ ನೋಡುವುದಾಗಿದೆ. ಪಿತೃಪ್ರಧಾನ ಸಮಾಜದಲ್ಲಿ ಮಹಿಳೆಯರಿಗೆ ಸಮಾನತೆ ಘನತೆ ಗೌರವದೊಂದಿಗೆ ಬದುಕಲು ಕಲಿಸುತ್ತದೆ. ಇಂದು ಮಹಿಳೆಯರೆಲ್ಲಾ ಹೊರಗೆ ಬಂದು ತಮ್ಮ ಹಕ್ಕುಗಳನ್ನು ಪಡೆದುಕೊಂಡು ಸಮಾಜ ಮುಖಿಯಾಗಿ ಕೆಲಸ ನಿರ್ವಹಿಸಲು ಸ್ತ್ರೀವಾದವೇ ಕಾರಣವಾಗಿದೆ ಎಂದು ಹೇಳಬಲ್ಲೆ.

ಯುತ್‌ಕ್ಯಾಂಪ್‌ನಲ್ಲಿ ಎಲ್ಲರೂ ಒಟ್ಟಿಗೆ ಪ್ರೀತಿ, ವಿಶ್ವಾಸಗಳೊಂದಿಗೆ ಧರ್ಮ, ಜಾತಿ, ವರ್ಗದ ಭೇಧಭಾವಗಳಿಲ್ಲದೆ, ಸಮಾನವಾಗಿ ಬದುಕಲು ಕಲಿಸಿದೆ. ಇದು ಹೊಸದಾಗಿ ಸೇರಿಕೊಂಡ ಯುತ್‌ಗಳಿಗೆ ಹಿರಿಯರ ಅನುಭವಗಳನ್ನು ತಿಳಿದುಕೊಂಡು ಅವರ ಮಾರ್ಗದರ್ಶನದಲ್ಲಿ ಮುನ್ನಡೆಯಲು ಸಹಾಯಕವಾಗಿದೆ. ಇಲ್ಲಿ ಇನ್ನೂ ಹೆಚ್ಚು ಸ್ತ್ರೀವಾದಿಗಳನ್ನು ಕರೆಯಿಸಿ ಅವರೊಂದಿಗೆ ಚರ್ಚಿಸಿಲು ಹೆಚ್ಚಿನ ಸಮಯವನ್ನು ನೀಡಬೇಕು. ಈ ಕ್ಯಾಂಪ್‌ನಿಂದ ನಮ್ಮ ಬೌದ್ಧಿಕ ಮತ್ತು ವೈಚಾರಿಕ ಶಕ್ತಿಗಳನ್ನು ಹೆಚ್ಚಿಸಿಕೊಳ್ಳಲು ಸಹಾಯವಾಗಿದೆ. ಇದು ಯುವಜನರ ವಿಚಾರಗಳನ್ನು ಹಂಚಿಕೊಳ್ಳಲು ಸರಿಯಾದ ವೇದಿಕೆಯಾಗಿದೆ.

**ಡಾ. ಸುಕನ್ಯಾ ಹಾವನೂರ,** ಪಿಡಿಫ್ ಸಂಶೋಧನಾ ವಿದ್ಯಾರ್ಥಿನಿ, ಅಕ್ಕಮಹಾದೇವಿ ಮಹಿಳಾ ವಿದ್ಯಾಲಯ, ವಿಜಯಪುರ

ಸ್ತ್ರೀವಾದವನ್ನು ವಿಶಾಲಾರ್ಥದಲ್ಲಿ ಗ್ರಹಿಸುವುದಾದರೆ ಇದೊಂದು ಜೀವಪರವಾದ. ಸಮಾನತೆಯನ್ನು ಸಮಾಜದಲ್ಲಿ ರೂಪಿಸಲು ಹುಟ್ಟಿ ಕೊಂಡಂತ ಒಂದು ಅಲೆ. ಸಮಾಜದಲ್ಲಿ ಸ್ಥಾಪಿತವಾಗಿರುವ ಲಿಂಗ ತಾರತಮ್ಯ, ಜಾತಿ ತಾರತಮ್ಯ, ವರ್ಗ ತಾರತಮ್ಯ, ಉದ್ಯೋಗ ತಾರತಮ್ಯ, ಶೈಕ್ಷಣಿಕ ಅಸಮಾನತೆಯನ್ನು ತಾರ್ಕಿಕವಾಗಿ ಪ್ರಶ್ನೆ ಮಾಡಿ ಸಮಾಜದಲ್ಲಿ ಎಲ್ಲಾ ನೆಲೆಗಳಲ್ಲೂ ಸಮಾನತೆ ಸ್ಥಾಪಿತವಾಗಬೇಕೆಂದು ಹೇಳುವ ಒಂದು ವಾದವೇ ಸ್ತ್ರೀವಾದವೆಂದು ಹೇಳಬಹುದಾಗಿದೆ.

ಯೂತ್ ಕ್ಯಾಂಪಿನ ಬಗ್ಗೆ ಹೇಳುವುದಾದರೆ ಮೊದಲಿಗೆ ಇಂತಹ ಒಂದು ಆಲೋಚನೆಯನ್ನು ತಮ್ಮ ಮನಸ್ಸಿನೊಳ್ಳಗೆ ಇಳಿಸಿಕೊಂಡ ಎಲ್ಲಾ ಹಿರಿಯರಿಗೂ ಧನ್ಯವಾದಗಳನ್ನು ಹೇಳುತ್ತೇನೆ. ಈ ಕ್ಯಾಂಪಿನಲ್ಲಿ ಆಯ್ಕೆ ಮಾಡಿಕೊಂಡು ನಮ್ಮಂತ ಯುವ ಮನಸ್ಸುಗಳಿಗೆ ಹಿಂದಿನಿಂದಲೂ ಈ ಮಹಿಳಾ ಹೋರಾಟಗಳು ಹೇಗೆ ನಡೆದುಕೊಂಡು ಬಂದಿದೆ, ಮುಂದೆ ನಮ್ಮಂತಹವರ ಕರ್ತವ್ಯವೇನು ಎಂಬುದನ್ನು ಈ ಕ್ಯಾಂಪಿನಿಂದ ತಿಳಿದುಕೊಂಡೆವು. ಅಲ್ಲಿಗೆ ಬಂದಂತಹ ಸಂಪನ್ಮೂಲ ವ್ಯಕ್ತಿಗಳು ಮತ್ತು ಅವರು ಹೇಳಿರುವ ವಿಷಯಗಳು ನಮ್ಮೆಲ್ಲರಿಗೂ ಸ್ಪೂರ್ತಿಯಾಗುವಂತಿದ್ದವು. ಜೊತೆಗೆ ಕುವೆಂಪು ಅವರು ಹುಟ್ಟಿ ಬೆಳೆದಂತಹ ಆ ಸ್ಥಳ ನಮ್ಮೆಲರ್ಲಿಗೂ ತುಂಬಾ ಹರ್ಷದಾಯಕವಾಗಿತ್ತು ಹಾಗೆಯೇ ಅಲ್ಲಿಗೆ ಆಗಮಿಸಿದ ದೀಪಕ್ ಸರ್ ನಮ್ಮೆಲ್ಲರಿಗೂ ಕೆಲವೊಂದು ರಂಗ ಚಟುವಟುಕೆಗಳನ್ನು ಕಲಿಸಿದರು. ನಾವು ಸಹ ಕೆಲವೊಮ್ಮೆ ನಮ್ಮ ಆಪ್ತರಿಗೂ ಕಲಿಸಿಕೊಡುವ ಹಾಗೆ ಇವೆ, ಅದನ್ನು ನಾವು ವಿದ್ಯಾರ್ಥಿನಿಯರಿಗೂ ಕಲಿಸಿ ಕೊಟ್ಟದ್ದಾಗಿದೆ.

**ಗೀತಾ ಅಥಗರ್ಾ,** ಸಂಶೋಧನಾ ವಿದ್ಯಾರ್ಥಿನಿ, ಅಕ್ಕಮಹಾದೇವಿ ಮಹಿಳಾ ವಿದ್ಯಾಲಯ, ವಿಜಯಪುರ

ಸ್ತ್ರೀವಾದ ಎಂದರೆ: ಪುರುಷಕೇಂದ್ರಿತ ಸಮಾಜದಲ್ಲಿ ಮಹಿಳೆಯರು ಹಲವಾರು ಬಿಕ್ಕಟ್ಟುಗಳನ್ನು ಎದುರಿಸುತ್ತಿದ್ದಾರೆ. ಅವುಗಳು ಮಹಿಳೆಯರ ಸಾಮಾಜಿಕ ರಾಜಕೀಯ ಧಾರ್ಮಿಕ ಹಾಗೂ ಆರ್ಥಿಕ ಅಸಮಾನತೆಗೆ ಮೂಲ ಕಾರಣವಾಗಿವೆ. ಸಮಾನತೆಯನ್ನು ಪಡೆಯಲು ಹೋರಾಟದ ಮೂಲಕ ಬದಲಾವಣೆಗೆ ಬಲವಾದ ಒತ್ತು ನೀಡುವುದೆ ಸ್ತ್ರೀವಾದವೆಂದು ಹೇಳಬಹುದು.

ಯೂತ್ ಕ್ಯಾಂಪ್ : ಯೂತ್ ಕ್ಯಾಂಪ್ ಎನ್ನುವುದು ನಮ್ಮಗೆ ದಾರಿದೀಪ ಅಂತಹ ಹೇಳಬಹುದು. ಯೂತ್ ಕ್ಯಾಂಪ್‌ನ್ನು ನಾನು ಮೊದಲು ಬಾರಿ ಅಟೆಂಡ್ ಮಾಡಿದ್ದು, ಇದರಿಂದ ನಾನು ಸಾಕಷ್ಟು ವಿಷಯ ಕಲಿತೆ ಮತ್ತು ಅಲ್ಲಿಗೆ ಬಂದ ಪ್ರತಿಯೊಬ್ಬರ ವೈಯಕ್ತಿಕ ಪರಿಚಯವಾಯಿತು, ಮತ್ತು ಅದರಿಂದ ನಾನು ಹಲವಾರು ವಿಚಾರಗಳನ್ನು ನನ್ನಲ್ಲಿ ಅಳವಡಿಸಿಕೊಂಡಿದ್ದೇನೆ. ಇದರಿಂದ ಬೇರ ಬೇರೆ ಚಟುವಟಿಕೆಯಲ್ಲಿ ನಾನು ಭಾಗಿಯಾಗುವಂತೆ ಮಾಡಿದೆ. ಅಲ್ಲಿ ಬಂದಂತಹ ಜನರ ಜೊತೆ ಸ್ನೇಹದಿಂದ ಇರುವ ಹಾಗೆ ಕಲಿಸಿದೆ. ಮಹಿಳಾ ಚಳುವಳಿಯ ವಿಷಯದ ಬಗ್ಗೆ ಆಳವಾಗಿ ತಿಳಿದುಕೊಂಡೆ. ಅಲ್ಲಿನ ಚರ್ಚೆಯಲ್ಲಿ ಭಾಗವಹಿಸಿದ್ದೀವಿ. ಮತ್ತು ಯೂತ್ ಕ್ಯಾಂಪ್‌ನಲ್ಲಿ ನಾವು ಎಲ್ಲರೂ ಭಾಗವಹಿಸುವುದಿಂದ ಯಾವುದೇ ಜಾತಿ ಧರ್ಮ ಮತ್ತು ಭೇದ ಭಾವವಿಲ್ಲದೆ ಎಲ್ಲರೂ ಸಮಾನರು ಎನ್ನುವುದು ಕಲಿಸಿದೆ, ಇದರಿಂದ ಧೈರ್ಯದಿಂದ ಬದುಕುಬಹುದು ಎಂಬುದು ಕಲಿತೆವು. ಮತ್ತು ಇಲ್ಲಿ ಕಲಿತದ್ದು ಮುಂದಿನವರಿಗೆ ಮಾರ್ಗದರ್ಶನ ಮಾಡುವಂತೆ ಇತ್ತು.

**ನಸ್ರೀನ್ ಮಿಠಾಯಿ,** ಭಾರತೀಯ ಮುಸ್ಲಿಂ ಮಹಿಳಾ ಆಂದೋಲನ, ಹೊಸಪೇಟೆ

ನಾನು ಸ್ತ್ರೀವಾದ ಅಂದರೆ ಪ್ರೀತಿಯ ರಾಜಕಾರಣ ಎಂದೇ ಅರ್ಥಮಾಡಿಕೊಂಡಿರುವುದು. ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಸಮಾನತೆಯಲ್ಲಿ ನಂಬಿಕೆ ಹೊಂದಿರುವುದು. ಮಾನವೀಯ, ಜೀವಪರವಾದ ತತ್ವಗಳಲ್ಲಿ ನಂಬಿಕೆ ಇರುವುದು.

ಯೂತ್ ಕ್ಯಾಂಪಿನಲ್ಲಿ ನಮಗೆ ಹೊಸ ಕಲಿಕೆಗಳಿಗೆ ತೆರೆದುಕೊಳ್ಳುವುದಕ್ಕೆ ಸಾಧ್ಯವಾಯಿತು. ಹಿರಿಯರು ಕಿರಿಯರ ಅನುಭವಕ್ಕೆ ವೇದಿಕೆ ಆಗಿದೆ. ನಮಗೆ ಇನ್ನೂ ಹೆಚ್ಚಿನ ಬೌದ್ಧಿಕತೆಯನ್ನು ವಿಸ್ತರಿಸಿಕೊಳ್ಳಲು ಇನ್ನೂ ಹೆಚ್ಚಿನ ಚರ್ಚೆಗಳಿಗೆ ಅವಕಾಶ ಇರಬೇಕು. ಹಿರಿಯರ ಅನುಭವ ಇನ್ನೂ ಹೆಚ್ಚಾಗಿ ಹಂಚಿಕೊಳ್ಳುವಂತಾಗಬೇಕು. ಇದು ಕಿರಿಯರಿಗೆ ತುಂಬಾ ದೊಡ್ಡ ಕಲಿಕೆ ಆಗುತ್ತದೆ.

**ಜ್ಯೋತಿ ಹಿಟ್ನಾಳ್ ,** ಅಂಗಳ ಸಂಸ್ಥೆ, ಕೊಪ್ಪಳ

ಸ್ತ್ರೀವಾದ ಎಂದರೆ ನಾನು ಅರ್ಥ ಮಾಡಿಕೊಂಡಿರುವುದು ಹಾಗೂ ನಂಬಿರುವ ಬಗೆ ಹೀಗಿದೆ: ಸ್ತ್ರೀವಾದಿ ಎಂದರೆ ಪ್ರೀತಿ, ಮಮತೆ, ಬದ್ಧತೆ, ಸೌಹಾರ್ದತೆ, ವ್ಯಕ್ತಿ ಘನತೆ, ಮಾನವೀಯತೆ, ಮಾನವ ಹಕ್ಕುಗಳಲ್ಲಿ ಪರಸ್ಪರ ಗೌರವ, ಜೀವಪರ ತತ್ವಗಳಲ್ಲಿ ನಂಬಿಕೆ, ಸದಾ ಬದಲಾವಣೆಯ ಸುಗಮ ಹಾದಿ. ಅದು ಸಮಾನತೆಯ ಬುನಾದಿ.

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಪ್ರತಿಸಾರಿ ನಡೆಸುವ ಯೂತ್ ಕ್ಯಾಂಪ್ ನನ್ನಲ್ಲಿ ಹೊಸ ಚೈತನ್ಯ ತುಂಬಿಕೊಡುತ್ತೆ. ನನ್ನನ್ನ ನಾನು ಸಂಪೂರ್ಣ ಅರ್ಥಮಾಡಿಕೊಳ್ಳಲು ಹಾಗೂ ಕಲಿಕೆಗೆ ಅವಕಾಶ ಸಿಗುತ್ತೆ. ಬೇರೆ ಬೇರೆ ಕಡೆಯಿಂದ ಬಂದ ಮಹಿಳಾ ಹೋರಾಟದ ಅನುಭವಗಳು ಜೊತೆಗೆ ಅವರ ಸಂಪರ್ಕ ಆಗುತ್ತೆ. ನಮ್ಮ ಕಲಿಕೆಗೆ, ಸಮಾನ ಅವಕಾಶ ಹಾಗೂ ಮುಕ್ತ ವಾತಾವರಣ ಕಲ್ಪಿಸುವುದು ತುಂಬಾ ಒಳ್ಳೆಯ ಪ್ಲಾಟ್‌ಫಾರಂ. ನಮ್ಮ ಹೋರಾಟದ ಕಷ್ಟ ಸುಖ ಹಂಚಿಕೊಳ್ಳುವಾಗ ತುಂಬಾ ತಾಳ್ಮೆಯಿಂದ ಕೇಳಿಸಿಕೊಳ್ಳುವುದು ಕೂಡ ಈ ಕ್ಯಾಂಪಿನ ಮಹತ್ವ. ಅದು ಈಗಿನ ಪರಿಸ್ಥಿತಿಯಲ್ಲಿ ಕೇಳುವವರೆ ಇಲ್ಲದಿರುವಾಗ ನಾವು ನಿಮ್ಮ ಜೊತೆ ಇದೀವಿ ಎಂಬ ಭಾವನೆ ತುಂಬುತ್ತಾ ನಮ್ಮನ್ನ ನಾವು ಗಟ್ಟಿಗೊಳಿಸಿಕೊಳ್ಳುವುದರ ಜೊತೆಗೆ ನಾವು ಒಂಟಿಯಲ್ಲ, ನಮ್ಮ ಜೊತೆ ಮಹಿಳಾ ಮನಸ್ಸುಗಳು ಇವೆ ಎಂಬ ದೃಢವಾದ ನಂಬಿಕೆ ಮೂಡಿಸುತ್ತೆ.

ದೀಪಕ್ ನಮಗೆ ಥಿಯೇಟರ್ ಬಗ್ಗೆ ಹೊಸ ಸ್ವರೂಪವನ್ನು ತುಂಬಿಕೊಟ್ಟರು. ಅವರ ಕೊನೆ ಇಲ್ಲದ ಕಲ್ಪನೆ ಹಾಗೂ ಹೊಸ ಹೊಸ ಮಾದರಿಗಳನ್ನು ನಮಗೆ ಕಲಿಸಿದರು ಹಾಗೂ ಅವರ ಸರಳತೆ ನಮ್ಮ ಕಲಿಕೆಗೆ ತುಂಬಾ ಸಲೀಸಾಯಿತು. ಇಮೇಜ್ ಫೋಟೊಗಳು, ಮಿಷನ್ ಇಮೇಜ್ ಈಗಲೂ ನಮ್ಮ ಕಣ್ಣಮುಂದೆ ಬರುತ್ತೆ. ಅವರ ಕಲಿಕೆಯ ಪ್ರೋಸೆಸ್‌ನಿಂದ ನಮ್ಮ ಮುಜುಗರಗಳನ್ನು ಹೊರ ಹಾಕಲು ಸಾಧ್ಯವಾಯಿತು. ನನಗೆ ತುಂಬಾ ಇಷ್ಟವಾಗಿದ್ದು ನಮ್ಮ ನಮ್ಮ ಗೆಳತಿಯರನ್ನ ಒಮ್ಮೆ ನೋಡಿ ಯಾರಿಗೆ ನಿಮ್ಮ ಪ್ರೀತಿಯ ಹಗ್ ಮಾಡಬೇಕು ಅಂತ ಅನಿಸುತ್ತೋ ಅವರೊಂದಿಗೆ ಪ್ರೀತಿಯ ಅಪ್ಪುಗೆ ಭರವಸೆಯ ಅಪ್ಪುಗೆ ಮಾಡಿಸಿದ್ದು. ನನಗಂತೂ ತುಂಬಾ ದುಃಖ ಇತ್ತು. ತಮ್ಮನ ಆಕಸ್ಮಿಕ ಸಾವಿನಿಂದ ಆ ದಿನ ವಾಣಿ ಅಕ್ಕನ ಅಪ್ಪುಗೆಯಿಂದ ನನ್ನ ಅಮ್ಮನ ಅಪ್ಪುಗೆ ಸಿಕ್ಕಿದಂತಾಗಿ ಆ ದಿನ ನನ್ನ ದುಃಖದ ಭಾರ ಇಳಿಸಿದ್ದಂತು ಸತ್ಯ. ಆ ದಿನ ನಾನು ದೀಪಕ್‌ಗೆ ಮನಸ್ಸಿನಲ್ಲಿ ಧನ್ಯವಾದ ಹೇಳಿಕೊಂಡಿದೇನೆ.

ಕ್ಯಾಂಪ್‌ನಲ್ಲಿ ಚರ್ಚೆಗೆ ಅವಕಾಶ ಇರಬೇಕು ಅನಿಸುತ್ತೆ. ನಮ್ಮ ಪ್ರಶ್ನೆಗಳಿಗೆ ಅವಕಾಶ ಅಂದರೆ ತರಬೇತಿ

ಹೊರತಾಗಿ ಇರುವ ಸಂಶಯಗಳ ಪ್ರಶ್ನೆಗಳಿಗೆ ಉತ್ತರ ನಮಗೆ ಅವಶ್ಯಕತೆ ಇದೆ. ಆ ದಿನ ಅನುಪಮಕ್ಕಾ ಕೊಟ್ಟ ಆರೋಗ್ಯದ ಸಲಹೆಗಳು ತುಂಬಾ ಆಪ್ತವಾಗಿತ್ತು. ವಾಣಿ ಅಕ್ಕನ ಕೌದಿ ನಾಟಕ ತುಂಬಾ ಸರಳ ಹಾಗೂ ತೂಕದ ಮಾಹಿತಿ ಹೊಂದಿತ್ತು. ಅವರು ನಾಟಕದ ಮತ್ತೊಂದು ಮಾದರಿ ಕಲಿಸಿಕೊಟ್ಟರು. ಸರಸ್ವತಿ ಅಕ್ಕಾನ ತಾಯಿ ಮಮತೆಯ ಬುದ್ಧಾಧಯಣ ನಾಟಕ ಕೂಡ ಅದ್ಭುತವಾಗಿತ್ತು. ಒಟ್ಟಿನಲ್ಲಿ ನಮ್ಮ ಕಲಿಕೆಯನ್ನು ಈ ಕ್ಯಾಂಪ್ ವಿಸ್ತಾರಗೊಳಿಸಿತು.

**ಎಸ್.ಕೆ ನೇತ್ರಾವತಿ**, ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ಬೆಂಗಳೂರು

ಸ್ತ್ರೀವಾದ ಅಂದರೆ ಪ್ರೀತಿಯ ರಾಜಕಾರಣ ಎಂದು ನಾನು ಅಂದುಕೊಂಡಿದ್ದೇನೆ. ಸ್ತ್ರೀವಾದ ಎಂದರೆ ಜೀವಪರವಾದ ನಡೆ. ಜಾತಿ ಲಿಂಗ, ವರ್ಗ, ಧರ್ಮ, ಯಾವುದೇ ಹಿನ್ನೆಲೆಯಲ್ಲಿ ನಡೆಯುವ ಮಹಿಳೆಯರ ಮೇಲಿನ ದೌರ್ಜನ್ಯವನ್ನು ಖಂಡಿಸುವ, ಪ್ರಶ್ನಿಸುವ ಆ ಕುರಿತು ವಿವರಿಸುವ ಕೆಲಸ ಮಾಡುತ್ತದೆ. ಆ ಕುರಿತ ಸಮಸ್ಯೆಗಳನ್ನು ಚಾರಿತ್ರಿಕವಾಗಿ ವಿವರಿಸುತ್ತಾ, ವರ್ತಮಾನದೊಂದಿಗೆ ಮುಖಾಮುಖಿಯಾಗಿಸುತ್ತಾ ಭವಿಷ್ಯದ ದಿಕ್ಕು ತೋರಿಸುತ್ತದೆ. ಒಟ್ಟಾರೆ ಸಮಾಜದಲ್ಲಿ ನಡೆಯುವ ಯಾವುದೇ ದೌರ್ಜನ್ಯವನ್ನು ಹೆಣ್ಣಿನ ಕಣ್ಣಿನಲ್ಲಿ ನೋಡಬೇಕೆಂದು, ಆ ಮೂಲಕವೇ ಪರಿಹಾರವನ್ನು ಕಂಡುಕೊಳ್ಳಬೇಕೆಂದು ಒತ್ತಾಯಿಸುತ್ತದೆ.

ತರಬೇತಿಯಲ್ಲಿ ಕೇಳಿಸಿಕೊಂಡ ಕಥೆಯೊಂದು ನೆನಪಾಗುತ್ತಿದೆ. ನನಗೆ ತುಂಬಾ ಇಷ್ಟವಾಗಿತ್ತು. ಒಮ್ಮೆ ಒಬ್ಬ ಹೆಂಗಸು ತನ್ನ ಗಂಡ, ಮನೆ ಮಕ್ಕಳು ಮತ್ತು ಮನೆಯವರೆಲ್ಲರ ಸೇವೆ ಮಾಡುವುದರಲ್ಲೇ ಮುಳುಗಿದ್ದು ಒಂದು ದಿನ ತನ್ನ ಹೆಸರನ್ನೇ ಮರೆತುಬಿಟ್ಟಳಂತೆ. ತುಂಬಾ ತಲೆ ಕೆಡಿಸಿಕೊಂಡು, ಅಯ್ಯೋ ಏನು ಮಾಡುವುದು ನನ್ನ ಹೆಸರೇ ಮರೆತುಹೋಗಿದೆಯಲ್ಲಾ, ಏನು ಮಾಡುವುದು, ಅಂತ ಚಡಪಡಿಸತೊಡಗಿದಳು. ಸರಿ, ಮಕ್ಕಳು ಶಾಲೆಯಿಂದ ಬರಲಿ ಕೇಳೋಣ ಅಂದುಕೊಂಡಳು. ಮಕ್ಕಳು ಬಂದಾಗ ಕಾತರತೆಯಿಂದ ಓಡಿ ಬಂದು, ನನ್ನ ಹೆಸರು ಮರೆತುಹೋಗಿದೆ ಎಂದಳು. ಮಕ್ಕಳು, ನೀನು ಅಮ್ಮ ಅಂದಷ್ಟೇ ಹೇಳಿ ಆಟ ಆಡಲು ಓಡಿ ಹೋದರು. ಗಂಡ ಬರಲಿ, ಅವನು ತನ್ನ ಹೆಸರು ಹೇಳಬಹುದು ಎಂದು ಕಾದು ಕುಳಿತಳು. ಗಂಡ ಬಂದಾಗ, ರೀ ನನ್ನ ಹೆಸರು ಮರೆತುಹೋಗಿದೆ, ಬೆಳಗಿನಿಂದ ನನ್ನ ತಲೆ ಕೆಟ್ಟುಹೋಗಿದೆ, ಹೇಳಿ ಅಂತ ಕೇಳಿಕೊಂಡಳು. ಹೆಸರು ತಾನೇ ಮರೆತುಹೋಗಿರುವುದು, ನೀನು ನನ್ನ ಹೆಂಡತಿ ಎಂದು ಹೇಳಿ ತನಗೆ ಬೇಕಾದ ಸೇವೆ ಪಡೆದು ಸುಮ್ಮನಾಗುತ್ತಾನೆ. ಅವಳಿಗೆ ತುಂಬಾ ಬೇಸರವಾಗುತ್ತದೆ. ಮರುದಿನ, ಮನೆಯಿಂದ ಹೊರಗೆ ಹೋಗಿರುತ್ತಾಳೆ, ಅಲ್ಲ ಅವಳ ಗೆಳತಿಯರು ಸಿಕ್ಕಿ, ಹೇ ಪ್ರಜ್ಞಾ ಹೇಗಿದ್ದೀಯಾ ಎಂದು ಕೇಳುತ್ತಾರೆ.. ಅವಳ ಸಂತೋಷಕ್ಕೆ ರೆಕ್ಕೆ ಮೂಡಿ, ಓಹ್, ನನ್ನ ಹೆಸರು ಪ್ರಜ್ಞಾ, ಅಂತ ಕೂಗಿ ಹೇಳಿ ಸಂಭ್ರಮಿಸುತ್ತಾಳೆ.

ಹೀಗೆ ನಾನು ಕೂಡಾ, ಸುಮಾರು ವರುಷಗಳು ನನ್ನನ್ನೇ ಮರೆತಿದ್ದೆ. ಈಗ ಅನಿಸುತ್ತದೆ, ಕಳೆದ ಕಾಲ ಬಾರದಿರಲಿ ಎಂದು.

ನಾವೇ ಹಾಡು ಬರೆದು ಸಂಗೀತವನ್ನು ಸಂಯೋಜಿಸುವಂತೆ ಆಗಬೇಕು. ಉದಾಹರಣೆಗೆ ಮಹಾರಾಷ್ಟ್ರದ ಲತಾ ಮೇಡಂ ಹೇಳಿದ ಹಾಗೆ ಪ್ರತಿದಿನದ ಅನುಭವಗಳನ್ನು ಇಟ್ಟುಕೊಂಡು ಸರಳವಾದ ಹಾಡುಗಳನ್ನು ರಚಿಸಬಹುದು.

ಉದಾಹರಣೆಗೆ:

'' ನೀವು ಊಟ ಮಾಡ್ತೀರಾ, ಆದರೆ ಅಡುಗೆ ಮಾಡ್ತೀರಾ?

''ಇಲ್ಲ ಇಲ್ಲ''

''ನೀವು ನೀರು ಕುಡೀತೀರಾ, ಆದರೆ ನೀರು ತರ್ತೀರಾ?

''ಇಲ್ಲ ಇಲ್ಲ''

ಹೀಗೆ..

ಯೂತ್ ಕ್ಯಾಂಪಿನಿಂದ ನಮಗೆ ಈಗಾಗಲೇ ಬಹಳಷ್ಟು ಸಿಕ್ಕಿದೆ, ಸಿಗುತ್ತಿದೆ. ನನಗಂತೂ ತುಂಬ ಇಷ್ಟವಾಗಿದೆ.

# ಚಿತ್ರ ಸಂಪುಟ